ಬದಲಾಗದವರು

ಎ. ಪಿ. ಮಾಲತಿ



ಬದಲಾಗದವರು

(ಕಾದಂಬರಿ)

ಎ.ಪಿ. ಮಾಲತಿ

ಪ್ರಕಾಶಕರು:

ಹೇಮಂತ ಸಾಹಿತ್ಯ

ನಂ. ೯೭೨/ಸಿ, ೮ನೇ 'ಇ' ಬ್ಲಾಕ್, ೧೦ನೇ 'ಎ' ಮುಖ್ಯರಸ್ತೆ

ರಾಜಾಜಿನಗರ, ಬೆಂಗಳೂರು-೧೦

ದೂರವಾಣಿ : ೨೩೫೦೭೧೭೦

BADALAGADAVARU – A Novel by Mrs. A.P. Malathi. Published by Hemantha Sahitya, No. 972/C, 4th 'E' Block, 10th 'A' Main Road, Rajajinagar, Bangalore- 560 010. Phone : 23507170

ಮೊದಲ ಮುದ್ರಣ : 1984
ವರಡನೆ ಮುದ್ರಣ : 2010

ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ
ಆಕಾರ ಡೆಮಿ $\frac{1}{8}$

ಪುಟಗಳು : 136

ಬೆಲೆ : ರೂ. 70/-

ಛಾಯಾಕ್ಷರ ಜೋಡಣೆ: ಎಂ. ಮಹೇಶ್
ಕುಮುದ ಗ್ರಾಫಿಕ್ಸ್, ಬೆಂಗಳೂರು
ದೂ: 9945814774


ಮುದ್ರಕರು: ಓಂ ಶಕ್ತಿ ಗ್ರಾಫಿಕ್ಸ್
ಬೆಂಗಳೂರು–560 053
ದೂ: 78297 60806

ಮೊದಲ ಮಾತು

ಸಮಾಜದ ರೀತಿ, ನೀತಿ, ನಡವಳಿಕೆಗಳು; ನಂಬಿಕೆ, ಶ್ರದ್ಧೆಗಳು ಕಾಲಕಾಲಕ್ಕೆ ಬದಲಾವಣೆಯಾಗುತ್ತಾ ಹೋದಂತೆ, ಹೊಸ ಸುಧಾರಣೆಯ ಅಲೆ ಬೀಸಿ ಹಳೆಯದು ಕೊಚ್ಚಿಹೋಗುತ್ತದೆ ಮತ್ತು ನೂತನ ಸಮಾಜದ ನಿರ್ಮಾಣವಾಗುತ್ತದೆ ಎಂದು ಮೇಲ್ನೋಟಕ್ಕೆ ಅನಿಸಿದರೂ, ಸತ್ಯ ಸಂಗತಿ ಮೊದಲಿಗಿಂತ ಭಿನ್ನವಾಗಿರದೆ ಅದು ಹೊಸ ರೂಪ ತಳೆದು ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನ ಪಡೆಯುವುದನ್ನು ನಾವು ನೋಡುತ್ತೇವೆ. ಮುಗ್ಧ ಜನರ ದೌರ್ಬಲ್ಯದೊಂದಿಗೆ ಆಟವಾಡುತ್ತ ಅವರನ್ನು ಮೋಸ, ವಂಚನೆಗಳಿಂದ ಶೋಷಿಸುವ ವಿವಿಧ ವರ್ಗಗಳ ಜನರ ಮುಖವಾಡದ ಹಿಂದೆ ಇರುವುದು ಕೇವಲ ಶೋಷಣೆ ಒಂದೇ. ಸಮಾಜದ ಹುಳುಕನ್ನು ಬಯಲಿಗೆಳೆದು, ಮೂಢನಂಬಿಕೆಗಳನ್ನು ಹಳಿದು, ಶೋಷಕರನ್ನು ಖಂಡಿಸುವ ಪ್ರವೃತ್ತಿ ಇರುವ ಜನರು ಅಪರೂಪ. ಬದಲಾವಣೆ ಬೇಕೆನ್ನುವುದು ಮನುಷ್ಯ ಸ್ವಭಾವವಾದರೂ, ಎಲ್ಲಿಯವರೆಗೆ ನಾವು ವೈಜ್ಞಾನಿಕ ದೃಷ್ಟಿ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಬದಲಾವಣೆ ಅಸಾಧ್ಯ. ಈ ಹಿನ್ನೆಲೆಯಲ್ಲಿ ರಚಿಸಿದ ಕಾದಂಬರಿ 'ಬದಲಾಗದವರು".

ಕಾದಂಬರಿಯಲ್ಲಿ ಬರುವ ಪಾತ್ರಗಳು, ಘಟನೆಗಳು ಕಾಲ್ಪನಿಕವಾದದ್ದು; ಯಾರನ್ನೂ ಉದ್ದೇಶಿಸಿ ಬರೆದಿಲ್ಲ. ಎಂದಿನಂತೆ ನನಗೆ ಪ್ರೋತ್ಸಾಹವಿತ್ತು; ವಿಶ್ವಾಸದಿಂದ ಈ ಕಾದಂಬರಿಯನ್ನು ಪ್ರಕಟಿಸುತ್ತಿರುವ ಹೇಮಂತ ಸಾಹಿತ್ಯದ ಶ್ರೀ ಎಂ. ವೆಂಕಟೇಶ್‌ರವರಿಗೆ ನನ್ನ ಅನಂತ ವಂದನೆಗಳು. ಮುಖಚಿತ್ರ ಬಿಡಿಸಿಕೊಟ್ಟ ಕಲಾವಿದರಿಗೂ ಮತ್ತು ಚೊಕ್ಕವಾಗಿ ಮುದ್ರಣ ಮಾಡಿ ಕೊಟ್ಟವರಿಗೂ ನನ್ನ ಕೃತಜ್ಞತೆಗಳು. ಸಹೃದಯ ಓದುಗರು ಈ ಕಾದಂಬರಿಯನ್ನು ಮೆಚ್ಚುಗೆಯಿಂದ ಸ್ವಾಗತಿಸುತ್ತೀರೆಂದು ನಂಬಿದ್ದೇನೆ.

–ಎ.ಪಿ. ಮಾಲತಿ



ಬದಲಾಗದವರು

೧

ಕನ್ನಡಿಯ ಮುಂದೆ ನಿಂತು ತಲೆ ಬಾಚುತ್ತ ಕಿಟಕಿಯಾಚೆ ಬೆಳಗಿನ ತೆಳು ಬಿಸಿಲಿನಲ್ಲಿ ಮಿಂದ ಕಲ್ಲುಬೆಟ್ಟದತ್ತ ದೃಷ್ಟಿ ಹಾಯಿಸಿದ. ಕಲ್ಲಳ್ಳಿಯಲ್ಲಿ ನೆಲೆಸಿದಂದಿನಿಂದ ಅವನ ಮನ ಸೂರೆಗೊಂಡ ಆ ಕಲ್ಲುಬೆಟ್ಟ ಅವನ ಮನೆಯ ಕಿಟಕಿಯಿಂದ ಸರಿಯಾಗಿ ಕಾಣಿಸುತ್ತದೆ. ಬೆಟ್ಟದ ಮೇಲೆ ಹನಿಯುವ ಮಳೆ, ಶಿಖರವನ್ನು ಮುತ್ತಿಡುವ ಕಾರ್ಮೋಡಗಳ ಗುಂಪು, ಆಮೇಲೆ ಸೂರ್ಯನ ಹೊಂಗಿರಣದಲ್ಲಿ ಹೊಳೆದು ಕಂಗೊಳಿಸುವ ಬೆಡಗು, ಚಂದ್ರನ ಬೆಳಕಿನಲ್ಲಿ ಮೌನವಾಗಿ ನಿಲ್ಲುವ ಸೊಬಗು ಅವಿನಾಶನ ಮನವನ್ನು ಸೆಳೆದುಕೊಂಡಿವೆ. ಒಂದೆರಡು ಬಾರಿ ಹೆಂಡತಿ ಅಹಲ್ಯಳೊಡನೆ ಬೆಟ್ಟವನ್ನೇರಿ ಪ್ರಕೃತಿ ಸೌಂದರ್ಯವನ್ನು ನೋಡಿ ಮನತಣಿದು ಬಂದಿದ್ದಾನೆ. ಬೆಟ್ಟದ ಒಂದು ಭಾಗದಲ್ಲಿ ಚಾಚಿನಿಂತ ಕೋಡುಗಲ್ಲು, ಇನ್ನೊಂದು ಭಾಗದಲ್ಲಿ ಆಳವಾದ ತಳ ಕಾಣದ ಪ್ರಪಾತ, ಕೆಳಗೆ ಚಿತ್ರದಲ್ಲಿ ಬಿಡಿಸಿದ ನಕ್ಷೆಯಂತೆ ಕಾಣುವ ಕಲ್ಲಳ್ಳಿಯ ಸುಂದರ ನೋಟ, ಕುರುಚಲು ಪೊದೆ, ಹುಲ್ಲು, ಸಣ್ಣ ಗಿಡಗಂಟಿಗಳಿರುವ ಬೆಟ್ಟದ ಮೈಮೇಲೆ ದನಕರುಗಳು, ಕುರಿ, ಆಡುಗಳು ಮಾತ್ರ ಮೇದುಕೊಂಡಿರುತ್ತವೆ. ಸಾಮಾನ್ಯವಾಗಿ ಎಲ್ಲ ಸಮಯದಲ್ಲಿಯೂ ನಿರ್ಜನ ಬೆಟ್ಟ.

ಕಲ್ಲಳ್ಳಿ ಜನರಿಗೆ ಬೆಟ್ಟದ ಮೇಲೆ ಯಾವ ಮೋಹವೂ ಇಲ್ಲ. ವರ್ಷ ವರ್ಷಗಳಿಂದ ಅಚಲವಾಗಿ ನಿಂತ ಬೆಟ್ಟದೊಡನೆ ಅವರೂ ವಿಲೀನರಾಗಿದ್ದಾರೆ. ಹುಟ್ಟು ಸಾವುಗಳ ನಡುವೆ ಎಷ್ಟು ತಲೆಮಾರುಗಳು ಕಳೆದುಹೋದವೋ, ಬೆಟ್ಟ ತನ್ನ ಪಾಡಿಗೆ ನಿಂತಿದೆ ಮೌನವಾಗಿ. ಜನರೂ ಯಾವ ವಿಶೇಷತೆಯನ್ನು ಕಂಡವರಲ್ಲ.

ಆದರೆ ಈಗ ಕೆಲಸಮಯಗಳಿಂದ ಕಲ್ಲುಬೆಟ್ಟ ಜನರಲ್ಲಿ ಹೊಸ ವಿಸ್ಮಯವನ್ನು ಉಂಟುಮಾಡಿದೆ. ಅವರ ದೃಷ್ಟಿ ಸಹಜವಾಗಿ ಶಿಖರವನ್ನು, ಕೋಡುಗಲ್ಲನ್ನು ನಿರೀಕ್ಷಿಸುತ್ತಿದೆ, ಪರೀಕ್ಷಿಸುತ್ತಿದೆ! ಏನೋ ಕುತೂಹಲ, ಇನ್ನೇನೋ ಆತುರ, ಕಾತರ! ಬೆಟ್ಟವನ್ನೇರಿ ನೋಡುವ ಬಯಕೆ. ಎಲ್ಲಿ ಕೇಳಿದರೂ ಅದೇ ವಿಷಯ, ಅದೇ ಮಾತು. ದಿನೇದಿನೇ ವಿಷಯಕ್ಕೆ ಕೈಕಾಲು

ಬೆಳೆಯುತ್ತಿದೆ. ಬೆಟ್ಟ ಹತ್ತಲಾರದವರೂ ಹತ್ತಿ ಇಳಿದು ನಮ್ಮ ಕುತೂಹಲವನ್ನು ತಣಿಸಿಕೊಳ್ಳುತ್ತಿದ್ದಾರೆ. ತಣಿಸಿಕೊಂಡಷ್ಟೂ ವೃದ್ಧಿಯಾಗುತ್ತಿದೆ. ಪರಮಾಶ್ಚರ್ಯ, ಭೀತಿ, ಒಳಗೊಳಗೆ ಅನುಮಾನ. ಆದರೆ ಧೈರ್ಯದಿಂದ ವಿಮರ್ಶಿಸಲು ಹೆದರಿಕೆ, ಅಳುಕು.

ಜನರು ದಿನಕ್ಕೊಂದು ಆಡಿಕೊಳ್ಳುವುದನ್ನು ಕೇಳುವಾಗ ಅವಿನಾಶನಿಗೆ ನಗಬೇಕೋ, ಅವರ ಬೆಪ್ಪುತನಕ್ಕೆ ತೆಪ್ಪಗಿರಬೇಕೋ ತಿಳಿಯದಾಗಿದೆ. ಬೆಟ್ಟದ ಶಿಖರದಲ್ಲಿರುವ ಅಪರಿಚಿತ ಕೆಳಗಿಳಿದು ಹಳ್ಳಿಗೆ ಬಂದಿದ್ದರೆ ಸಮಸ್ಯೆ ಹುಟ್ಟುತ್ತಿರಲಿಲ್ಲ. ಅಪರಿಚಿತ ಮುಖಹೇಡಿಯಾಗಿದ್ದಾನೆಯೇ? ಅಥವಾ ಜನರು ಮುಖಹೇಡಿಗಳಂತೆ ವರ್ತಿಸುತ್ತಿದ್ದಾರೆಯೇ? ಒಮ್ಮೆ ತಾನೂ ಅವನನ್ನು ಕಂಡು ಮಾತನಾಡಿ ಬರಬೇಕೆಂದು ಅವಿನಾಶ ಯೋಚಿಸಿದ್ದರೂ ಕೆಲಸಗಳ ಮಧ್ಯೆ ಸಮಯವಿರಲಿಲ್ಲ. ಆದಿತ್ಯವಾರ ಚಿಕಿತ್ಸಾಲಯಕ್ಕೆ ರಜೆಯಿದ್ದರೂ ಬೆಟ್ಟವೇರಲು ಮನಸ್ಸಿರಲಿಲ್ಲ. ಯಾರಿಗೆ ಗೊತ್ತು, ಇನ್ನು ಕೆಲವೇ ದಿನಗಳಲ್ಲಿ ಆ ಅಪರಿಚಿತ ಬೆಟ್ಟವಿಳಿದು ತನ್ನ ಪಾಡಿಗೆ ತಾನು ಹೊರಟು ಹೋಗಬಹುದು. ಹೋದರೆ ಅವಿನಾಶನಿಗೇನೂ ನಷ್ಟವಿಲ್ಲ. ಆದರೆ ಹಳ್ಳಿಯಲ್ಲಿ ದಿಢೀರನೆ ಎದ್ದ ಕುತೂಹಲ ತನಗೆ ಪ್ರಶ್ನೆಯಾಗಿ ಉಳಿಯಬಾರದು ಎಂದು ಅವನ ಎಣಿಕೆ. ನಿನ್ನೆ ಅಹಲ್ಯ ಅಂದಿದ್ದಳು :

"ಅಲ್ಲಿರುವ ವಿಗ್ರಹ ನೋಡಲು ಚೆನ್ನಾಗಿದೆಯಂತೆ! ನಾವೂ ಹೋಗಿ ನೋಡಿ ಬರೋಣವೇ?"

ಹೌದು, ಜನರ ಕುತೂಹಲಕ್ಕೆ ವಸ್ತುವಾದದ್ದು ಒಂದು ಸಣ್ಣ ಕಂಚಿನ ವಿಗ್ರಹ ! ಎರಡು ತಿಂಗಳ ಹಿಂದೆ ಎಲ್ಲಿಂದಲೋ ಬಂದ ಮಧ್ಯವಯಸ್ಸಿನ ಅಪರಿಚಿತನಿಗೆ ಬೆಟ್ಟದ ನೆತ್ತಿಯ ಮೇಲೆ ಕಂಚಿನ ವಿಗ್ರಹ ದೊರೆತಿತ್ತು. ಅವನಿಗೆ ನಿಧಿ ದೊರೆತಷ್ಟು ಸಂತೋಷ. ಅವನೊಡನೆ ಇನ್ನೂ ಕೆಲವರು ಬಂದಿರಬೇಕು. ಅವರ ಮುಖಾಂತರ ಈ ಸುದ್ದಿ ಹಬ್ಬಿತ್ತು ಹಳ್ಳಿಯಲ್ಲಿ. ಇನ್ನೇನು ವಿಗ್ರಹದೊಂದಿಗೆ ಅಪರಿಚಿತ ಬೆಟ್ಟವಿಳಿದು ಬರುತ್ತಾನೆಂದು ಹಳ್ಳಿಗರ ನಿರೀಕ್ಷೆ. ಆದರೆ ಆ ಪುಣ್ಯಾತ್ಮ ಮೇಲಿನಿಂದ ಕೆಳಗಿಳಿಯಲಿಲ್ಲ. ವಿಗ್ರಹ ನೋಡಬಯಸುವವರು ಬೆಟ್ಟ ಹತ್ತಿ ಮೇಲೆ ಬರಲಿ ಎನ್ನುತ್ತಿದ್ದಾನೆ. ಕೋಡುಗಲ್ಲಿನ ಬಳಿ ಸಣ್ಣ ನೀರಿನ ಝುರಿಯಿದೆ. ದೊಡ್ಡ ದೊಡ್ಡ ಬಂಡೆಗಳು ಸೇರುವ ಕಡೆ ನೆರಳಿದೆ. ಅಪರಿಚಿತನ ವಾಸಕ್ಕೆ ಅಷ್ಟು ಸಾಕು!

ಕುತೂಹಲದಿಂದ ಕಂಚಿನ ವಿಗ್ರಹವನ್ನು ನೋಡಿ ಬಂದವರಿಗೆ ಅದರ ರೂಪರೇಖೆ ಯಾವುದೆಂದು ಸ್ಪಷ್ಟವಾಗಿ ತಿಳಿದಿಲ್ಲ. ಕೆಲವರಿಗೆ ಶಿವನಂತೆ, ಕೆಲವರಿಗೆ ಪಾರ್ವತಿಯಂತೆ, ಕೆಲವರಿಗೆ ನಾಟ್ಯಸರಸ್ವತಿಯಂತೆ ಕಾಣಿಸಿದೆ. ಅಪರಿಚಿತ ಏನೂ ಹೇಳದೆ ಮೌನವಾಗಿ ತೋರಿಸುತ್ತಾನೆ. ಅಲ್ಲ, ಅವನಿಗೆಲ್ಲೋ

ಹುಚ್ಚು, ತನಗೆ ಸಿಕ್ಕಿದ ವಿಗ್ರಹವನ್ನು ಗುಟ್ಟಾಗಿ ಒಯ್ದಿದ್ದರೆ ಯಾರೂ ಪ್ರಶ್ನಿಸುತ್ತಿರಲಿಲ್ಲ. ಆದರೆ ಅವನು ಇನ್ನಾವುದೋ ಮುಂದಾಲೋಚನೆಯಿಂದ ವಿಗ್ರಹದೊಂದಿಗೆ ದಿನೇ ದಿನೇ ಕಲ್ಲುಬೆಟ್ಟದ ಮೇಲೆ ಗಟ್ಟಿಯಾಗುತ್ತಿದ್ದಾನೆ ಎಂದು ಅವಿನಾಶನ ಎಣಿಕೆ.

"ಡಾಕ್ಟರೇ, ಕಲ್ಲುಬಂಡೆಯನ್ನು ವೃತ್ತಾಕಾರದಲ್ಲಿ ಕೊರೆದು ಅದರಲ್ಲಿ ವಿಗ್ರಹವನ್ನು ಇರಿಸಿದ್ದಾರೆ" ಎಂದಿದ್ದ ಸಹಾಯಕ ಗೋವಿಂದ.

"ಇನ್ನೆಷ್ಟು ದಿನ ಅಲ್ಲಿರುತ್ತಾನಂತೆ?"

"ಖಾಯಂ ಅಲ್ಲೇ ಇರ್ತಾನೆ ಅಂತ ಜನರ ಅಂಬೋಣ"

ಅವಿನಾಶನಿಗೆ ಇನ್ನೂ ಅನುಮಾನ. ಬೆಟ್ಟದ ಮೇಲೆ ಅವನ ವಾಸ ಎಂದ ಮೇಲೆ ಇರಲ್ಲೇನೋ ಒಂದು ಗುಟ್ಟು ಇರಲೇಬೇಕು. ಅವನಿಗೆ ಹಳ್ಳಿಗರ ಮುಗ್ಧತೆ, ಅಜ್ಞಾನದ ಮೇಲೆ ಅನುಕಂಪ ಮೂಡಿತು. ತಾನು ಮೊದಲು ವಿಗ್ರಹವನ್ನು ಪರೀಕ್ಷಿಸಿ, ಅಪರಿಚಿತನನ್ನು ತನ್ನ ಮಾತಿನ ಬಲೆಗೆಳೆಯಬೇಕು. ಆಮೇಲೆ ಮುಂದಿನ ಕಾರ್ಯ.

ಹಾಗೆ ನೋಡಿದರೆ ಅವಿನಾಶ ಕಲ್ಲಳ್ಳಿಗೆ ಹೊಸಬ. ಬಂದು ನೆಲೆಸಿ ವರ್ಷವಾಗುವ ಮೊದಲೇ ಜನಪ್ರಿಯ ವೈದ್ಯನೆಂದು ಪ್ರಸಿದ್ಧಿ. ಎಲ್ಲರಿಗೂ ಮೆಚ್ಚಿನ ಚಿರಪರಿಚಿತ ವ್ಯಕ್ತಿ. ಅವನ ಹಸ್ತಗುಣದಲ್ಲಿ ಅಪಾರ ನಂಬಿಕೆ. ಅವನು ಕೊಡುವ ಔಷಧಿ ರಾಮಬಾಣ. ತನ್ನ ಔಷಧಿಯ ಮೇಲೆ ಅನೇಕ ಬಾರಿ ಅಪನಂಬಿಕೆ ಬಂದಿದ್ದರೂ ಜನರಿಗೆ ಈ ವೈದ್ಯನಲ್ಲಿ ಅವಿಶ್ವಾಸ ಬಂದಿಲ್ಲ. ಅವಿನಾಶನಿಗೆ ಮನದಲ್ಲೇ ಹೆಮ್ಮೆ. ತಾನು ಬೃಹದಾಕಾರದಲ್ಲಿ ಬೆಳೆಯುತ್ತಿದ್ದೇನೆಂಬ ಭ್ರಮೆ.

ಅವನು ತನ್ನ ವೃತ್ತಿಗಾಗಿ ಆರಿಸಿಕೊಂಡ ಕ್ಷೇತ್ರ ಕಲ್ಲಳ್ಳಿ. ಇಲ್ಲಿಯ ಜನರಿಂದ ದೊರೆತ ಅಪೂರ್ವ ಸ್ವಾಗತ, ಸಹೃದಯದ ಪ್ರೀತಿ, ಅಂತಃಕರಣ ತುಂಬಿದ ನುಡಿ ಅವನನ್ನು ದಿನೇ ದಿನೇ ಎತ್ತರಿಸುತ್ತಿವೆ. ಇಲ್ಲಿ ಅಕ್ಷರಸ್ಥರಿಗಿಂತ ಅನಕ್ಷರಸ್ಥರು ಅಧಿಕ. ಹಾಗೆಂದು ಅದರ ಲಾಭ ಪಡೆಯುವ ದುರಾಶೆ ಇಲ್ಲ ಅವಿನಾಶನಿಗೆ. ನಾಲ್ಕು ವರ್ಷಗಳ ಕಾಲ ಹಾಸನದ ಸರಕಾರಿ ಆಸ್ಪತ್ರೆಯಲ್ಲಿ ದುಡಿದು ಆ ಜೀವನಕ್ಕೆ ಬೇಸತ್ತು ಕಲ್ಲಳ್ಳಿಗೆ ಬಂದು ನೆಲೆಸಿದ ನಂತರ ಸ್ವತಂತ್ರ ವೈದ್ಯಕೀಯ ವೃತ್ತಿಯಲ್ಲಿ ಶಾಂತಿ ಮತ್ತು ತೃಪ್ತಿ ಸಿಕ್ಕಿದೆ. ತನ್ನಿಂದಾದಷ್ಟು ಸಮಾಜಸೇವೆ ಮಾಡಬೇಕೆಂಬ ಹಂಬಲವಿದೆ.

ಕಲ್ಲಳ್ಳಿಯಲ್ಲಿ ನೆಲೆಸಲು ತೀರಾ ವಿರೋಧಿಸಿದವಳು ಅವನ ಅಮ್ಮ ನಾಗರತ್ನ. ಮೂರು ಗಂಡುಮಕ್ಕಳಲ್ಲಿ ಕಿರಿಯವನಾದ ಅವಿನಾಶನಿಗೆ ವೈದ್ಯಕೀಯ ಶಿಕ್ಷಣ ಕೊಡಿಸಿದ್ದು ಹಳ್ಳಿಯಲ್ಲಿ ನೆಲೆಸುವುದಕ್ಕೆ ಅಲ್ಲ ಎಂದು ಅವಳ ವಾದ. ದೊಡ್ಡ ಪಟ್ಟಣಗಳಲ್ಲಿ ವೈದ್ಯರಿಗೆ ಸಿಗುವ ಗೌರವ, ಪ್ರತಿಷ್ಠೆ, ಕೀರ್ತಿ ಹಳ್ಳಿಯಲ್ಲಿ ಸಿಕ್ಕೀತೇ? ತನ್ನ ಮಗನ ಪ್ರತಿಭೆ ಹಳ್ಳಿಯ ಮಣ್ಣಿನಲ್ಲಿ

ಮಣ್ಣಾಗಬೇಕೇ? ಕಲಿತದ್ದು ಸಾರ್ಥಕವಾಗಲು ದೊಡ್ಡ ಪಟ್ಟಣವೇ ಲೇಸು. ಹಾಸನ ಇಷ್ಟವಿಲ್ಲದಿದ್ದರೆ ಬೆಂಗಳೂರಿನಲ್ಲಿ ನೆಲೆಸು ಎಂದಿದ್ದಳು. ಅಣ್ಣಂದಿರದೂ ಅದೇ ಅಭಿಪ್ರಾಯ. ಆದರೆ ಅವನ ನಿರ್ಧಾರಕ್ಕೆ ಸಮ್ಮತಿಯ ಮುದ್ರೆ ಒತ್ತಿದವರು ತಂದೆ ಶ್ರೀಕಂಠಯ್ಯ. ಅವರು ಚಿಕ್ಕಮಗಳೂರಿನಲ್ಲಿ ದೊಡ್ಡ ಕಿರಾಣಿ ಅಂಗಡಿಯಿರಿಸಿ ಎಳವೆಯಿಂದ ಸ್ವತಂತ್ರ ಪ್ರವೃತ್ತಿಯನ್ನು ನೆಚ್ಚಿದವರು. ಮಗ ಹಳ್ಳಿವಾಸ ಬಯಸಿದಾಗ ತಡೆಯಲಿಲ್ಲ.

"ಹಳ್ಳಿಯಲ್ಲಿ ಪ್ರ್ಯಾಕ್ಟೀಸ್ ಆದೀತೆಂಬ ಭರವಸೆಯಿದ್ದರೆ ಇನ್ನು ತಡ ಮಾಡಬೇಡ. ಹತ್ತು ಸಾವಿರ ರೂಪಾಯಿ ನಾನು ಕೊಡ್ತೇನೆ. ಸ್ವಲ್ಪ ಸಾಲ ತೆಗಿ. ಅಂದ್ಹಾಗೆ ಯಾವ ಹಳ್ಳಿಯನ್ನು ಆರಿಸಿಕೊಂಡಿದ್ದೀ?"

ಅವಿನಾಶ ದಿನಪತ್ರಿಕೆಯ ಒಂದು ತುಂಡನ್ನು ತಂದೆಯ ಕೈಯಲ್ಲಿರಿಸಿದ. ಕಲ್ಲಳ್ಳಿಯಲ್ಲಿ ಸರಿಯಾದ ವೈದ್ಯರಿಲ್ಲದೆ ರೋಗಿಗಳಿಗೂ ಜನರಿಗೂ ಆಗುವ ಕಷ್ಟನಷ್ಟಗಳನ್ನು ಕಲ್ಲಳ್ಳಿಯ ಗ್ರಾಮಸ್ಥರು ವಿಷಾದದಿಂದ ವಿವರಿಸುತ್ತ 'ನಾವು ಸಣ್ಣ ಪುಟ್ಟ ಕಾಯಿಲೆಗಳಿಗೂ ನಾಲ್ಕೈದು ಮೈಲು ದೂರ ವೈದ್ಯರನ್ನು ಹುಡುಕಿಕೊಂಡು ಹೋಗಬೇಕಾಗಿದೆ. ಇನ್ನಾದರೂ ಸರಕಾರ ಇತ್ತ ಗಮನ ಹರಿಸಿ ಯೋಗ್ಯ ವೈದ್ಯರನ್ನು ನಮ್ಮ ಹಳ್ಳಿಗೆ ನಿಯಮಿಸುವಂತೆ ಕೋರಿಕೊಳ್ಳುತ್ತೇವೆ' ಎಂದು ಬರೆದು, 'ನೊಂದ ಊರ ಸಮಸ್ತರು' ಎಂಬ ಸಹಿ ಹಾಕಿ ಪೇಪರಿನಲ್ಲಿ ಪ್ರಕಟವಾದ ಜಾಹೀರಾತಿನ ತುಂಡು.

ಶ್ರೀಕಂಠಯ್ಯನವರಿಗೂ ಕಲ್ಲಳ್ಳಿ ಅಪರಿಚಿತ ಗ್ರಾಮ. ಪತ್ರಿಕೆಯ ಜಾಹೀರಾತು ನೋಡಿದಾಕ್ಷಣ ಧಿಡೀರನೆ ಅಲ್ಲಿಗೆ ಹೋಗುವುದಕ್ಕಿಂತ ಮೊದಲು ಸ್ಥಳ ಪರಿಶೀಲನೆ ಮಾಡುವುದು ಒಳಿತು ಎಂದೆನಿಸಿತು. ಸರಿ, ತಂದೆ-ಮಗ ಮರುದಿನವೇ ಹೊರಟು ಬಂದರು ಕಲ್ಲಳ್ಳಿಗೆ. ಹೆಸರೇ ಸೂಚಿಸುವಂತೆ ಕಲ್ಲಳ್ಳಿ ಕಲ್ಲು ಬೆಟ್ಟದ ತಡಿಯಲ್ಲಿರುವ ಕುಗ್ರಾಮ. ವಾಹನ ಸಂಚಾರವಿರುವ ಮುಖ್ಯ ರಸ್ತೆಯಿಂದ ಒಳಗೆ ಎರಡೂವರೆ ಮೈಲು ದೂರ ಕಲ್ಲು ಮಣ್ಣಿನ ಅಂಕುಡೊಂಕು ರಸ್ತೆಯಲ್ಲಿ ನಡೆದುಹೋಗಬೇಕು. ಜೀಪು, ಲಾರಿ, ಎತ್ತಿನ ಗಾಡಿ ಓಡಾಡಲು ಇತ್ತೀಚಿನ ದಿನಗಳಲ್ಲಿ ಅಗಲದ ರಸ್ತೆ ಮಾಡಲಾಗಿದೆ. ಕಲ್ಲಳ್ಳಿ ಪಂಚಾಯತಿ ಯವರು ರಸ್ತೆಗೆ ದಾಂಬರು ಹಾಕುವ ಆಲೋಚನೆಯಲ್ಲಿ ಇದ್ದಾರಂತೆ. ಒಂದು ಸಣ್ಣ ಅಂಚೆ ಕಛೇರಿ, ಪ್ರಾಥಮಿಕ ಶಾಲೆ, ಪುರಾತನ ಕಾಲದ ಜೀರ್ಣಾವಸ್ಥೆಯಲ್ಲಿರುವ ಆಂಜನೇಯ ದೇವಸ್ಥಾನ, ಹೊಸದಾಗಿ ಕಟ್ಟಿಸಿದ ಇಗರ್ಜಿ-ಇವು ಕಲ್ಲಳ್ಳಿಯಲ್ಲಿ ಮುಖ್ಯವಾದುವು. ಹಳೆ ಮಾದರಿಯ ಮನೆಗಳ ಜೊತೆ ಅಲ್ಲೊಂದು ಇಲ್ಲೊಂದು ಹೊಸ ಕಟ್ಟಡಗಳು ತಲೆ ಎತ್ತಿ ನಿಂತಿವೆ. ಹೆಚ್ಚಿನ ಜನರು ಕೃಷಿಯ ಬದುಕನ್ನೇ ನಂಬಿದ್ದಾರೆ. ನೀರಿನ ಆಸರೆಯಿರುವಲ್ಲಿ ಬತ್ತದ ಗದ್ದೆ, ಅಡಿಕೆ, ತೆಂಗನ್ನು ಬೆಳೆಸಿಕೊಂಡಿದ್ದಾರೆ. ಒಂದು ಕಿರಾಣಿ

ಅಂಗಡಿ ಮತ್ತು ಗೂಡಿನಷ್ಟೇ ಅಗಲದ ಬಟ್ಟೆ ಅಂಗಡಿ. ಹೆಚ್ಚಿನ ಖರೀದಿಗೆ, ಕೃಷಿ ಬಳಕೆಯ ಸಾಮಾನಿಗೆ ಹತ್ತಿರದ ಪಟ್ಟಣಕ್ಕೆ ಹೋಗಬೇಕು.

ತಂದೆ-ಮಗ ಹಳ್ಳಿಯ ಪ್ರತಿಯೊಂದು ಮೂಲೆಯಲ್ಲೂ ತಿರುಗಾಡಿ ಅಪರಿಚಿತರನ್ನೂ ಮಾತನಾಡಿಸಿದರು. ಗಿಡಮೂಲಿಕೆಗಳ ಔಷಧಿ ಕೊಡುವ ಒಬ್ಬ ಮುದುಕ ಪಂಡಿತನಲ್ಲದೆ ಬೇರೆ ವೈದ್ಯರಿಲ್ಲವೆಂದೂ ತಿಳಿಯಿತು.

"ಪಟ್ಟಣದಿಂದ ಹಳ್ಳಿ ಬಹಳ ದೂರ. ಅಗತ್ಯದ ವಸ್ತು ಬೇಕೆನಿಸಿದರೂ ಸಿಗಲಾರದು, ಏನು ಮಾಡುತ್ತೀ?" ಕೇಳಿದರು ಶ್ರೀಕಂಠಯ್ಯ.

"ಔಷಧಿ ಕಂಪನಿಗಳಿಂದ ಹೆಚ್ಚಿನವು ಪಾರ್ಸಲ್ ಆಗಿ ಅಂಚೆಯಿಂದಲೇ ಬರುತ್ತವೆ. ಆಗಾಗ ನಾನು ಪಟ್ಟಣಕ್ಕೆ ಹೋಗ್ತಾ ಇರ್ತೇನೆ. ನನಗೆ ಬೇಕಾದ ಔಷಧಿ ತರಿಸಿಕೊಳ್ಳುವುದು ಕಷ್ಟವೇನಲ್ಲ" ಎಂದ ಮಗ.

ಮಗ ಒಪ್ಪಿದ ಮೇಲೆ ಎರಡು ಮಾತಿಲ್ಲ. ಅವನ ಮನ ಆಗಲೇ ನೆಲೆಸಿದೆ ಹಳ್ಳಿಯಲ್ಲಿ. ಆದರೆ ಚಿಕಿತ್ಸಾಲಯ ಎಲ್ಲಿ ತೆರೆಯಬೇಕು? ಯಾರನ್ನು ವಿಚಾರಿಸಬೇಕು? ಎಂದುಕೊಳ್ಳುವಾಗಲೇ ಮೊದಲು ಪರಿಚಯವಾದದ್ದು ರಾಜಣ್ಣನವರು. ನಲವತ್ತರ ರಾಜಣ್ಣ ಅಂಚೆ ಕಛೇರಿಯ ಅಸಿಸ್ಟೆಂಟ್ ಪೋಸ್ಟ್‌ಮಾಸ್ಟರ್. ಎರಡು ಹೆಣ್ಣು, ಎರಡು ಗಂಡು ಮಕ್ಕಳ ತಂದೆ. ಹಿರಿಯವನು ನೌಕರಿ ಅರಸುತ್ತ ಮುಂಬಯಿಗೆ ಹೋಗಿದ್ದಾನೆ.

ಪಿತ್ರಾರ್ಜಿತ ಭೂಮಿ ಸ್ವಲ್ಪ ಇದೆ. ಅಣ್ಣನಿಂದ ಪಾಲು ತೆಗೆದುಕೊಂಡು ಸ್ವತಂತ್ರವಾಗಿದ್ದಾನೆ. ಐದಡಿ ಆರಿಂಚು ಎತ್ತರದ ದೇಹ, ಎಣ್ಣೆಗಪ್ಪು ಬಣ್ಣ. ತಮ್ಮೂರಿಗೆ ಬಂದವರನ್ನು ವಿಸ್ಮಯದಿಂದ ನೋಡಿದ, ಆದರದಿಂದ ಮನೆಗೆ ಆಹ್ವಾನಿಸಿದ. ಎರಡು ದಿನ ಅವನ ಮನೆಯಲ್ಲೇ ಅವರ ವಾಸ.

ರಾಜಣ್ಣನಿಗೆ ಅಚ್ಚರಿಯೋ ಅಚ್ಚರಿ. ಇನ್ನೂ ಹದಿಹರೆಯದ ಕಿರುಮೀಸೆಯ ಯುವಕನಂತೆ ಕಾಣುವ ಅವಿನಾಶ ಡಿಗ್ರಿ ಪಡೆದ ವೈದ್ಯನೆಂಬ ಅನುಮಾನ ಯಾರಿಗೂ ಬರಲಾರದು. ಜೊಂಪೆಯಾದ ಗುಂಗುರು ಕೂದಲಿನ ಕೆಳಗೆ ಚಿಂತನೆಯ ಗೆರೆಗಳು, ತೀಕ್ಷ್ಣ ಕಣ್ಣುಗಳು, ಚೂಪಾದ ಎಳಸು ಮೂಗು, ಆರಡಿಗೆ ಎರಡು ಇಂಚು ಕಡಿಮೆ ಎತ್ತರದ ನಿಲುವು, ಹಾಲುಬಿಳುಪಿನ ಮೈಬಣ್ಣ. ಕನ್ನಡಕಧಾರಿಯಾದರೆ ನಿಜವಾಗಿ ಗಂಭೀರನಾಗಿ ಕಾಣುತ್ತಿದ್ದನೋ ಏನೋ ! ಈಗಿನ್ನೂ ಹುಡುಗಾಟದ ವಯಸ್ಸು ಎಂದುಕೊಂಡ. ಹಾಗೆಂದು ತಾನೂ ಹುಡುಗಾಟದ ಮಾತನ್ನಾಡದೆ ಎರಡು ದಿನವೂ ಗೌರವದಿಂದ ಉಪಚರಿಸಿ ಹಳ್ಳಿಯ ಅನೇಕರನ್ನು ಅವನಿಗೆ ಪರಿಚಯಿಸಿದ. ತಮ್ಮ ಹಳ್ಳಿಗೆ ಬರಲಿರುವ ಹೊಸ ವೈದ್ಯನನ್ನು ಎಲ್ಲರೂ ಆದರದಿಂದ ಮಾತಾಡಿಸಿ ಶುಭ ಹಾರೈಸಿದಾಗ ಅವಿನಾಶನಿಗೆ ಎಣ್ಣಿಲ್ಲದ ಉತ್ಸಾಹ.

"ಎಲ್ಲಿ ನೀರಿನ ಋಣವೋ ನಾ ಕಾಣೆ. ನಮ್ಮೂರಿಗೆ ಬಡಿದ ದಾರಿದ್ರ್ಯಕ್ಕೆ ಮುಕ್ತಿಯಿಲ್ಲ. ಭೀಮಯ್ಯನ ಮಗ ಡಾಕ್ಟರನಾಗಿ ಮುಂಬಯಿ ಸೇರಿದ. ಸೋಮಶೇಖರ ಶಾಸ್ತ್ರಿಗಳ ಮಗ ಡಾಕ್ಟರನಾಗುವ ಮೊದಲೇ ಲಂಡನ್ನಿಗೆ ಹಾರಿದ. ಯಾವ ನರಪಿಳ್ಳೆಗೂ ಹಳ್ಳಿ ಬೇಡ. ಈ ದೇವರು ಕರೆಯಿಸಿದಂತೆ ನೀವು ಬಂದ್ರಲ್ಲ !" ಹರ್ಷದಿಂದ ಕೈಕುಲುಕಿದರು ರಾಜಣ್ಣನ ಅಣ್ಣ.

ಎರಡು ದಿನಗಳು ತಿರುಗಿದರೂ ಚಿಕಿತ್ಸಾಲಯಕ್ಕೆ ಪ್ರಶಸ್ತವಾದ ಕಟ್ಟಡ ಸಿಗಲಿಲ್ಲ. ಚಿಕಿತ್ಸಾಲಯ ಮತ್ತು ವಾಸದ ಮನೆ ಬೇರೆ ಬೇರೆಯಾಗಿರಬೇಕು ಎಂದು ಅವಿನಾಶನ ಇಚ್ಛೆ.

"ಸರಿಯಾಗಿ ಹೇಳಿದಿರಿ, ಡಾಕ್ಟರೇ. ರೋಗಿಗಳ ತಾಪತ್ರಯ ಹೆಂಗಸರಿಗೆ ಬ್ಯಾಡ. ನಮ್ಮ ಪೋಸ್ಟ್ ಆಫೀಸಿನ ಹತ್ರ ಒಂದು ಕಿರಾಣಿ ಅಂಗಡಿ ಇದೆಯಲ್ಲ, ಅದರ ಮಾಳಿಗೆ ಮೇಲೆ ಒಂದು ಖಾಲಿಕೋಣೆ ಇದ್ದ ನೆನಪು. ಹಾಂ, ಅದು ಸಿಕ್ಕಿದರೆ..." ರಾಜಣ್ಣ ಅಂದ, "ನಿಮಗೆ ಅನುಕೂಲ. ನೀವೇನೂ ಚಿಂತಿಸಬೇಡಿ. ನಾನೆಲ್ಲ ಏರ್ಪಾಟು ಮಾಡ್ತೇನೆ. ಊರಿಗ್ಹೋಗಿ ಹೆಂಡತಿ, ಮಕ್ಕಳನ್ನು ಕರ್ಕೊಂಡು ಬನ್ನಿ"

"ಹೆಂಡತಿ ಮಾತ್ರ, ಮಕ್ಕಳಿಲ್ಲ !"

"ಹೋ... ಅದಕ್ಕೇನಂತೆ. ಅವೂ ಆಗುತ್ತವೆ ಬಿಡಿ. ನನ್ನ ಮೇಲೆ ಭರವಸೆಯಿಟ್ಟು ಹೋಗಿ ಬನ್ನಿ. ವಾರದೊಳಗೆ ಎಲ್ಲಾ ರೆಡಿ"

ಆಡಿದ ಮಾತಿಗೆ ತಪ್ಪಲಿಲ್ಲ ರಾಜಣ್ಣ. ವಾರದೊಳಗೆ ಕಿರಾಣಿ ಅಂಗಡಿಯ ಮೇಲ್ಭಾಗದ ಮಾಳಿಗೆ ಕೋಣೆ ಅವನ ಚಿಕಿತ್ಸಾಲಯಕ್ಕೆ ಮತ್ತು ಅಲ್ಲಿಂದ ಅರ್ಧ ಮೈಲು ದೂರ ಒಂದು ಸಣ್ಣ ಮನೆಯನ್ನು ವಾಸಕ್ಕೆ ಏರ್ಪಾಟು ಮಾಡಿ ಅವಿನಾಶನಿಗೆ ಕಾಗದ ಬರೆದು ತಿಳಿಸಿದ. ತಮ್ಮ ಊರಿಗೆ ಒಬ್ಬ ವೈದ್ಯ ಬರುತ್ತಾನೆಂದರೆ ಅದೇನು ಕಡಿಮೆ ಸಂತೋಷದ ವಿಷಯವೇ? ಎರಡು ದಿನಗಳ ಪರಿಚಯ ಸ್ನೇಹಕ್ಕೆ ತಿರುಗಿ ತಾನೇ ಅವಿನಾಶನ ಬಗ್ಗೆ ಪ್ರಚಾರ ಮಾಡಲಾರಂಭಿಸಿದ.

"ಇನ್ನೂ ಹುಡುಗುಪ್ರಾಯ. ಮಾತು ಅಂದರೆ ಅರಳು ಹುರಿದ್ಹಾಗೆ. ಅವರ ವಿಚಾರ ಅಂದರೆ ನೀರು ಹರಿದ್ಹಾಗೆ. ಗುಣ ಅಂದರೆ ಚಿನ್ನದ್ಹಾಗೆ. ತಂದೆ–ಮಗ ದೇವರಂಥ ಮನುಷ್ಯರು" ಎಂದು ಎಲ್ಲರೆದುರೂ ಅವರದೇ ಗುಣಗಾನ. ಅಂಚೆಕಛೇರಿ ಕೆಲಸದಲ್ಲಿದ್ದರೂ ಬಂದವರೊಡನೆ, "ಕೇಳಿತೇನ್ರೋ, ಇನ್ಮೇಲೆ ಈ ಹಳ್ಳಿಗೆ ಬಂದ ಬರ ತೊಲಗಿತು. ಅವಿನಾಶ ಡಾಕ್ಟರು ಬರ್ತಾರೆ" ಎಂದ ಉತ್ಸಾಹದಿಂದ.

ಹದಿನೈದು ದಿನಗಳಲ್ಲಿ ತನ್ನ ಹೆಂಡತಿ ಮತ್ತು ಸಾಮಾನುಗಳೊಂದಿಗೆ ಹಳ್ಳಿಗೆ ಆಗಮಿಸಿದ ಅವಿನಾಶ. ಬೇಡವೆಂದರೂ ಎರಡು ದಿನ ರಾಜಣ್ಣನ

ಮನೆಯಲ್ಲಿ ಆದರೋಪಚಾರ. ರಾಜಣ್ಣ ಚಿಕಿತ್ಸಾಲಯದಲ್ಲಿ ಸಾಮಾನುಗಳನ್ನು ಅಣಿ ಮಾಡಿಡಲು ಮತ್ತು ಮನೆವಾಸದ ಸಾಮಾನನ್ನು ಜೋಡಿಸಿಡಲು ಸಹಾಯ ಮಾಡಿದ. ಅವನ ಹೆಂಡತಿ ಸೀತಮ್ಮನದು ಬಹಳ ಸರಳ ಮನಸ್ಸು. ಬಂದವರೊಡನೆ ಹೊಂದಿಕೊಳ್ಳುವ ಜೀವ. ಹೊಸ ಮನೆಯಲ್ಲಿ ಅವಳದೇ ಪಾಯಸದ ಅಡುಗೆ. ಇವಳೊಬ್ಬಳು ಜೊತೆಗಿದ್ದರೆ ಇಲ್ಲಿ ಬೇಸರವಿಲ್ಲ ಎಂದೆನಿಸಿತು ಅಹಲ್ಯಳಿಗೆ.

ನಾಲ್ಕು ಕೋಣೆಗಳ ಹಂಚಿನ ಮನೆ ವಾಸಕ್ಕೆ ಅನುಕೂಲ. ಎದುರು ಕೋಣೆಯ ಕಿಟಕಿಯಿಂದ ನೋಡಿದರೆ ಕಲ್ಲುಬೆಟ್ಟದ ಸುಂದರ ದೃಶ್ಯ. ಜಗಲಿ ಬದಿಯಲ್ಲಿ ನಿಂತರೆ ಹಳ್ಳಿಯ ಮುಖ್ಯರಸ್ತೆ, ಅದರಾಚೆ ಇರುವ ಪ್ರಾಥಮಿಕ ಶಾಲೆಯ ಮಾಡಿನ ತುದಿ ಕಾಣಿಸುತ್ತದೆ. ಅಂಚೆಕಛೇರಿ, ಶಾಲೆಗೆ ಹೋಗಲು ಇದೇ ಮುಖ್ಯರಸ್ತೆ. ರಾಜಣ್ಣನ ಮನೆಯಿಂದ ಕೇವಲ ಅರ್ಧಮೈಲು ದೂರ. ತೋಟ ಗದ್ದೆಯನ್ನು ಬಳಸಿ ಬಂದರೆ ಒಂದು ಮೈಲು ಆಗಬಹುದು. ಅಹಲ್ಯಳಿಗೆ ಮನೆ ಮತ್ತು ಸುತ್ತಲಿನ ಸ್ಥಳ ಸಮಾಧಾನವೀಯದಿದ್ದರೂ ಗೊಣಗಲಿಲ್ಲ. ಹಾಸನದಿಂದ ಬರುವಾಗಲೇ ಹೇಳಿದ್ದ ಅವಿನಾಶ;

"ನಮ್ಮ ಅದೃಷ್ಟ ಚೆನ್ನಾಗಿದ್ದು ಪ್ರ್ಯಾಕ್ಟೀಸ್‌ಗೆ ತೊಂದರೆಯಿಲ್ಲದಿದ್ದರೆ ಕಲ್ಲಳ್ಳಿಯಲ್ಲಿ ಖಾಯಂ ನೆಲಸಿ ಮನೆಯನ್ನೂ ಕಟ್ಟೋಣ."

ಮುಂದಿನ ಭವಿಷ್ಯ ಹೇಗಿದೆಯೋ ತಿಳಿಯದು. ಇಲ್ಲಿಗೆ ಬಂದ ಮರುದಿನವೇ ಚಿಕಿತ್ಸಾಲಯದಲ್ಲಿ ಕುಳಿತುಕೊಳ್ಳುವ ಆಲೋಚನೆಯಿತ್ತು. ಆದರೆ ರಾಜಣ್ಣನದು ಖಡಾಖಂಡಿತ ನುಡಿ: "ಇನ್ನೂ ನಾಲ್ಕು ದಿನ ನೀವು ಆ ಕಡೆ ಮುಖ ಹಾಕಬೇಡಿ. ಗುರುವಾರ ಬೆಳಗ್ಗೆ ಶುಭಮುಹೂರ್ತದಲ್ಲಿ ಬಲಗಾಲನ್ನು ಒಳಗಿರಿಸಿ ಪ್ರವೇಶ ಮಾಡಿ. ನಾನು ಢಭಾರ್ ಅಂತ ತೆಂಗಿನಕಾಯಿ ಒಡೆದು ಬಿಡ್ತೇನೆ. ಯಾರಿಗಾದರೂ ಒಬ್ಬರಿಗೆ ಧರ್ಮಾರ್ಥ ಔಷಧಿ ಕೊಡಿ. ಆಮೇಲೆ ಪ್ರಾರಂಭವಾಗಲಿ ನಿಮ್ಮ ಚಿಕಿತ್ಸೆ."

"ನನಗೆ ಗಳಿಗೆ ಮುಹೂರ್ತಗಳಲ್ಲಿ ನಂಬಿಕೆಯಿಲ್ಲ."

"ನಿಮಗೆ ಗೊತ್ತಿಲ್ಲ ಡಾಕ್ಟರೇ, ರಾಹುಕಾಲದಲ್ಲಿ ಒಳ್ಳೆಯ ಕೆಲಸಕ್ಕೆ ಮುಹೂರ್ತ ಹಾಕಬಾರದು. ಸೋಮಶೇಖರ ಶಾಸ್ತ್ರಿಗಳ ಹತ್ತಿರ ಕೇಳಿಕೊಂಡು ಬಂದಿದ್ದೇನೆ. ಗುರುವಾರ ಅವರು ಹೇಳಿದ ಗಳಿಗೆಯಲ್ಲಿ ಕೆಲಸ ಪ್ರಾರಂಭಿಸಿದರೆ ಸೈ, ಆಮೇಲೆ ಹಣ ಇಡೋದಕ್ಕೆ ಜಾಗ ಇಲ್ಲ ನೋಡಿ!"

ಹೀಗೆ ಪ್ರಾರಂಭವಾಯಿತು 'ಧನ್ವಂತರಿ ಚಿಕಿತ್ಸಾಲಯ. ರಾಜಣ್ಣನ ಮಾತು ಸುಳ್ಳಾಗಲಿಲ್ಲ. ದಿನ ಸರಿದಂತೆ ಬೆಲ್ಲಕ್ಕೆ ಮುತ್ತುವ ಇರುವೆಗಳ ಹಾಗೆ ಅವಿನಾಶನ ಚಿಕಿತ್ಸಾಲಯದಲ್ಲಿ ರೋಗಿಗಳ ಸಾಲು. ಕಿರಾಣಿ ಅಂಗಡಿಯ ಬದಿಯಲ್ಲಿರುವ ಮರದ ಏಣಿಯನ್ನೇರಿ ಬರಬೇಕು. ಇರುವ ಒಂದು ಕೋಣೆಯಲ್ಲಿ ಪರದೆ

ಇಳಿಬಿಟ್ಟು ಎರಡು ಭಾಗ ಮಾಡಿ, ಒಂದರಲ್ಲಿ ರೋಗಿಗಳಿಗೆ ಕುಳಿತುಕೊಳ್ಳುವ ವ್ಯವಸ್ಥೆ, ಇನ್ನೊಂದರಲ್ಲಿ ಅವಿನಾಶನಿಗೆ ಪರೀಕ್ಷಿಸಲು ಸ್ಥಳ.

ಹಳ್ಳಿಯಲ್ಲಿ ವೈದ್ಯರಿಲ್ಲದ ಕೊರತೆಯೋ ಅಥವಾ ಅವಿನಾಶನ ಹಸ್ತಗುಣದ ಪ್ರಭಾವವೋ ತಿಳಿಯದು–ಅವನು ತಾನು ತೆಗೆದ ಸಾಲ, ತಂದೆ ನೀಡಿದ ಹಣ ಎರಡನ್ನೂ ತೀರಿಸಿದ. ಹೊಸ ಮೋಟಾರ್ ಬೈಕ್ ಸಂಗಾತಿಯಾಯಿತು. ಕಲ್ಲಳ್ಳಿಯ ಮಣ್ಣುರಸ್ತೆಗೆ ಅದು ಅಗತ್ಯ. ಹಗಲು ರಾತ್ರೆ ರೋಗಿಗಳಿಂದ ಕರೆ ಬರಲಿ, ಎಷ್ಟೇ ದೂರವಿರಲಿ, ಮೋಟಾರ್ ಬೈಕ್‌ನಲ್ಲಿ ಹೊರಡಲು ಸಿದ್ಧ. ನಗುಮೊಗದ ಅವಿನಾಶ ಎಲ್ಲರಿಗೂ ಬೇಕು. ರಾಜಣ್ಣ ಅವನ ಸಹಾಯಕ್ಕೆ ಹದಿನೈದು ವರ್ಷದ ಹುಡುಗ ಗೋವಿಂದನನ್ನು ನಿಯಮಿಸಿದ. ಚೂಟಿಯಾದ ಹುಡುಗ ಅವಿನಾಶನೊಂದಿಗೆ ಬಹಳ ಬೇಗನೆ ಹೊಂದಿಕೊಂಡ.

ಅವಿನಾಶನ ಪ್ರಾಕ್ಟೀಸ್ ಚೆನ್ನಾಗಿದೆಯೆಂದು ತಿಳಿದು ಶ್ರೀಕಂಠಯ್ಯ ಒಮ್ಮೆ ಬಂದು ಹೋಗಿದ್ದಾರೆ. ಎರಡನೇ ಬಾರಿ ಬಂದಾಗ ಅವನ ಹೆಸರು ಸಾಕಷ್ಟು ಪ್ರಸಿದ್ಧಿಯಾಗಿದೆ. ಅದರೊಂದಿಗೆ ವಿಗ್ರಹದ ಸುದ್ದಿ ಕತೆಯಂತೆ ಪ್ರಚಾರವಾಗುತ್ತಿದೆ. ಶ್ರೀಕಂಠಯ್ಯನವರಿಗೆ ಇದರಲ್ಲೆಲ್ಲ ಅತೀವ ಆಸಕ್ತಿ. ಬೆಟ್ಟ ಹತ್ತಲು ಕಷ್ಟವಾದರೂ ಪ್ರಯಾಸದಿಂದ ತಾವೊಬ್ಬರೇ ಹತ್ತಿ ಇಳಿದರು. ವಿಗ್ರಹವನ್ನು ಕಣ್ತುಂಬ ನೋಡಿ ಅಂದವಾಗಿ ಬಣ್ಣಿಸಿದರು ಮಗ–ಸೊಸೆಯ ಎದುರು :

"ಅದು ಕೇವಲ ಕಂಚಿನ ವಿಗ್ರಹವಲ್ಲ, ಪಂಚಲೋಹಗಳ ವಿಗ್ರಹ. ನನಗೆ ಶ್ರೀರಾಮನ ಮೂರ್ತಿಯಂತೆ ಕಾಣಿಸಿತು."

"ಒಬ್ಬೊಬ್ಬರಿಗೆ ಒಂದೊಂದು ತರಹ ಕಾಣಿಸುತ್ತದೆ. ಏನದು ವಿಶೇಷ?" ನಕ್ಕಿದ್ದ ಅವಿನಾಶ.

"ಅದೇ ಅಲ್ಲಿ ವಿಶೇಷ ! ನಾನು ಶ್ರೀರಾಮನಲ್ಲಿ ನಂಬಿಕೆ ಇರಿಸಿದವ. ನನ್ನ ಕಣ್ಣಿಗೆ ಹಾಗೆ ಕಂಡಿತು. ನಮಗೆ ಯಾವ ದೇವರಲ್ಲಿ ಭಕ್ತಿ, ನಂಬಿಕೆ ಇದೆಯೋ ಆ ರೂಪದಲ್ಲಿ ಕಾಣುತ್ತದೆ. ಅದೇ ವಿಶೇಷ! ನೀನೂ ಹೋಗಿ ನೋಡಿ ಬಾ."

"ಇನ್ನೂ ನಿಮ್ಮ ತಲೆ ಬಾಚಿ ಮುಗಿಯಲಿಲ್ಲವೇ? ಅರ್ಧಗಂಟೆಯಿಂದ ಕನ್ನಡಿ ಮುಂದೆ ಏನು ಮಾಡ್ತಾ ಇದ್ದೀರಿ?"

ಹಿಂದಿನಿಂದ ಅಹಲ್ಯಳ ಸ್ವರ ಕೇಳಿಸಿದಾಗ ಹಣಿಗೆ ಕೆಳಗಿರಿಸಿ ಫಕ್ಕನೆ ಹೊರಳಿದ, ಅಲ್ಲೇ ಮೇಜಿನ ಮೇಲಿಟ್ಟ ಕಾಫಿ ಆರಿ ತಣ್ಣಗಾಗಿದೆ. ಕಲ್ಲು ಬೆಟ್ಟವನ್ನು ಹತ್ತಿ ಇಳಿಯುತ್ತಿದ್ದ ಮನಸ್ಸು ಬೆಟ್ಟವನ್ನೇರುವ ಕೆಲವರನ್ನು ನೋಡುತ್ತ ಮತ್ತೆ ಚಿಂತಿಸಿತು. ಕುರಿ, ಆಡುಗಳು ಮೇಯುತ್ತಿದ್ದ ಬೆಟ್ಟದ ಮೈಮೇಲೆ ಜನರು ನಡೆದೂ ನಡೆದು ಕಿರುಹಾದಿಯೂ ಆಗಿರಬಹುದು. ತಾನೂ ಅಹಲ್ಯ

ಒಮ್ಮೆ ಅಲ್ಲಿ ಹೋಗಿಬರಬೇಕು. ತಮ್ಮಿಬ್ಬರ ದೃಷ್ಟಿಗೆ ಅದು ಯಾವ ರೂಪದಲ್ಲಿ ಕಾಣಿಸೀತು? ತಾವಿಬ್ಬರೂ ಕಿರುದಾರಿಯಲ್ಲಿ ನಡೆಯುತ್ತ ಹೋದಂತೆ ರಹದಾರಿಯಾಗಬಲ್ಲದೇ?

ಆಗಲೇ ಎಂಟೂವರೆ ಆಗಿಹೋಗಿದೆ. ಈ ಹೊತ್ತಿಗೆ ಚಿಕಿತ್ಸಾಲಯದಲ್ಲಿ ಇರಬೇಕಿತ್ತು, ಇವತ್ತು ತಡವಾಗಿದೆ. ಅವಸರದಲ್ಲಿ ಹೊರಟು ಸಿದ್ಧನಾಗುತ್ತಿದ್ದಂತೆ ಆರಿ ತಣ್ಣಗಾದ ಕಾಫಿಯನ್ನು ಮತ್ತೆ ಬಿಸಿ ಮಾಡಿ ಅವನ ಕೈಲಿರಿಸಿದಳು ಅಹಲ್ಯ. ಅವಳ ಕಣ್ಣುಗಳಲ್ಲಿ ತುಂಬಿದ್ದ ನಗುವನ್ನು ನೋಡುತ್ತ ಹುಬ್ಬೇರಿಸಿದ.

"ಈಗ್ತಾನೆ ಶಾಲೆಯ ಟೀಚರು, ಅದೇ ಮೇಡಮ್ ಶಕುಂತಲೇ, ಇಲ್ಲೇ ಕಿಟಕಿ ಹತ್ರ ನಿಂತು ಸ್ವಲ್ಪ ಹೊತ್ತು ಮಾತನಾಡಿದರು, ಗೊತ್ತಾ ನಿಮಗೆ?" ಅವನ ಶರ್ಟಿನ ಮೇಲಿದ್ದ ತಲೆಗೂದಲನ್ನು ಕೊಡಹುತ್ತ ಅಂದಳು : "ನೀವು ಯಾವುದೋ ಗುಂಗಿನಲ್ಲಿದ್ದೀರಿ. ಅದೇ ವಿಗ್ರಹದ ಮಹಾಶಯ ಗಡ್ಡ ಮೀಸೆ ಬಿಟ್ಟು ಬೈರಾಗಿ ಆಗಿದಾನಂತೆ, ಮೊದಲಿನ ಮನುಷ್ಯ ಅಲ್ಲವಂತೆ."

ಅವಿನಾಶ ಬೇಸರದಲ್ಲಿ ಗೊಣಗುತ್ತ ಬೈಕ್‌ನ ಕೀಲಿಕೈ ಎತ್ತಿಕೊಂಡ. "ಅವನು ಹೇಗೆ ಬೇಕಾದರೂ ಇರಲಿ, ನಮಗೇನಂತೆ. ಕಲ್ಲುಬಂಡೆಯಂತೆ ಆ ವಿಗ್ರಹ, ಅವನೂ, ಓ.ಕೆ. ನಾನಿನ್ನು ಬರಲಾ?"

೨

'ಧನ್ವಂತರಿ ಚಿಕಿತ್ಸಾಲಯ'ದಲ್ಲಿ ಆಗಲೇ ರೋಗಿಗಳ ಸಾಲು ಕಾಯುತ್ತಿದೆ ಅವಿನಾಶನಿಗಾಗಿ. ಅವನು ಎಲ್ಲರೆದುರು ಮುಗುಳ್ನಗೆ ಬೀರಿ ಪರದೆಯಾಚೆ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಅದೇ ಆಗ ತಂದೆಯಿಂದ ಬಂದ ಕಾಗದ ಕಾಣಿಸಿತು. ಕಿಟ್‌ಬ್ಯಾಗ್ ಬದಿಗಿರಿಸಿ ಆ ಕಾಗದವನ್ನು ಕೈಗೆತ್ತಿಕೊಂಡ.

'ಅವಿನಾಶ, ನಿನ್ನ ಪ್ರಾಕ್ಟೀಸ್ ಚೆನ್ನಾಗಿರಬಹುದೆಂದು ತಿಳಿಯುತ್ತೇನೆ. ನ್ಯಾಯಮಾರ್ಗದಲ್ಲಿ ಮುನ್ನಡೆ. ಬಡರೋಗಿಗಳಿಗೆ ಅನುಕಂಪ ತೋರಿಸು, ಆದರೆ ನ್ಯಾಯವಾದ ಹಣ ತೆಗೆದುಕೋ. ಎಲ್ಲಾ ಶ್ರೀರಾಮನ ದಯ. ಅವನ ಅನುಗ್ರಹ ನಿನ್ನ ಮೇಲಿರಲಿ. ನಿನ್ನ ಅಮ್ಮ ಮೊಮ್ಮಗನಿಗಾಗಿ ಕಾಯುತ್ತಿದ್ದಾಳೆ. ವಿಶೇಷವಿದ್ದರೆ ಕೂಡಲೇ ತಿಳಿಸು.'

ಅವಿನಾಶ ಪೆನ್ನಿನಿಂದ 'ಎಲ್ಲಾ ಶ್ರೀರಾಮನ ದಯ' ಎಂಬ ವಾಕ್ಯದ ಮೇಲೆ ಗೆರೆಯೆಳೆದು 'ಎಲ್ಲಾ ನಿನ್ನ ಪರಿಶ್ರಮದ ಫಲ. ಅದೇ ನಿನ್ನ ಅದೃಷ್ಟ' ಎಂದು ಬರೆದು ನಕ್ಕ ತನ್ನಲ್ಲೇ. ಮೊಮ್ಮಗನಿಗಾಗಿ ಹಂಬಲಿಸುವ ತಾಯಿ, ಮದುವೆಯಾದ ವರ್ಷಕ್ಕೇ ಅಮ್ಮನ ಕಿರಿಕಿರಿ ಪ್ರಾರಂಭ. ಇನ್ನಿಬ್ಬರು ಅಣ್ಣಂದಿರಿಗೆ

ಮಕ್ಕಳಿದ್ದರೂ ಅವಳಿಗೆ ಅವಿನಾಶನ ಕುಡಿಯನ್ನು ಕಾಣುವ ಆಸೆ. ಮೂರು ವರ್ಷಗಳಾದವು ಮದುವೆಯಾಗಿ. ಮಗು ಬೇಕೆಂಬ ಆಸೆ ಅವನಿಗಿದ್ದರೂ ಆತುರವಿರಲಿಲ್ಲ. ನಿಧಾನವಾಗಿ ಆದೀತೆಂಬ ಭರವಸೆ. ಇಲ್ಲಿಗೆ ಬಂದ ಅಹಲ್ಯ ಬೇರೆ ಡಾಕ್ಟರರ ಹತ್ತಿರ ಹೋಗಿ ಬರೋಣ ಎನ್ನುತ್ತಿದ್ದಾಳೆ. ತನ್ನ ಔಷಧಿಯಲ್ಲಿ ನಂಬಿಕೆ ಇಲ್ಲವೆಂದಲ್ಲ, ಪಟ್ಟಣದ ಲೇಡಿ ಡಾಕ್ಟರರ ಹತ್ತಿರ ಹೋಗಿ ಬಂದರೆ ಉತ್ತಮ ಎಂದೆನಿಸಿದೆ. 'ನಾವಿಬ್ಬರೂ ಆರೋಗ್ಯವಾಗಿರುವಾಗ ನಿನಗೇಕೆ ಅವಸರ?' ಭರವಸೆಯ ಮಾತುಗಳನ್ನು ಹೇಳುತ್ತಿದ್ದಾನೆ. ಈಗ ಅಪ್ಪನ ಕಾಗದದಲ್ಲಿಯೂ ಅದೇ ವಿಷಯ.

ಕಾಗದವನ್ನು ಬದಿಗಿರಿಸಿ ಕರೆಗಂಟೆಯನ್ನು ಒತ್ತಿದ ಎರಡು ಬಾರಿ. ಪರದೆಯಾಚೆ ಗೋವಿಂದನ ಕಣ್ಣುಗಳು ಪಿಳಿಪಿಳಿಯಾದವು. ಹೊರಗೆ ಕುಳಿತ ರೋಗಿಗಳನ್ನು ಸರದಿಯಂತೆ ಕಳುಹಿಸುವುದು ಅವನ ಕೆಲಸ. ಅವಿನಾಶ ಹೇಳಿದಂತೆ ಶೀಶೆಯಲ್ಲಿ ಔಷಧಿ ತುಂಬಿಸಿಕೊಡಲು ತಿಳಿಯದು. ದಿನೇ ದಿನೇ ಹೆಚ್ಚುತ್ತಿರುವ ರೋಗಿಗಳ ಸಂಖ್ಯೆ, ಪರೀಕ್ಷಿಸಿ ಔಷಧಿ ಕೊಡುವುದಕ್ಕೂ ಅವಿನಾಶನಿಗೆ ಸಮಯ ಸಾಲದು. ಒಬ್ಬ ಕಂಪೌಂಡರ್‌ನನ್ನು ನಿಯಮಿಸಬೇಕು.

ಒಬ್ಬೊಬ್ಬರನ್ನೇ ಪರೀಕ್ಷಿಸಿ ಔಷಧಿ ಕೊಟ್ಟು ಕಳುಹಿಸುತ್ತಿದ್ದಂತೆ ಮೈದುಕುಂಞ ತನ್ನ ಒಂದೂವರೆ ವರ್ಷದ ಮಗುವಿನೊಂದಿಗೆ ಒಳಗೆ ಕಾಲಿರಿಸಿದ. ಅವನ ಮುಖ ಸುಟ್ಟ ಬದನೆಯಂತಾಗಿದ್ದು, ಕಣ್ಣು ತುಂಬ ನೀರು. ಮಗು ಅವನ ಹೆಗಲ ಮೇಲೆ ತಲೆಯಿಟ್ಟು ಒರಗಿದೆ.

"ಮಗು ನಿನ್ನೆಯಿಂದ ಏಳ್ತಾನೇ ಇಲ್ಲ, ಡಾಕ್ಟರೇ." ಪರೀಕ್ಷಾ ಮಂಚದ ಮೇಲೆ ಮಗುವನ್ನು ಮಲಗಿಸುತ್ತಾ "ಒಂದು ತೊಟ್ಟು ಹಾಲು, ನೀರು ಮುಟ್ಟಲಿಲ್ಲ" ಅಂದ ಮೈದುಕುಂಞ.

ನಾಲ್ಕು ದಿನಗಳ ಹಿಂದೆ ಇದೇ ಮಗುವಿಗೆ ಜ್ವರವೆಂದು ತನ್ನಲ್ಲಿಂದ ಔಷಧಿ ತೆಗೆದುಕೊಂಡದ್ದನ್ನು ನೆನಪಿಸಿಕೊಳ್ಳುತ್ತ, ಮಲಗಿದ ಮಗುವಿನ ಎರಡೂ ಕಾಲುಗಳನ್ನು ಒತ್ತಿದ. ಹತ್ತಿಯಂತೆ ಮೆತ್ತಗಾಗಿ ಶಕ್ತಿಯನ್ನು ಕಳೆದುಕೊಂಡ ಕಾಲುಗಳು ! ಸುಡುವಂತಹ ಜ್ವರದಲ್ಲಿ ಬಲವಿಲ್ಲದ ಕುತ್ತಿಗೆ. ಮಗುವನ್ನು ಎತ್ತಿ ನಿಲ್ಲಿಸಿದರೆ ಬಲವಿಲ್ಲದ ಎಳೆ ದೇಹ ವಾಲಿತು ಹಿಂದಕ್ಕೆ. ನೋಡಿದಾಕ್ಷಣ ತಿಳಿದುಹೋಯಿತು, ಪೋಲಿಯೋ ಬಂದಿದ್ದು ಪರಿಸ್ಥಿತಿ ಗಂಭೀರವಾಗಿದೆ. ಆದರೆ ಹಾಗೆ ಹೇಳಿ ತಂದೆಯನ್ನು ಹೆದರಿಸುವುದು ಮೂರ್ಖತನದ ಕೆಲಸ.

"ನಾನು ಔಷಧಿ ಕೊಟ್ಟಿದ್ದೆನಲ್ಲ, ಯಾಕೆ ಇಷ್ಟು ತಡ ಮಾಡಿ ಕರೆದುಕೊಂಡು ಬಂದೆ? ನಿನ್ನೆಯೇ ಬರಬೇಕಿತ್ತು."

ಮೈದುಕುಂಞ ತೊದಲಿದ : "ನೀವು ಕೊಟ್ಟ ಔಷಧಿ ವಾಂತಿಯಾಯಿತು. ನಾನೇನೋ ಕಾಟಂಗೋಟಿ ಜ್ವರ ಅಂದುಕೊಂಡಿದ್ದೆ. ಈಗ ನೋಡಿದರೆ

ನೆಲಕ್ಕೆ ಕಾಲನ್ನು ಊರುವುದೇ ಇಲ್ಲ, ಡಾಕ್ಟರೆ" ಮೈದುಕುಂಞ ಅಳುಮುಖ ಮಾಡಿದ. "ಎಷ್ಟು ಚೆಂದಾಗಿ ಮನೆ ತುಂಬಾ ಓಡಾಡ್ತ ಇತ್ತು ಈ ಮಗ. ಇದಕ್ಕೆ ಹತ್ತು ತಿಂಗಳಿಗೇ ಕಾಲು ಬಂದಿತ್ತು. ಈಗ ನೋಡಿದರೆ ಎಂಥ ಗ್ರಾಚಾರಾ. ಎಲ್ಲರ ದೃಷ್ಟಿ ತಗಲಿತು ಇದಕ್ಕೆ."

ದೃಷ್ಟಿ ತಗಲಿದೆಯೆಂದು ಮೈದುಕುಂಞ ತಾನು ಕೊಟ್ಟ ಔಷಧಿಯನ್ನು ಚೆಲ್ಲಿ ಮಗುವನ್ನು ಬೇರೆಲ್ಲಿಗೋ ಕರೆದೊಯ್ದಿದ್ದಾನೆ. ನಿನ್ನೆಯಿಂದ ಏಳಲಾರದ ಸ್ಥಿತಿ ನೋಡಿ ಗಾಬರಿಯಾಗಿ ಬಂದಿದ್ದಾನೆ ಇಲ್ಲಿಗೆ. ಈಗಲೂ ಚುಚ್ಚು ಮದ್ದಿನಿಂದ ಕಾಯಿಲೆಯನ್ನು ವಾಸಿ ಮಾಡಬಹುದಾದರೂ ಸರಿಯಾಗಿ ಚಿಕಿತ್ಸೆ ಮಾಡದಿದ್ದರೆ ಪ್ರಯೋಜನ ಸೊನ್ನೆ. ಅವನ ಕರುಣೆ ತುಂಬಿದ ಕಣ್ಣುಗಳು ಮಗುವಿನ ಬಲಹೀನ ಶರೀರವನ್ನು ಅಳೆದು ನೋಡಿದವು. ಎಷ್ಟು ನರಳುತ್ತಿದೆಯೋ...

"ಈಗ ಎರಡು ಇಂಜಕ್ಷನ್ ಕೊಡ್ತೇನೆ. ಇನ್ನು ನಾಲ್ಕು ದಿನ ಪ್ರತಿದಿನ ಒಂದೊಂದು ಇಂಜೆಕ್ಷನ್ ಕೊಡಬೇಕು. ನಾನು ಹೇಳಿದ ಹಾಗೆ ಮಾಡಿದರೆ ಖಂಡಿತ ಗುಣವಾದೀತು."

ಮೈದುಕುಂಞ ಉದ್ದದ ಚುಚ್ಚುಮದ್ದಿನ ಸೂಜಿಯನ್ನು ನೋಡಿಯೇ ನಡುಗಿಹೋದ. ತನ್ನ ಮಗು ನೋವನ್ನು ಸಹಿಸಿಕೊಳ್ಳಬಲ್ಲದೇ? ಯಾ ಅಲ್ಲಾ, ಇದೆಂತಹ ಶಿಕ್ಷೆ ! ಚುಚ್ಚು ಮದ್ದು ಕೊಡದೆ ಗುಣಪಡಿಸಬೇಕೆಂದು ಗೋಗರೆದ, ಅತ್ತ. ಅವಿನಾಶ ಅದರ ಎಳೆಮೈಗೆ ಸೂಜಿ ಚುಚ್ಚಿದಾಗ ಆತ ಜೋರಾಗಿ ಬೊಬ್ಬೆ ಹಾಕಿದ.

"ಮೊದಲು ನಿನ್ನ ಬೊಬ್ಬೆ ನಿಲ್ಲಿಸು. ಮಗು ಬದುಕಬೇಕು, ಓಡಾಡಬೇಕು ಅಂದರೆ ನಾನು ಹೇಳಿದಂತೆ ಕೇಳಬೇಕು. ಇಲ್ಲಾಂದ್ರೆ ಇವತ್ತಿನ ಹಣವನ್ನು ಸಂದಾಯ ಮಾಡಿ ತೆಪ್ಪಗೆ ಹೊರಟು ಹೋಗು !"

ಮೈದುಕುಂಞ ತನ್ನ ರುಮಾಲಿನಲ್ಲಿ ಭದ್ರಪಡಿಸಿಟ್ಟ ರೂಪಾಯಿ ನೋಟನ್ನು ತೆಗೆದು ಅಂದಿನ ಔಷಧಿಯ ಲೆಕ್ಕ ಒಪ್ಪಿಸಿದ. ನಾಳೆ ಬರುತ್ತೇನೆಂಬ ಭರವಸೆ ಅವನ ಮುಖದ ಮೇಲಿರಲಿಲ್ಲ. ಮಾಸಿದ ರೂಪಾಯಿ ನೋಟುಗಳಂತೆ ಅವಿನಾಶನ ಮುಖವೂ ಮುದುಡಿತು, ಮಗು ಮುಲುಗುತ್ತ ತಂದೆಯ ಹೆಗಲನ್ನು ಒರಗಿದ್ದು ಕಂಡು.

ಹೊರಗೆ ರೋಗಿಗಳ ಸಂಖ್ಯೆ ಕಡಿಮೆಯಾಗುತ್ತ ಬಂದಂತೆ ಹದಿಹರಯದ ಕಾಲೇಜು ಯುವಕನಂತೆ ಕಾಣುವ ಒಬ್ಬಾತ ಪ್ರವೇಶಿಸಿದ.

"ಗುಡ್ ಮಾರ್ನಿಂಗ್, ಡಾಕ್ಟರೇ" ತನ್ನ ಕೈ ಮುಂದೆ ಚಾಚಿದ ಹಸ್ತಲಾಘವ ನೀಡಲು. ಅವಿನಾಶ ಕೈಗಳನ್ನು ಮುಗಿದು, "ನಮಸ್ಕಾರ, ಯಾರು ನೀವು?" ಎಂದು ಕೇಳಿದ.

"ನಾನು ಯುವಕ ಮಂಡಳಿಯ ಪ್ರೆಸಿಡೆಂಟು. ಮುಂದಿನ ತಿಂಗಳು ನಮ್ಮ ಯುವಕ ಮಂಡಳಿಯ ಮೂರನೇ ವಾರ್ಷಿಕೋತ್ಸವ" ಎದುರು ಕುರ್ಚಿಯಲ್ಲಿ ಆಸೀನನಾಗಿ, "ನೀವು ಅದರ ಅಧ್ಯಕ್ಷರಾಗಬೇಕೆಂದು ಕೇಳಿಕೊಳ್ಳಲು ನಾನು ಬಂದಿದ್ದೇನೆ" ಎಂದ.

ಕಣ್ಣ ತುದಿಯಲ್ಲಿ ನೋಡಿದ ತರುಣನನ್ನು. ಹೆಚ್ಚೆಂದರೆ ಮೂವತ್ತರೊಳಗಿನ ಪ್ರಾಯ. ಉಕ್ಕಿ ಹರಿಯುವ ತಾರುಣ್ಯ. ಥಳಹೊತ್ತ ದಿಟ್ಟ ಕಣ್ಣುಗಳು. ಕಿರುಮೀಸೆಯ ಧಾರ್ಷ್ಟ್ಯ ತುಂಬಿದ ಮುಖ. ಬೆಲೆ ಬಾಳುವ ಉಡುಪಿನ ಹೊಳಪು. ಅಂಗಿ ಕಿಸೆಯಲ್ಲಿ ಬಿಸಿಲು ಕನ್ನಡಕ. ನೋಡಿದರೆ ಶ್ರೀಮಂತ ವರ್ಗದಲ್ಲಿ ಸೊಂಪಾಗಿ ಬೆಳೆದ ಹುಡುಗ. ಸಭ್ಯತೆಯ ಸೋಗಿನಲ್ಲಿ ಅಡಗಿದ ವಿನಯವಂತಿಕೆ. ಡಿಗ್ರಿ ಓದಿದವನಂತೆ. ಆದರ್ಶದ ಹುಚ್ಚಿನಲ್ಲಿ ಯುವಕ ಮಂಡಳಿಯ ಅಧ್ಯಕ್ಷ. ಅನಕ್ಷರಸ್ಥರ ಏಳ್ಗೆಗಾಗಿ, ಬಡವರ ಉದ್ಧಾರಕ್ಕಾಗಿ ಶ್ರಮಪಡುವ ಆಕಾಂಕ್ಷೆ ತಳೆದಿದ್ದಾನೆ.

"ಏನು ನಿಮ್ಮ ಹೆಸರು?"

"ಸುಂದರರಾಜ. ನನ್ನನ್ನು ಎಷ್ಟೋ ಬಾರಿ ನೋಡಿದ್ದೀರಿ. ನಿಮ್ಮ ಮನೆ ಮುಂದಿನ ಅಡ್ಡ ಓಣಿ ಇದೆಯಲ್ಲ, ಅಲ್ಲಿಂದ ಮುಂದೆ ಹೋದರೆ ನಮ್ಮ ರಾಜಣ್ಣನವರ ಅಣ್ಣ ಜನಾರ್ದನರಾಯರಿಲ್ಲವೇ, ಅವರ ತೋಟದ ಬದಿಗೆ ನಡೆದರೆ ಹಿತ್ಲುಗೌಡರ ಗದ್ದೆ ಕಾಣುತ್ತಲ್ಲ, ಹಾಗೇ ಅಲ್ಲಿಂದ ಕೇವಲ ಒಂದು ಫರ್ಲಾಂಗ್ ದೂರ ಅಷ್ಟೇ. ನೀವು ಆ ಕಡೆ ಬಂದಿಲ್ಲ. ಅದೇ, ಕಟ್ಟೆಹಿತ್ಲು ರಾಮಣ್ಣ ನಾಯ್ಕರ ಎರಡನೇ ಮಗ ನಾನು."

"ಹೋ, ನೆನಪಾಯ್ತು. ಹೇಗಿದ್ದಾರೆ ರಾಮಣ್ಣ? ಬೆನ್ನು ನೋವು ಎಂದು ಎರಡು ಬಾರಿ ಬಂದಿದ್ದರು"

"ಅಯ್ಯೋ, ಬೆನ್ನು ನೋವಿಗೆ ಇಂಗ್ಲೀಷು ಔಷಧಿ ಎಲ್ಲಿ ಹಿಡಿಯುತ್ತೆ ಡಾಕ್ಟರೇ, ಅವರಿಗೆ ನೋವು ಪ್ರಾರಂಭವಾಗಿ ಏಳೆಂಟು ವರ್ಷಗಳಾದವು. ಔಷಧಿಗಾಗಿ ಎಷ್ಟು ಖರ್ಚು ಮಾಡಿದರೋ ನಾನು ಕಾಣೆ. ಮನಸ್ಸು ದೃಢವಾಗಿದ್ದರೆ ಬೆನ್ನು ನೋವಿಲ್ಲ, ತಲೆ ನೋವಿಲ್ಲ !"

ಸುಂದರರಾಜ ಅನಂತರ ಯುವಕ ಮಂಡಳಿಯ ಕಾರ್ಯಕ್ರಮದ ಪಟ್ಟಿಯನ್ನು ಅವನ ಮುಂದಿರಿಸಿದ. ವಾರ್ಷಿಕೋತ್ಸವದ ನಿಮಿತ್ತ ಆಟೋಟದ ಸ್ಪರ್ಧೆ, ಜಾನಪದ ಹಾಡಿನ ಸ್ಪರ್ಧೆ, ಯಕ್ಷಗಾನ ಕಾರ್ಯಕ್ರಮ ಏರ್ಪಡಿಸಿದ್ದರು. ಹಳ್ಳಿಯಲ್ಲಿ ಇದೊಂದು ಶ್ಲಾಘನೀಯ ಕೆಲಸ. ಆದರೆ ಉದ್ದೇಶಿತ ಕಾರ್ಯಕ್ಕೆ ಕೆಲವು ಸಾವಿರ ರೂಪಾಯಿಗಳು ಬೇಕು.

"ಪಂಚಾಯತ್ ಬೋರ್ಡಿನವರು ಸ್ವಲ್ಪ ಸಹಾಯ ಮಾಡ್ತಾರೆ. ಇನ್ನುಳಿದದ್ದು ವಂತಿಗೆ ಹಾಕಿ ಸಂಗ್ರಹಿಸುತ್ತೇನೆ. ಜನರು ಸಿಕ್ಕಿದ್ದಕ್ಕೆಲ್ಲ ಖರ್ಚು ಮಾಡುವಾಗ ನಮ್ಮ ಮಂಡಳಿಗೆ ಒಂದೈದು ಕೊಡುವುದು ಏನು ಕಷ್ಟವಿಲ್ಲ"

"ನಿಮ್ಮ ಮಂಡಳಿ ಹಳ್ಳಿಗೆ ಏನು ಸಹಾಯ ಮಾಡುತ್ತದೆ?"

"ಹಳ್ಳಿಗರ ಕಷ್ಟ–ಸುಖದ ವಿಚಾರಣೆ, ಸಾಲ ಕೊಡಿಸುವುದು, ಆಸ್ತಿ ಜಗಳದ ಪರಿಹಾರ, ಅಬಲೆಯರ ರಕ್ಷಣೆ, ಕಲೆಗೆ ಸಹಾಯ–ಹೀಗೆ ನಮ್ಮದು ಪುರುಸೊತ್ತಿಲ್ಲದ ವ್ಯವಹಾರ. ನನ್ನಂತಹ ಇತರ ಯುವಕರು ಇಲ್ಲಿ ಉತ್ಸಾಹೀ ಕಾರ್ಯಕರ್ತರು. ಹಳ್ಳಿಗೆ ವೈದ್ಯರು ಬೇಕೆಂದು ಜಾಹೀರಾತು ಕೊಟ್ಟವರೂ ನಾವೇ!"

"ಅಂದ್ಹಾಗೆ ಬೆಟ್ಟದ ಮೇಲೆ ವಿಗ್ರಹದ ಜೊತೆ ಒಬ್ಬ ಮಹಾತ್ಮ ಇದ್ದಾನಲ್ಲ, ಏನು ಅವನ ಕತೆ?"

"ಆ ಬೈರಾಗಿಯೇ? ಯಾರು ಅಂತ ತಿಳಿಯದು. ನಾವೂ ಹೋಗಿ ನೋಡಿ ಬಂದೆವು. ಕಲ್ಲುಬೆಟ್ಟದ ಮೇಲೆ ಅವನೂ ಶಿಲೆಯಾಗ್ತಾ ಇದ್ದಾನೆ. ಅವನಿಗೆಲ್ಲೋ ಮತಿಭ್ರಮಣೆ. ಬಿಸಿಲು, ಗಾಳಿಗೆ ಒಣಗಿದ ಸಂಡಿಗೆ ತರಹ ಆಗ್ತಿದ್ದಾನೆ. ಹ್ಹೇ ಹ್ಹೇ..." ಸುಂದರರಾಜ ಕುರ್ಚಿಯಿಂದ ಏಳುತ್ತ ಅಂದ : "ಹಾಗಾದರೆ ವಾರ್ಷಿಕೋತ್ಸವದಲ್ಲಿ ನೀವೇ ಅಧ್ಯಕ್ಷರು. ಆಮಂತ್ರಣದ ಓಲೆಯನ್ನು ನಂತರ ಕಳುಹಿಸುತ್ತೇನೆ."

"ನಿಮ್ಮ ಕಾರ್ಯಕ್ರಮ ಆದಿತ್ಯವಾರ ಇದ್ದರೆ ಒಳ್ಳೆಯದು"

"ಯುವಕ ಮಂಡಳಿ ಹುಟ್ಟಿದ್ದು ಗುರುವಾರ. ಅದೇ ದಿನ ಸಮಾರಂಭ ನಡೆಯಬೇಕಲ್ಲ. ನಿಮಗೆ ಚಿಂತೆ ಬೇಡ. ಸಮಯಕ್ಕೆ ಸರಿಯಾಗಿ ಕಾರಿನಲ್ಲಿ ಕರೆದೊಯ್ಯುವ ಏರ್ಪಾಟು ಮಾಡ್ತೇವೆ. ಸಮಾರಂಭದ ಭಾಷಣ ಮುಗಿದಾಕ್ಷಣ ನೀವು ಹೊರಟು ಬಿಡಿ. ಮುಂದಿನ ಮನರಂಜನೆ ನಿಮ್ಮಂತಹ ಬುದ್ಧಿ ಜೀವಿಗಳಿಗಲ್ಲ. ಹಳ್ಳಿಯ ಇತರರಿಗೆ, ನಮಸ್ಕಾರ!"

ಅವನ ಮಾತಿನಲ್ಲಿ ವ್ಯಂಗ್ಯವಿದೆಯೇ ಎಂದು ಅನುಮಾನದಿಂದ ಮುಖವೆತ್ತಿದರೆ ಅಲ್ಲಾಡುತ್ತಿದ್ದ ಪರದೆ ಕಾಣಿಸಿತು. ಸುಂದರರಾಜ ಆಗಲೇ ಹೊರಟು ಹೋಗಿದ್ದ. ಈಗ ಬಂದವಳು ಒಬ್ಬಳು ಯುವತಿ. ದಿಗ್ಗನೆ ಎಚ್ಚೆತ್ತು ಕುರ್ಚಿಯಲ್ಲಿ ಠೀವಿಯಿಂದ ಕುಳಿತು ಎಡಮುಷ್ಟಿಯನ್ನು ಕೆನ್ನೆಗೊತ್ತಿ ಹುಬ್ಬೇರಿಸಿ ನಿಧಾನವಾಗಿ ಒಳಗೆ ಬಂದು ತನ್ನೆದುರು ಕುಳಿತವಳನ್ನು ನೋಡಿದ.

ಪರಿಚಿತ ಮುಖ, ನಾಗಪ್ಪನ ಏಕಮಾತ್ರ ಪುತ್ರಿ ಪದ್ಮಲೆ. ಅನೇಕ ಬಾರಿ ನೋಡಿದ್ದಾನೆ. ಮೋಟಾರ್‌ಬೈಕ್‌ನಲ್ಲಿ ಹೋಗುವಾಗ ಅವಳು ಎದುರಾದರೆ ತಾನಾಗಿಯೇ ಮುಗುಳ್ನಗೆ ನಗುವ ಹುಡುಗಿ. ನಾಗಪ್ಪ ತನ್ನ ಗೇಣಿಭೂಮಿಯಲ್ಲಿ ಕಷ್ಟಪಟ್ಟು ಕೆಲಸ ಮಾಡುವವನು. ಅವನ ಇಬ್ಬರು ಗಂಡುಮಕ್ಕಳು

ಶ್ರಮಜೀವಿಗಳು. ತಮ್ಮ ಗದ್ದೆಯಲ್ಲಿ ಕೆಲಸವಿಲ್ಲದ ದಿನಗಳಲ್ಲಿ ಬೇರೆಯವರ ತೋಟದ ಅಡಿಕೆ ಕುಯ್ಯುವುದಕ್ಕೆ, ತೆಂಗು ಕೀಳುವುದಕ್ಕೆ ಹೋಗುವುದುಂಟು. ಪದ್ಮಲೆ ಮೇಲೆ ಎಲ್ಲಿಲ್ಲದ ಪ್ರೀತಿ. ಯೋಗ್ಯ ವರನಿಗಾಗಿ ಹುಡುಕುತ್ತಿದ್ದಾರೆ ಎಂದೂ ಸುದ್ದಿ. ಈಗ ಈ ಹುಡುಗಿ ಇಲ್ಲಿಗೇಕೆ ಬಂದಿದ್ದಾಳೋ, ಪ್ರಶ್ನಿಸಿದ.

"ನಾಲ್ಕು ದಿನಗಳಿಂದ ತಲೆ ನೋವು ಡಾಕ್ಟರೇ, ಮೈಜಗಿತ. ಏನಾದರೂ ಔಷಧಿ ಇದ್ದರೆ ಬೇಕಿತ್ತು" ಎಂದಳು ಗಡಸು ಧ್ವನಿಯಲ್ಲಿ.

"ಜ್ವರ ಇದೆಯೇ?"

"ಎಂಥದೋ ಗೊತ್ತಿಲ್ಲ, ನೀವೇ ಹೇಳಿ. ಎಲ್ಲಿ, ಆ ಮಂಚದ ಮೇಲೆ ಮಲಗಬೇಕಾ? ನಮ್ಮ ಜನ ಅಂತಾರೆ ನೀವು ಆ ಮಂಚದಮ್ಯಾಲೆ ಮಲಗಿಸಿ ಪರೀಕ್ಷೆ ಮಾಡುತ್ತೀರಂತೆ" ಎಂದು ಉತ್ತರಕ್ಕೂ ಕಾಯದೆ ಸರಸರನೆ ನಡೆದು ಮಂಚವನ್ನೇರಿದಳು.

ಅವಿನಾಶನಿಗೆ ತಬ್ಬಿಬ್ಬು. ಅವಳನ್ನು ನೋಡಿದಾಕ್ಷಣವೇ ಏನೋ ಒಂದು ಸಂಕೋಚ ಆವರಿಸಿದೆ. ಹರೆಯದ ಹೆಣ್ಣು, ಕಣ್ಣುಗಳಲ್ಲಿ ತೀಕ್ಷ್ಣಭಾವ. ಬಿಳಿಹೂವುಗಳ ಸೀರೆ, ಅದಕ್ಕೊಪ್ಪುವ ಕೆಂಪು ರವಿಕೆ, ಕೆಂಪಾದ ಕೆನ್ನೆಗಳು, ಬಿಳಿ ಮುತ್ತಿನೋಲೆ ಮತ್ತು ಬಿಳಿ ಸರದ ಸೊಬಗು. ಎಲೆ ಅಡಿಕೆ ತಿಂದು ರಂಗೇರಿದ ತುಟಿಗಳಿಗೆ ಬೇರೆ ರಂಗಿನ ಬೆಡಗು ಬೇಕಿರಲಿಲ್ಲ. ಮೈಗೆ ಸೂಸಿದ ಕಡಿಮೆ ಕ್ರಯದ ಸುಗಂಧ ದ್ರವ್ಯದ ಪರಿಮಳ ನಾಸಿಕಕ್ಕೇರಿ ಅವನೊಳಗೆಲ್ಲಾ ಗಲಿಬಿಲಿ. ಸಣ್ಣ ತಲೆನೋವು ಅವಳನ್ನು ತನ್ನಲ್ಲಿಗೆ ಕರೆತಂದಿತೇ? ಪರೀಕ್ಷಿಸುವದಂತೂ ಅನಿವಾರ್ಯ, ಪರೀಕ್ಷಿಸಿದ. ಆದರೆ ಹುಡುಗಿ ಯಾವ ಕಾಯಿಲೆಯೂ ಇಲ್ಲದೆ ಆರೋಗ್ಯವಾಗಿದ್ದಾಳೆ ! "ಯಾಕೆ ಬಂದೆ?" ಎಂದು ಗದರಿಸಿ ಕೇಳಿದಾಗ ಕಿಲಕಿಲನೆ ನಕ್ಕುಬಿಟ್ಟಳು.

"ನಿಮ್ಮ ದವಾಖಾನೆ ನೋಡೋಣವೆಂದು ಬಂದೆ. ಹೌದು ಡಾಕ್ಟರೇ, ನೀವೀಗ ಎಲ್ಲಿಂದ ಹಾಲು ತಗೋತಾ ಇದ್ದೀರಿ?"

"ರಾಜಣ್ಣನ ಮನೆಯಿಂದ"

"ಇಶ್ಶಿ !... ಅವರ ಮನೆಯದು ದನದ ಹಾಲು. ನಮ್ಮಲ್ಲೊಂದು ಎಮ್ಮೆ ಕರು ಹಾಕಿದೆ. ನೀವು ಹೂಂ ಅಂದರೆ ಎರಡು ಹೊತ್ತು ನಾನೇ ಹಾಲು ತಂದುಕೊಡ್ತೇನೆ. ನಿಮ್ಮಾಕೆಗೆ ಹೇಳಿ ಬಿಡಿ."

ಮಾತು ಅನಗತ್ಯವಾಗಿತ್ತು. ಪದ್ಮಲೆ ಯಾವ ಔಷಧಿಯನ್ನೂ ತೆಗೆದುಕೊಳ್ಳದೆ ಹೊರಟು ಹೋದ ಮೇಲೆ ಅವನು ನಿಜವಾಗಿಯೂ ಬೆವರಿದ್ದ. ಇಂತಹ ಹುಡುಗಿಯರನ್ನೆಷ್ಟೊ ನೋಡಿದ್ದಾನೆ. ಈ ವೈಯಾರ, ಮಾತು ಹೊಸದಲ್ಲ. ಆದರೆ ಪದ್ಮಲೆಯ ಕಣ್ಣುಗಳನ್ನು ಸಂಧಿಸಿದಾಗ ಅಲ್ಲಿ ಬೇರೆ ಭಾವ ನೋಡಿದ್ದಾನೆ. ಈ ಹುಡುಗಿ ಎಲ್ಲರಂತಲ್ಲ ! ಎಷ್ಟೋ ಹೊತ್ತು ಅದೇ ಗುಂಗು ತಲೆಯಲ್ಲಿ.

ಮಧ್ಯಾಹ್ನ ಇನ್ನೇನು ಅಲ್ಲಿಂದ ಹೊರಡಬೇಕು ಎನ್ನುವಾಗಲೇ ಆಗಮಿಸಿದರು ಜನಾರ್ದನರಾಯರು. ಅನೇಕ ಸಮಯಗಳಿಂದ ಅವರಿಗೆ ಎದೆನೋವು, ಅವಿನಾಶನ ಔಷಧಿಯಿಂದ ಇನ್ನೂ ವಾಸಿಯಾಗಿಲ್ಲ. 'ನಿಮ್ಮ ಚಿಂತೆಯನ್ನು ಬಿಟ್ಟು ಗೆಲುವಾಗಿರಲು ಪ್ರಯತ್ನಿಸಿರಿ' ಎಂದೂ ಬೋಧಿಸುತ್ತಿದ್ದಾನೆ ಐವತ್ತು ಮಳೆಗಾಲ ಕಂಡ ಈ ಹಿರಿಯರಿಗೆ. 'ಆಸ್ತಿ ಜಗಳ ಬಗೆಹರಿಯದೆ ಎದೆನೋವು ವಾಸಿಯಾಗದು' ಎನ್ನುವ ರಾಯರ ಮಾತು ಕಟುಸತ್ಯ. ರಾಜಣ್ಣ ಒಡಹುಟ್ಟಿದ ತಮ್ಮನಾದರೂ ಈಗ ಕಡುವೈರಿ. ಜನಾರ್ದನರಾಯರಿಗೆ ಈಗಲೂ ಅವನಲ್ಲಿ ವೈರತ್ವವಿಲ್ಲ. ಆಸ್ತಿ ಪಾಲಾಗಬೇಕೆಂದ ಧ್ವನಿ ಎತ್ತಿ ಬೇರೆ ಮನೆ ಮಾಡಲು ಇಚ್ಛಿಸಿದ ತಮ್ಮನಿಗೆ ತಂದೆಯ ಉಯಿಲಿನಲ್ಲಿ ಬರೆದಂತೆ ಭೂಮಿ ಪಾಲು ಮಾಡಿದ್ದರೂ ಪಾಲಿನಲ್ಲಿ ತನಗೆ ಅನ್ಯಾಯವಾಗಿದೆಯೆಂದು ರಾಜಣ್ಣನ ಅಸಮಾಧಾನ. ದೇವತಾ ವಿನಿಯೋಗಕ್ಕೆಂದು ತಂದೆ ಒಂದು ಎಕರೆ ಭೂಮಿಯನ್ನು ಜನಾರ್ದನರಾಯರ ಪಾಲಿಗೆ ಸೇರಿಸಿದ್ದು ರಾಜಣ್ಣನ ಕಣ್ಣುಗಳಲ್ಲಿ ದೊಡ್ಡ ತಪ್ಪು. ದೇವರ ಪಾತ್ರೆ, ಭೂಮಿ, ನಗ ಎಲ್ಲಾ ಸಮಪಾಲಾಗಬೇಕೆಂದು ಅವನ ವಾದ.

"ಹಬ್ಬ ಹರಿದಿನಗಳಲ್ಲಿ ಸಂಸಾರ ಸಮೇತರಾಗಿ ನನ್ನಲ್ಲಿಗೆ ಬನ್ನಿ. ಇಬ್ಬರೂ ಜೊತೆಯಾಗಿ ಆಚರಿಸುವುದು ಕುಟುಂಬದ ಶ್ರೇಯಸ್ಸಿಗೆ ಒಳ್ಳೆಯದು" ಎಂದು ಹಲವು ಬಾರಿ ತಮ್ಮನಿಗೆ ಹೇಳಿದ್ದಾರೆ.

ಮನೆಗೆ ಹಿರಿಯವರಾಗಿ ಹಳೆ ಸಂಪ್ರದಾಯದಂತೆ ಪೂಜೆ ಪುನಸ್ಕಾರ ನಡೆಸುತ್ತಿದ್ದ ರಾಯರು ತಮ್ಮ ಕೇಳಿದ್ದನ್ನು ಸುಲಭವಾಗಿ ಕೊಡಬಹುದಿತ್ತು. ಆದರೆ ಸ್ವಾಭಿಮಾನ, ಅಂತಸ್ತು, ಕುಟುಂಬದ ಪ್ರಶ್ನೆ ಇದಿರಾಗಿದೆ. ಪಕ್ಕಿನ ಹೊಣೆಗಾರಿಕೆಯನ್ನು, ತಮ್ಮನಿಗೆ ಕೊಡುವುದು ಎಲ್ಲಿ ನ್ಯಾಯ? ಅವನು ಹೇಳುತ್ತಾ ಇರಲಿ. ಆದರೆ ತನಗೆ ಅನ್ಯಾಯವಾಗಿದೆಯೆಂದು ಊರೆಲ್ಲ ಡಂಗುರ ಸಾರುತ್ತಿರುವುದು ಸರಿಯಲ್ಲ. ತಾನು ತಪ್ಪುಗಾರನೇ. ಅಪರಾಧಿಯೇ? ಎಂಬ ತಳಮಳ ರಾಯರಿಗೆ. ಒಳಮನಸ್ಸು ಒಮ್ಮೊಮ್ಮೆ ಕೆರಳುತ್ತದೆ.

ಈ ದಿನವೂ ಹಳೆಯದನ್ನು ಕೆದಕುತ್ತ ರಾಜಣ್ಣನನ್ನು ದೂರಿದರು : "ನೀವೇ ಹೇಳಿ, ಡಾಕ್ಟರೇ. ಸರಕಾರೀ ಉದ್ಯೋಗದಲ್ಲಿರುವ ಬುದ್ಧಿವಂತನಿಗೆ ಒಂದಿಷ್ಟೂ ಮಂಡೆಯಿಲ್ಲ."

ಅವಿನಾಶ ಉತ್ತರಿಸಲಿಲ್ಲ. ಅವನಿಗೆ ಅಣ್ಣ-ತಮ್ಮ ಇಬ್ಬರೂ ಒಂದೇ. ಮುಖಸ್ತುತಿ ಮಾಡಲಾರ, ಹಾಗೆಂದು ನಿಂದಿಸಲಾರ. ಇವರ ಮನೆಗೆ ಹೋದರೂ ಅಲ್ಲಿ ಯಾವಾಗಲೂ ಇದೇ ಚರ್ಚೆ. ಅಣ್ಣ ತಮ್ಮನನ್ನು, ತಮ್ಮ ಅಣ್ಣನನ್ನು ದೂರುವುದು ವಾಡಿಕೆ. ಅವನು ಮೂಕಪ್ರೇಕ್ಷಕ. ಈಗಲೂ ಕಿರುನಗೆ ನಗುತ್ತ ಎದೆನೋವಿನ ಮಾತ್ರೆಗಳನ್ನು ಅವರ ಕೈಲಿರಿಸಿದ.

"ನಾನು ಮನೆಗೆ ಹೋಗ್ತಾ ಇದ್ದೇನೆ. ನಿಮ್ಮನ್ನು ಬೈಕ್‌ನಲ್ಲಿ ಕರೆದೊಯ್ಯುತ್ತೇನೆ, ನಡೀರಿ. ತೋಟದ ಬೇಲಿ ತನಕ ತಲುಪಿಸುತ್ತೇನೆ"

ಚಿಕಿತ್ಸಾಲಯ ಮುಚ್ಚಿ ಕೆಳಗಿಳಿದು ಬರುವಾಗ ಕೇಳಿದ : "ನಾಗಪ್ಪನ ಮಗಳು ಹೇಗಿದ್ದಾಳೆ ಗೊತ್ತೇ?"

"ಯಾರು ಪದ್ಮಲೆಯೇ? ಇಲ್ಲಿಗೂ ಬಂದಳೇ ಆ ಚಿನಾಲಿ ಹುಡುಗಿ?"

ನಡೆದುದನ್ನು ಅವನು ಚುಟುಕಾಗಿ ಹೇಳುತ್ತಿದ್ದಂತೆ ರಾಯರು ಗಹಗಹಿಸಿ ನಕ್ಕರು. "ಬುದ್ಧಿಯಿಲ್ಲ, ಚಿಕ್ಕಂದಿನಿಂದಲೇ ಚೆಲ್ಲಾಟ ವಿಪರೀತ. ಅವಳ ಅಣ್ಣಂದಿರು ಗೆಯ್ಯುವ ಕುಳವಾದರೆ ಇವಳು ಶುದ್ಧ ಸೋಮಾರಿ. ಏನು ! ನಿಮ್ಮ ಮನೆಗೆ ಹಾಲು ತರ್ತಾಳಾ, ಉದ್ಧಾರವಾಯ್ತು ಅವಳ ಮನೆ. ಅವಳು ತಂದ ಹಾಲಿಗಿಂತ ಹಾಲಿನ ಪುಡಿಗೆ ನೀರು ಬೆರೆಸಿಕೊಳ್ಳುವುದು ಎಷ್ಟೋ ಲೇಸು!"

ಅವಿನಾಶನ ಮನಸ್ಸು ಪದ್ಮಲೆಯನ್ನು ಹಡ್ಡಿಯೆಂದು ಒಪ್ಪಿಕೊಳ್ಳಲು ಹಿಂದೆ ಮುಂದೆ ನೋಡಿತು. ಬೈಕ್‌ನಲ್ಲಿ ಹೋಗುತ್ತಿದ್ದಂತೆ ರಾಯರು ತಮ್ಮ ಕುಟುಂಬದೊಡನೆ ಈ ದಿನ ಸಂಜೆ ಕಲ್ಲುಬೆಟ್ಟದ ವಿಗ್ರಹ ನೋಡಲು ಹೋಗುತ್ತಿರುವುದು ತಿಳಿದು ಅವಾಕ್ಕಾದ. ಎದೆನೋವಿನ ರೋಗಿ ಅಷ್ಟೆತ್ತರದ ಬೆಟ್ಟವೇರುವುದು ಸುಲಭವಲ್ಲ. ಆದರೆ ಸಂಕಲ್ಪ ಮಾಡಿಕೊಂಡರೆ ಆಯಾಸವೂ ಇಲ್ಲ ಎನ್ನುತ್ತಾರೆ ರಾಯರು. ವಿಗ್ರಹದ ವಿಷಯದಲ್ಲಿ ಅವರು ಏನೇನೋ ಹೇಳುತ್ತಿದ್ದರೂ ಸರಿಯಾಗಿ ಕೇಳಿಸಲಿಲ್ಲ. ತನಗೆ ಬೆಟ್ಟವೇರಲು ಈ ದಿನಗಳಲ್ಲಿ ಆಗಲೇ ಇಲ್ಲ. ವಿಗ್ರಹ ನೋಡಬೇಕೆಂದು ಆಗ್ರಹ ಮಾಡುತ್ತಿದ್ದ ಅಹಲ್ಯಳನ್ನು ಇವರೊಡನೆ ಕಳುಹಿಸಿದರೆ ಆಗಬಹುದೋ ಏನೋ.

ಅಹಲ್ಯಳನ್ನು ತಮ್ಮೊಡನೆ ಕರೆದೊಯ್ಯಲು ಜನಾರ್ದನರಾಯರು ಸಂತೋಷದಿಂದ ಒಪ್ಪಿಕೊಂಡರು.

ಆ ಸಾಯಂಕಾಲ ಜನಾರ್ದನರಾಯರು, ಅವರ ಹೆಂಡತಿ ಮತ್ತು ಮಗ, ಸೊಸೆಯೊಡನೆ ಅಹಲ್ಯಳೂ ಕಲ್ಲುಬೆಟ್ಟವನ್ನೇರಿದಳು. ಬಹಳ ದಿನಗಳ ನಂತರ ಈಡೇರಿದ ಆಸೆ, ಕುತೂಹಲದ ಪರಮಾವಧಿ. ಆದರೆ ಏಕೋ ಪಿಚ್ಚೆನಿಸಿತು. ಹಳ್ಳಿಯ ಜನರು ವರ್ಣಿಸುವಂತೆ ಆ ಕಂಚಿನ ವಿಗ್ರಹದಲ್ಲಿ ಯಾವ ವಿಶೇಷವನ್ನೂ, ಹೊಸ ಸೃಷ್ಟಿಯನ್ನೂ ಅವಳು ಕಾಣಲಿಲ್ಲ. ಮಕ್ಕಳಾಟಿಕೆಯಂತೆ ಗೋಚರಿಸಿತು. ತನ್ನ ಕಣ್ಣಿನ ದೋಷವೆಂದು ಮತ್ತೆ ಮತ್ತೆ ನೋಡಿದಳು. 'ನಮ್ಮ ಮನಸ್ಸಿನ ಭಾವನೆಗೆ ತಕ್ಕಂತೆ ವಿಗ್ರಹ ಗೋಚರಿಸುತ್ತದೆ' ಎಂದಿದ್ದಾರೆ ಎಲ್ಲರೂ. ತನ್ನ ಭಾವನೆ ಎಂತಹದೆಂಬ ಸ್ಪಷ್ಟ ಕಲ್ಪನೆ ಅವಳಿಗಿಲ್ಲ.

ಕೊರೆದ ಬಂಡೆಯೊಳಗಿರಿಸಿದ ವಿಗ್ರಹವನ್ನು ಹೊರ ತೆಗೆದು ತೋರಿಸಲಿಲ್ಲ ಅಲ್ಲಿ ಕುಳಿತ ಬೈರಾಗಿ. "ನೀವೇ ನೋಡಿಕೊಳ್ಳಿ" ಎಂದ ನಿರ್ಲಿಪ್ತನಾಗಿ,

ಬಂದವರಿಗೆಲ್ಲಾ ತೋರಿಸಿ ಸುಸ್ತಾದವನಂತೆ. ಅವನ ಬಟ್ಟೆಗಳೆಲ್ಲ ಮಲಿನವಾಗಿದ್ದು ಬೆಳೆದ ತಲೆಗೂದಲು, ತೆಗೆಯದ ಮುಖಕೇಶರಾಶಿಯಿಂದ ವಿಕಾರವಾಗಿ ಕಾಣಿಸುತ್ತಿದ್ದಾನೆ. ಮೈಯೆಲ್ಲ ಧೂಳಿನ ಸ್ನಾನ, ಕಣ್ಣುಗಳಲ್ಲಿ ತೀಕ್ಷ್ಣ ಕಾವು !

ಇವರಂತೆ ವಿಗ್ರಹ ನೋಡಲು ಬಂದ ಅನೇಕರು ಬಂಡೆಯೊಳಗೆ ಇಣುಕಿ ಇಣುಕಿ ತಮಗೆ ತೋಚಿದಂತೆ ಬಣ್ಣಿಸುತ್ತಿದ್ದಾರೆ. ಕೆಲವರಿಗೆ ವಿಗ್ರಹ ಕಾಣಿಸಲೇ ಇಲ್ಲ. ಸಾಯಂಕಾಲದ ಬಿಸಿಲು ಕೋಡುಗಲ್ಲನ್ನು ಚುಂಬಿಸಿ ನೆತ್ತಿಯ ಶಿಖರದ ಮೇಲೆ ನೆರಳನ್ನೊಡ್ಡಿದೆ. ಶಿಖರದಿಂದ ಕೆಳಗೆ ಚಾಚಿದ ದೊಡ್ಡ ಹೆಬ್ಬಂಡೆ ಬದಿಯಲ್ಲಿ ಕೊರೆದ ಈ ಸಣ್ಣ ಬಂಡೆಗಲ್ಲಿನ ಒಳಗೆ ಆಗಲೇ ಕಪ್ಪು ನೆರಳಿನ ಛಾಯೆ. ಎಣ್ಣೆ ತುಂಬಿದ ಹಿತ್ತಾಳೆ ದೀಪವನ್ನು ಇರಿಸಲಾಗಿದೆ ವಿಗ್ರಹದ ಮುಂದೆ. ಅದರ ಬೆಳಕು ಸಾಕು ಕಗ್ಗತ್ತಲನ್ನು ಹಿಮ್ಮೆಟ್ಟಿಸಲು! ಕೆಲವು ರೂಪಾಯಿ ನೋಟು, ಚಿಲ್ಲರೆ ಕಾಸು ಬಿದ್ದಿದೆ ಅಲ್ಲಲ್ಲಿ. ಕೋಡುಗಲ್ಲಿನ ಬದಿಯಲ್ಲಿ ಕಲ್ಲು ಕೆತ್ತುವ ಸದ್ದು. ಯಾರೋ ಒಬ್ಬಾತ ಕಲ್ಲು ಒಡೆಯುತ್ತಿದ್ದಾನೆ.

"ವಿಗ್ರಹವನ್ನಿರಿಸಿ ನೀನೇನು ಇಲ್ಲಿ ತಪಸ್ಸಿಗೆ ಕುಳಿತಿದ್ದೀಯಾ?" ಎಂದು ಕೇಳಿದರು ರಾಯರು. "ನಿನಗೆ ಹೇಗೆ ಸಿಕ್ಕಿತು ಆ ವಿಗ್ರಹ?"

"ನಾನೇನು ಹೇಳಲಿ? ಎಲ್ಲಾ ದೈವಚಿತ್ತ !"

"ಇದನ್ನು ಇಲ್ಲಿಯೇ ಪ್ರತಿಷ್ಠಾಪನೆ ಮಾಡುವ ಆಲೋಚನೆಯೇ?"

"ಅದನ್ನು ನಾನರಿಯೆ. ನಾನು, ನನ್ನದು ಎನ್ನುವುದು ಯಾವುದೂ ಇಲ್ಲ. ಎಲ್ಲಾ ದೈವಚಿತ್ತ. ಶತ್ರುಗಳನ್ನು ಮಿತ್ರರನ್ನಾಗಿ, ಕೆಟ್ಟವರನ್ನು ಒಳ್ಳೆಯವರನ್ನಾಗಿ, ದುಷ್ಟರನ್ನು ಶಿಷ್ಟರನ್ನಾಗಿ ಮಾಡುವವರು ಯಾರು? ನಾವಲ್ಲ! ಬೇರೆ ಇನ್ನಾರೋ...! ಎಲ್ಲಾ ದೈವಚಿತ್ತ, ಸ್ವಾಮಿ" ಕಣ್ಣು ಮುಚ್ಚಿಕೊಂಡ ಬೈರಾಗಿ.

"ಪ್ರಾಚೀನ ವಸ್ತು ಸಂಗ್ರಹಾಲಯಕ್ಕೆ ಕಳುಹಿಸಿದರೆ ಇದು ಯಾವ ವಿಗ್ರಹ, ಎಷ್ಟನೇ ಶತಮಾನದ್ದು ಎಂದೂ ಕಂಡುಹಿಡಿಯಬಹುದು" ಎಂದಳು ಅಹಲ್ಯ ಅವನಿಗೆ ಕೇಳಿಸುವಂತೆ.

ಅವನ ಪ್ರಜ್ವಲಿಸುವ ಕಣ್ಣುಗಳು ಅವಳನ್ನು ಅಡಿಯಿಂದ ಮುಡಿಯತನಕ ದಿಟ್ಟಿಸಿದವು. ಹಿಡಿಮಣ್ಣನ್ನು ತೂರಿದ ಗಾಳಿಗೆ. "ಅಮ್ಮಾ, ಇದು ಮಕ್ಕಳಾಟಿಕೆ ಎಂದುಕೊಂಡಿರಾ? ಇಲ್ಲಮ್ಮ ಇಲ್ಲ. ಅಗೋಚರನೂ, ಅನಂತನೂ, ಅತೀತನೂ ಆದ ದೇವರ ಶಕ್ತಿಯನ್ನು ಅರಿಯಲು ನನ್ನಿಂದ, ನಿಮ್ಮಿಂದ ಸಾಧ್ಯವೇ? ವಿಗ್ರಹ ಎಷ್ಟನೇ ಶತಮಾನದ್ದು? ಎಂತಹ ಲೋಹದ್ದು ಎಂದು ಯಾವ ವಿಜ್ಞಾನಿಗಳಿಗೂ ಪತ್ತೆ ಮಾಡಲು ಸಾಧ್ಯವಿಲ್ಲ. ಶತಮಾನಗಳ ಲೆಕ್ಕ ಇದಕ್ಕಿಲ್ಲ. ಇದರ ಮಹಿಮೆಯ ಲೆಕ್ಕ ನಮಗಿಲ್ಲ!"

"ಹಾಗಾದರೆ ಇಷ್ಟೆತ್ತರ ಬೆಟ್ಟದ ಮೇಲೆ ಯಾಕೆ ಪ್ರತಿಷ್ಠೆ ಮಾಡುತ್ತಿ? ಕಲ್ಲಳ್ಳಿಗೆ ತಗೊಂಡು ಬಾ. ಎಲ್ಲರೂ ನೋಡಿ ಪುನೀತರಾಗಲಿ."

ಬೈರಾಗಿ ಹಸ್ತವನ್ನು ತಿರುಗಿಸಿದ, "ಅಮ್ಮಾ, ದೈವಚಿತ್ತದ ಮಾತು ಬೇರೆ. ಅದನ್ನು ಹೇಗೆ ವಿವರಿಸಲಿ? ವಿಗ್ರಹವನ್ನು ಕೆಳಗೆ ತೆಗೆದುಕೊಂಡು ಹೋಗಲು ನನಗಿನ್ನೂ ಅಪ್ಪಣೆಯಾಗಿಲ್ಲ. ಅದು ದೊರೆತ ಸ್ಥಾನದಿಂದ ಕದಲಿಸುವುದೂ ನನ್ನ ಕೈಯಲ್ಲಿಲ್ಲ. ಎಲ್ಲಾ ವಿಗ್ರಹ ನುಡಿದಂತೆ. ಹಾಯ್ ರಾಮ್ ! ನನಗೇನು ಗ್ರಹಚಾರ, ಈ ಉರಿಬಿಸಿಲು, ಚಳಿಯಲ್ಲಿ ಬೆಟ್ಟದ ಮೇಲೆ ಕುಳಿತಿದ್ದೇನಲ್ಲ- ದೈವದ ಮಹಿಮೆ ಎಂದರೆ ಹೀಗೆ"

ಜನಾರ್ದನರಾಯರ ಸೊಸೆ ಭಾವಪರವಶತೆಯಿಂದ "ಜೈ ಭವಾನಿ!" ಎನ್ನುತ್ತ ಉದ್ದಕ್ಕೆ ನಮಸ್ಕರಿಸಿದಳು. ಅವಳ ಧ್ವನಿ ಅಲೆಅಲೆಯಾಗಿ ಇಡೀ ಬೆಟ್ಟವನ್ನೆಲ್ಲ ಪ್ರತಿಧ್ವನಿಗೈದಾಗ ಬೆಚ್ಚಿದಳು ಅಹಲ್ಯ. ಇದು ಭವಾನಿಯ ವಿಗ್ರಹವೇ? ನನಗೇಕೆ ಹಾಗೆ ಕಾಣಿಸಲಿಲ್ಲ? ಬೀಸುತ್ತಿದ್ದ ಗಾಳಿಗೆ ಹಾರುತ್ತಿದ್ದ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ ಇನ್ನೊಮ್ಮೆ ಕೊರೆದ ಬಂಡೆಯತ್ತ ಬಗ್ಗಿದಳು. ಈಗಲೂ ಮುಸುಕಾಗಿ ಕಾಣಿಸಿದ್ದು ಭವಾನಿಯ ವಿಗ್ರಹವಲ್ಲ. ಅಲ್ಲಲ್ಲಿ ಮೆತ್ತಿದಂತೆ, ಕೊರೆದಂತೆ ಕಾಣಿಸುವ ಚಿತ್ತಾಕಾರದ ಗೀಟುಗಳು.

"ರಾಯರೇ, ನನ್ನ ಕಣ್ಣಿಗೆ ಪೊರೆ ಬಂದಿರಬೇಕು. ವಿಗ್ರಹದ ಆಕಾರ ಕಾಣಿಸ್ತಾ ಇಲ್ಲ" ನಗಾಡಿದಳು ಜೋರಾಗಿ.

"ಇದು ಭವಾನಿ ವಿಗ್ರಹ. ಯಾವ ಅನುಮಾನವಿಲ್ಲದೆ ನೋಡಿ. ಆಹ್, ಎಷ್ಟು ಚೆನ್ನಾಗಿದೆ. ಅರೆ! ನೀವ್ಯಾಕೆ ಹೀಗೆ ನಗ್ತಾ ಇದ್ದೀರಿ?"

ನಗುತ್ತಿದ್ದ ಅಹಲ್ಯ ಉತ್ತರಿಸಲಿಲ್ಲ. ಬೆಟ್ಟ ಇಳಿಯುವಾಗ ಕತ್ತಲೆ ಕಪ್ಪಿಡುವ ಹೊತ್ತು. ಉಳಿದವರೆಲ್ಲ ವಿಗ್ರಹವನ್ನು ಹೊಗಳುತ್ತಿದ್ದರೆ ಅವಳ ಬಾಯಿಗೆ ಬೀಗ.

"ಹೀಗೆ ನೀವು ಅನುಮಾನಪಡಬಾರದು, ಅಹಲ್ಯ. ಇದರಿಂದ ಒಳಿತಾಗದು. ಊರ ಉದ್ಧಾರಕ್ಕಾಗಿ ವಿಗ್ರಹ ಬಂದಿರಬೇಕು" ಎಂದರು ರಾಯರ ಹೆಂಡತಿ.

ರಾತ್ರಿ ಚಿಕಿತ್ಸಾಲಯದಿಂದ ಹಿಂದಿರುಗಿದ ಅವಿನಾಶ ವಿಷಯವನ್ನೆಲ್ಲ ಕೇಳುತ್ತ ತಮಾಷೆ ಮಾಡಿದ "ಅಂತೂ ಇವತ್ತು ಸುಖನಿದ್ರೆ ಬಂದೀತಲ್ಲ!"

ಬಿ.ಎಸ್‌ಸಿ. ಪದವೀಧರೆಯಾದ ಆಕೆ ಬಿದ್ದು ಬಿದ್ದು ನಕ್ಕಳು. ಕುತೂಹಲ ಕೆರಳಿಸಿದ್ದ ವಿಗ್ರಹ ಅವಳಲ್ಲಿ ಅನುಮಾನ, ಸಂದೇಹವನ್ನು ಹುಟ್ಟಿಸಿದೆ. ಬೈರಾಗಿಯ ವೇಷ, ಮಾತಿನ ರೀತಿ, ಕೋಡುಗಲ್ಲಿನ ಹಿಂದೆ ಅವಿತಿರಬಹುದಾದ ಇನ್ನೂ ಕೆಲವರಿಂದ ಅವಳ ಅನುಮಾನ ಹೆಚ್ಚುತ್ತಿದೆ. ಉದ್ದೇಶ ಪೂರ್ವಕವಾಗಿ ಬೆಟ್ಟದ ಮೇಲೆ ಕುಳಿತ ಬೈರಾಗಿ ಇನ್ನೆಂದಿಗೂ ಕೆಳಗಿಳಿದು ಬರಲಾರ. ಹಳ್ಳಿಗರ

ಮುಗ್ಧತೆಯೊಡನೆ ತೂಗತೊಡಗಿದೆ ಅವನ ಅದೃಷ್ಟದ ತಕ್ಕಡಿ! ಅವಳು ಅವಿನಾಶನನ್ನು ಚಕಿತಗೊಳಿಸುವಂತೆ ಅಂದಳು.

"ಎಲ್ಲೋ ಸಂತೆಯಿಂದ ಮೂರ್ಕಾಸಿಗೆ ಗೊಂಬೆ ತಂದು ಜನರಿಗೆ ಮಂಕುಬೂದಿ ಎರಚ್ತಾ ಇದ್ದಾನೆ ಆ ಬೈರಾಗಿ!"

೩

ಯುವಕ ಮಂಡಳಿಯ ಮೂರನೇ ವಾರ್ಷಿಕೋತ್ಸವ ಸಮಾರಂಭ ಅದ್ಧೂರಿಯಿಂದಲೇ ನಡೆಯಿತು. ಆಂಜನೇಯನ ಗುಡಿಯ ಬದಿಯಲ್ಲಿ ಸಭೆ ಮತ್ತು ಯಕ್ಷಗಾನ ನಡೆಯಲು ಎತ್ತರದ ಒಂದು ವೇದಿಕೆಯ ನಿರ್ಮಾಣ. ಹಿಂದಿನ ದಿನ ಬಡಬಗ್ಗರಿಗೆಲ್ಲಾ ಸಿಹಿತಿಂಡಿ ವಿತರಣೆ. ವಾರ್ಷಿಕೋತ್ಸವದ ದಿನ ಬೆಳಗ್ಗೆ ಕಾರ್ಯಕರ್ತರು ಒಂದಾಗಿ ಆ ವರ್ಷದ ಅಧ್ಯಕ್ಷನನ್ನು ಆರಿಸಿಕೊಂಡರು. ಬಹುಮತದಂತೆ ಈ ಬಾರಿಯೂ ಅಧ್ಯಕ್ಷ ಪದವಿ ಸುಂದರರಾಜನಿಗೆ. ಅವನ ಕೆಲಸ ಕಾರ್ಯಗಳು ಶ್ಲಾಘನೀಯವಾದುದರಿಂದ ಆ ಕಾರ್ಯಕರ್ತರು 'ಹುರ್ರೇ' ಎನ್ನುತ್ತ ಜಯಕಾರ ಮಾಡಿ ಅವನಿಗೆ ಹೂಹಾರ ಹಾಕಿ ಹಳ್ಳಿ ತುಂಬಾ ಮೆರವಣಿಗೆ ಮಾಡಿದರು. ಜನರೆಲ್ಲ ವಿಚಿತ್ರವಾಗಿ ನೋಡಿದರು. ಹಿಂದೆಂದೂ ಒಬ್ಬ ಮುಖಂಡನನ್ನು ಹೀಗೆ ಯಾರೂ ಮೆರವಣಿಗೆ ಮಾಡಿಲ್ಲ. ಈ ದಿನ ಹೊಸತು !

ಸಾಯಂಕಾಲ ಡಾ. ಅವಿನಾಶನ ಅಧ್ಯಕ್ಷತೆಯಲ್ಲಿ ಸಭೆ ಪ್ರಾರಂಭ. ಹಳ್ಳಿಯ ಮೂಲೆಮೂಲೆಯಿಂದಲೂ, ನೆರೆಹಳ್ಳಿಗಳಿಂದಲೂ ಜನರು ಗುಂಪು ಗುಂಪಾಗಿ ಬರುತ್ತಿದ್ದಾರೆ. ಡಾಕ್ಟರ್ ಅವಿನಾಶ ಭಾಷಣಕ್ಕೆಂದು ಎದ್ದು ನಿಂತಾಗ ಜನಸ್ತೋಮವನ್ನು ನೋಡಿ ವಿಸ್ಮಯವಾಯಿತು. ಇಲ್ಲಿ ಈ ಒಂದು ಕಾರ್ಯಕ್ರಮಕ್ಕೂ ಜನರಿಗೆ ಎಷ್ಟು ಆಸಕ್ತಿ! ಹಾಸನದಲ್ಲಿ ಅನೇಕ ಸಭೆ ಸಮಾರಂಭಗಳಿಗೆ, ಭಾಷಣಕ್ಕೆ ಹೋಗಿದ್ದರೂ ಇಲ್ಲಿಯಂತೆ ಜನ ಸೇರಿರಲಿಲ್ಲ. ಶ್ರೀಮಂತ ವರ್ಗದಿಂದ ಧಾರಾಳ ಉಪಚಾರ ದೊರೆತರೂ ಹೀಗೆ ಅಸಂಖ್ಯ ಅಭಿಮಾನಿಗಳು ಕಾತರರಾಗಿ ಕುಳಿತಿಲ್ಲ. ಪದ್ಮಲೆ ಜನರ ಗುಂಪಿನಲ್ಲಿ ಮುಂದಿನ ನಾಲ್ಕನೇ ಸಾಲಿನಲ್ಲಿದ್ದಾಳೆ. ಈ ಅನಕ್ಷರಸ್ಥ ಹುಡುಗಿಗೂ ತನ್ನ ಭಾಷಣವನ್ನು ಕೇಳುವ ಆಸೆ. ಅವನ ಹೃದಯದ ತುಂಬಾ ಗರ್ವದ ಓಕುಳಿ. ತಾನು ಹೇಗೆ ಜನಪ್ರಿಯನಾಗುತ್ತಿದ್ದೇನೆ, ಭೇಷ್ !

ಆದರೆ ಜನರು ಗುಂಪುಗೂಡಿ ಬರುತ್ತಿರುವುದು ತನ್ನ ಭಾಷಣಕ್ಕಲ್ಲ, ಅನಂತರ ನಡೆಯಲಿರುವ ಯಕ್ಷಗಾನಕ್ಕೆ ಎಂದು ಬಹಳ ಬೇಗ ತಿಳಿದು ಹೋಯಿತು. ಹಣದಿಂದ ಕಲೆ ಉಳಿಸುವ, ಬೆಳೆಸುವ ಇಂದಿನ ದಿನಗಳಲ್ಲಿ

ಧರ್ಮಾರ್ಥ ಪ್ರದರ್ಶನ ದೊರೆಯುವುದು ಅಪರೂಪ. ದೊರೆತ ಅವಕಾಶವನ್ನು ಯಾರೂ ಬಿಡಲಾರರು. ಅವಿನಾಶ ಭಾಷಣ ಪ್ರಾರಂಭ ಮಾಡಿದ ಅಚ್ಚ ಕನ್ನಡದಲ್ಲಿ. ಆದರೆ ಮಾತನಾಡುತ್ತ ಅಭ್ಯಾಸ ಬಲದಿಂದ ಇಂಗ್ಲೀಷ್ ಪದಗಳೂ, ನುಡಿಗಟ್ಟುಗಳೂ ಜೊತೆ ಸೇರಿ ಭಾಷಣ ರಂಜಿಸಿತು. ಅರ್ಥವಾಗದವರು ಮುಖ ಮುಖ ನೋಡಿಕೊಂಡರು.

ಮುಂದಿನ ಸಾಲಿನಲ್ಲಿ ಕುಳಿತ ಅಹಲ್ಯ ಹೆಮ್ಮೆಯಿಂದ ಬೀಗಿದ್ದಾಳೆ. ಅಷ್ಟರಲ್ಲಿ ಹಿಂದೆ ಕುಳಿತವರ ಧ್ವನಿ ಅವಳನ್ನು ಎಚ್ಚರಿಸಿತು. ಅವಳಿಗೆ ಸ್ಪಷ್ಟವಾಗಿ ಕೇಳುವಂತೆ ಅಂದುಕೊಳ್ಳುತ್ತಿದ್ದಾರೆ ಅವಿನಾಶನನ್ನು.

“ಇಲ್ಲಿಂದ ಆರು ಮೈಲು ದೂರ ಕಂಪನಿ ಔಷಧಿ ತಂದು ವರ್ಷಗಟ್ಟಲೆ ಕುಡಿದರೂ ಜ್ವರ ಕಡಿಮೆ ಆಗಿರಲಿಲ್ಲ. ಈ ಡಾಕ್ಟರ್ ಬಂದ್ಮೇಲೆ ಎರಡೇ ದಿನದ ಔಷಧಿಯಲ್ಲಿ ಈ ಜ್ವರ ‘ಛಂ’ ಅಂತ ಇಳಿದಿದೆ. ಎಲ್ಲಾ ಅವರ ಕೈಗುಣ”

“ದೇವರಾಣೆಗೂ ಹೇಳ್ತೀನೆ, ಮನುಷ್ಯ ಅಂದರೆ ಚೊಕ್ಕ ಚಿನ್ನ. ನನಗೆ ಬಡಿದಿತ್ತಲ್ಲ ಕೆಟ್ಟ ಹೊಟ್ಟೆ ಬೇನೆ, ಒಂದು ವರ್ಷ ಜೀವ ತಿಂದು ತೇಗುವಷ್ಟು ಹೊಡಚಾಟ. ಒಂದಗಳು ಬಾಯಿಗೆ ಹಾಕ್ಕೊಂಡರೆ ಸೈ ಹೊಡಚಾಟ ಶುರು. ಸದ್ಯ ಈ ಡಾಕ್ಟರು ವಾಸಿ ಮಾಡಿದ್ರಪ್ಪ. ಇವರ ಹೊಟ್ಟೆ ತಣ್ಣಗಿರಲಿ.”

“ಯಾರೋ ಹೇಳಿದರು ಮುಟ್ಟಿದ್ದು ಚಿನ್ನ ಎಂದು” ಮೂರನೆಯವಳ ಅಸ್ಪಷ್ಟ ನುಡಿ. “ನಿಮ್ಮ ತಲೆ! ಹಣ ಬಂದ್ರೆ ಎಲ್ಲಾ ಚೊಕ್ಕ ಚಿನ್ನಗಳು! ನಡೀಲಾರದ ಮೈದುಕುಂಞ ಮಗುವಿಗೆ ಎಂಥದೋ ಇಂಜಕ್ಷನ್ ಕೊಟ್ಟರಂತೆ. ತಗೋ, ಆ ಮಗು ಮಲಗಿದಲ್ಲೇ. ಒಂದು ಹೊತ್ತಿನ ಔಷಧಿಗೆ ಒಂಬತ್ತು ರೂಪಾಯಿ ತಗೊಂಡನಂತೆ. ಹೆಚ್ಚಾಯ್ತು, ಹೆಚ್ಚಾಯ್ತು.”

ಜನರ ಕರತಾಡನದ ಮಧ್ಯೆ ಅವರ ಮಾತುಗಳು ಗಾಳಿಯಲ್ಲಿ ತೂರಿ ಹೋದವು. ಅವಿನಾಶನ ಭಾಷಣ ಮುಗಿದಿದ್ದು, ಸುಂದರರಾಜ ಎಲ್ಲರಿಗೂ ವಂದಿಸಿ ತನ್ನ ಮಾತು ಪ್ರಾರಂಭಿಸಿದ್ದಾನೆ. ಅಹಲ್ಯಳಿಗೆ ಅತ್ತ ಲಕ್ಷ್ಯವಿರಲಿಲ್ಲ. ಕೇಳಿದ ಮಾತುಗಳಿಂದ ಮನ ಕಲಕಿಹೋಗಿತ್ತು. ಕೆಲವು ದಿನಗಳ ಮೊದಲು ಮೈದುಕುಂಞ ವಿಷಯದಲ್ಲಿ ಹೇಳಿದ್ದ ಅವಿನಾಶ :

“ಪೋಲಿಯೋ ಆದ ಮಗುವನ್ನು ಮೈದುಕುಂಞ ಕರೆದು ತರಲಿಲ್ಲ. ಎರಡು ಬಾರಿ ಹೇಳಿಕಳುಹಿಸಿದ್ದೆ. ಗೋವಿಂದನ ಹತ್ತಿರ ಔಷಧಿಯನ್ನೂ ಕೊಟ್ಟಿದ್ದೆ. ಆದರೆ ಮೈದುಕುಂಞ ಔಷಧಿ ಬೇಡ ಅಂದನಂತೆ. ಯಾವನೋ ಮಂತ್ರವಾದಿಯಿಂದ ಉರ್ಕು ಕಟ್ಟಿಸಿದ್ದಾನಂತೆ. ಇನ್ನೇನು ಮಗುವನ್ನು ಮಣ್ಣು ಮಾಡುವದೊಂದೇ ಬಾಕಿ. ಆ ರೋಗ ಬಂದ ಮಕ್ಕಳಿಗೆ ಸರಿಯಾದ ಚಿಕಿತ್ಸೆ, ಔಷಧಿ ಮಾಡದೆ ಉರ್ಕು, ಭಸ್ಮ ಅಂತ ತಿರುಗಿದರೆ ಗುಣವಾದೀತೆ?”

ಮೃದುಕುಂಞ ತಾನಾಗಿಯೇ ತಂದುಕೊಂಡ ವಿಪತ್ತಿಗೆ ಅವಿನಾಶನ ಹೆಸರು ಸೇರಿಸಿದ್ದು ತಪ್ಪು. ದೂರಿದವರು ಯಾರೆಂದು ತಿಳಿಯುವ ಕುತೂಹಲವಾದರೂ ಹೊರಳಿ ನೋಡಲಿಲ್ಲ. ಇನ್ನೊಮ್ಮೆ ಜನರ ಚಪ್ಪಾಳೆ ಕೇಳಿಸಿತು. ವೇದಿಕೆ ಮೇಲೆ ಎರಡೇ ನಿಮಿಷ ಮಾತನಾಡಲು ಬಂದಿದ್ದ ಸುಂದರರಾಜನಿಂದ ಇಪ್ಪತ್ತು ನಿಮಿಷ ಉಸಿರು ತೆಗೆಯದೆ ನಿರರ್ಗಳವಾಗಿ ಭಾಷಣ. ಕೊನೆಯಲ್ಲಿ ಹೇಳುತ್ತಿದ್ದಾನೆ:

"ಕಲ್ಲಳ್ಳಿಯ ಜನತೆ ಅನಕ್ಷರಸ್ಥರಾಗಬಾರದು. ಪ್ರತಿಯೊಬ್ಬರು ಕಡ್ಡಾಯವಾಗಿ ಓದುಬರಹ ಕಲಿಯಲೇಬೇಕು. ಹೀಗಾಗಿ ಅನಕ್ಷರಸ್ಥರಿಗಾಗಿ ವಯಸ್ಕ ಶಿಕ್ಷಣ ಶಾಲೆಯನ್ನು ತೆರೆಯುವ ಯೋಜನೆ ಹಾಕಿಕೊಂಡಿದ್ದೇವೆ"

ಕೂಡಲೇ ತುಂಬಿದ ಸಭೆ ಚಪ್ಪಾಳೆ ತಟ್ಟಿ ಸ್ವಾಗತಿಸಿತು. ಅವಿನಾಶ ಅವನ ಕಿವಿಯಲ್ಲಿ ಬಗ್ಗಿ ಏನೋ ಪಿಸುಧ್ವನಿಯಲ್ಲಿ ಹೇಳುತ್ತಿದ್ದಂತೆ ಅವನು ಆನಂದದಿಂದ ಮುಖ ಹಿಗ್ಗಿಸಿ ಅದನ್ನೇ ಮೈಕ್‌ನಲ್ಲಿ ವರದಿ ಮಾಡಿದ.

"ಡಾ. ಅವಿನಾಶ ನಮ್ಮ ಶಾಲೆಗೆ ಸಂಪೂರ್ಣ ಬೆಂಬಲ, ಸಹಕಾರ ನೀಡುತ್ತಾರಲ್ಲದೆ ಪ್ರತಿವಾರ ಕುಟುಂಬ ಯೋಜನೆಗೆ ಸಂಬಂಧಿಸಿದ ಶಿಕ್ಷಣ ಕೊಡುತ್ತಾರಂತೆ (ಮತ್ತೆ ಚಪ್ಪಾಳೆ). ವಯಸ್ಕರ ಶಾಲೆಗೆ ಸೇರಲಿಚ್ಛಿಸುವವರು ಈ ದಿನವೇ ತಮ್ಮ ಹೆಸರನ್ನು ನೊಂದಾಯಿಸಬಹುದು. ಪ್ರವೇಶ ಶುಲ್ಕ ಕೇವಲ ಒಂದು ರೂಪಾಯಿ ! ಶಿಕ್ಷಣ ಉಚಿತ !"

ಚಪ್ಪಾಳೆಯ ಸುರಿಮಳೆ. ಇದ್ದಕ್ಕಿದ್ದಂತೆ ಒಬ್ಬಳು ಹುಡುಗಿ ವೇದಿಕೆಯತ್ತ ಹೋಗುವುದು ಕಾಣಿಸಿತು. ಜನರು ನೋಡುತ್ತಾರೆ–ಪದ್ಮಲೆ !

"ರಾತ್ರಿ ಶಾಲೆಗೆ ನನ್ನ ಹೆಸರನ್ನು ಸೇರಿಸಿ" ಯಾವ ಅಳುಕು ಇಲ್ಲದೆ ಏರಿ ಬಂದವಳು ಒಂದು ರೂಪಾಯಿ ನೋಟು ಕೊಟ್ಟು ಹಿಂದೆ ಸರಿದಳು.

ಸುಂದರರಾಜ, ಅವಿನಾಶ ತಬ್ಬಿಬ್ಬಾದರೂ ತೋರ್ಪಡಿಸಲಿಲ್ಲ. ಸುಂದರರಾಜ ಆ ನೋಟನ್ನು ಮೇಲೆತ್ತಿ ಹಿಡಿದ. "ಉತ್ಸಾಹ ಅಂದರೆ ಹೀಗಿರಬೇಕು. ಇದು ನಮ್ಮ ಕೆಲಸಕ್ಕೆ ಪ್ರೋತ್ಸಾಹ !" ಎಂದ.

ವಂದನಾರ್ಪಣೆ ಮುಗಿದ ಮೇಲೆ ಯಕ್ಷಗಾನದ ತಯಾರಿ. ಅವಿನಾಶನಿಗೆ ಆಗಲೇ ಮನೆಗೆ ಹಿಂದಿರುಗಬೇಕೆನಿಸಿದರೂ ಅಹಲ್ಯ ಸ್ವಲ್ಪ ಹೊತ್ತು ಯಕ್ಷಗಾನ ನೋಡಲು ಇಚ್ಛಿಸಿದ್ದರಿಂದ ಬೇಡ ಎನ್ನಲಿಲ್ಲ. ಸುಂದರರಾಜ ಅವರಿಗಾಗಿ ಬೇರೆ ಕುರ್ಚಿ ಹಾಕಿಸಿದ.

"ವಯಸ್ಕರ ಶಿಕ್ಷಣ ಶಾಲೆ ತೆರೀಬೇಕೆಂದು ನಾನು ಹಳ್ಳಿಗೆ ಬಂದಾಗಲೇ ಆಲೋಚಿಸಿದ್ದೆ. ನಿಮ್ಮ ಕೆಲಸಕ್ಕೆ ಶುಭವಾಗಲಿ!" ಅವಿನಾಶ ನೂರರ ನೋಟನ್ನು ತೆಗೆದು ಸುಂದರರಾಜನ ಕೈಲಿರಿಸಿದ.

"ನಿಮ್ಮಂಥವರ ಬೆಂಬಲವಿದ್ದರೆ ಈ ಹಳ್ಳಿಯನ್ನು ಬದಲು ಮಾಡಬಲ್ಲೆ"

ಹಳ್ಳಿಯಲ್ಲಿ ಹೊಸದಾಗಿ ತಲೆ ಎತ್ತಿದ ಮಹಿಳಾ ಸಂಘ ಅಹಲ್ಯಳ ಪರಿಚಯಕ್ಕಾಗಿ ಮುಂದೆ ಬಂದಿತು. ಯಾರೊಂದಿಗೂ ಬೆರೆಯದ ಈ ಡಾಕ್ಟರನ ಮಡದಿ ಈ ತನಕ ಯಾರ ಕಣ್ಣಿಗೂ ಬಿದ್ದವಳಲ್ಲ. ಸರಳ ಉಡುಗೆ ತೊಡುಗೆಯಲ್ಲಿ ಆಕರ್ಷಿಸುವ ಸೌಂದರ್ಯ. ಹಳ್ಳಿ ನೆಲೆಯಲ್ಲಿ ಅತಿ ಆಡಂಬರ, ಅತಿ ಆಭರಣ ಧರಿಸುವುದು ಅವಳಿಗೆ ಒಗ್ಗದ ವಿಷಯ. ಆದರೆ ಮಹಿಳಾ ಸಂಘದ ಲಲನಾಮಣಿಗಳು ಅಂದು ಧರಿಸಿದ ಆಭರಣ, ಉಡುಗೆ ನೋಡಿ ವಿಸ್ಮಯ. ಸಂಘದ ಸದಸ್ಯೆ ಸುನೀತಾ ಶೆಟ್ಟಿ ಸಾಲಂಕೃತಳಾಗಿ ಹೊಸ ರೇಶ್ಮೆ ಉಡುಗೆಯಲ್ಲಿ ಪ್ರತ್ಯೇಕಳಾಗಿ ಕಾಣುತ್ತಿದ್ದಳು. ಅವಳ ಒಂದು ವಿಚಿತ್ರ ನೋಟ ಅಹಲ್ಯಳನ್ನು ನೋಡಿತು ವಿಚಿತ್ರವಾಗಿ. ನಿಧಾನವಾಗಿ ಮುಂದೆ ಬಂದು ತನ್ನ ಪರಿಚಯ ಮಾಡಿಕೊಡುತ್ತ "ಆಗಾಗ ನಮ್ಮ ಸಂಘಕ್ಕೆ ತಮ್ಮಂಥವರ ಭೇಟಿಯಾಗಲಿ" ಎಂದಳು ನಗುತ್ತ.

"ನಮ್ಮ ಸಂಘ ಹುಟ್ಟಿ ಕೇವಲ ಎಂಟು ತಿಂಗಳಾದವು. ಅಷ್ಟರಲ್ಲಿ ಇಲ್ಲಿ ಬಹಳ ಕಾರ್ಯ ಸಾಧಿಸಿದ್ದೇವೆಂಬ ಹೆಮ್ಮೆ" ಸುನೀತಾ ಒಂದು ಕಾರ್ಡನ್ನು ಅಹಲ್ಯಳ ಕೈಲಿರಿಸಿದಳು. "ಇದು ಜಿಲ್ಲಾಧಿಕಾರಿಯಿಂದ ಬಂದ ಪತ್ರ. ನಿಮಗೆ ಇಂಗ್ಲೀಷು ಓದೋದಕ್ಕೆ ಬರುತ್ತಾ?"

ಸುತ್ತಲೂ ಝಗಝಗಿಸುತ್ತಿದ್ದ ಪೆಟ್ರೋಮ್ಯಾಕ್ಸ್ ದೀಪದ ಬೆಳಕು ಅಹಲ್ಯಳ ಮುಖ ತುಂಬ ತುಂಬಿತು. 'ಇಂಗ್ಲಿಷು ಓದಲು ಬರುತ್ತಾ?' ಎಂದು ಕೇಳಿದವಳಿಗೆ ಹಾಗೇ ಪತ್ರವನ್ನು ಹಿಂದಿರುಗಿಸಿದಳು.

"ಒಮ್ಮೆ ದಿಢೀರನೆ ಜಿಲ್ಲಾಧಿಕಾರಿಗಳು ಇಲ್ಲಿಗೆ ಭೇಟಿ ಕೊಟ್ಟು ನಾವು ಮಾಡುವ ಕಾರ್ಯಗಳನ್ನು ನೋಡಿ ಶ್ಲಾಘಿಸಿ ಹೋಗಿದ್ದಾರೆ. ಇನ್ನೂ ಹೆಚ್ಚಿನ ಅಭಿವೃದ್ಧಿಗೆ ತಾಲೂಕು ಬೋರ್ಡ್‌ನಿಂದ ನಾಲ್ಕು ಸಾವಿರ ಕೊಡಿಸೋಣ ಎಂದಿದ್ದರು. ಹ್ಹೀ... ಹ್ಹೀ... ಹಣ ಸೇಂಕ್ಷನ್ ಮಾಡಿದ್ದಾರಂತೆ. ಅದು ಬಂದಾಕ್ಷಣ ಹೊಲಿಗೆ ಯಂತ್ರ, ಇನ್ನೇನಾದರೂ ಸಾಮಾನುಗಳನ್ನು ತಗೋಬೇಕು. ಹ್ಹೀ... ಹ್ಹೀ... ಮೊದಲು ಸಂಘಕ್ಕೆ ತನ್ನದೇ ಕಟ್ಟಡವೂ ಶೀಘ್ರದಲ್ಲಿಯೇ ಆಗಬೇಕು."

"ಕಲ್ಲಳ್ಳಿಯಲ್ಲಿ ಯುವಕ ಮಂಡಳಿ, ಮಹಿಳಾ ಸಂಘ ಎಷ್ಟು ಉಮೇದಿನಲ್ಲಿ ಕೆಲಸ ಮಾಡುತ್ತಲ್ಲ, ತುಂಬ ಸಂತೋಷ" ಕೈಕುಲುಕಿದಳು.

"ಕರ್ಣಾರ್ಜುನರ ಕಾಳಗ" ಪ್ರಸಂಗ ಪ್ರಾರಂಭವಾದದ್ದು ರಾತ್ರೆ ಹತ್ತು ಗಂಟೆಗೆ. ಆ ವೇಳೆಗಾಗಲೆ ಜನರ ಗುಂಪು ದ್ವಿಗುಣಗೊಂಡು ಮರದ ಬದಿ, ಗುಡಿಯ ಪೌಳಿಯ ಮೇಲೆ, ದಾರಿಯಲ್ಲಿ, ಹೀಗೆ ಎಲ್ಲಿ ಸ್ಥಳವಿತ್ತೋ ಅಲ್ಲೆಲ್ಲ ತುಂಬಿಹೋದರು. ಹನ್ನೊಂದರ ಸುಮಾರಿಗೆ ಇನ್ನೇನು ಅಹಲ್ಯಳ ಜೊತೆ ಮನೆಗೆ ಹೊರಡಬೇಕು ಎನ್ನುವಾಗಲೇ ಸುತ್ತಲೂ ಗುಸುಗುಸು, ಗಲಾಟೆ.

"ಅಲ್ಲಿ ಬೆಂಕಿ... ಹೋ ! ಧಗಾಧಗಾ ಉರೀತಾ ಇದೆ" ಹತ್ತಾರು ಜನರ, ನೂರಾರು ಜನರ ಗಲಾಟೆ. ಚಂಡೆಮದ್ದಳೆಯ ಸ್ವರ ಅಡಗಿತು. ವೇಷ ತೊಟ್ಟು ಕುಣಿಯುವವರೂ ಸ್ತಬ್ಧರಾದರು.

ಅದೋ ಅಲ್ಲಿ ಎಂದರೂ ಅರ್ಧಮೈಲು ದೂರವಿರಬಹುದು. ರಾತ್ರೆಯ ಕತ್ತಲನ್ನೂ ಸೀಳಿ ಕೆನ್ನಾಲಿಗೆಯಂತೆ ಉರಿಯುವ ಬೆಂಕಿ ಎಲ್ಲರ ಎದೆ ನಡುಗಿಸಿತ್ತು. ಸದ್ಯ ಬೆಂಕಿ ಇಲ್ಲೇ ಹಿಡಿದಿಲ್ಲವಲ್ಲ ಎಂಬ ತೃಪ್ತಿಯಲ್ಲಿ ತಮ್ಮ ತಮ್ಮ ಸ್ಥಾನ ಭದ್ರಮಾಡಿಕೊಳ್ಳುತ್ತ ಕುಳಿತರು. ಚಂಡೆ, ಕುಣಿತ ಮತ್ತೆ ಪ್ರಾರಂಭವಾಯಿತು. ಕೆಲವರು ದುಡುದುಡನೆ ಓಡಿದರು ಬೆಂಕಿ ಕಂಡ ದಿಕ್ಕಿನತ್ತ.

"ವಾಮನನ ಮನೆ ಸಮೀಪ ಬೆಂಕಿ ಕಾಣಿಸಿತಲ್ಲ." ಯಾರೋ ಅಂದರು, "ಮುತ್ತಣ್ಣನಿಗೂ ಅವನಿಗೂ ಜಗಳವಾಗಿ ಇನ್ನೂ ಮೂರು ದಿನ ಆಗಿಲ್ಲ."

ಸುಂದರರಾಜ ತತ್‌ಕ್ಷಣ ತನ್ನ ಕೆಲವು ಕಾರ್ಯಕರ್ತರನ್ನು ಓಡಿಸಿದ ಬೆಂಕಿ ಕಾಣುವ ದಿಕ್ಕಿಗೆ. ಅಪತ್ಕಾಲದಲ್ಲಿ ಸಹಾಯ. ಅವಿನಾಶ ತಡೆಯಲಾರದೆ ತಾನೂ ಹೋಗುವ ಆತುರ ತೋರಿಸಿದ. ಅಹಲ್ಯ ಬೇಡವೆಂದರೂ ಕೇಳದೆ, "ಅರ್ಧಗಂಟೆಯಲ್ಲಿ ಹಿಂದಿರುಗಿ ಬರುತ್ತೇನೆ, ನೀನಿಲ್ಲೇ ಇರು" ಎಂದು ಹೊರಟೇ ಬಿಟ್ಟ.

ಅವಿನಾಶನ ಉತ್ಸಾಹ ನೋಡಿ ಸುಂದರರಾಜ ಎಲ್ಲಿಂದಲೋ ಒಂದು ಟಾರ್ಚನ್ನು ತರುತ್ತ ತಾನೂ ಜೊತೆಗೂಡಿದ. ಕತ್ತಲು ಮುಸುಕಿದ ದಾರಿ. ಕೈಯಲ್ಲಿ ಟಾರ್ಚಿನ ಬೆಳಕು ಒಂದೇ ಮಾರ್ಗದರ್ಶಿ. ಸುಂದರರಾಜ ಸುಲಭದಲ್ಲಿ ಹೆಜ್ಜೆಯಿರಿಸಿದರೆ ಅವಿನಾಶ ಆಗಾಗ ನಿಲ್ಲುತ್ತಿದ್ದ.

"ನೋಡಿಕೊಂಡು ಸರಿಯಾಗಿ ಹೆಜ್ಜೆಯಿಡಿ, ಡಾಕ್ಟರೇ. ಬೆಂಕಿ ಕಾಣ್ತಾ ಇರೋದು ವಾಮನನ ಮನೆ ಹತ್ತಿರವೇ. ನಾವು ಅಲ್ಲಿಗೇ ಹೋಗೋಣ."

ಕಾಡುಹಾದಿ ಸವೆದು ಸಣ್ಣ ಪದುವಿನ ಬಯಲು ದಾಟವರೆ ಮೊದಲು ಸಿಗುವುದು ಮುತ್ತಣ್ಣನ ಗದ್ದೆ, ತೋಟ. ಅಲ್ಲಿಂದಾಚೆ ವಾಮನನ ಮನೆಯ ಸ್ಥಳ. ಗದ್ದೆಹುಣಿಯಲ್ಲಿ ಹೆಜ್ಜೆಯಿಡುವಾಗಲೇ ದೂರದಿಂದ ಕಾಣುವ ಬೆಂಕಿ ಸಮೀಪವಾಗಿದೆ, ಸುಂದರರಾಜನ ಊಹೆಯೂ ದಿಟವಾಗಿದೆ. ಇಬ್ಬರೂ ನಡೆಯುವ ವೇಗ ಹೆಚ್ಚಿಸಿದರು.

"ಮುತ್ತಣ್ಣ ರಾತ್ರೆ–ಹಗಲು ಆ ಬಡಪಾಯಿ ಮೇಲೆ ಕತ್ತಿ ಮಸೀತಾ ಇದ್ದಾನೆ. ಎಷ್ಟಾದರೂ ಹಿಂದಕ್ಕೆ ಮುತ್ತಣ್ಣನ ಒಕ್ಕಲು ಈ ವಾಮನ."

"ಈಗ ಗೇಣಿ ಕಾನೂನು ಜಾರಿಯಲ್ಲಿ ಇಲ್ಲ, ಮತ್ತೇನು ರಗಳೆ?"

"ಕಾನೂನು ಪ್ರಕಾರ ಬೇಸಾಯಗಾರನಿಗೆ ಭೂಮಿ. ಆದರೆ ಮುತ್ತಣ್ಣ ಕಾನೂನನ್ನು ಒಪ್ಪಿಲ್ಲ, ಡಾಕ್ಟರೇ. ಗೇಣಿ ಕಾನೂನು ಇರುವಾಗಲೇ ವಾಮನ ಪ್ರತಿವರ್ಷ ಗೇಣಿ ಸಂದಾಯ ಮಾಡ್ತಿದ್ದ. ಬೆಳೆ ಬರಲಿ, ಬಾರದಿರಲಿ, ನಿಗದಿತ

ಸಮಯಕ್ಕೆ ಬತ್ತ, ತೆಂಗಿನಕಾಯಿ ಮುಂತಾದವನ್ನು ಮುತ್ತಣ್ಣನ ಮನೆ ಬಾಗಿಲಿಗೆ ತಲುಪಿಸುತ್ತಿದ್ದ. ಕಾನೂನು ಬದಲಾದರೂ ಇನ್ನೂ ವಾಮನ ಗೇಣಿ ಕೊಡ್ತಿದ್ದಾನೆ. ಈಗ ಮುತ್ತಣ್ಣ ತನ್ನ ಭೂಮಿ ಬಿಟ್ಟು ಕೊಡಿ ಎನ್ನುತ್ತಿದ್ದಾನೆ."

"ಹೇಳಲಿ ಬಿಡಿ, ಕಾನೂನು ವಾಮನನ ಪರ ಇದೆಯಲ್ಲವೆ?"

"ಕಾನೂನು ಬದಲಾದರೂ ಜನರು . ಬದಲಾಗುವುದಿಲ್ಲ, ಡಾಕ್ಟರೇ. ಮುತ್ತಣ್ಣ ಆಸೆಬುರುಕ. ಅವನ ಪ್ರಾಯದ ಮಕ್ಕಳೂ ಹಾಗೇ. ವಾಮನನಿಗೆ ಕಿರುಕುಳ ಕೊಟ್ಟು ಇಲ್ಲಿಂದ ಓಡಿಸುವ ಪಿತೂರಿ ಹೂಡಿದ್ದಾರೆ. ನಿಧಾನವಾಗಿ ಬನ್ನಿ, ಡಾಕ್ಟರೇ. ಕಳೆದ ವರ್ಷ ಏನಾಯ್ತು ಗೊತ್ತಾ?"

ಸುಂದರರಾಜನ ನೆನಪು ಸರಿಯಿತು ಹಿಂದಕ್ಕೆ. ಕಳೆದ ವರ್ಷದ ಕತೆಗಿಂತ ಮೊದಲು ವಾಮನ ತನ್ನ ಒಂದು ಎಕರೆ ಗೇಣಿಗದ್ದೆಯಲ್ಲಿ ಅಡಿಕೆ ಸಸಿ ನೆಟ್ಟು ಸುತ್ತಲೂ ತೆಂಗಿನ ಗಿಡ ಹಾಕಿಸಿದ್ದ. ಅಡಿಕೆ ಸಸಿಗಳ ಜೊತೆಗೆ ಬಾಳೆಗುಂಡಿಗಳನ್ನು ತೋಡುವಾಗ ಮುತ್ತಣ್ಣನ ಅಪ್ಪಣೆಯಾಗಿತ್ತು.

"ಯಾಕೆ ಭೂಮಿಗಾಗಿ ಒದ್ದಾಡುತ್ತಿ, ಬೆಪ್ಪ, ನನ್ನ ಭೂಮಿಯನ್ನು ನಾನು ನೋಡಿಕೊಳ್ತೇನೆ, ನಿನಗೆ ಶ್ರಮ ಬೇಡ"

ಕಾನೂನು ಪ್ರಕಾರ ತನ್ನದಾದ ಭೂಮಿಯಲ್ಲಿ ಮುತ್ತಣ್ಣನಿಗೆ ಏನಿದೆ ಅಧಿಕಾರ? ವಾಮನ ತನ್ನ ಉತ್ಸಾಹದ ಕೆಲಸವನ್ನು ನಿಲ್ಲಿಸಲಿಲ್ಲ. ಮೊದಲು ವಾಮನನು ಮುತ್ತಣ್ಣನ ತೋಟದ ಬದಿಯಿಂದ ನಡೆದು ಹಳ್ಳಿರಸ್ತೆಗೆ ಬರಬೇಕಿತ್ತು. ಮುತ್ತಣ್ಣ ಆ ದಾರಿಯನ್ನು ಬಂದು ಮಾಡಿಬಿಟ್ಟ. ತಕರಾರು ಅಧಿಕಾರಿಗಳ ತನಕ ಹೋಗಿತ್ತು. ಇಷ್ಟು ಸಾಲದೆ ಆರಡಿ ಅಗಲದ ಅಗರನ್ನು ತೋಡಿಸಿ ಮುಳ್ಳು ಬೇಲಿಯಿಂದ ಭದ್ರಪಡಿಸಿದ. ವಾಮನ ತನ್ನ ಗಡಿಭಾಗದ ಕಾಡಿನಲ್ಲಿ ಬಳಸುದಾರಿ ಮಾಡಿಕೊಂಡ.

ಗಡಿವಿವಾದದೊಂದಿಗೆ ಮುತ್ತಣ್ಣ ತೆಪ್ಪಗಿರಬಹುದಾಗಿತ್ತು. ಕಳೆದ ವರ್ಷ ವಾಮನನ ಗದ್ದೆಯಲ್ಲಿ ಸುಗ್ಗಿ ಬೆಳೆ ತಲೆ ಎತ್ತಿದಾಗ ದನ, ಎಮ್ಮೆಯನ್ನು ಮೇಯಲು ಬಿಟ್ಟು ಇಡೀ ಗದ್ದೆಯನ್ನು ಹಾಳು ಮಾಡಿಸಿದ್ದ.

"ನನ್ನ ಬಳಿ ದೂರು ತಂದಿದ್ದ" ಕಲ್ಲು ಮಣ್ಣಿನ ದಾರಿ ಸವೆಸುತ್ತ ಅಂದ ಸುಂದರರಾಜ. "ಮುತ್ತಣ್ಣನೊಂದಿಗೆ ಅವನ ಪರ ನಾನೂ ಸಾಕಷ್ಟು ಹೇಳಿದೆ. 'ನನ್ನ ಭೂಮಿ ಬಿಟ್ಟು ಕೊಡಲಿ. ನಾಲ್ಕು ಸಾವಿರ ರೂಪಾಯಿ ಪರಿಹಾರ ಕೊಡ್ತೇನೆ' ಎಂದ ನಮ್ಮೊಡನೆ. ಪರಿಹಾರ ತಗೊಂಡು ಆ ಬಡ ಕುಟುಂಬ ಎಲ್ಲಿಗೆ ಹೋಗುತ್ತದೆ? ಕಷ್ಟವಾದರೂ ಭೂಮಿ ಬಿಡಬೇಡ ಎಂದಿದ್ದೇನೆ."

ಗದ್ದೆ ಹುಣಿ ದಾಟಿ ಎರಡು ದಣಸೆಗಳನ್ನು ಹಾದು ವಾಮನನ ಮನೆ ಅಂಗಳದಲ್ಲಿ ಕಾಲಿರಿಸಿದ್ದರು. ಈಗ ಅಲ್ಲಿ ಅಂಗಳವಿತ್ತು. ಮನೆ? ಅದು ಅಗ್ನಿಯೊಡನೆ ಹೋರಾಡಿ ತಣ್ಣಗಾಗುತ್ತಿದೆ ! ಸುಂದರರಾಜನ ಕಾರ್ಯಕರ್ತರು

ನೀರು ಸುರಿಯುವ ವ್ಯರ್ಥಸಾಹಸ ಮಾಡುತ್ತಿದ್ದಾರೆ. ಮನೆಯೆದುರು ಇತ್ತು ಹುಲ್ಲಿನ ಬಣಿವೆ. ಒಂದಿಬ್ಬರು ಹುಲ್ಲನ್ನು ಎತ್ತಿ ಎತ್ತಿ ದೂರ ಎಸೆಯುತ್ತಿದ್ದಾರೆ. ಅದರ ಬದಿಗಿದ್ದ ದನದ ಕೊಟ್ಟಿಗೆಗೆ ಬೆಂಕಿ ತಗಲಿದರೆ ಆಮೇಲೆ ನಂದಿಸುವುದು ಕಷ್ಟ.

ದನದ ಕೊಟ್ಟಿಗೆಯನ್ನು ಬೆಂಕಿಯಿಂದ ರಕ್ಷಿಸಿಕೊಳ್ಳಲಾಯಿತು. ಆದರೆ ಮನೆ ಸಂಪೂರ್ಣ ಸುಟ್ಟು ಬೂದಿಯಾಗಿತ್ತು. ವಾಮನ ಬೊಬ್ಬಿರಿಯುತ್ತಿದ್ದಾನೆ; "ಎಲ್ಲಾ ಹೊರಟುಹೋಯ್ತಲ್ಲಪ್ಪೋ! ಗಂಡಸರು ಇಲ್ಲದ ಹೊತ್ತಿನಲ್ಲಿ ಯಾರೋ ಇಟ್ಟ ಕಿಚ್ಚು, ಅಣ್ಣ. ಸರ್ವನಾಶವಾಗಿಹೋಯ್ತು!"

ಬಂದವರ ದೃಷ್ಟಿ ಅಂಗಳದ ತುದಿಯಲ್ಲಿ ಕುಳಿತ ಬಸುರಿ ಹೆಂಗಸು, ವೃದ್ಧೆ ತಾಯಿ, ಕೈಕೂಸಿನತ್ತ ಹರಿಯಿತು. ಇಬ್ಬರು ಚಿಕ್ಕ ಹುಡುಗಿಯರ ಅಸಹಾಯಕ ನೋಟ. ಅವರೆಲ್ಲ ಯಕ್ಷಗಾನ ನೋಡಲು ಹೋದವರು. ದೂರದಿಂದ ಬೆಂಕಿ ನೋಡಿದಾಕ್ಷಣ ಧಾವಿಸಿ ಬಂದಿದ್ದಾರೆ. ಗಂಡುಮಕ್ಕಳು ಇನ್ನೂ ಬಂದಿಲ್ಲ.

"ಅಮ್ಮ ಒಬ್ಬಳೇ ಮನೇಲಿದ್ಲು. ಒಲೆಯಲ್ಲಿ ಬೆಂಕಿ ತುಂಡೂ ಇರ್ಲಿಲ್ಲ. ಮತ್ತೆ ಹೇಗೆ ಬಿತ್ತು ಈ ಕಿಚ್ಚು?" ಗೋಳಿಡುತ್ತ ವಾಮನ ಬಿಕ್ಕಳಿಸಿದ, ಮುಷ್ಟಿ ಬಿಗಿದ. "ಬೆಂಕಿ ಹಚ್ಚಿದ್ದು ಯಾರೆಂದು ತನಿಖೆ ಮಾಡಿಕೊಡಿ. ಅವರನ್ನು ಜೀವಸಹಿತ ಇಡುವವನಲ್ಲ ನಾನು. ಐವತ್ತು ವರ್ಷ ಜೈಲಿನ ಕಂಬಿ ಎಣಿಸಿದರೂ ಚಿಂತೆಯಿಲ್ಲ!"

"ಮುತ್ತಣ್ಣ ಯಕ್ಷಗಾನಕ್ಕೆ ಹೋಗಿದ್ದಾನಾ? ಮನೆಯಲ್ಲಿದ್ದಾನಾ?" ಸುಂದರರಾಜ ಪಿಸುಗುಟ್ಟಿದ ಒಬ್ಬನ ಕಿವಿಯಲ್ಲಿ. "ಇದು ಅವನದೇ ಕೆಲಸ"

"ಸಾಯಂಕಾಲ ಸಭೆಗೆ ಬಂದಿದ್ದ, ಆಮೇಲೆ ಕಾಣಿಸಲಿಲ್ಲ"

ಸುಂದರರಾಜ ಕಾರ್ಯಕರ್ತರ ಹೆಗಲು ತಟ್ಟಿದ. "ವಾಮನನ ಮನೆಗೆ ಬೆಂಕಿ ಇಡ್ತೇನೆ ಅಂತ ಯಾರೊಂದಿಗೋ ಹೇಳ್ತಾ ಇದ್ದನಂತೆ. ನಡೀರಿ, ಈಗಲೇ ಇತ್ಯರ್ಥ ಮಾಡಿ ಬರೋಣ. ರಾಮಾ, ಶೇಖರಾ, ಎಲ್ಲಿದ್ದೀರಿ? ಒಂದೊಂದು ದೊಣ್ಣೆ ಎತ್ತಿಕೊಳ್ಳಿ"

ಈವರೆಗೆ ಮೂಕಪ್ರೇಕ್ಷಕನಾದ ಅವಿನಾಶ ಸುಂದರರಾಜನನ್ನು ತಡೆಯಲೆಚ್ಚಿಸಿದ. ಬೆಂಕಿ ಅನಾಹುತದೊಂದಿಗೆ ಉತ್ಸಾಹೀ ತರುಣರ ಕ್ರೋಧದಿಂದ ಇನ್ನೊಂದು ರಗಳೆ ಏಳುವುದು ಬೇಡ. ಯಾವ ತನಿಖೆಯಿದ್ದರೂ ಈ ಅಪರಾತ್ರೆಗಿಂತ ಹಗಲು ಎಷ್ಟೋ ಕ್ಷೇಮ. ಆದರೆ ವಾಮನನ ಮುಖ ಬೆಂಕಿ ಕೆಂಡಗಳಲ್ಲಿ ವಿಕಾರವಾಗಿ ಕಾಣಿಸಿತು.

"ತನಿಖೆಗೆ ರಾತ್ರಿಯಾದರೇನು, ಹಗಲಾದರೇನು? ಬೆಂಕಿ ಹಚ್ಚಿದವನಿಗೆ ತಕ್ಕ ಶಾಸ್ತಿ ಆಗಲೇಬೇಕು. ನಾವೇನು ಬಳೆತೊಟ್ಟ ಹೆಂಗಸರೇ, ನಡೀರಿ ಅಣ್ಣಾ" ಎನ್ನುತ್ತ ತಾನೂ ಒಂದು ದೊಣ್ಣೆಯನ್ನು ಹೆಗಲಿಗೇರಿಸಿದ.

"ಕಳೆದ ವರ್ಷ ಬೆಳೆದ ಪೈರನ್ನು ಹಾಳುಮಾಡಿದ್ದು ಸಾಲದೆ ತನ್ನ ಆಳಿನಿಂದ ನನ್ನ ಅಡಿಕೆ ಸಸಿಗಳನ್ನು ಕಿತ್ತುಹಾಕಿಸಿದ್ದಾನೆ ಆ ಮುತ್ತಣ್ಣ. ಆವತ್ತು ನಾನು ಎದೆಯೊಡೆದು ಸಾಯದಿದ್ದದ್ದು ನನ್ನ ಹೆಂಡತಿಯ ಪುಣ್ಯ. ಇವತ್ತು ಅವನನ್ನು ಬಿಡುವವನಲ್ಲ."

ಸುಂದರರಾಜ ಹುರಿದುಂಬಿಸಿದ ಎಲ್ಲರನ್ನೂ. ಟಾರ್ಚಿನ ಬೆಳಕನ್ನು ಅವಿನಾಶನತ್ತ ಹಾಯಿಸಿದ ಅವನು ಅರೆಗಳಿಗೆ ನಿಂತ. "ನೀವೇನು ಮಾಡ್ತೀರಿ ಡಾಕ್ಟರೇ, ನಮ್ಮ ಜೊತೆ ಬಂದರೆ ಸರಿಯಾಗದು. ರಾಮಾ, ನಿನ್ನ ಟಾರ್ಚ್ ತಗೊಂಡು ಇವರನ್ನು ಯಕ್ಷಗಾನ ನಡೆಯುವ ಸ್ಥಳಕ್ಕೆ ತಲುಪಿಸಿ ಬಾ"

"ಬೇಡ, ಏನೇನು ಕಥೆ ಆಗುತ್ತೋ ನಾನೂ ಬಂದು ನೋಡ್ತೇನೆ"

"ಬೇಡ ಡಾಕ್ಟರೇ, ಬೆಂಕಿ ಹಚ್ಚಿದ್ದು ಮುತ್ತಣ್ಣನಲ್ಲ ಎಂದು ಗೊತ್ತಾದರೆ ನಾವು ಅವನ ಕೂದಲನ್ನು ಸೋಂಕಲಾರೆವು. ಇದ್ಯಾರ ಕೆಲಸವೆಂದು ಇವತ್ತು ಪತ್ತೆ ಮಾಡಿಯೇ ಸಿದ್ಧ. ನೀವು ಹೋಗಿ, ಎಲ್ಲಾ ವಿಷಯ ನಾಳೆ ನಾನೇ ಬಂದು ಹೇಳ್ತೇನೆ."

ಅವಿನಾಶನಿಗೂ ಸರಿಯೆನಿಸಿತು ಈ ಮಾತು. ಅಹಲ್ಯ ತನಗಾಗಿ ಕಾದು ಕುಳಿತಿರುವುದು ನೆನಪಾಯಿತು. ಬಿಸಿರಕ್ತದ ತರುಣರು ಏನು ಬೇಕಾದರೂ ಮಾಡಿಕೊಳ್ಳಲಿ. ಅವನು ಆ ಕ್ಷಣವೇ ಒಬ್ಬ ಕಾರ್ಯಕರ್ತನ ಜೊತೆ ಯಕ್ಷಗಾನ ನಡೆಯುವ ಸ್ಥಳಕ್ಕೆ ಹೊರಟು ಬಂದ. ಅವನನ್ನು ಕಾದು ಕುಳಿತಿದ್ದ ಅಹಲ್ಯಳ ಕಂಗಳಲ್ಲಿ ಕಾತರದ ಭೀತಿ. ಪ್ರಸಂಗಕ್ಕೆ ಈಗ ಕಳೆಯೇರಿದ್ದು. ವೇದಿಕೆಯಲ್ಲಿ ಕರ್ಣ–ಕುಂತಿಯರ ಸಂವಾದ ನಡೆಯುತ್ತಿತ್ತು.

ಯಕ್ಷಗಾನ ನೋಡುವ ಉತ್ಸಾಹವಿಲ್ಲದೆ ಅಹಲ್ಯಳೊಡನೆ ಹಿಂದಿರುಗಿದ ಮನೆಗೆ. ಆಗಲೂ ಮನದಲ್ಲಿ ಒಂದೇ ಸಂದೇಹ. ದೊಣ್ಣೆಯೇರಿಸಿಕೊಂಡು ಹೋದವರು ಮುತ್ತಣ್ಣನೊಡನೆ ಹೊಡೆದಾಡದೆ ಇರುತ್ತಾರೆಯೇ? ಯಾರಾದರೂ ಗಾಯ ಮಾಡಿಕೊಂಡು ಬಾರದೆ ಇರುತ್ತಾರೆಯೇ? ಅವನು ಅವಸರದಲ್ಲಿ ಕೆಲವು ಮಾತ್ರೆಗಳನ್ನು, ಬ್ಯಾಂಡೇಜ್ ಹತ್ತಿ, ಇನ್ನಿತರ ಔಷಧಿ ಸಿದ್ಧಪಡಿಸಿಟ್ಟ. ತಡವಾಗಿ ಊಟಕ್ಕೆ ಕುಳಿತರೆ ಒಂದು ತುತ್ತೂ ಗಂಟಲಿನಲ್ಲಿ ಇಳಿಯಲಿಲ್ಲ. ನಿರ್ಗತಿಕರಂತೆ ನಿಂತಿರುವ ವಾಮನನ ಮನೆಯವರೇ ಮತ್ತೆ ಮತ್ತೆ ಕಾಣಿಸುತ್ತಾರೆ. ಎಲ್ಲೋ ದೊಣ್ಣೆಗಳು ಲಟಾಲಟಾ ಹೊಡೆದುಕೊಂಡ ಶಬ್ದ!

ಮಲಗಲೆಂದು ಬಂದ ಅಹಲ್ಯ ಅವನ ಮಗ್ಗುಲಿನಲ್ಲಿ ಕುಳಿತು ಸಾಯಂಕಾಲ ತಾನು ಸಭೆಯಲ್ಲಿ ಕೇಳಿದುದನ್ನು ಹೇಳುತ್ತ ಅವನ ತಲೆಗೂದಲಿನಲ್ಲಿ ಕೈಯಾಡಿಸಿದಳು. "ಜನರ ಹೊಗಳಿಕೆಯಿಂದ ಎಲ್ಲಿ ನನ್ನ ಗಂಡನಿಗೆ ದೃಷ್ಟಿ ತಾಗುವುದೋ ಎಂದು ಹೆದರಿಹೋದೆ."

"ಓ... ಹೊಗಳಿದವರು ತೆಗಳುತ್ತಾರೆ, ಗೊತ್ತಿಲ್ಲವೇ ನಿನಗೆ?" ಅವಿನಾಶ ಅವಳನ್ನು ತನ್ನತ್ತ ಎಳೆದುಕೊಳ್ಳುತ್ತ ಕಿವಿಯಲ್ಲಿ ಪಿಸುಗುಟ್ಟಿದ, "ದೃಷ್ಟಿ ತಾಗುವುದು

ನನಗಲ್ಲ, ನಿನಗೆ ! ಇವತ್ತು ಇಡೀ ಸಭೆಯಲ್ಲಿ ನಿನ್ನ ಹಾಗೆ ಇನ್ನೊಬ್ಬರು ಇರಲಿಲ್ಲ, ನಿಜವೇ ನನ್ನ ಮಾತು?"

ಅವಳ ಕಣ್ಣ ರೆಪ್ಪೆಗಳು ಕೆಳಮುಖವಾದವು. ಅವಿನಾಶ ಅವಳ ರೂಪರಾಶಿಯನ್ನು ಹೊಗಳಿದಾಗೆಲ್ಲ ಮುಖ ಬಾಡುತ್ತದೆ. ಈಗೀಗ ಯಾಕೆ ಎಂದೂ ತಿಳಿದಿದೆ. ಕೇವಲ ರೂಪದಿಂದ ಪ್ರಯೋಜನವಿಲ್ಲ, ಅದು ಪರಿಪೂರ್ಣತೆಯನ್ನು ಪಡೆಯಬೇಕು. ತನಗಿನ್ನೂ ಮಗುವಾಗಿಲ್ಲ ಎಂದು ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ. 'ಬೇಸರವಾದರೆ ತವರುಮನೆಗೆ ಹೋಗಿ ಬಾ' ಎಂದು ಆತ ಹೇಳಿದ್ದರೂ ಅವಳು ಹೋಗಿಲ್ಲ.

"ಏನು ಚಿಂತೆ?" ಕೇಳಿದ ಅವಳ ಬಾಡಿದ ಮುಖ ನೋಡಲಾರದೆ.

"ಸೋಮಶೇಖರ ಶಾಸ್ತ್ರಿಗಳ ಅಳಿಯ" ಅವನ ಕಣ್ಣುಗಳನ್ನು ಸಂಧಿಸದೆ ಅವಳೆಂದಳು, "ಗಿಡಮೂಲಿಕೆಗಳ ಔಷಧಿಯಲ್ಲಿ ಹೆಸರಾದ ಪಂಡಿತರಂತೆ. ಮಕ್ಕಳಾಗುವವರಿಗೆ ಔಷಧಿ ಕೊಡ್ತಾರಂತೆ, ಹೋಗಿ ಬರೋಣವೇ?"

ಹುಬ್ಬೇರಿಸಿದ. ಇಂತಹ ಹುಚ್ಚು ಕಲ್ಪನೆಯನ್ನು ಯಾರು ಇವಳ ತಲೆಯಲ್ಲಿ ತುಂಬಿಸಿದರು? ಸಣ್ಣ ಪುಟ್ಟ ಅಳಲೆಕಾಯಿ ಪಂಡಿತರಲ್ಲಿಗೆ ಅಹಲ್ಯಳನ್ನು ಕಳುಹಿಸಬೇಕೇ? ತಾನು ವೈದ್ಯನಾಗಿ ನಿಷ್ಪ್ರಯೋಜಕ. ಇವತ್ತು ಯಾರೋ ಇವಳ ಕಿವಿಯೂದಿರಬೇಕು. ತನ್ನ ಮೇಲೆ ಅವಿಶ್ವಾಸ ತಳೆದಿದ್ದಾಳೆ. ಕಾತರ, ನಿರೀಕ್ಷೆಯಲ್ಲಿ ಕಳೆದ ದಿನಗಳೆಲ್ಲ ನೀರಸವಾಗಿವೆ. ಮೃದುವಾಗಿ ತೋಳು ಸವರಿದ.

"ನಿನಗೇನೂ ತೊಂದರೆ ಇಲ್ಲವೆಂದು ಸಾವಿರ ಬಾರಿ ಹೇಳಿದ್ದೇನೆ. ಸುಮ್ಮನೆ ತಲೆ ಬಿಸಿ. ಇವತ್ತು ಮಹಿಳಾ ಸಂಘದವರು ನಿನ್ನನ್ನು ಮುತ್ತಿದ್ದರಲ್ಲಿ ಏನಂತೆ ವಿಶೇಷ?"

ಅವಳು ಉತ್ತರಿಸದೆ ಮುಖ ತಿರುಗಿಸಿ ಉರುಳಿಕೊಂಡಳು ಹಾಸಿಗೆಯಲ್ಲಿ. ಅವನೂ ಮೌನ ತಳೆದು ಕೋಣೆಯ ದೀಪ ತೆಗೆದು ಮಲಗಿದ. ಆದರೆ ನಿದ್ರೆ ಸರಿದಿತ್ತು ದೂರ. ದೊಣ್ಣೆ ಎತ್ತಿಕೊಂಡವರು ಎಲ್ಲಿಗೆ ಹೋದರು? ಮುತ್ತಣ್ಣನ ತಲೆ ಒಡೆದು ಹಾಕಿದರೆ? ನೆತ್ತರಿನ ಓಕುಳಿಯಾಡಿತೇ?

ಯಾವಾಗ ನಿದ್ರೆ ಆವರಿಸಿತೋ ತಿಳಿಯಲಿಲ್ಲ. ಪಕ್ಕನೆ ಹೊರಗೆ ಏನೋ ಗಲಾಟೆ ಕೇಳಿಸಿದಂತಾಗಲು ಧಡಕ್ಕನೆ ಎದ್ದು ಟಾರ್ಚ್ ಎತ್ತಿಕೊಂಡ. ಯಾರೋ ಬಾಗಿಲು ಬಡಿಯುವ ಶಬ್ದ. ಹೊಡೆದಾಟ ವಿಕೋಪಕ್ಕೆ ಹೋಗಿದ್ದು ಮೈಕೈ ತಲೆ ಎಲ್ಲಾ ಒಡೆದುಕೊಂಡ ಗಾಯಾಳುಗಳು ತನ್ನಲ್ಲಿಗೆ ಔಷಧಿಗೆ ಬಂದಿರಬೇಕು. ಲಾಟೀನನ್ನು ಬೆಳಗಿಸಿ ಹೊರಕೋಣೆಗೆ ಬಂದ. ಜಗಲಿಯ ಕಿಟಕಿಯಾಚೆ ನಿಂತವರು ಯಾರೆಂದು ತಿಳಿಯಲಿಲ್ಲ, ಬಾಗಿಲು ಬಡಿಯುತ್ತಿದ್ದಾರೆ.

"ಡಾಕ್ಟರೇ, ಬಾಗಿಲು ತೆಗೀರಿ... ಬಾಗಿಲು ತೆಗೀರಿ !"

ಸಹಾಯಕ್ಕೆ ಯಾಚಿಸುವವನ ಆರ್ತನಾದ. ಬಾಗಿಲಿನ ಬಳಿ ಬಂದಾಗ ತಿಳಿಯಿತು. ಹೊರಗೆ ನಿಂತವನು ಮುತ್ತಣ್ಣ ! ಗಾಬರಿ, ಭೀತಿಯಿಂದ ಕಪ್ಪಿಟ್ಟ ಮುಖ, ಮೈಯಲ್ಲಿ ನಡುಕ.

"ಯಾರೋ ನನ್ನನ್ನು ಅಟ್ಟಿಸಿಕೊಂಡು ಬರ್‍ತಾ ಇದ್ದಾರೆ ಡಾಕ್ಟರೇ, ಬಾಗಿಲು ತೆಗೀರಿ!"

"ಯಾರು ಬರ್‍ತಾ ಇದ್ದಾರೆ?" ಬಾಗಿಲು ತೆರೆಯದೆ ಕೇಳಿದ.

"ಆಮೇಲೆ ಹೇಳ್ತೇನೆ. ಇಲ್ಲಾಂದ್ರೆ ಅವರು ನನ್ನ ಜೀವ ಉಳಿಸಲಾರರು. ಹೇಗೋ ಇಲ್ಲೀತನಕ ತಪ್ಪಿಸಿಕೊಂಡು ಬಂದೆ... ತೆಗೀರಿ ಬಾಗಲಾ...!"

ಗಡಸುಧ್ವನಿ, ಬಾಗಿಲು ಹೇಗೆ ತೆರೆಯಲಿ ಎಂದು ಅವಿನಾಶನಿಗೆ ಚಿಂತೆ. ಅವನೀಗ ರೋಗಿಯಾಗಿ ಬಂದಿಲ್ಲ, ಗಾಯಾಳುವೂ ಅಲ್ಲ. ತನ್ನ ನೆರವು ಕೇಳಿ ಯಾಚಕನಾಗಿ ಬಂದಿದ್ದಾನೆ. ಎಲ್ಲೋ ಪ್ರಾಣಭಯ. ಸುಂದರರಾಜನ ಕಡೆಯವರು ಬೆಂಬತ್ತಿರುವುದು ದಿಟ. ತನ್ನ ಪ್ರಾಣ ಹೋದರೂ ವಾಮನ ಈ ಮುತ್ತಣ್ಣನನ್ನು ಬಿಡಲಾರ. ತಾನೇನು ಮಾಡಲಿ? ಮುತ್ತಣ್ಣನನ್ನು ತಾನು ಮನೆಯಲ್ಲಿರಿಸಿಕೊಂಡದ್ದು ಸುಂದರರಾಜನಿಗೆ ತಿಳಿದರೆ ಗಲಾಟೆಯಾಗಬಹುದು. ಹಿಂದಿನಿಂದ ಕೇಳಿಸಿತು ಅಹಲ್ಯಳ ಸ್ವರ. ಅವಳನ್ನು ಸನ್ನೆ ಮಾಡಿ ಒಳಗೆ ಕಳುಹಿಸಿದೆ. ಹೊರಗೆ ನಿಂತವನ ಯಾಚನೆಯ ಧ್ವನಿಗೆ ಮನಸ್ಸು ಕಲ್ಲಾಗಲಿಲ್ಲ. ಕರ್ತವ್ಯಪ್ರಜ್ಞೆ ಜಾಗ್ರತವಾಯಿತು. ತಾನೇನು ಮುತ್ತಣ್ಣನ ವಿರೋಧಿಯಲ್ಲ. ಆಶ್ರಯ ಬೇಡಿ ಬಂದವನಿಗೆ ಆಸರೆ ಕೊಡುವುದು ತನ್ನ ಧರ್ಮ.

ಕೈ ಬಾಗಿಲಿನ ಚಿಲಕವನ್ನು ಸಡಿಲಗೊಳಿಸಿತು. ಮುತ್ತಣ್ಣ ಬಿರುಗಾಳಿಯಂತೆ ಒಳಗೆ ಬಂದು ಬಾಗಿಲನ್ನು ತಾನೇ ಭದ್ರಪಡಿಸಿ ಇನ್ನೊಂದು ಕೋಣೆಯತ್ತ ಓಡಿ ಅವಿತುಕೊಂಡ. ಲಾಟೀನು ಹಿಡಿದುಕೊಂಡೇ ಟಾರ್ಚ್ ಬೆಳಕನ್ನು ಅತ್ತ ಹಾಯಿಸಿದ, ಪಾಪ, ನಡುಗುತ್ತಿದ್ದಾನೆ.

"ಡಾಕ್ಟರೇ, ನಿಮ್ಮ ಲಾಟೀನು, ಆ ಟಾರ್ಚಿನ ಬೆಳಕನ್ನು ತೆಗೆದುಬಿಡಿ. ನಾನಿಲ್ಲಿ ಇದ್ದೇನಂತ ಯಾವ ದೆವ್ವಕ್ಕೂ ಹೇಳಬೇಡಿ!"

"ವಾಮನನ ಮನೆಗೆ ಬೆಂಕಿ ಇಟ್ಟವರು ನೀವೇ ಅಲ್ಲವೆ?" ಗುಡುಗಿದ ಅವಿನಾಶ. ಹೊರ ರಸ್ತೆಯಲ್ಲಿ ಯಾರ್‍ಯಾರೋ ಓಡಾಡುವ ಸದ್ದು.

"ಈಗ ಏನೂ ಕೇಳಬೇಡಿ ಇಲ್ಲಿ ಗೋಡೆಗಳಿಗೂ ಕಿವಿ ಇರಬಹುದು. ಮೊದಲು ನಿಮ್ಮ ದೀಪ ಆರಿಸಿ, ಡಾಕ್ಟರೇ"

ದೀಪ ಆರಿತು. ಅವಿನಾಶ ಟಾರ್ಚಿನ ಬೆಳಕಿನಲ್ಲಿ ಅವನಿಗಾಗಿ ಚಾಪೆ, ತಲೆದಿಂಬು ತಂದಿರಿಸಿದ. "ನಾನಿರುವಾಗ ಚಿಂತೆ ಬೇಡ, ಹೆದರಿಕೆಯೂ ಇಲ್ಲ, ನಿಶ್ಚಿಂತೆಯಲ್ಲಿ ಮಲಗು"

ತನ್ನ ಕೋಣೆಗೆ ಬಂದು ಬಾಗಿಲು ಚಿಲಕ ಹಾಕುವಾಗ ತಾನು ಮುತ್ತಣ್ಣನಿಗೆ ಆಶ್ರಯ ನೀಡಿದ್ದು ತಪ್ಪಾಯ್ತು ಎಂದೆನಿಸಿತು. ಅವನನ್ನು ಹುಡುಕಿಕೊಂಡು ಜನ ಇಲ್ಲಿಗೆ ಬಂದರೆ ಸುಳ್ಳು ಹೇಳಿ ವಂಚಿಸಲೇ? ಅವನು ಕಿವಿಯಾನಿಸಿದ. ಹೊರಗೆ ನಾಲ್ಕಾರು ನಾಯಿಗಳು ಬೊಗಳುವ ಸದ್ದು. ಅಹಲ್ಯ ಬಹಳ ಹೆದರಿಹೋಗಿದ್ದಳು. ಅವನನ್ನು ತಬ್ಬಿಕೊಳ್ಳುತ್ತ,

"ರಾತ್ರೆ ಹೊತ್ತು ಈ ಕೇಡಿಯನ್ನು ಯಾಕೆ ಒಳಗೆ ಬಿಟ್ಟರಿ? ನಂಗೆ ಹೆದರಿಕೆ" ಎಂದಳು ನಡುಗುವ ಧ್ವನಿಯಲ್ಲಿ.

ಆಮೇಲೆ ಎಚ್ಚರವಾದಾಗ ಇನ್ನೂ ಬೆಳಗಾಗಿರಲಿಲ್ಲ. ನಿದ್ರೆಯಿಲ್ಲದೆ ಕಣ್ಣುಗಳು ಭಾರವಾಗಿ ಮೈ ಜಡವಾಗಿತ್ತು. ಈ ದಿನವೂ ಅವನು ಇಲ್ಲಿಯೇ ಉಳಿಯುತ್ತೇನೆಂದರೆ ಏನು ಮಾಡಲಿ? ಮುತ್ತಣ್ಣನ ನೆನಪಾಗಿ ಕೈಹಿಸುಕಿಕೊಂಡ, ಮನೆಯಲ್ಲಿ ಅಹಲ್ಯ ಒಬ್ಬಳೇ. ಛೇ, ಶತ್ರುವಿನಂತೆ ಹಗೆ ಸಾಧಿಸಿದವನಿಗೆ ಆಶ್ರಯ ಕೊಟ್ಟೆನೆಂದು ವಾಮನನಿಗೆ ಮತ್ತು ಸುಂದರರಾಜನಿಗೆ ತಿಳಿದರೆ ತನ್ನ ಮೇಲಿನ ನಂಬಿಕೆ ಕುಸಿಯದೇ? ಏನಾದರೂ ಆಗಲಿ, ನಸುಕು ಹರಿಯುವ ಮುನ್ನ ಈ ಮಹಾಶಯನನ್ನು ಕಳುಹಿಸಿಬಿಡಬೇಕು.

ಆದರೆ ಅವಿನಾಶನಿಗೆ ಮುತ್ತಣ್ಣನನ್ನು ಕಳುಹಿಸುವ ಅವಕಾಶ ಒದಗಿ ಬರಲೇ ಇಲ್ಲ. ಅವನು ಎದ್ದು ಹೊರಗೆ ಬರುವ ಮೊದಲೇ ಖಾಲಿಯಾಗಿತ್ತು ಬದಿಯ ಕೋಣೆ!

೪

ಮರುದಿನ ಹತ್ತು ಗಂಟೆಗೆ ಸರಿಯಾಗಿ ಸುಂದರರಾಜ ಅವಸರದಲ್ಲಿ ಆಗಮಿಸಿದ ಧನ್ವಂತರಿ ಚಿಕಿತ್ಸಾಲಯಕ್ಕೆ. ಅವನನ್ನೇ ನಿರೀಕ್ಷಿಸುತ್ತಿದ್ದ ಅವಿನಾಶ ಮುಗುಳ್ನಗೆ ಬೀರಿದರೂ ಒಳಗೊಳಗೇ ಅಳುಕಿದ. ತಾನು ಮುತ್ತಣ್ಣನಿಗೆ ಆಶ್ರಯ ನೀಡಿದ್ದು ಅವನಿಗೆ ತಿಳಿದಿದೆಯೇ? ತನ್ನ ಕೈಯಿಂದ ತಪ್ಪಿಸಿಕೊಂಡು ಹೋದ ಹಕ್ಕಿಯನ್ನು ಇನ್ನೆಲ್ಲಿ ತಾನು ಹುಡುಕಲಿ? ಮನಸ್ಸು ಚಿಂತಿಸಿದರೂ ನಾಲಿಗೆ ಸಹಜವಾಗಿ ಪ್ರಶ್ನಿಸಿತು.

"ನಿನ್ನೆ ರಾತ್ರೆ ಏನೆಲ್ಲ ನಡೆಯಿತು? ಮುತ್ತಣ್ಣ ಸಿಕ್ಕಿದನೆ?"

"ಬೆಂಕಿ ಹಚ್ಚಿದ್ದು ಅವನೇ ಎನ್ನುವುದು ದಿಟವಾಯಿತು, ಡಾಕ್ಟರೇ" ಎದುರು ಕುರ್ಚಿಯಲ್ಲಿ ಕುಳಿತು ರಾತ್ರೆ ನಡೆದುದನ್ನೆಲ್ಲ ವಿವರಿಸಿದ.

ನಿನ್ನೆ ರಾತ್ರೆ ಸುಂದರರಾಜ ಮತ್ತು ಅವನ ಸಂಗಡಿಗರು, ವಾಮನ, ಇವರೆಲ್ಲ ಮುತ್ತಣ್ಣನ ಮನೆಗೆ ಬಂದಾಗ ಮನೆಯ ಬಾಗಿಲು ಹಾಕಿತ್ತು.

ಮನೆ ಕಾಯಲು ಒಬ್ಬ ಮುದುಕ, ಎರಡು ಕಂತ್ರಿನಾಯಿಗಳಿದ್ದವು. ಮುದುಕ ಇವರನ್ನು ನೋಡಿ ಬಾಯ್ದೆರೆದ : "ಅವರೆಲ್ಲ ಯಕ್ಷಗಾನಕ್ಕೆ ಹ್ವಾದರು."

ಮುದುಕನ ಮಾತು, ಮುಖಚಹರೆ ನೋಡಿದಾಗ ಸುಳ್ಳು ಹೇಳುತ್ತಿದ್ದಾನೆಯೇ ಎಂಬ ಅನುಮಾನ. ವಾಮನ ಸ್ವರ ಏರಿಸಿದ, "ಎಲ್ಲಿ ಮುತ್ತಣ್ಣ?"

"ಅವರೂ ಹೋಗಿದ್ದಾರೆ" ಭಯಭೀತ ದೃಷ್ಟಿ ಮನೆಯತ್ತ ಹೊರಳಿತು.

"ಮುತ್ತಣ್ಣ ಇಲ್ಲೇ ಇರಬೇಕು. ನಾವು ಬಾಗಿಲು ಮುರಿದು ಒಳಗೆ ಹೋಗೋಣ" ವಾಮನ ಅನುಮಾನ ತಳೆದು ಹೂಂಕರಿಸುತ್ತಿದ್ದಂತೆ ಎಲ್ಲರೂ "ನಡೀರಿ, ಬಾಗಿಲು ಮುರಿಯೋಣ" ಎನ್ನತೊಡಗಿದರು. ಕಿಟಕಿ ಸರಳನ್ನು ಬಗ್ಗಿಸಿದರೆ ಒಳಗೆ ಹೋಗುವುದು ಸುಲಭ. ಇಬ್ಬರು ಆ ಕೆಲಸಕ್ಕೆ ಮುಂದಾದರು. ಮುದುಕ ಅವರನ್ನು ತಡೆಯಲು ನೋಡಿದ, ಗಲಾಟೆ ಹೆಚ್ಚಿತು. ಕಬ್ಬಿಣದ ಸರಳು ಬಾಗುತ್ತ ಬಂದಂತೆ ಹೌಹಾರಿ ಇನ್ನೊಂದು ಕಿಟಕಿಯತ್ತ ಧಾವಿಸಿದ.

"ಅಯ್ಯನೋರೇ, ಅವರೆಲ್ಲ ಕಿಟಕಿ ಸರಳು ಬಗ್ಗಿಸಿ ಒಳಗೆ ಬರ್ತಿದ್ದಾರೆ, ನೀವು ಹೊರಗೆ ಬಂದು ಬಿಡಿ"

ಹುರ್ರೇ.... ಮುತ್ತಣ್ಣ ಒಳಗಿದ್ದಾನೆ! ಎದುರು ಬಾಗಿಲಿಗೆ ಬೀಗ ಬಡಿದು ಒಳಗೆ ಕುಳಿತ ಹೇಡಿ! ದೊಣ್ಣೆ ಏರಿಸಿದವರ ಅಟ್ಟಹಾಸ. ಮುತ್ತಣ್ಣ ಹಿಂಬಾಗಿಲಿನಿಂದ ತಪ್ಪಿಸಿಕೊಳ್ಳದಂತೆ ಒಬ್ಬಾತ ಅಲ್ಲಿ ಪಹರೆ ನಿಂತ. ವಾಮನ ಮತ್ತು ಇತರರು ಸರಳನ್ನು ಸಂಪೂರ್ಣ ಬಗ್ಗಿಸಿ ಒಳಹೋಗಲು ಯತ್ನಿಸುತ್ತಿದ್ದಂತೆ ಮನೆ ಹಿಂಭಾಗದಿಂದ ಕೇಳಿಸಿತು ಬೊಬ್ಬೆ. ನಾಯಿಗಳ ಬೊಗಳುವಿಕೆ!

"ಮುತ್ತಣ್ಣ ಓಡಿಹೋಗ್ತಾ ಇದ್ದಾನೆ, ಇತ್ತ ಬನ್ನಿ" ಸುಂದರರಾಜನ ಧ್ವನಿಗೆ ಎಲ್ಲರ ದೊಣ್ಣೆಗಳು ಹೆಗಲೇರಿದವು. ಮನೆಯೊಳಗೆ ಹೋಗುವವರು ಸ್ವರ ಬಂದ ದಿಕ್ಕಿನತ್ತ ಟಾರ್ಚಿನ ಬೆಳಕು ಹಾಯಿಸುತ್ತ ಓಡಿದರು. ಹಿಂದಿನ ಬಾಗಿಲಿನಲ್ಲಿ ನಿಂತವನನ್ನು ಕೆಡವಿ ತಪ್ಪಿಸಿಕೊಂಡು ಓಡಿದ್ದಾನೆ ಮುತ್ತಣ್ಣ. ಅಬ್ಬಬ್ಬ, ತಾವು ಹತ್ತಾರು ಮಂದಿ ಇರುವಾಗಲೂ ತಮ್ಮಿಂದ ತಪ್ಪಿಸಿಕೊಂಡಿದೆ ಆ ನರಪ್ರಾಣಿ. ಹಿಡಿದೇ ಬಿಡುವ ಛಲ. ಚಂದ್ರನ ನಸುಬೆಳಕು, ಟಾರ್ಚಿನ ಪ್ರಕಾಶದಲ್ಲಿ ಓಡಿದವನನ್ನು ಹಿಡಿಯುವುದು ಸುಲಭವಲ್ಲ.

"ಕೂದಲೆಳೆಯ ಅಂತರದಲ್ಲಿ ಅವನು ನಮ್ಮಿಂದ ತಪ್ಪಿಸಿಕೊಂಡ ಡಾಕ್ಟರೇ" ಉದ್ವೇಗದಿಂದ ಅಂದ ಸುಂದರರಾಜ. "ಹೇಡಿ, ಎಲ್ಲೋ ತಲೆ ಮರೆಯಿಸಿ ಕೊಂಡಿದ್ದಾನೆ. ಅವನ ಇಬ್ಬರು ಗಂಡು ಮಕ್ಕಳು, 'ನಮಗೇನೂ ತಿಳಿಯದು, ಅಪ್ಪ ಮನೆಗೆ ಬರದಿದ್ದರೆ ನಿಮ್ಮ ವಿರುದ್ಧ ನಾವು ಪೋಲೀಸು ಕಂಪ್ಲೇಂಟ್ ಕೊಡ್ತೇವೆ' ಎಂದಿದ್ದಾರೆ. ಒಟ್ಟು ಫಜೀತಿ. ಮುತ್ತಣ್ಣ ಹಣ ಇದ್ದವನು,

ಪೋಲೀಸರ ರಕ್ಷಣೆಯಲ್ಲಿ ಇರಬಲ್ಲ. ಆದರೆ ವಾಮನನಿಗೆ ಅದು ಕನಸಿನ ಮಾತು. ಮನೆ ಸುಟ್ಟರೂ ಸುಮ್ಮನಿರಬೇಕು"

ಬೆಂಕಿಯಿಟ್ಟಿದ್ದು ಮುತ್ತಣ್ಣನ ಕೆಲಸ. 'ನನ್ನ ಗದ್ದೆ, ತೋಟ ದೊರೆಯುವ ತನಕ ನಿನ್ನನ್ನು ಚೆಂಡಿನಂತೆ ಕುಣಿಸುತ್ತೇನೆ' ಎಂದಿದ್ದಾನೆ. ಬಡವನ ರಕ್ತ ಹೀರುವ ಜಿಗಣೆ! ಹಳ್ಳಿಯಲ್ಲಿ ಬೇರೆ ಅನೇಕ ಭೂಮಾಲೀಕರು ಇದ್ದಾರೆ. ಆದರೆ ಯಾರೂ ಮುತ್ತಣ್ಣನಂತಿಲ್ಲ. ಕಾನೂನು ರೀತಿಯಂತೆ ತಮ್ಮ ಭೂಮಿಯನ್ನು ಗೇಣಿದಾರರಿಗೆ ಒಪ್ಪಿಸಿದ ನತದೃಷ್ಟರು.

"ಮುತ್ತಣ್ಣನಿಗೆ ತಿಂದು ತೇಗುವಷ್ಟಿದೆ. ಎರಡು ಗಂಡು ಮಕ್ಕಳಿಗೆ ತಲಾ ಏಳೆಂಟು ಎಕರೆ ಹಂಚಿಕೊಡಬಹುದು. ಆದರೂ ಬಡವನ ತುಂಡುಭೂಮಿಗೆ ಕುರೆ ಆಸೆ ! ಪಾಪ, ವಾಮನ ತನ್ನ ಸಂಸಾರವನ್ನು ಹೇಗೆ ಸಾಕ್ತಾನೆ, ಡಾಕ್ಟರೇ?"

ಮನೆ ಕಳೆದುಕೊಂಡ ವಾಮನ ಹೇಗೆ ಬದುಕುತ್ತಾನೆ? ಇದು ಊಹೆಗೆ ನಿಲುಕದ ವಿಷಯ. ಗದ್ದೆ ಉತ್ಪನ್ನವಿಲ್ಲ, ಹೆಂಡತಿ ಬಸುರಿ, ವೃದ್ಧೆ ತಾಯಿ, ಭೂಮಿಯನ್ನು ಮುತ್ತಣ್ಣನಿಗೆ ಹಿಂದಿರುಗಿಸಲು ಈವರೆಗೆ ಉಳಿಸಿಕೊಂಡು ಬಂದ ಧೈರ್ಯ, ಛಲಕ್ಕೆ ಸವಾಲು.

"ನಮ್ಮ ಯುವಕ ಮಂಡಳಿಯಿಂದ ಚಂದಾ ಸಂಗ್ರಹಿಸಿ ಅವನಿಗೆ ಮನೆ ಕಟ್ಟಿಸೋಣ ಎಂದುಕೊಂಡಿದ್ದೇವೆ. ಕಿಂಚಿತ್ ಸಹಾಯವಾದೀತು. ಅಂದ್ಹಾಗೆ, ನೀವು ಮನೆ ಕೆಲಸಕ್ಕೆ ಜನ ಬೇಕು ಎಂದಿದ್ದಿರಲ್ಲ, ಡಾಕ್ಟರೇ?"

"ಯಾರಿದ್ದಾರೆ?"

"ವಾಮನನ ಮಗಳು, ಹನ್ನೊಂದರ ಕಿಶೋರಿಯಿದ್ದಾಳೆ. ಲೀಲಾ ಅಂತ ಹೆಸರು. ಕೆಲಸ ಬೊಗಸೆ ತಿಳಿದಿರುವ ಹುಡುಗಿ. ನಿಮಗೂ ಉಪಕಾರ, ಅವನಿಗೂ ಸಹಾಯ."

ಕೆಲಸಕ್ಕೆ ಜನರಿಲ್ಲದೆ ಅಹಲ್ಯ ಈ ದಿನಗಳಲ್ಲಿ ಸೋತುಹೋಗಿದ್ದಳು. ಸುಂದರರಾಜ ಕೇಳಿದಾಕ್ಷಣ ಒಪ್ಪಿಕೊಂಡ. "ತಿಂಗಳಿಗೆ ಎಪ್ಪತ್ತೈದು ಕೊಡ್ತೇನೆ, ನಾಳೆಯಿಂದ ಬರಲಿ" ಎನ್ನುತ್ತ ಕಿಸೆಯಿಂದ ಐವತ್ತು ರೂಪಾಯಿ ತೆಗೆದು ಮೇಜಿನ ಮೇಲಿರಿಸಿದ. "ವಾಮನನ ಮನೆಗಾಗಿ ಯುವಕ ಮಂಡಳಿಯಿಂದ ಸಂಗ್ರಹಿಸುವ ಚಂದಾ ಹಣಕ್ಕೆ ನನ್ನ ಮೊದಲ ಕಾಣಿಕೆ !"

ಬೆರಗಾಗಿ ಹೋದ ಸುಂದರರಾಜ. 'ನೀವು ತುಂಬಾ ಧಾರಾಳಿಗಳು' ಎಂದು ಹೇಳಲಿರುವ ಮಾತುಗಳು ಅವನಲ್ಲೇ ಉಳಿದವು. ನಿರೀಕ್ಷೆ ಇಲ್ಲದೆ ದೊರೆತ ಪ್ರಥಮ ಕಾಣಿಕೆ.

ಅನಂತರ ಸ್ವಲ್ಪ ಹೊತ್ತು ಇಬ್ಬರಲ್ಲಿ ರಾತ್ರಿ ಶಾಲೆಯ ವಿಷಯದ ಚರ್ಚೆ ನಡೆಯಿತು. ಅಂಚೆ ಕಛೇರಿ ಹತ್ತಿರ ಅರಳೀಕಟ್ಟೆಯ ಮೇಲೆ ಶಾಲೆ ನಡೆಸಲು ಸುಂದರರಾಜ ಸೂಚಿಸಿದ್ದನ್ನು ಅವಿನಾಶ ಅಲ್ಲಗಳೆದ.

"ಈಗಿರುವ ಪ್ರಾಥಮಿಕ ಶಾಲೆಯ ಹೊರ ಆವರಣದಲ್ಲಿ ರಾತ್ರಿ ಶಾಲೆ ಪ್ರಾರಂಭವಾಗಲಿ. ಜನರಿಗೆ ತಾವೂ ಶಾಲೆಗೆ ಹೋಗುವ ಕಲ್ಪನೆ ಬರಬೇಕು"

ನಿಜವೆನ್ನಿಸಿತು ಸುಂದರರಾಜನಿಗೆ. ಈಗಾಗಲೇ ಇಪ್ಪತ್ತು ಗಂಡಸರು ತಮ್ಮ ಹೆಸರನ್ನು ನೊಂದಾಯಿಸಿದ್ದಾರೆ. ಅವರ ಜೊತೆ ಇಬ್ಬರು ಹೆಂಗಸರು. ಶಾಲೆಗೆ ಹೆಂಗಸರು ಸೇರುವ ವಿಷಯದಲ್ಲಿ ಮತ್ತೆ ಅವಿನಾಶನ ವಿರೋಧ ವ್ಯಕ್ತವಾಯಿತು.

"ರಾತ್ರಿ, ಹೆಂಗಸರು ಗಂಡಸರು ಜೊತೆಯಲ್ಲೇ ಪಾಠ ಕಲಿಯುವುದು ಒಳಿತಲ್ಲ. ಹೆಂಗಸರ ಅಕ್ಷರಾಭ್ಯಾಸ ಮಹಿಳಾ ಸಂಘದಲ್ಲಿ ಬೆಳಗಿನ ಹೊತ್ತು ನಡೆಯಲಿ. ನಮ್ಮ ತರಬೇತಿಗೆ ಗಂಡಸರು ಸಾಕು."

"ನಿಮ್ಮ ಸಲಹೆ ಒಪ್ಪತಕ್ಕದ್ದು. ಆದರೆ ಹೊರವಲಯದಲ್ಲಿ, ಕೃಷಿಕ್ಷೇತ್ರದಲ್ಲಿ ಜೊತೆಯಾಗಿ ದುಡಿಯುವ ಗಂಡು–ಹೆಣ್ಣು ಜೊತೆಯಾಗಿ ಪಾಠ ಕಲಿತರೆ ತಪ್ಪೇನಿಲ್ಲ."

"ಹಾಗಾದರೆ ವಾರಕ್ಕೆ ಒಂದು ದಿನ ಅಥವಾ ಎರಡು ದಿನ ಹೆಂಗಸರಿಗೆ ಪಾಠ ಹೇಳಿ ಕೊಡಿ."

"ವಾರಕ್ಕೆ ಒಂದೋ–ಎರಡೋ ಪಾಠ ಎಲ್ಲಿಗೆ ಸಾಕು, ಡಾಕ್ಟರೇ. ಇಂದಿನ ದಿನಗಳಲ್ಲಿ ವಿದ್ಯೆ ಮುಖ್ಯ. ಅದಿಲ್ಲದೆ ಸುಸಂಸ್ಕೃತರಾಗಿ ಬಾಳಲು ಸಾಧ್ಯವೇ ಹೇಳಿ? ಅಕ್ಷರಾಭ್ಯಾಸ ಮಾತ್ರವಲ್ಲ, ಮಕ್ಕಳ ಪಾಲನೆ, ಆರೋಗ್ಯ ರಕ್ಷಣೆ, ಆಹಾರದ ಮಹತ್ವ, ಹಳ್ಳಿಯ ಏಳ್ಗೆ, ಆಧುನಿಕ ಕೃಷಿ ಇತ್ಯಾದಿ ಎಲ್ಲಾ ವಿಷಯ ಹೇಳಿ ಕೊಡಬೇಕು ಎಂಬ ಯೋಜನೆ ಹಾಕಿದ್ದೇವೆ."

"ಭೇಷ್!" ಕಣ್ಣರಳಿಸಿದ ಅವಿನಾಶ, "ನಡೀಲಿ ನಿಮ್ಮ ಯೋಜನೆ. ಶಾಲೆ ಪ್ರಾರಂಭದ ಶುಭ ಮುಹೂರ್ತ ಯಾವಾಗ?"

"ಇನ್ನೇನು ಕೆಲವೇ ದಿನಗಳು. ಮಾಸ್ತರರನ್ನು ಹುಡುಕಬೇಕು. ಆ ಕೆಲಸ ನನಗಿರಲಿ. ವಾಮನನ ಮನೆಗೆ ಚಂದಾ ಸಂಗ್ರಹಿಸುವಾಗ ಶಾಲೆಗೂ ಸ್ವಲ್ಪ ಸಂಗ್ರಹಿಸಿದರೆ ಒಳಿತು" ಸುಂದರರಾಜ ಏಳುತ್ತ ಹೇಳಿದ, "ನಾನಿನ್ನು ಬರ್ತೇನೆ. ಮುತ್ತಣ್ಣ ಸಿಗುತ್ತಾನೋ ನೋಡಬೇಕು. ಇವತ್ತು ರೋಗಿಗಳು ಹನುಮಂತನ ಬಾಲದಂತೆ ಬೆಳೆದು ನಿಂತಿದ್ದಾರೆ."

ಹೊರಗೆ ರೋಗಿಗಳು ತುಂಬಿ ಹೋಗಿದ್ದಾರೆ. ಈಗೀತ ಆ ಕೋಣೆ ಕುಳಿತುಕೊಳ್ಳಲು ಇಕ್ಕಟ್ಟಾಗುತ್ತಿದೆ. ಇನ್ನೊಂದು ಕೋಣೆ ಹೆಚ್ಚಿದರೆ ಅನುಕೂಲ. ಬೇರೆ ದೊಡ್ಡ ಮನೆ ಸಿಕ್ಕಿದರೆ ದವಾಖಾನೆಯನ್ನು ಅಲ್ಲಿಗೆ ವರ್ಗಾಯಿಸ ಬಹುದಿತ್ತು. ಔಷಧಿ ಬೆರೆಸಿಕೊಡಲು ಒಬ್ಬ ನುರಿತ ಹುಡುಗ ಬೇಕಿತ್ತು. ಗೋವಿಂದ ಅಭ್ಯಸಿಸುತ್ತಿದ್ದರೂ ಇನ್ನೂ ಪಳಗಿಲ್ಲ ಅವನ ಕೈ. ಅದಕ್ಕಿಂತ ಮಿಗಿಲಾಗಿ ದಿನೇ ದಿನೇ ಸೋಮಾರಿಯಾಗುತ್ತಿದ್ದಾನೆ. ಕೋಣೆಯನ್ನು ಗುಡಿಸಿ ಒರಸುವುದಕ್ಕೂ ಬೇಸರ. ರೋಗಿಗಳಿಗಾಗಿ ಕುಡಿಯುವ ನೀರು ತುಂಬಿಡಲೂ

ಮರೆವು. ಆಗಾಗ ಅವಿನಾಶ ಗದರಿಸಿಕೊಳ್ಳಬೇಕು. ಮಧ್ಯಾಹ್ನ ಗಡಿಯಾರದ ಮುಳ್ಳು ಒಂದನ್ನು ಸಮೀಪಿಸುತ್ತಿದ್ದಂತೆ ಅವನ ಚಡಪಡಿಕೆ. ಅವಿನಾಶನಿಗಿಂತ ಮೊದಲೇ ಅವನಿಗೆ ಅವಸರ, ರೋಗಿಗಳ ಮೇಲೆ ಕೋಪ.

"ಈ ಜನಗಳಿಗೆ ಶಿಸ್ತು, ನಿಯಮವಿಲ್ಲ. ಮಧ್ಯಾಹ್ನ ಒಂದು ಗಂಟೆ ಇರಲಿ, ಮೂರು ಗಂಟೆ ಇರಲಿ ಬಾಟಲಿ ಹಿಡಿದು ಹಾಜರು ಇಲ್ಲಿ. ನಮಗೂ ಹೊಟ್ಟೆ ಇರುವುದು ತಿಳಿಯದೇ?" ಎನ್ನುತ್ತಾನೆ. ವೈದ್ಯನಿಗಿಂತ ಈ ಪೋರನನ್ನು ನೋಡಿದರೆ ಕೆಲವರಿಗೆ ಹೆದರಿಕೆ.

ಒಂದು ದಿನ ರೋಗಿಗಳನ್ನು ಪರೀಕ್ಷಿಸುತ್ತಿರುವ ಸಮಯದಲ್ಲಿ "ಒಂದು ಗ್ಲಾಸು ನೀರು ಕುಡಿಯಲು ತಾ" ಎಂದಿದ್ದ ಗೋವಿಂದನಿಗೆ. ಆದರೆ ಅವನ ಮಾತು ಕೇಳಿಸಿತೋ ಇಲ್ಲವೋ, ನೀರಿನ ಗ್ಲಾಸು ಮೇಜಿನ ಮೇಲೆ ಬರಲಿಲ್ಲ.

ಬಡತನದಲ್ಲಿ ಬೆಳೆದ ಹುಡುಗ ಪುಷ್ಟಿಯಾದ ಆಹಾರ, ಹಾಲು, ಬಿಟ್ಟಿಯಾಗಿ ದೊರೆತ ಟಾನಿಕ್ಕು, ಮಾತ್ರೆ ಸೇವಿಸಿ ಶರೀರದ ಎಲುಬಿನ ಗೂಡುಗಳ ಮೇಲೆ ಮಾಂಸದ ಮುದ್ದೆಗಳನ್ನು ಬೆಳೆಸಿಕೊಂಡಿದ್ದಾನೆ. ಚಡ್ಡಿಗುಂಡಿಗಳು ಬಿರಿದುಹೋಗುವಷ್ಟು ಬಿಗಿಯಾಗಿವೆ. ಕಣ್ಣುಗಳಲ್ಲಿ ಮೊದಲಿನ ದೈನ್ಯತೆಯ ಬದಲು ಗರ್ವ, ಹೆಮ್ಮೆ, ತಿರಸ್ಕಾರದ ಛಾಯೆ ! 'ನೀರು ತಾ' ಎಂದಾಕ್ಷಣ ತರಲು ಅವನು ಮೊದಲಿನ ಹುಡುಗನಲ್ಲ. ತೂಕ ಹೆಚ್ಚಿದ ಶರೀರಕ್ಕೆ ಕೆಲಸ ನಿಧಾನ.

"ನಾನು ಹೇಳಿದ್ದು ಕೇಳಿಸಲಿಲ್ಲವೆ?" ಏರಿಸಿದ ದನಿಯಲ್ಲಿ ಕೂಗಿದ ಅವಿನಾಶ.

ಅದೇ ಸಮಯದಲ್ಲಿ ಒಳಗೆ ಕಾಲಿರಿಸಿದ ಮೈದುಕುಂಞ. ಕೈಯಲ್ಲಿ ಅದೇ ಹಿಂದಿನ ಕಾಹಿಲೆ ಮಗು. ಬಟ್ಟೆಯಲ್ಲಿ ಸುತ್ತಿ ತಂದಿದ್ದಾನೆ. ಹತ್ತಿಯಂತೆ ಮೆತ್ತಗಾಗಿ ಬಿಳಿಚಿಹೋದ ಆ ದೇಹವನ್ನು ಪರೀಕ್ಷಾ ಮಂಚದ ಮೇಲೆ ಮಲಗಿಸಿದಾಗ ಅಲ್ಲಿ ಕಣ್ಣುಗಳ ಹೊರತಾಗಿ ಇನ್ನೇನೂ ಕಾಣಲಿಲ್ಲ. ಮೂಗಿನ ಹೊರಳೆಗಳ ಅಲುಗಾಟ ಕಂಡೂ ಕಾಣದಂತಿದೆ.

ಅವಿನಾಶ ತಂದೆಯನ್ನೂ, ಮಗುವನ್ನೂ ನೋಡಿದ. ಮಗುವಿಗಿಂತ ತಂದೆಯೇ ಹೆಚ್ಚು ಬಿಳಿಚಿಕೊಂಡಿದ್ದಾನೆ. ಪಶ್ಚಾತ್ತಾಪದ ಕಣ್ಣೀರು ಮಗುವಿನ ಕೊನೆ ಸ್ಥಿತಿಯಲ್ಲಿ ಉಕ್ಕಿ ಬಂದ ಪಿತೃಪ್ರೇಮದ ಕಳಕಳಿಯನ್ನೂ ಮೀರಿಸಿದೆ. ಈಗ ಯಾವ ಔಷಧಿ ಮಾಡಲಿ? ತನ್ನಲ್ಲೇ ಯೋಚಿಸುತ್ತ ಅವಿನಾಶ ಮಗುವಿನ ಮೈಮೇಲಿರುವ ಬಟ್ಟೆಯನ್ನು ಸರಿಸಿದವನೆ ಹೌಹಾರಿಹೋದ ! ಇದೇನು? ಎಳೆ ಮಗುವಿನ ಬಲತೋಳು, ಬಲತೊಡೆಯ ಮೇಲೆ ಸುಟ್ಟಗಾಯದ ಗುರುತು. ಎಡಗಾಲಲ್ಲಿ ಒಂದು ಕಬ್ಬಿಣದ ಬಳೆ, ಕುತ್ತಿಗೆಯಲ್ಲಿ ಕಪ್ಪುದಾರ. ಪ್ರಶ್ನಾರ್ಥಕವಾಗಿ ನೋಡಿದ ಮೈದುಕುಂಞಯನ್ನು. ಅವನು ಆ ನೋಟ ಎದುರಿಸಲಾರದೆ ಹಣೆಗೆ ಕೈ ಹಚ್ಚಿ ಮೌನವಾಗಿ ಬಿಕ್ಕಳಿಸಿದ!

ಪೋಲಿಯೋ ಬಂದ ಮಗುವಿಗೆ ಚಿಕಿತ್ಸೆ ಮಾಡಿಸದೆ ದೃಷ್ಟಿ ತಗುಲಿದೆಯೆಂದು ಮಾಟ–ಮಂತ್ರ–ತಾಯಿತಗಳಿಗಾಗಿ ಹಣ ಸುರಿದಿದ್ದಾನೆ ನೀರಿನಂತೆ. ಪಳ್ಳಿಗೂ ಎಷ್ಟು ಹಣ ಕೊಟ್ಟಿದ್ದಾನೋ ಲೆಕ್ಕವಿಲ್ಲ. ಪರಿಸ್ಥಿತಿ ಕೈಮೀರಿ ಉಸಿರೆಳೆಯುವ ಸ್ಥಿತಿಯಲ್ಲಿ ಹೊತ್ತು ತಂದಿದ್ದಾನೆ. ಇನ್ನೀಗ ಹೆಚ್ಚಾದರೆ ಈ ದಿನ ಸಾಯಂಕಾಲ ಮಗುವಿಗೆ ಈ ಲೋಕದ ಋಣ ಮುಗಿಯುವುದು ಖಚಿತ. ಮೊದಲೇ ಚಿಕಿತ್ಸೆ ಮಾಡಿದ್ದರೆ ಮಗು ಈ ಸ್ಥಿತಿಗೆ ಬರುತ್ತಿರಲಿಲ್ಲ. ಅಯ್ಯೋ ದೇವರೇ! ಜೀವಂತ ದಹನ ಮಾಡಿದಿರಲಪ್ಪ....

ಅವಿನಾಶನಲ್ಲಿ ಹಿಂದೆಂದೂ ಕಾಣದ ಕನಿಕರ. ಅನುಕಂಪದ ಭಾವ ತಾನಾಗಿಯೇ ಉಕ್ಕಿತು. ಕುತ್ತಿಗೆಯವರೆಗೂ ಬಟ್ಟೆ ಮುಚ್ಚಿ ಮೌನವಾಗಿ ಕುರ್ಚಿಯಲ್ಲಿ ಕುಳಿತುಬಿಟ್ಟ. ಮೈದುಕುಂಞ ಹತಾಶೆಯಿಂದ ನೋಡಿದ, ಅವಿನಾಶನನ್ನು ಮತ್ತು ಮಗುವನ್ನು. ಇನ್ನೂ ಆಸೆ!

"ಕೈಮೀರಿಹೋದ ಕೇಸು. ನಾನೇನೂ ಮಾಡಲಾರೆ. ಇನ್ನಾದರೂ ನಿನ್ನ ಉಳಿದ ಮಕ್ಕಳನ್ನು ಚೆನ್ನಾಗಿ ನೋಡಿಕೋ. ಈ ಮಾಟ, ಮಂತ್ರ ಅಂತ ಅಲೀಬೇಡ. ಅಂದ್ಹಾಗೆ ಅವರಿಗೆಲ್ಲ ಪೋಲಿಯೊ ಡ್ರಾಪ್ಸ್ ಕೊಡಿಸಿದ್ದಿಯ?"

ಅದರ ಹೆಸರನ್ನೂ ಅರಿಯದವ ಪಿಳಿಪಿಳಿ ಕಣ್ಣುಬಿಟ್ಟ.

"ಕೆಲವೇ ದಿನಗಳಲ್ಲಿ ನಾನು ತರಿಸ್ತೇನೆ. ನಿನಗೆ ಎಷ್ಟು ಮಕ್ಕಳು? ಮೂವರಿದ್ದಾರೆ ಅಲ್ಲವೆ? ಅವರಿಗೆ ಕೊಡಿಸೋಣ, ಈಗ ಹೋಗು."

ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತ ನಿಟ್ಟುಸಿರು ತೆಗೆದು ಮರೆತಿದ್ದ ಬಾಯಾರಿಕೆ ನೆನಪಾಗಿ ಮೇಜಿನತ್ತ ದೃಷ್ಟಿ ಚೆಲ್ಲಿದರೆ ಅಲ್ಲಿ ನೀರಿನ ಗ್ಲಾಸಿರಲಿಲ್ಲ.

"ಗೋವಿಂದಾ..." ಅಬ್ಬರಿಸಿದ ಜೋರಾಗಿ. ಪರದೆಯಾಚೆ ಇಣುಕಿತು ಮುಖ. "ನೀರು ತಾ ಅಂದದ್ದು ಕೇಳಿಸಲಿಲ್ಲವೇ?"

ಗೋವಿಂದ ಅರ್ಧನಿಮಿಷದಲ್ಲಿ ನೀರು ತುಂಬಿದ ಗ್ಲಾಸನ್ನು ತಂದಿರಿಸಿದ ಮೇಜಿನ ಮೇಲೆ. ಗ್ಲಾಸಿನ ಬದಿಯ ಕೊಳಕು ಅಸಹ್ಯ ತರಿಸಿತು, "ಬೇಜಾವಾಬ್ದಾರಿ ಹುಡುಗ, ನಿನ್ನ ಸಿಂಬಳವನ್ನೂ ಮೆತ್ತಿ ತಂದಿದ್ದಿಯಾ. ಈ ನೀರನ್ನು ಚೆಲ್ಲಿ ಬೇರೆ ತಾ."

ಗೋವಿಂದ ಕಣ್ಣು ಕೆಕ್ಕರಿಸುತ್ತ ಗ್ಲಾಸನ್ನು ತೆಗೆದುಕೊಂಡು ಹೋದ. ಆ ಕಣ್ಣುಗಳಲ್ಲಿ ಹೊಗೆಯಾಡುವ ಕೋಪದ ಮೂಲ ಯಾರು? ಮತ್ತೊಮ್ಮೆ ಕುಡಿಯುವ ನೀರು ಬಂದಾಗ ಅವನಿಗೆ ಬೇಕೆನಿಸಲಿಲ್ಲ. ಮೈದುಕುಂಞ ಮಗುವಿನೊಂದಿಗೆ ಹೋಗುವುದನ್ನು ನೋಡುತ್ತ ತಟಸ್ಥನಾಗಿ ಕುಳಿತುಬಿಟ್ಟ.

೫

ಮಧ್ಯಾಹ್ನ ಭೋಜನದ ನಂತರ ಗಳಿಗೆ ಹೊತ್ತು ವಿರಮಿಸಬೇಕು ಎನ್ನುವಾಗ ಆಗಮಿಸಿದರು ಜನಾರ್ದನರಾಯರು. ಬಿಸಿಲಿನ ಝಳಕ್ಕೆ ಕೆಂಪಾದ ಮುಖ, ಕೆಂಪಡರಿದ ಕಣ್ಣುಗಳು. ಎದೆನೋವಿನಿಂದ ನರಳುತ್ತ ಒಂದೂವರೆ ಮೈಲು ಬಿಸಿಲಿನಲ್ಲಿಯೇ ಓಡಿಬಂದಿದ್ದಾರೆ.

ಅವರನ್ನು ಪರೀಕ್ಷಿಸಿದಾಗ ನಾಡಿಬಡಿತ, ರಕ್ತದೊತ್ತಡದಲ್ಲಿ ಏರುಪೇರು ಆದದ್ದು ಗಮನಕ್ಕೆ ಬಂದಿತು. "ಈ ಬಿಸಿಲಿನಲ್ಲಿ ಯಾಕೆ ಬಂದಿರಿ? ಹೇಳಿ ಕಳುಹಿಸಿದ್ದರೆ ನಾನೇ ಬರ್ತಾ ಇದ್ದೆನಲ್ಲ. ಸ್ವಲ್ಪ ಹೊತ್ತು ಚಾಪೆಯ ಮೇಲೆ ಮಲಗಿ. ಅಪಲ್ಯ, ಒಂದು ಗ್ಲಾಸು ನೀರು ತಾ, ಹಾಗೆ ಸ್ವಲ್ಪ ಪಾನಕ ಮಾಡಿ ಇಲ್ಲಿ ತಂದು ಕೊಡು."

ನೀರು ಬಂದಿತು, ಪಾನಕವೂ ಬಂದಿತು. ರಾಯರಿಗೆ ಮಲಗಿದರೂ ಎದೆ ಸಂಕಟ ತಗ್ಗಲಿಲ್ಲ.

"ಎರಡು ದಿನ ಆಯ್ತು ನಿದ್ರೆಯಿಲ್ಲದೇ, ಡಾಕ್ಟರೇ" ಚಾಪೆಯ ಮೇಲೆ ಒರಗುತ್ತ ನರಳಿದರು. "ಒಡಹುಟ್ಟಿದ ನನ್ನ ತಮ್ಮ ನನ್ನ ಬದ್ಧ ವೈರಿ ಆಗ್ತಿದ್ದಾನೆ. ಇವತ್ತು ಪೇಟೆಗೆ ಹೋದಾಗ ಕೇಳಿದ ವಿಷಯದಿಂದ ನನ್ನ ಎದೆ ಒಡೆದು ಹೋಯ್ತು. ಯಾವ ಬಾಯಲ್ಲಿ ಇಂತಹ ಮಾತು ಹೇಳ್ತಾನೋ...?"

"ನಿಮ್ಮ ಆಸ್ತಿ ವ್ಯವಹಾರದ ದೂರು ಅಲ್ಲವೇ?"

"ಅದಾಗಿದ್ದರೆ ನಮಗ್ಯಾಕೆ ತಲೆ ಬಿಸಿ? ಅವನು ಮಾಡ್ತಿರೋ ಅಪಪ್ರಚಾರ ಬೇರೆ. ನಮ್ಮವರೇ ನಮಗೆ ವೈರಿಗಳು, ಡಾಕ್ಟರೇ. ಅವನ ಸಂಸಾರ ಹಾಳಾಗಿ ಹೋಗಬೇಕು ಅಂತ ನಾನು ಮಾಟ ಮಾಡಿಸಿದ್ದೇನಂತೆ. ಇದೇನು ನಂಬುವ ಮಾತೇ ಹೇಳಿ? ಎಲ್ಲರೆದುರೂ ಹೇಳ್ತಾ ಇದ್ದಾನೆ"

ಅವಿನಾಶ ಹೋಹೋ ಎಂದು ನಗಲಾರಂಭಿಸಿದ. "ನಂಬುವ ಮಾತು ಅಲ್ಲವೇ ಅಲ್ಲ, ನಿಮಗ್ಯಾಕೆ ಚಿಂತೆ?"

"ಯಾವ ಬಾಯಲ್ಲಿ ಈ ಮಾತು ಹೇಳಿದ? ನನ್ನೆದುರಿಗೆ ಹೇಳಲಿ, ಹೂಂ ಹಲ್ಲು ಮುರಿದು ಕೈಗೆ ಕೊಡ್ತಿದ್ದೆ. ಮಾಟ ಮಾಡಿಸುವಷ್ಟು ಕೆಳಮಟ್ಟಕ್ಕೆ ಇಳಿದವನೇ ನಾನು? ರಾಜಣ್ಣನಿಗೆ ಮನೆಯಲ್ಲಿ ಏನೇನೋ ತೊಂದರೆ ಬಂದುವಂತೆ. ಸೋಮಶೇಖರ ಶಾಸ್ತ್ರಿಗಳ ಹತ್ತಿರ ಪ್ರಶ್ನೆ ಇಡಿಸಿ ಕೇಳಿದಾಗ ಹತ್ತಿರದ ನೆಂಟರಿಂದ ಮಾಟ ಆಗಿದೆ ಎಂದರಂತೆ. ಸರಿ, ಇವನೊಬ್ಬ ನಂಬಿದ."

"ತಿಳಿವಳಿಕೆ ಇರುವ ರಾಜಣ್ಣ ಇವನ್ನೆಲ್ಲ ನಂಬ್ತಾನೆಯೇ?"

"ತಿಳಿವಳಿಕೆ ಇರುವುದು ಕೇವಲ ಅಕ್ಷರಾಭ್ಯಾಸದಲ್ಲಿ. ಬಾಕಿ ಎಲ್ಲಾ ಶೂನ್ಯ. ಚಿಕ್ಕಂದಿನಿಂದ ಅವನಿಗೆ ಜಾತಕ, ಶಕುನ, ಶಾಸ್ತ್ರ, ಮಾಟಮಂತ್ರಗಳಲ್ಲಿ

ನಂಬಿಕೆ. ನಿಮಗಿನ್ನೂ ಅವನ ಪರಿಚಯ ಆಗಿಲ್ಲ ಅನ್ನಿ. ಹಿಡಿದು ಮುಟ್ಟಿದ್ದಕ್ಕೆಲ್ಲ ಶಕುನ, ಶಾಸ್ತ್ರ ನೋಡ್ತಾ ಇರ್ತಾನೆ. ಬೆಳಗ್ಗೆ ಎದ್ದು ಹಾಗೆ ನಾಯಿ ಮುಖ ನೋಡಬಾರದು, ಒಳ್ಳೆ ಕೆಲಸಕ್ಕೆ ಹೊರಟಾಗ ಬೆಕ್ಕು ಅಡ್ಡ ಹಾಯಬಾರದು, ಮಾತಿನ ಮಧ್ಯೆ ಹಲ್ಲಿ ಲೊಚಗುಡಬಾರದು, ಹೀಗೆ ನೂರೆಂಟು ನಂಬಿಕೆಗಳು. ಇದರಿಂದ ಅವನ ಮನಸ್ಸಿಗೆ ಎಲ್ಲಿದೆ ಸುಖ?... ಯಾವಾಗಲೂ ಹೆದರಿಕೆ, ಸಂಶಯ. ಅವನ ಮದುವೆ ಸಮಯದಲ್ಲಿ...."

ಯೋಚಿಸುತ್ತ ಅಂದರು ರಾಯರು, "ಅಹ್, ಅದಿನ್ನೂ ಮಜವಾಗಿತ್ತು. ನಮ್ಮ ಗಂಡಿನ ದಿಬ್ಬಣ ಹೆಣ್ಣಿನ ಮನೆ ಕಡೆ ಹೊರಟಾಗ ಯಾರದೋ ಶವಯಾತ್ರೆ ನಮಗೆದುರಾಯಿತು. ಆಗ ನೋಡಬೇಕು ರಾಜಣ್ಣನ ಪಾಡು, ಬಾಸಿಂಗ ಬಿಚ್ಚಿ ಹಾಕಿ 'ಇದೇನು ಅಪಶಕುನ? ನನಗೆ ಮದುವೆ ಬೇಡ' ಎಂದು ಪಟ್ಟು ಹಿಡಿದು ಗಲಾಟೆ ಎಬ್ಬಿಸಿದ. ಕೆಲವು ಹಿರಿಯರು 'ಶವ ಯಾತ್ರೆ ನೋಡಿದರೆ ಶುಭ' ಎಂದ ಮೇಲೆ ಹೇಗೋ ಒಪ್ಪಿಕೊಂಡ. ಈಗ ಎಷ್ಟೋ ವರ್ಷ ಆಯ್ತು ಅನ್ನಿ. ಇಂತಹ ಅಂತೆ ಬೊಂತೆ ಸ್ವಭಾವದವನಿಗೆ ನನ್ನ ಮೇಲೆ ಅನುಮಾನ ಬಂದಿದ್ದರೆ ಅಚ್ಚರಿಯೇನಿಲ್ಲ... ಮೂರ್ಖ!"

ರಾಜಣ್ಣನ ನಂಬಿಕೆಗಳನ್ನು ಕೇಳಿ ತಮಾಷೆ ಎನಿಸಿದರೂ ಅದು ಕಟು ಸತ್ಯವಾಗಿತ್ತು. ತನ್ನ ಮಗುವಿಗೆ ಗುಣವಾಗಲಿ ಎಂದು ಎಲ್ಲೆಲ್ಲೋ ಕರೆದೊಯ್ದು ತೊಡೆ-ತೋಳುಗಳಿಗೆ ಕಾಸುಬರೆ ಹಾಕಿಸಿದ ಮೈದುಕುಂಞ ನೆನಪಾದ. ಅವನಾದರೆ ಓದುಬರಹ ಇಲ್ಲದವ. ಆದರೆ ತಿಳಿವಳಿಕೆ, ವಿದ್ಯೆ, ನೌಕರಿ ಇರುವ ರಾಜಣ್ಣನೂ ಮೂಢನಂಬಿಕೆಗೆ ಬಲಿಪಶು! ತನ್ನ ಸಹೋದರನ ಮೇಲೆ ಅನುಮಾನ. ಪಾಪ, ಜನಾರ್ದನರಾಯರು ತಮ್ಮನನ್ನು ದೂರಲಾರದೆ ಆ ನೋವನ್ನು ನುಂಗಿದ್ದಾರೆ. ಅವರಿಗೆ ಅವನೊಡನೆ ಜಗಳಕ್ಕಿಳಿಯುವ ಮನಸ್ಸಾಗಿದೆ. ಆದರೆ ಬುದ್ಧಿಯಿಲ್ಲದವನೊಂದಿಗೆ ಜಗಳವಾಡಿ ತಾವು ಬುದ್ಧಿ ಶೂನ್ಯರಾಗಬಾರದಲ್ಲ!

"ಅಣ್ಣ ತನಗೆ ಮಾಟ ಮಾಡಿಸಿದ್ದಾನೆ ಎಂದು ಮನಃಶಾಂತಿ ಕೆಡಿಸಿಕೊಳ್ಳಲಿ, ನನಗೇನಂತೆ. ಆದರೆ ಡಾಕ್ಟರೇ, ನೀವು ಒಮ್ಮೆ ಬುದ್ಧಿ ಹೇಳ್ತೀರಾ?"

ಅವಿನಾಶನಿಗೆ ಕೂಡಲೆ ರಾಜಣ್ಣನನ್ನು ನೋಡಿ ಬರುವ ಇಚ್ಛೆಯಾಯಿತು. ಅವನು ರಾಯರ ಎದೆನೋವಿಗೆ ಔಷಧಿ ಕೊಟ್ಟು ತನ್ನ ಮೋಟಾರ್ ಬೈಕ್‌ನಲ್ಲಿ ಅವರನ್ನು ಕರೆದೊಯ್ದು ಅವರ ಮನೆ ತಲುಪಿಸಿದ.

"ಡಾಕ್ಟರೇ..." ಅಂಗಲಾಚಿದರು ಆ ಹಿರಿಯರು. "ಅವನಿಗೆ ಬುದ್ಧಿ ಹೇಳಿ ತಿದ್ದುವುದು ಕಷ್ಟ. ಆದರೆ ನಾನು ನಿಮ್ಮ ಹತ್ತಿರ ದೂರಿದ್ದೇನೆ ಅಂತ ಅವನಿಗೆ ಹೇಳಬೇಡಿ !"

ತಮ್ಮನಿಗೆ ಹೆದರುವ ಅಣ್ಣ ! ನಗುತ್ತ ಅಲ್ಲಿಂದ ರಾಜಣ್ಣನ ಮನೆಯತ್ತ ಹೊರಳಿದಾಗ ಮೊದಲು ಕಾಣಿಸಿದ್ದು ಬೆಟ್ಟದ ನೆತ್ತಿಯ ಮೇಲೆ ಹಾರುವ

ಕೆಂಪು ಬಾವುಟಗಳು. ಅರೆ, ಇದೇನು? ಯಾರು ಹೊಸದಾಗಿ ತಂದು ನೆಟ್ಟಿದ್ದಾರೆ? ಬೆಟ್ಟ ಏರುವವರೆಲ್ಲ ತೇನಸಿಂಗ್‌ನಂತೆ ತಮ್ಮ ನೆನಪಿಗಾಗಿ ಬಾವುಟ ಊರಿ ಬರುತ್ತಿದ್ದಾರೆಯೇ? ದಿನೇದಿನೇ ಜನರನ್ನು ಆಕರ್ಷಿಸುವ ಬೆಟ್ಟ, ಓಹ್, ಎಂತಹ ಲವಲವಿಕೆ ತುಂಬಿದೆ ! ತನಗೆ ಇನ್ನೂ ಅಲ್ಲಿಗೆ ಹೋಗಲಾಗಲೇ ಇಲ್ಲ.

ದಾರಿಯಲ್ಲಿ ಎತ್ತಿನಗಾಡಿ ಹೊಡೆದುಕೊಂಡು ಹೋಗುವವನೊಬ್ಬ ಎದುರಾದ. ಬೈಕ್ ನಿಲ್ಲಿಸಿ ಕೇಳಿದ, "ಹೋ, ಅದೇನು ಅಲ್ಲಿ ಕೆಂಪು ಪತಾಕೆ?"

ಎತ್ತುಗಳ ಮೂಗುದಾರ ಹಿಡಿದೆಳೆದು ಗಾಡಿಯುವನು ಕುಳಿತಲ್ಲಿಂದಲೇ ಹೊರಗೆ ಬಗ್ಗಿದ. ಪ್ರಶ್ನೆ ಕೇಳಿದವನು ಅವಿನಾಶನೆಂದು ತಿಳಿದು ತಬ್ಬಿಬ್ಬಾದರೂ ವಿನಯದಿಂದ ಹಲ್ಕಿರಿದು,

"ಅಯ್ಯನೋರಿಗೆ ತಿಳಿದಿಲ್ಲವೇ? ವಿಗ್ರಹದೇವತೆ ಮೊನ್ನೆ ಗುಡ್ಡದ ಬೈರಾಗಿಯ ಕನಸಿನಲ್ಲಿ ಕಾಣಿಸಿ 'ನನಗೆ ರಕ್ಷಣೆ ಕೊಟ್ಟಿಲ್ಲ. ಇನ್ಮೇಲೆ ಎರಡು ಹೊತ್ತು ಪೂಜೆ ಮಾಡಿಸು' ಎಂದಿದ್ದಾಳಂತೆ. ನಿನ್ನೆ ಬೆಳಗ್ಗೆ, ಸಾಯಂಕಾಲ ಎರಡೂ ಹೊತ್ತು ಪೂಜೆಯಾಯಿತು. ಸುತ್ತಲೂ ನೆಟ್ಟ ಕೆಂಪು ಪತಾಕೆ ವಿಗ್ರಹದ ರಕ್ಷಣಾಸ್ಥಾನ. ಎಲ್ಲಾ ದೇವರ ಮಹಿಮೆ ಅನ್ನಿ!"

ಗಾಡಿ ಎತ್ತುಗಳ ಕೊರಳ ಗಂಟೆ ಘಲಘಲಿಸಿದವು. ಬೈಕ್ ಗುಡುಗುಡು ಎಂದಿತು. ವಿಗ್ರಹಕ್ಕೆ ಎರಡು ಹೊತ್ತು ಪೂಜೆ ! ಅಬ್ಬಬ್ಬ, ಬೈರಾಗಿ ನಿಜವಾಗಿಯೂ ಬುದ್ಧಿವಂತ.

ರಾಜಣ್ಣನ ಮನೆ ಎದುರು ಬೈಕ್ ನಿಲ್ಲಿಸಿದಾಗ ಮಧ್ಯಾಹ್ನ ಮೂರು ಗಂಟೆ. ವೈಶಾಖಮಾಸದ ಬಿಸಿಲು ಪ್ರಖರವಾಗಿದ್ದು ಅಡಿಕೆ ತೋಟದ ತಂಪಿನಲ್ಲಿಯೂ ಸುಡುವ ಸೆಕೆ. ಹೊರಜಗಲಿಯಲ್ಲಿ ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದ. ರಾಜಣ್ಣ ಅಂಚೆಕಛೇರಿಯಿಂದ ಬಂದಿರಲಾರ ಎನ್ನುತ್ತ ಒಳಗೆ ಕಾಲಿರಿಸಿದಾಗ ಅವನನ್ನು ಎದುರುಗೊಂಡಳು ಸೀತಮ್ಮ.

"ಅವರು ಮನೇಲಿಲ್ಲ, ಈಗ ಬರಬಹುದು ಕುಳಿತುಕೊಳ್ಳಿ" ಸೀತಮ್ಮ ಕುರ್ಚಿ ಸರಿಪಡಿಸಿಟ್ಟು ಅಡಿಕೆಹಾಳೆಯ ಬೀಸಣಿಗೆ ತಂದುಕೊಟ್ಟಳು. ಆಯಾಸ ಪರಿಹಾರಕ್ಕೆ ಮಜ್ಜಿಗೆ ನೀರು ಬಂದಿತು.

ಮಜ್ಜಿಗೆ ನೀರು ಕುಡಿದು ಮುಗಿಸುವ ಮೊದಲೇ ರಾಜಣ್ಣ ಬಂದರು. ಅವನ ಕೈಯಲ್ಲಿ ಒಂದು ಚೀಲ, ಇನ್ನೇನೋ ಸಾಮಾನುಗಳು. "ಸೀತು, ಒಂದು ಮಣೆ ತಾ. ಇವೆಲ್ಲ ಮಂತ್ರಿಸಿದ ವಸ್ತುಗಳು. ನೆಲದ ಮೇಲಿರಿಸ ಬಾರದಂತೆ!" ಎಂದು ಕೂಗಿ ಹೇಳಿದ ಹೆಂಡತಿಗೆ. ಅಲ್ಲೇ ಕುಳಿತ ಅವಿನಾಶನನ್ನು ಗಮನಿಸಲಿಲ್ಲ.

ಒಳಗಿನಿಂದ ತಂದ ಮಣೆಯ ಮೇಲೆ ಅಡಿಕೆ, ತೆಂಗಿನಕಾಯಿ, ಇನ್ನೂ ಕೆಲವು ಸಾಮಾನುಗಳನ್ನು ತೆಗೆದಿರಿಸಿ, "ನಾನು ಮೊದಲೇ ಹೇಳಿದ್ದೆ, ಶಾಸ್ತ್ರಿಗಳ ಮಾತು ಸುಳ್ಳಾಗಿಲ್ಲ. ಇವನ್ನು ಮಂತ್ರಿಸಿಕೊಟ್ಟವರು ಇನ್ನೊಬ್ಬರು. ಈ ತೆಂಗಿನಕಾಯಿ ಕೊಟ್ಟಿಗೆಗೆ, ಇದು ಮನೆಗೆ. ಈ ಉರ್ಕು... ಅರೆ, ಯಾರಲ್ಲಿ– ಡಾಕ್ಟರು ಬಂದಿದ್ದಾರೆಯೇ?" ಹೊರಬಿಸಿಲಿಗೆ ಕಪ್ಪಿಟ್ಟ ಕಣ್ಣುಗಳ ಪೊರೆ ಕರಗಿದಂತೆ ಕುಳಿತವರು ಯಾರೆಂದು ಸ್ಪಷ್ಟವಾಯಿತು. ಜೀವ ಹಿಡಿಯಾಗಿ ಕುಗ್ಗಿ ಹೋದ ನಾಚಿಕೆಯಲ್ಲಿ.

"ಏನು ಇಲ್ಲಿಗೆ ಬಂದಿರಿ, ಡಾಕ್ಟರೇ?" ಅಸ್ಪಷ್ಟವಾಗಿ ತೊದಲಿದ.

"ನಿನ್ನ ಅಣ್ಣ ಎದೆನೋವಿಗೆಂದು ಬಂದಿದ್ದರು. ಅವರಿಗೆ ಔಷಧಿ ಕೊಟ್ಟು ಮನೆಗೆ ತಲುಪಿಸಿ ಹಾಗೇ ನಿನ್ನನ್ನು ನೋಡಿ ಹೋಗಲು ಬಂದೆ. ಅವೆಲ್ಲ ಏನು? ಎಲ್ಲಿಗೋ ಹೋಗಿದ್ದ ಹಾಗಿದೆಯಲ್ಲ!"

"ಎಲ್ಲಿಗೂ ಇಲ್ಲ ಡಾಕ್ಟರೆ. ಸೀತಾ, ಇವನ್ನು ಒಳಗಿಡು. ಜಾಗ್ರತೆ, ನೆಲಕ್ಕೆ ಮುಟ್ಟಿಸಬೇಡ !"

ಸೀತಮ್ಮ ಎಲ್ಲವನ್ನೂ ಬಾಚಿ ಒಳಗೆ ತೆಗೆದುಕೊಂಡು ಹೋದಳು. ಆ ಮಂತ್ರಿಸಿದ ವಸ್ತುಗಳನ್ನು ನೋಡಿದರೆ ಜನಾರ್ದನರಾಯರು ಹೇಳಿದ ವಿಷಯ ಸುಳ್ಳಲ್ಲ. ತನ್ನ ಮೇಲೆ ಮಾಟವಾಗಿದೆಯೆಂದು ರಾಜಣ್ಣನ ಭ್ರಮೆ. ತಾನೀಗ ಹೇಗೆ ಮಾತನಾಡಿದರೂ ಕೇಳುವ ಸ್ಥಿತಿಯಲ್ಲಿ ಅವನಿಲ್ಲ. ಆದರೆ ರಾಜಣ್ಣ ತಾನಾಗಿಯೇ ಹೇಳಿದ :

"ಅಣ್ಣ ನನ್ನ ಮೇಲೆ ಮಾಟ ಮಾಡಿಸಿದ್ದಾನೆ, ಡಾಕ್ಟರೇ"

ಅದಕ್ಕೆ ಪುಷ್ಟಿ ನೀಡುವ ಕಾರಣ ಹಲವಾರು. ಗಂಡು ಮಕ್ಕಳಿಬ್ಬರ ಅಸೌಖ್ಯ, ಸೀತಮ್ಮ ಹಠಾತ್ತನೆ ತಲೆತಿರುಗಿ ಬಿದ್ದದ್ದು, ಕರೆಯುವ ಹಸುಗಳಿಗೆ ಕಾಯಿಲೆ, ಹೂಡುವ ಎತ್ತು ಬಾರೆಯಿಂದ ಬಿದ್ದು ಸತ್ತದ್ದು – ಹೀಗೆ ತನ್ನ ಕಷ್ಟದ ಸರಮಾಲೆಯನ್ನು ವಿವರಿಸುತ್ತ ರಾಜಣ್ಣ ತಲೆ ತಲೆ ಜಜ್ಜಿಕೊಂಡ. ಆರ್ಥಿಕ ಕಷ್ಟ, ದೈಹಿಕ ಕಾಹಿಲೆ, ಮಾನಸಿಕ ಅಶಾಂತಿಯಲ್ಲಿ ಬಳಲಿದವನು ಕೊನೆಗೆ ಓಡಿದ್ದು ಸೋಮಶೇಖರಶಾಸ್ತ್ರಿಗಳ ಬಳಿಗೆ. ಕಾಣದ ಕಷ್ಟಗಳಿಗೆ ಅವರು ಪರಿಹಾರ ನೀಡುತ್ತಾರಂತೆ!

ಅವಿನಾಶ ನಗುತ್ತ ಸೀತಮ್ಮ, ಮಕ್ಕಳನ್ನು ಪರೀಕ್ಷಿಸಿ ಸರಿಯಾದ ಚಿಕಿತ್ಸೆ ಮಾಡುತ್ತೇನೆ ಎಂದಾಗ ರಾಜಣ್ಣ ಗಹಗಹಿಸಿ ನಕ್ಕ. ಅಸೌಖ್ಯದಲ್ಲಿ ಸಂಕಟ ಪಟ್ಟರೂ ಯಾರೂ ಅವಿನಾಶನ ಬಳಿ ಔಷಧಿಗೆ ಹೋಗ್ಲಿಲ್ಲ. ಈಗ ಪರೀಕ್ಷಿಸಿ ಅವನೇನು ಹೇಳುತ್ತಾನೆ ಮಣ್ಣು. ಅವಿನಾಶ ಒತ್ತಾಯಿಸಿದ ಮೇಲೆ ಮುಂದೆ ಬಂದಳು ಸೀತಮ್ಮ. ಗಂಡುಮಕ್ಕಳಲ್ಲಿ ಒಬ್ಬ ಮನೆಯಲ್ಲಿರಲಿಲ್ಲ. ಅಲ್ಲಿದ್ದ ಹನ್ನೆರಡು ವರ್ಷದವನನ್ನು ಹಾಗೂ ಸೀತಮ್ಮನನ್ನು, ಅರ್ಧ ಗಂಟೆ ಪರೀಕ್ಷಿಸಿದ.

ಹುಡುಗನಿಗೆ ಕಾಮಾಲೆ ರೋಗ. ವಾಂತಿ, ನಿತ್ರಾಣದಿಂದ ನಿಲ್ಲಲು ತ್ರಾಣವಿಲ್ಲ. ಸೀತಮ್ಮನಿಗೆ ರಕ್ತಹೀನತೆ, ಕೆಲಸದ ಹೊರೆ ಹೆಚ್ಚಿ ಎಲ್ಲೋ ಒಂದು ದಿನ ತಲೆತಿರುಗಿರಬೇಕು."

"ಇಬ್ಬರನ್ನೂ ನನ್ನಲ್ಲಿಗೆ ಔಷಧಿಗೆ ಕಳುಹಿಸಿ. ಒಂದು ತಿಂಗಳಲ್ಲಿ ಗುಣ ಪಡಿಸುತ್ತೇನೆ. ಅಲ್ಲ ರಾಜಣ್ಣ, ನೀನು ತಿಳಿದವನು, ಔಷಧಿ ಮಾಡಿಸದೆ ಯಾಕೆ ಸುಮ್ಮನಿದ್ದೆ?"

"ಬಾಯಿ ಬಾಯಿ ಬಡ್ಕೊಂಡರೂ ಎಲ್ಲಿ ಕೇಳ್ತಾರೆ, ಡಾಕ್ಟರೇ" ಗುಡುಗಿದಳು ಸೀತಮ್ಮ, "ಯಾರೋ ಆಗದವರು ಕೇಡು ಮಾಡಿದ್ದಾರಂತೆ. ನೀವೀಗಲೆ ನನ್ನ ಮಗನನ್ನು ಕರ್ಕೊಂಡು ಹೋಗಿ, ನಾನು ಬರ್ತೇನೆ"

"ಮನುಷ್ಯನಿಗೆ ಔಷಧಿ ಕೊಡಿಸಬಹುದು. ದನಕರುಗಳ ಕಷ್ಟಕ್ಕೆ ಏನಿದೆ ನಿವೃತ್ತಿ?" ಗೊಣಗಿದ ರಾಜಣ್ಣ ಅಸಮಾಧಾನದಿಂದ.

"ಮನುಷ್ಯರಂತೆ ಅವುಗಳಿಗೂ ಕಾಹಿಲೆ, ಮರಣ ಇಲ್ಲವೇ? ನಮ್ಮನ್ನು ಪ್ರಶ್ನಿಸಿ ಯಾವ ಕಷ್ಟ ನಷ್ಟಗಳೂ ಬರುವುದಿಲ್ಲ."

"ನಿಜ. ನ್ಯಾಯ, ನೀತಿ, ಧರ್ಮ ಇಲ್ಲದ ಕಡೆ ಅಧರ್ಮದ ಕೆಲಸ ನಡೆಯುತ್ತವೆ. ತನಗೆ ಆಗದವರನ್ನು ನಾಶ ಮಾಡಬೇಕೆಂದವನಿಗೆ ಧರ್ಮ ಎಲ್ಲಿದೆ ಡಾಕ್ಟರೇ. ಕಾಣದ ಕಾಹಿಲೆ, ಕಂಡರಿಯದ ಕಷ್ಟಗಳಿಗೆ ನಮ್ಮನ್ನು ಗುರಿಪಡಿಸಿದರೇನೇ ಅವರಿಗೆ ತೃಪ್ತಿ!"

"ಕೆಟ್ಟದ್ದನ್ನು ಮಾಡಬೇಕೆಂದು ಯಾರಿಗೂ ಇಚ್ಛೆಯಿಲ್ಲ, ರಾಜಣ್ಣ. ಕೆಲವು ನಮಗರಿಯದಂತೆ, ಕೆಲವು ಇನ್ನೊಬ್ಬರ ಪ್ರಭಾವಕ್ಕೆ ಒಳಗಾಗಿ, ಇನ್ನು ಕೆಲವು ಪ್ರಕೃತಿ ಸಹಜ ಎಂಬಂತೆ ನಮ್ಮಿಂದ ಕ್ರಿಯೆಗಳು ಜರುಗಿ ಹೋಗುತ್ತವೆ. ನಿನ್ನ ಕಷ್ಟ ನಷ್ಟಗಳಿಗೆ ಬೇರೆಯವರನ್ನು ದೂಷಿಸುವ ಮೊದಲು ನೀನೇ ಪರಿಹಾರ ಯೋಚಿಸು. ಮಂತ್ರ–ತಂತ್ರದಿಂದ, ಮಾಯಾ ಮಾಟದಿಂದ ತೊಂದರೆ ಆಗಿದೆ ಎಂದು ಗೊಣಗುವುದು ಮೂರ್ಖತನ."

ರಾಜಣ್ಣ ಕೆರಳಿಹೋದ ಈ ಮಾತಿನಿಂದ. ಎಷ್ಟಿದ್ದರೂ ತಾನು ಡಾಕ್ಟರನ ಎದುರಿನಲ್ಲಿ ಬುದ್ಧಿಯಿಂದ ಸಣ್ಣವನು. ಅಣ್ಣ ಇವರ ಕಿವಿ ಊದಿರಬೇಕು. ಅಣ್ಣನ ಪಕ್ಷ ಹಿಡಿದು ತನಗೆ ಬುದ್ಧಿ ಹೇಳುತ್ತಿದ್ದಾರೆ.

"ದೇವತಾ ವಿನಿಯೋಗದ ಹಣದಲ್ಲಿ ಪಾಲು ಕೇಳಿದೆನೆಂದು ಅಣ್ಣನಿಗೆ ನನ್ನ ಮೇಲೆ ಸಿಟ್ಟು. ನಾನು ಹಾಳಾಗಿ ಹೋಗಲಿ ಎಂದು ಬಯಸಿದ್ದಾನೆ. ನೀವು ಏನೇ ಹೇಳಿ ಡಾಕ್ಟರೇ, ಮನೆ ಮತ್ತು ಕೊಟ್ಟಿಗೆಗೆ ರಕ್ಷೆ, ನಮಗೆ ತಾಯಿತ–ಭಸ್ಮ ಎಲ್ಲಾ ತಂದಿದ್ದೇನೆ. ಸ್ವಲ್ಪ ಪರಿಹಾರ ಸಿಕ್ಕೀತು" ಹಣೆ ಮೇಲಿನ ಬೆವರು ಒರೆಸಿಕೊಳ್ಳುತ್ತ ಅಲ್ಲಿಂದೆದ್ದ. "ನನಗಿನ್ನೂ ಊಟ ಆಗಿಲ್ಲ ಸೀತಾ, ಬಾಳೆ ಎಲೆ ಇಡು. ಹಾಗೆ ಡಾಕ್ಟರಿಗೆ ಕಾಫಿ ಕೊಡು."

ಮುಂದೆ ಮಾತು ಬೆಳೆಸುವ ಇಷ್ಟವಿಲ್ಲ ಎನ್ನುವುದು ಸ್ಪಷ್ಟವಾಯಿತು ಅವನ ಮಾತಿನಿಂದ. ಅವಿನಾಶ ಅವನ ಮಗನನ್ನು, ಹೆಂಡತಿಯನ್ನು ನೋಡಿದ. ಯಾವುದೋ ಕುರುಡು ನಂಬಿಕೆಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಜೀವಗಳು! ಯಾರೋ ಮಾಟವಾಗಿದೆ ಎಂದಾಕ್ಷಣ ರಾಜಣ್ಣ ಅದರ ಹಿನ್ನೆಲೆಯನ್ನು ಕೆದಕುವ ಗೋಜಿಗೆ ಹೋಗದೆ ನಂಬಿದ್ದಾನೆ. ದುರ್ಬಲ ಮನಸ್ಸು. ಇವನಿಗೆ ಬುದ್ಧಿ ಹೇಳಿ ತಿದ್ದುವುದು ಸಾಧ್ಯವೇ? ನಿಧಾನವಾಗಿ ತಿದ್ದಿ ಮನಸ್ಸನ್ನು ಬದಲಾಯಿಸಿ ಕುರುಡು ನಂಬಿಕೆಯಲ್ಲಿ ಹೆಜ್ಜೆಯಿರಿಸದಂತೆ ಮಾಡಬೇಕು. ಮೊದಲು ಸೀತಮ್ಮ ಮತ್ತು ಮಕ್ಕಳಿಗೆ ಔಷಧಿ ಕೊಡಿಸಬೇಕು.

ಸೀತಮ್ಮ ಬಿಸಿ ಕಾಫಿ ತಂದಿರಿಸಿ ಪಿಸುಗುಟ್ಟಿದಳು, "ನಿಮ್ಮ ಮಾತು ನನಗೆ ವೇದವಾಕ್ಯ. ಅವರು ತಾಯಿತ, ಭಸ್ಮ ಅಂತ ಕೂತಿರಲಿ. ನೀವು ಈಗಲೇ ಈ ಹುಡುಗನನ್ನು ಔಷಧಿಗೆ ಕರೆದುಕೊಂಡು ಹೋಗಿ. ಇನ್ನೊಬ್ಬನನ್ನು ನಾನೇ ಸಾಯಂಕಾಲ ಕರೆತರ್ತೇನೆ."

೬

ಮುಂದೆ ಒಂದು ವಾರದಲ್ಲಿ ಗುಡುಗು-ಮಿಂಚುಗಳೊಡನೆ ಕಾಲಿಟ್ಟಿತು ಮುಂಗಾರುಮಳೆ. ವೈಶಾಖ ಮಾಸದಲ್ಲಿ ಕಾದ ನೆಲ, ಒಣಗಿದ ತೋಡು, ಬತ್ತಿದ ಕೆರೆ-ಹೊಳೆಗಳೆಲ್ಲ ತುಂಬಿ ಹರಿದವು. ಕಲ್ಲಳ್ಳಿಯಲ್ಲಿ ಉತ್ಸಾಹದ ಚಟುವಟಿಕೆ, ಕೆಲಸದ ಗಡಿಬಿಡಿ. ಮಳೆಯ ಜೊತೆಯಲ್ಲಿ ಮುಂದುವರಿಯಿತು ಬೇಸಾಯದ ಕೆಲಸ.

ಇದೇ ಸಮಯದಲ್ಲಿ ಸುಂದರರಾಜನ ಮುಂದಾಳತ್ವದಲ್ಲಿ ಪ್ರಾಥಮಿಕ ಶಾಲೆಯ ಹೊರಗೆ ಅನಕ್ಷರಸ್ಥರಿಗಾಗಿ ರಾತ್ರಿ ಶಾಲೆ ಪ್ರಾರಂಭ. ಒಂದು ಕರಿಹಲಗೆ, ಕುಳಿತುಕೊಳ್ಳಲು ಜಮಖಾನ, ಎರಡು ಪೆಟ್ರೋಮ್ಯಾಕ್ಸ್ ದೀಪ ಇವಿಷ್ಟು ಸಾಮಗ್ರಿಗಳು. ಹೆಸರು ನೋಂದಾಯಿಸಿದವರು ಇಪ್ಪತ್ತು ಜನರಾದರೂ ಮೊದಲ ದಿನ ಹಾಜರಾದವರು ಪದ್ಮಲೆ ಮತ್ತು ಎಂಟು ಗಂಡಸರು ಮಾತ್ರ.

ಪ್ರಾರಂಭದಲ್ಲಿ ಸುಂದರರಾಜನಿಂದ ಪ್ರಾರ್ಥನೆ. ಅನಂತರ ಅವಿನಾಶನಿಂದ ಶಾಲೆಯ ಮಹತ್ವದ ಬಗ್ಗೆ ಉಪನ್ಯಾಸ. ಅಕ್ಷರಾಭ್ಯಾಸದಿಂದ ಪ್ರಯೋಜನ, ಅಗತ್ಯತೆಯನ್ನು ಎಲ್ಲರಿಗೂ ಮನದಟ್ಟಾಗುವಂತೆ ವಿವರಿಸಿದ. ಈಗಿರುವ ಎಂಟು ಜನರು ಸಾಲದು, ಎಂಬತ್ತಾಗಬೇಕು. ಹೆಂಗಸರು, ಹುಡುಗಿಯರು ಅಧಿಕ ಸಂಖ್ಯೆಯಲ್ಲಿ ವಿದ್ಯೆ ಕಲಿಯಲು ಮನೆಯ ಗಂಡಸರೂ ಸಹಕರಿಸಬೇಕೆಂದು ಹುರಿದುಂಬಿಸಿದ.

ಸರಕಾರೀ ಶಾಲೆಯಿಂದ ಈ ವರ್ಷ ನಿವೃತ್ತರಾದ ಮಹಾಬಲಯ್ಯ ರಾತ್ರಿ ಶಾಲೆಗೆ ಶಿಕ್ಷಕರು. ಒಂದು ಕಣ್ಣಿಗೆ ಪೊರೆ ಬಂದು ದೃಷ್ಟಿ ಮಂದವಾಗಿದೆ. ಆದರೂ ಕಲಿಸುವ ಉತ್ಸಾಹ. ಏಳರಿಂದ ಒಂಬತ್ತು ಗಂಟೆಯವರೆಗೆ ಪಾಠ ಹೇಳಲು ಒಪ್ಪಿಕೊಂಡಿದ್ದಾರೆ. ಒಂದನೇ ಕ್ಲಾಸಿನ ಪುಸ್ತಕ, ಪಾಟಿ ಮತ್ತು ಕಡ್ಡಿಯನ್ನು ತರುವಂತೆ ತಿಳಿಸಿ ಆ ದಿನ ಕನ್ನಡ ಅಕ್ಷರಮಾಲೆಯನ್ನು ಬೋರ್ಡಿನ ಮೇಲೆ ಬರೆದು ತೋರಿಸಿದರು. ಜನರನ್ನು ಆಕರ್ಷಿಸಲು 'ಪ್ರತಿದಿನ ಪಾಠದ ನಂತರ ಅವಲಕ್ಕಿಯನ್ನು ಹಂಚಲಾಗುತ್ತದೆ' ಎಂಬ ಸಿಹಿ ಸುದ್ದಿಯನ್ನು ಹಂಚಿದ ಸುಂದರರಾಜ.

ದಿನಗಳು ಸರಿದಂತೆ ಕಲ್ಲಳ್ಳಿಯ ಜನರು ನಿರೀಕ್ಷೆ ಮೀರಿ ರಾತ್ರಿ ಶಾಲೆಯಲ್ಲಿ ಆಸಕ್ತಿ ತೋರಿಸಿದರು. ಎಂಟು ಜನರಿಂದ ಪ್ರಾರಂಭವಾದ ಶಾಲೆ ತಿಂಗಳ ಕೊನೆಯಲ್ಲಿ ಅರವತ್ತು ಜನರಿಂದ ತುಂಬಿಹೋಯಿತು. ಅವರಲ್ಲಿ ಏಳು ಮಂದಿ ಹೆಂಗಸರು. ಕೃಷಿ ದುಡಿಮೆ ಮುಗಿಸಿ ಸಾಯಂಕಾಲ ಶಾಲಾ ವಠಾರದಲ್ಲಿ ಎಲ್ಲರೂ ಹಾಜರು. ಮಳೆಗಾಲದ ದಿನಗಳಲ್ಲಿ ಶಾಲಾ ವಠಾರದಲ್ಲಿ ಪಾಠ ಮಾಡುವುದು ಕಷ್ಟ. ಸುಂದರರಾಜ ಹಿರಿಯ ಅಧಿಕಾರಿಗಳಿಗೆ ಮನವಿ ಕಳುಹಿಸಿ ಹದಿನೈದು ದಿನಗಳಲ್ಲಿ ಶಾಲೆಯೊಳಗೆ ಪಾಠ ಮಾಡುವಂತೆ ಒಪ್ಪಿಗೆ ಪತ್ರವನ್ನು ಗಿಟ್ಟಿಸಿಕೊಂಡ. ಇದರಿಂದ ಕಲಿಯುವವರ ಹುಮ್ಮಸ್ಸು ದ್ವಿಗುಣಗೊಂಡಿತು. ಅನಕ್ಷರಸ್ಥರಲ್ಲಿ ಹುದುಗಿದ್ದ ಚೈತನ್ಯ ಒಮ್ಮಿಂದೊಮ್ಮೆಲೇ ಸಿಡಿದೆದ್ದಿತು.

ಕೇವಲ ಓದು-ಬರಹ ಮಾತ್ರವಲ್ಲ, ಪ್ರತಿನಿತ್ಯವೂ ವೃತ್ತಪತ್ರಿಕೆಯ ಮುಖ್ಯಾಂಶ ಓದುವುದು, ರೇಡಿಯೋ ತಂದಿರಿಸಿ ಉತ್ತಮ ಕಾರ್ಯಕ್ರಮವಿದ್ದರೆ ಕೇಳಿಸುವುದು, ಕೆಲವೊಮ್ಮೆ ಹಳ್ಳಿ ಸುಧಾರಣೆ, ಕೃಷಿಯ ಕುರಿತು ಚರ್ಚಾಗೋಷ್ಠಿ ಏರ್ಪಡಿಸುವುದು ನಡೆಯುತ್ತಿತ್ತು. ದುಡಿಮೆಯಿಂದ ಬದುಕುವ ಕೆಳವರ್ಗದ ಜನರೂ ಇಲ್ಲಿ ಅಂತಸ್ತು, ಜಾತಿ-ಮತಭೇದವಿಲ್ಲದೆ ಒಂದುಗೂಡಿದ್ದಾರೆ.

ಪ್ರತಿ ಶನಿವಾರ ಅವಿನಾಶನಿಂದ ಕುಟುಂಬ ಯೋಜನೆಯ ಪ್ರಚಾರ, ಸಂತಾನ ನಿಯಂತ್ರಣದ ಕ್ರಮಗಳು, ಚಿಕ್ಕ ಸಂಸಾರದ ಮಹತ್ವ, ರೋಗ ರುಜಿನಗಳ ವಿವರಣೆ, ಮಕ್ಕಳ ಭವಿಷ್ಯ ಇತ್ಯಾದಿಗಳನ್ನು ವಿವರಿಸುತ್ತಾನೆ. ಮೈದುಕುಂಞಯ ಮಗು ಹೇಗೆ ಸತ್ತಿತು? ಯಾವ ಚಿಕಿತ್ಸೆ ಮೊದಲೇ ಮಾಡಿಸಬೇಕಿತ್ತು ಎಂದು ಚಿತ್ರಗಳಲ್ಲಿ ತೋರಿಸಿ ವಿವರಿಸಿದಾಗ ಎಲ್ಲರಿಗೂ ಸೋಜಿಗ. ಅವನು ಹೇಳಿದ್ದು ಅರ್ಥವಾಯಿತು ಎಂಬಂತೆ ಆನಂತರದ ದಿನಗಳಲ್ಲಿ ಅನೇಕ ಮಂದಿ ತಮ್ಮ ಮಕ್ಕಳನ್ನು, ಎಳೆಶಿಶುಗಳನ್ನು ಅವನ ಚಿಕಿತ್ಸಾಲಯಕ್ಕೆ ಕರೆತಂದು ಪೋಲಿಯೋ ಡ್ರಾಪ್ಸ್ ಕೊಡಲಾರಂಭಿಸಿದರು. ಬಸುರಿ, ಬಾಣಂತಿಯರು ಅವನ ಸಲಹೆಯನ್ನು ಕುತೂಹಲದಿಂದ ಕೇಳಿದರು.

ಕಲ್ಲಳ್ಳಿಯಲ್ಲಿ ವಿದ್ಯುದ್ದೀಪವಿಲ್ಲದೆ ಜನರಿಗೂ ಅನಾನುಕೂಲವಾಗುತ್ತಿತ್ತು. ಹಳೆಯ ಕಾಲದ ದೀಪ, ಬೀದಿ ದೀಪಗಳೇ ಗತಿ. ಕೃಷಿಗೆ ದುಬಾರಿಯಾದ ಡೀಸಲ್ ಬಳಕೆ. 'ನಮ್ಮ ಹಳ್ಳಿಗೆ ವಿದ್ಯುದ್ದೀಪ ಬೇಕು' ಎಂದು ಸುಂದರರಾಜ ಸರಕಾರಕ್ಕೆ ಮನವಿ ಕಳುಹಿಸುವಾಗ ಅವನ ಬೆಂಬಲಕ್ಕೆ ನೂರಾರು ಜನರು ಸಹಿ ಹಾಕಿದ ಮನವಿ ಹೋಯಿತು. ಹತ್ತು ಮೈಲು ದೂರದ ಸರಕಾರಿ ಕಛೇರಿಗೆ ನೂರಾರು ಸಲ ಓಡಾಡಿದರು. ಮಳೆಗಾಲ ಕಳೆಯುವುದರೊಳಗೆ ವಿದ್ಯುತ್ ಕಂಬಗಳು ಕಲ್ಲಳ್ಳಿಯ ಮೂಲೆಮೂಲೆಗಳಲ್ಲಿ ಬಂದು ಬಿದ್ದವು. ಪ್ರಯತ್ನ ಸಾರ್ಥಕವಾಗಲು ಇನ್ನೊಂದೇ ತಿಂಗಳು!

ಇತ್ತ ಸುನೀತಾ ಶೆಟ್ಟಿಯ ನೇತೃತ್ವದಲ್ಲಿ ಮಹಿಳಾ ಸಂಘ ತನ್ನ ಅಳಿಲಸೇವೆಗಾಗಿ ಹಾತೊರೆದಿದೆ. ಮಹಿಳಾ ಕಲ್ಯಾಣಕ್ಕೆಂದು ನಾಲ್ಕು ಸಾವಿರ ಮಂಜೂರಾದಾಗ ಸಂಘದ ಕಛೇರಿಗಾಗಿ ಪ್ರತ್ಯೇಕ ಬಾಡಿಗೆ ಮನೆಯನ್ನೂ ತೆಗೆದುಕೊಳ್ಳಲಾಯಿತು. ಹೊಲಿಗೆಯಂತ್ರ, ಮಹಿಳೆಯರಿಗೆ ಕ್ರೀಡಾ ಸಲಕರಣೆ ಗಳೂ ಬಂದವು. ನಗರದಲ್ಲಿ ಇರುವಂತೆ ಬ್ಯಾಡ್‌ಮಿಂಟನ್, ಥ್ರೋಬಾಲ್, ಕೇರಂಬೋರ್ಡನ್ನು ತರಿಸಿದಾಗ ಅಹಲ್ಯ ಸೂಕ್ಷ್ಮವಾಗಿ ಎಚ್ಚರಿಸಿದಳು,

"ಹಳ್ಳಿಯಲ್ಲಿ ಈ ದುಬಾರಿ ಆಟದ ಅಗತ್ಯವಿಲ್ಲ. ಬಡ ಮಹಿಳೆಯರ ಕಲ್ಯಾಣಕ್ಕಾಗಿ ಬೇರೆ ಕೆಲಸ ಮಾಡೋಣ."

"ಮನರಂಜನೆಗೆ ಆಟಗಳು ಇಲ್ಲದಿದ್ದರೆ ಏನಿದೆ ಮಜಾ? ಅಧಿಕಾರಿಗಳು ಬಂದಾಗ ತೋರಿಸಬೇಡವೇ?" ಸವಾಲು ಎಸೆದಳು ಸುನೀತಾ, ಈಗಷ್ಟೆ ಸಂಘ ಸೇರಿದ ವೈದ್ಯನ ಮಡದಿ ಅಹಲ್ಯಳ ಮೇಲೆ.

ಹೊಲಿಗೆ ಕಲಿಸಲು ಶಿಕ್ಷಕಿಯೊಬ್ಬಳ ನೇಮಕ. ಹತ್ತಿಪ್ಪತ್ತು ಹೆಂಗಸರು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಶಾಸ್ತ್ರೀಯ ಸಂಗೀತ ಜ್ಞಾನವಿರುವ ಒಬ್ಬಾಕೆ ವಾರಕ್ಕೆ ಎರಡು ದಿನ ಸಂಗೀತ ಹೇಳಲು ಒಪ್ಪಿದರು. ಅವರು ಹೇಗೆ ಪಾಠ ಮಾಡಿದರು ಎನ್ನುವುದು ಮುಖ್ಯವಲ್ಲ. ಕೆಲವು ದಿನ ರಾಗಗಳ ಅಬ್ಬರ, ಅರಚಾಟ ಕೇಳಿ ಬಂದು ಮುಂದೊಂದು ದಿನ ನಿಂತುಹೋಯಿತು. ಈ ನಡುವೆ ಮಳೆಗಾಲದ ಭಾಷಣ, ಒಂದು ಮನರಂಜನಾ ಕಾರ್ಯಕ್ರಮವೂ ರಂಜಿಸಿದಾಗ ಅಹಲ್ಯ ಉತ್ಸಾಹದಿಂದ ತಾನೂ ಭಾಗವಹಿಸಿದಳು.

ನಿಜ, ಮಕ್ಕಳಿಲ್ಲದ ಅಹಲ್ಯಳಗೆ ಮಹಿಳಾ ಸಂಘವೇ ಉತ್ಸಾಹದ ಕೇಂದ್ರ. ತನ್ನಲ್ಲೇ ಶೂನ್ಯವನ್ನು ಸೃಷ್ಟಿಸಿ ಚಿಂತಿಸುವವಳು. ಅಲ್ಲಿಂದ ಕರೆ ಬಂದಾಕ್ಷಣ ತುದಿಗಾಲಿನಲ್ಲಿ ಹಾಜರು. ಸುನೀತಾ ಶೆಟ್ಟಿ ಮತ್ತು ಅವಳಲ್ಲಿ ದಿನೇ ದಿನೇ ಬೆಳೆಯಿತು ಸಲುಗೆ, ಸ್ನೇಹ. ಸಂಘದ ಕಾರ್ಯಕ್ರಮಗಳನ್ನು ಸುನೀತಾ ಅವಳೊಂದಿಗೆ ಚರ್ಚಿಸದೆ ಮುಂದುವರಿಯಲಾರಳು. ಅಹಲ್ಯ ಕೈಚೆಲ್ಲಿ ಸಂಘಕ್ಕೆ ಹಣ ತೆತ್ತವಳು, ಕಲಿತವಳು. ಡಾಕ್ಟರ ಮಡದಿ ಎಂಬ ಗೌರವವೂ

ಕಾರಣವಿರಬೇಕು. ಸುನೀತಾ ಹಣದ ಬೆಲೆಯಲ್ಲಿ ಅಹಲ್ಯಳನ್ನು ತೂಗುತ್ತ ಬಂದಳು.

ಈ ದಿನಗಳಲ್ಲಿ ಅವಳ ಪ್ರಸನ್ನಚಿತ್ತವನ್ನು ನೋಡುತ್ತಿದ್ದ ಅವಿನಾಶನಿಗೆ ಆಸಕ್ತಿಯಿರದಿದ್ದರೂ ಸಂಘದ ಚಟುವಟಿಕೆಯನ್ನು ಕೇಳುವ ನಟನೆ ಮಾಡುತ್ತಾನೆ. ಅವಳೂ ಹೇಳುತ್ತಾಳೆ.

ಸುನೀತಾ ತನ್ನ ಸಲಹೆಗೆ ಬೆಲೆ ಕೊಡುತ್ತಾಳೆಂದು ನಂಬಿದ್ದ ಅಹಲ್ಯಳಿಗೆ ಅದು ಕೇವಲ ನೆಪ ಎಂದು ತಿಳಿದದ್ದು ಗಣೇಶಚೌತಿಯ ಸಂದರ್ಭದಲ್ಲಿ. ಗಣೇಶಚೌತಿಯ ಹಿಂದಿನ ದಿನ ಗೌರೀಹಬ್ಬ. ಕಲ್ಲಳ್ಳಿಯಲ್ಲಿ ಎಲ್ಲರ ಮನೆಗಳಲ್ಲಿಯೂ ಗೌರೀಪೂಜೆ ಮಾಡುವ ಪದ್ಧತಿಯಿಲ್ಲ. ಗಣೇಶನ ವಿಗ್ರಹವಿರಿಸಿ ಕೆಲವರು ಅದ್ದೂರಿಯ ಪೂಜೆ ಮಾಡಿದರೆ ಕೆಲವರು ಸರಳ ರೀತಿಯಲ್ಲಿ ಪೂಜಿಸುವುದು ವಾಡಿಕೆ. ಈ ಸಲ ಮಹಿಳಾ ಸಂಘದಲ್ಲಿ ಗೌರೀಪೂಜೆಯನ್ನು ಅದ್ದೂರಿಯಿಂದ ಮಾಡೋಣವೆಂದು ಸಲಹೆ ಮಾಡಿದಳು ಸುನೀತಾ.

"ಗೌರಿಯನ್ನು ಕುಳ್ಳಿರಿಸಿ ಪೂಜಿಸುವ ಬದಲು ಮಹಿಳಾ ಸಂಘದಲ್ಲಿ ಊರ ಮಹಿಳೆಯರಿಗೆ ಅರಿಶಿನ-ಕುಂಕುಮ ಹಚ್ಚೋಣ" ಎಂದಳು ಅಹಲ್ಯ.

ಅಹಲ್ಯಳ ಸಲಹೆ ಹಿಡಿಸಲಿಲ್ಲ ಸುನೀತಾಳೀಗೆ. "ಗೌರೀಹಬ್ಬ ಆಚರಿಸುವ ಹೊಸ ಕ್ರಮವನ್ನು ನಾವು ಪ್ರಾರಂಭ ಮಾಡಿದರೆ ತಪ್ಪೇನಿಲ್ಲ" ಎಂದಳು.

ಅವಳು ಅಹಲ್ಯಳನ್ನು ಹೆಚ್ಚಿಗೆ ಪ್ರಶ್ನಿಸದೆ ಉಳಿದ ಸದಸ್ಯೆಯರನ್ನು ಒಂದುಗೂಡಿಸಿ ಗೌರೀಪೂಜೆಯ ಪ್ರಚಾರ ಮಾಡಿ, ಚಂದಾ ಎತ್ತಿ, ಹಣ ಸಂಗ್ರಹಿಸಿದಳು. ಆದರೆ ಅಹಲ್ಯ ಈ ದುಂದುವೆಚ್ಚಕ್ಕೆ ಒಂದು ಪೈಸೆ ಕೊಡಲಾರೆನೆಂದು ಅಂದುಬಿಟ್ಟಳು ಸ್ಪಷ್ಟವಾಗಿ.

"ನಾಲ್ಕು ಜನರು ಹೇಗೆ ಕಾರ್ಯಕ್ಕೆ ಇಳಿಯುತ್ತಾರೋ ಹಾಗೇ ನೀವೂ ಹೊಂದಿಕೊಳ್ಳಿ. ನಿಮಗೊಬ್ಬರಿಗೆ ಮನಸ್ಸಿಲ್ಲವೆಂದು ದೂರ ಸರಿದರೆ ಹೇಗೆ?" ಸುನೀತಾಗೆ ಅಸಮಾಧಾನ, ಅವಳಿಂದ ಹಣ ಬರಲಿಲ್ಲವೆಂದು.

"ಹಳೆಯದನ್ನು ನೆಚ್ಚಿದ್ದೇನೆ ಎನ್ನಬೇಡಿ. ಹೊಸ ಪದ್ಧತಿಗೆ ನಾನು ವಿರೋಧಿ. ಸಂಘವಿರುವುದು ದೀನದಲಿತ ಮಹಿಳೆಯರ ಕಲ್ಯಾಣಕ್ಕಾಗಿ ಆಡಂಬರದ ಪೂಜೆಗಲ್ಲ!"

"ಪೂಜೆಯಿಂದಲೇ ದೀನದಲಿತರ ಸೇವೆ ಮಾಡ್ತೇವೆ"

"ಪೂಜೆ ಮಾಡಿದಾಕ್ಷಣ ದಲಿತರ ಉದ್ಧಾರವಾಗುತ್ತದೆಯೇ? ಅವರ ಮೇಲೆ ಅನುಕಂಪ ತೋರಿಸಿದರೆ ಸಾಲದು. ಸಹಾಯ ಕೊಡಬೇಕು. ವಾಮನನ ಹೆಂಡತಿ ಸತ್ತು ಸತ್ತು ಹೆತ್ತು ಈಗ ಎಲುಬಿನ ಗೂಡಾಗಿ ಹೇಗೆ ಕುಟುಕುಜೀವ ಹಿಡಿದುಕೊಂಡಿದ್ದಾಳೆ. ಅದೂ ನಮ್ಮಂತೆ ಹೆಣ್ಣು ಜೀವ. ವರದಕ್ಷಿಣೆ

ತರಲಿಲ್ಲವೆಂದು ರಾಮನಾಯ್ಕರ ಸೊಸೆ ರಾತ್ರಿ ಹಗಲು ಅತ್ತೆಮಾವನ ಚಿತ್ರಹಿಂಸೆಯಲ್ಲಿದ್ದಾಳೆ. ಸಮ್ಮ ಸಂಘ ಇವರ ಸಮಸ್ಯೆ ಬಗೆಹರಿಸಿ ಸಹಾಯ ಮಾಡಲಿ."

ಸುನೀತಾ ಮೂಗು ಮುರಿದು ನಕ್ಕಳು. ಅವಳು ಅನುಕೂಲಸ್ಥರ ಮಗಳು. ಶ್ರೀಮಂತರ ಮನೆಗೆ ಸೊಸೆಯಾದವಳು. ಬಡವರ ಸಮಸ್ಯೆಗಳಿಗೆ ಹೆಗಲು ಕೊಡುವ ನೈಜವಾದ ಮಾನವೀಯತೆಯ ಕಳಕಳಿ ಅವಳಲ್ಲಿದೆ. ಆದರೆ ಅವು ಹೃದಯದ ಒಳಬಾಗಿಲನ್ನು ತಟ್ಟುವುದಿಲ್ಲ. ಅವರನ್ನು ಅರ್ಥೈಸಿಕೊಳ್ಳಲು ಆಗುವುದಿಲ್ಲ. ಈಗಲೂ ಅಹಲ್ಯ ಹೇಳುತ್ತಿದ್ದರೆ ಅವಳ ದೃಷ್ಟಿಯೆಲ್ಲ ಹೊಸ ಪೂಜೆಯ ಮೇಲೆ.

ಗೌರೀಪೂಜೆ ಅದ್ದೂರಿಯಲ್ಲಿ ಮುಗಿಯಿತು. ಕಡಿಮೆಯೆಂದರೂ ಒಂದು ಸಾವಿರ ಖರ್ಚಾಗಿರಬಹುದು. ಯುವಕ ಮಂಡಳಿಯವರೂ ಸೇರಿಕೊಂಡು ಪೂಜೆಗೆ ಕಳೆಯೇರಿತ್ತು. ಅಹಲ್ಯ ಪೂಜೆಗೆ ಹೋಗಲಿಲ್ಲ. ಮನೆಗೆಲಸಕ್ಕೆ ಬಂದ ಲೀಲಳಿಗೆ ಹೊಸ ಸೀರೆ, ಹತ್ತು ರೂಪಾಯಿ ದಾನವಾಗಿ ಕೊಟ್ಟಳು. ಲೀಲ ಹೊಸ ಸೀರೆ ಸಿಕ್ಕಿದಾಗಲೂ ಮುಖ ಅರಳಿಸದೆ ಕಣ್ಣಲ್ಲಿ ನೀರು ತಂದುಕೊಂಡಳು. ವಯಸ್ಸಿಗಿಂತ ಗಾಂಭೀರ್ಯ ಹೆಚ್ಚು. ಓದಿ, ಆಡಿ ನಲಿಯಬೇಕಾದ ವಯಸ್ಸಿನಲ್ಲಿ ಮನೆಗೆಲಸ, ತಾಯಿ ಮಕ್ಕಳನ್ನು ಸಾಕುವ ಹೊಣೆ, ತಾಯಿ ಮಲಗಿದಲ್ಲೇ ಇದ್ದಾಳೆ.

"ಅಮ್ಮ ಹಾಸಿಗೆ ಹಿಡಿದು ಹತ್ತು ದಿನಗಳಾದವು. ಅಜ್ಜಿಗೂ ಹುಷಾರಿಲ್ಲ. ಸಣ್ಣ ಮಕ್ಕಳನ್ನು ನಾನೇ ನೋಡಿಕೊಳ್ಳಬೇಕು" ಎಂದಳು.

ಅಹಲ್ಯ ಯಾವ ಸಮಾಧಾನ ಹೇಳುತ್ತಾಳೆ? ಮಹಿಳಾ ಸಂಘದಲ್ಲಿ ನಡೆಯುವ ಗೌರೀಪೂಜೆ, ಒಡವೆ ವಸ್ತ್ರಾಲಂಕಾರಗಳು ಕಾಣಿಸಿದವು ಕಣ್ಣೆದುರು.

೭

ತಾಯಿ ಹಾಸಿಗೆ ಹಿಡಿದಿದ್ದಾಳೆ ಎಂದು ಲೀಲಾ ಹೇಳಿದ ಮೇಲೆ ಅವಳನ್ನು ಒಮ್ಮೆ ನೋಡಿ ಬರುವ ಆಸೆಯಾಯಿತು ಅಹಲ್ಯಳಿಗೆ. ಅವಿನಾಶ ತಾನೇ ಕರೆದೊಯ್ಯಲು ಇಚ್ಛೆಸಿದ. ಅಂದು ಸಾಯಂಕಾಲ ಚಿಕಿತ್ಸಾಲಯದಲ್ಲಿ ರೋಗಿಗಳಿಲ್ಲದ ಸಮಯ ನೋಡಿಕೊಂಡು ಇಬ್ಬರೂ ಹೊರಟರು ವಾಮನನ ಮನೆಯತ್ತ. ವಾಹನ ಹೋಗುವ ದಾರಿಯಿದ್ದರೂ ಹನಿಯುವ ಸಣ್ಣ ಮಳೆಯಲ್ಲಿ ನಡೆದುಹೋಗಲು ಇಷ್ಟವಾಯಿತು ಇಬ್ಬರಿಗೂ.

ವಾಮನ ತನ್ನ ಸುಟ್ಟ ಮನೆಯ ಸ್ಥಳದಲ್ಲಿ ಯುವಕ ಮಂಡಳಿಯ ಸಹಾಯದಿಂದ ಒಂದೇ ಕೋಣೆಯಿರುವ, ಅರ್ಧ ಮಣ್ಣು ಗೋಡೆ, ಉಳಿದರ್ಧ

ಭಾಗ ತೆಂಗಿನತಟ್ಟಿ ಹಾಕಿದ ಮನೆ ಅಥವಾ ಗುಡಿಸಲು ಕಟ್ಟಿಕೊಂಡಿದ್ದಾನೆ. ಇದೇ ಮಳೆಗಾಲದಲ್ಲಿ ಅವನ ಹೆಂಡತಿ ಹೆತ್ತು ಮಲಗಿದ್ದು. ಆಮೇಲೆ ಬಂದ ಜ್ವರ, ನಿತ್ರಾಣದಲ್ಲಿ ಸೋತು ಹಾಸಿಗೆ ಕಂಡ ಶರೀರ. ಅವಳ ಸಹಕಾರವಿಲ್ಲದೆ ವಾಮನ ಗದ್ದೆ ಬೇಸಾಯ ಮಾಡಿದ್ದೇ ಹೆಚ್ಚು. ಮನೆಗೆ ಅಗ್ನಿಸ್ಪರ್ಶವಾದಾಗ ಮಳೆಗಾಲಕ್ಕೆ ಕಾಯ್ದಿರಿಸಿದ ದವಸ ಧಾನ್ಯಗಳು ಭಸ್ಮವಾಗಿದ್ದು ಈಗ ಸಂಸಾರದ ಹೊಟ್ಟೆ ತುಂಬಿಸುವುದೇ ಪ್ರಯಾಸ. ಆಗಾಗ ಜನಾರ್ದನರಾಯರಲ್ಲಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾನೆ. ತನ್ನ ಗದ್ದೆಯಲ್ಲಿ ಬೆಳೆದು ನಿಂತ ತೆನೆ ನೋಡಿದರೆ ಪ್ರತಿವರ್ಷದ ಕಾಲಾಂತ ದಕ್ಕೀತು !

ಈ ನಡುವೆ ಮುತ್ತಣ್ಣ ಹಳ್ಳಿಗೆ ಹಿಂದಿರುಗಿದ್ದಾನೆ. ಅವನ ನೆರಳು ಇಲ್ಲೆಲ್ಲ ಸುಳಿದಾಡಿದರೂ ವಾಮನನಿಗೆ ಅವನನ್ನು ಎದುರಿಸುವ, ಜಗಳವಾಡುವ ಧೈರ್ಯವಿಲ್ಲ. ಯುವಕ ಮಂಡಳಿಯ ಕಾರ್ಯಕರ್ತರ ನೆರವಿನಿಂದ ಸೇಡನ್ನು ತೀರಿಸಬಲ್ಲೆನೆಂಬ ಆತ್ಮವಿಶ್ವಾಸ, ಭರವಸೆ ಉಳಿದಿಲ್ಲ. ಹಲ್ಲು ತೆಗೆದ ಸರ್ಪ ! ಮುತ್ತಣ್ಣ ಗಾಳ ಒಡ್ಡುತ್ತಿದ್ದಾನೆ.

ತನ್ನ ಮನೆಗೆ ಆಗಮಿಸಿದವರನ್ನು ನೋಡಿದ ವಾಮನನಿಗೆ ಎಲ್ಲಿಲ್ಲದ ದಿಗಿಲು. ಹೇಳಿಕಳುಹಿದರೆ ಮಾತ್ರ ಬರುವ ವೈದ್ಯಮಹಾಶಯ ಧಿಡೀರನೆ ಪತ್ನಿಯೊಡನೆ ಇಲ್ಲಿಗೇಕೆ ಬಂದರು? ಓ.... ಲೀಲಾ ಹೇಳುತ್ತಿರಲಿಲ್ಲವೇ, ಒಂದು ದಿನ ಅಹಲ್ಯ ಬರ್ತಾಳೆ ಎಂದು. ನರಳುವವಳ ನೋವು ಕೇಳಿಸಿದ ಈ ದಂಪತಿಗಳಿಗೆ, ಅನೇಕ ತಿಂಗಳುಗಳ ಹಿಂದೆ ಮನೆ ಸುಡುತ್ತಿದ್ದಾಗ ಕಗ್ಗತ್ತಲಿನಲ್ಲಿ ನೋಡಿದ ಮುಖ. ಈಗಲೂ ಅದೇ ವಿಸ್ಮಿತ ಮುಖಭಾವ. ಶಾಂತವಾದ ಕರುಣೆ ತುಂಬಿದ ಕಣ್ಣುಗಳು, ಅನುಕಂಪದ ನುಡಿಗಳು.

ವಾಮನ ತನ್ನ ದೇಹವನ್ನು ಕುಗ್ಗಿಸಿ ಅವರನ್ನು ಒಳಗೆ ಕರೆದೊಯ್ದ. ಇಕ್ಕಟ್ಟಾದ ಆ ಕೋಣೆಯ ಒಂದು ಮೂಲೆಗೆ ಒರಗಿದ್ದಾಳೆ ಅವನ ತಾಯಿ, ಇನ್ನೊಂದು ಮೂಲೆಯಲ್ಲಿ ಹೆಂಡತಿ. ಬಂದವರನ್ನು ನೋಡಿ ಏಳಲು ಯತ್ನಿಸಿದರೆ ಆಗಲೇ ಇಲ್ಲ.

"ನಾನೊಮ್ಮೆ ಪರೀಕ್ಷಿಸಲೇ?" ಉತ್ತರಕ್ಕೆ ಕಾಯದೆ ಕೆಳಗೆ ಕುಳಿತ ಅವಿನಾಶನಿಗೆ ಅಸಹನೀಯವಾದ ವಾಸನೆಯಿಂದ ಮೂಗು ಮುಚ್ಚಿಕೊಳ್ಳು ವಂತಾಯಿತು. ಅವಳನ್ನು ಎತ್ತಿ ಬೇರೆಡೆಗೆ ಮಲಗಿಸಲು ಹೇಳಿದ. ವಾಮನ ಅರ್ಧ ನಿಮಿಷದಲ್ಲಿ ಹೆಂಡತಿಯನ್ನು ಇನ್ನೊಂದು ಹರಕುಚಾಪೆಯ ಮೇಲೆತ್ತಿ ಮಲಗಿಸಿದ. ಅನಂತರ ಮೊದಲು ಮಲಗಿದ ಚಾಪೆ, ಅದರ ಮೇಲಿರುವ ಹರಕು ಸೀರೆ ತೆಗೆದು ನೋಡಿದರೆ ನೆಲದ ತೇವ ತಾಗಿ ಎಲ್ಲಾ ಗೆದ್ದಲು ಹಿಡಿದಿದೆ. ಅವಳ ಮೈಗೂ ಮೆತ್ತಿದೆ. ಮಲಗಿದವಳನ್ನು ಯಾರೊಬ್ಬರೂ ಆಚೆ ಸರಿಸಿಲ್ಲ.

ಚಾಪೆಯನ್ನೆತ್ತಿ ಹೊರಗೆ ಹಾಕಿ ಬಂದ ವಾಮನನ ಮುಖದಲ್ಲಿ ಯಾವ ಬದಲಾವಣೆಯೂ ಇಲ್ಲ ! ಆದರೆ ಬಡತನ, ಅಜ್ಞಾನದ ಭೀಕರತೆ ನಡುಗಿಸಿತು ಅವಿನಾಶನನ್ನು. ಗೆದ್ದಲು ಇಡೀ ಮನೆಯನ್ನು ಕಬಳಿಸುತ್ತಿದೆ !

"ಹಾಸಿಗೆ ಹಿಡಿದು ಹತ್ತು ದಿನ ಆಯ್ತು ಅಂತೀಯ. ಇನ್ನು ಹತ್ತು ದಿನ ಕಳೆದಿದ್ದರೆ ಇವಳೂ ನೆಲದ ಗೆದ್ದಲಿನ ಜೊತೆ ಮಣ್ಣಾಗಿಬಿಡುತ್ತಿದ್ದಳು! ಬುದ್ಧಿಯಿಲ್ಲದವ !" ಅವಿನಾಶ ಅಲ್ಲಿಂದೇಳುತ್ತ ಅಂದ, "ಇವಳನ್ನು ನಾನು ಗುಣಪಡಿಸಬಲ್ಲೆ. ಆದರೆ ನನ್ನದು ಕೇವಲ ಔಷಧಿ ಕೊಡುವ ಕೋಣೆ, ಆ ಚಿಕಿತ್ಸಾಲಯದಲ್ಲಿ ಉಳಕೊಳ್ಳುವ ವ್ಯವಸ್ಥೆಯಿಲ್ಲ. ಇವಳನ್ನು ದಿನಾಲೂ ಇಂಜಕ್ಷನ್‌ಗೆ ಹೇಗೆ ಕರೆತರುತ್ತಿ?"

ವಾಮನ ಉತ್ತರಿಸಲಿಲ್ಲ. "ಪ್ರತಿದಿನ ನಾನೇ ಬಂದು ಇಂಜಕ್ಷನ್ ಕೊಡ್ತೇನೆ. ಇವಳು ಹುಷಾರಾದರೆ ನಿನಗೂ, ನಿನ್ನ ಮಕ್ಕಳಿಗೂ ಕ್ಷೇಮ. ಇನ್ನೂ ಪ್ರಾಯದ ಹೆಂಗಸು. ಹೇಗೆ ಮುದುಕಿಯಂತೆ ಆಗಿದ್ದಾಳೆ ನೋಡು. ಹಾಂ, ಪ್ರತಿದಿನ ಹಾಸಿಗೆ, ಬಟ್ಟೆ ಬದಲಾಯಿಸ್ತಾ ಇರು."

ತಲೆ ಅಲ್ಲಾಡಿಸಿದ ವಾಮನ. ಈತ ವೈದ್ಯನಲ್ಲ, ದೇವತಾಮನುಷ್ಯ! ಮನದಲ್ಲಿ ವಂದಿಸಿದ ಹತ್ತು ಬಾರಿ.

ಅಹಲ್ಯ ಲೀಲಳಿಗಾಗಿ ಅತ್ತಿತ್ತ ನೋಡಿದಳು. ಮನೆಯ ಹಿಂಭಾಗದಲ್ಲಿ ಗೊಜ್ಜು ಅರೆಯುತ್ತಿದ್ದ ಆ ಹುಡುಗಿ ಇತ್ತ ಮುಖ ತಿರುಗಿಸಲಿಲ್ಲ. ಅವಳ ಬದಿಯಲ್ಲಿ ಎಳೆ ಶಿಶು. ಅಹಲ್ಯ ಮಗುವಿನ ಹತ್ತಿರ ಬಂದು ಹತ್ತರ ಎರಡು ನೋಟನ್ನು ಇರಿಸಿ ಲೀಲಳನ್ನು ಗದರಿಕೊಂಡಳು,

"ಕಲ್ಲಿನ ಬದಿಯಲ್ಲಿ ಶಿಶುವನ್ನು ಮಲಗಿಸಿ ಮೆಣಸಿನಕಾಯಿ ಅರೀತಾ ಇದ್ದೀಯಲ್ಲ, ಒಳಗೆ ಮಲಗಿಸು. ಕಣ್ಣಿಗೋ ಮೈಗೋ ಖಾರ ಬಿದ್ದೀತು."

ವಾಮನನ ಕಣ್ಣುಗಳು ನೀರಾಡಿದವು. ಮುತ್ತಣ್ಣನ ಅನ್ಯಾಯವಿಲ್ಲದಿದ್ದಲ್ಲಿ ತನ್ನದು ಸುಖೀಸಂಸಾರವಾಗಿ ಇರ್ತಿತ್ತು. ಬಡವರ ಮನೆಯಲ್ಲಿ ಬಂದವರಿಗೆ ಕೊಡುವುದಕ್ಕೆ ಏನೂ ಇಲ್ಲವಲ್ಲ.

ಅಲ್ಲಿಂದ ಹಿಂದಿರುಗುವಾಗ ಅಹಲ್ಯ ಪ್ರಸನ್ನಳಾಗಿರಲಿಲ್ಲ. ಲೀಲಳ ತಾಯಿಗಾಗಿ ಕನಿಕರ, ವಾಮನನ ಬಡತನದ ಮೇಲೆ ಕ್ರೋಧ. ಅಬ್ಬಬ್ಬ, ಬಡತನದಿಂದ ಆ ಹೆಣ್ಣು ಜೀವಕ್ಕೆ ನರಕಯಾತನೆ!

"ಬಡವರ ಸ್ಥಿತಿ ಹಾಗೇ" ನಡೆಯುತ್ತ ಅಂದ ಅವಿನಾಶ, "ಮಾನವೀಯ ಮೌಲ್ಯಗಳು ಬಡತನದ ಜೊತೆ ಹೋರಾಡುತ್ತ ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತವೆ."

ನಿಧಾನವಾಗಿ ಆವರಿಸಿಕೊಳ್ಳುತ್ತಿದ್ದ ಕತ್ತಲೆಯಲ್ಲಿ ಹನಿಯುತ್ತಿದ್ದ ಮಳೆ ಮೌನವಾಗಿದ್ದು ಹವೆ ಆಹ್ಲಾದಕರವಾಗಿತ್ತು. ಇನ್ನೇನು ಅರ್ಧಗಂಟೆಯಲ್ಲಿ ಕತ್ತಲಾಗುತ್ತದೆ. ಅಷ್ಟರಲ್ಲಿ ಅಹಲ್ಯಳನ್ನು ಮನೆ ತಲುಪಿಸಬೇಕು.

ಪದವು ದಾಟಿ ಡಿಸೋಜನ ಚಹದಂಗಡಿ ಸಮೀಪಿಸಿದಂತೆ ಅಂಗಡಿ ಬದಿಯಲ್ಲಿ ಪೆಟ್ರೋಮ್ಯಾಕ್ಸ್ ದೀಪದ ಬೆಳಕಿನಲ್ಲಿ ಗಂಡಸರ ದೊಡ್ಡ ಗುಂಪು ಕಾಣಿಸಿತು. ಜನರ ಗದ್ದಲದ ಮಧ್ಯೆ, ಅಟ್ಟಹಾಸದ ನಗುವಿನ ಮಧ್ಯೆ ಕೋಳಿಗಳ ಆಕ್ರಂದನ. ಅಲ್ಲಿ ನಡೆದಿತ್ತು ಕೋಳೀ ಕಾದಾಟ. ಎರಡು ಮೂಕಜೀವಿಗಳ ಕಾಲಿಗೆ ಕತ್ತಿ ಕಟ್ಟಿ ಕಾದಾಡಲು ಬಿಟ್ಟು ವಿಚಿತ್ರವಾಗಿ ತಮಾಷೆ ನೋಡುವ ಕ್ರೂರ ಮನರಂಜನೆ. ಅವುಗಳ ಆಕ್ರಂದನದಲ್ಲಿ ಮೈಮರೆಯಿಸುವ ಗತ್ತು !

ಅಲ್ಲಿಂದಾಚೆ ಹಲಸಿನ ಮರದ ಕೆಳಗೆ ಹತ್ತಾರು ಜನರು ಬೀಡಿ ಎಳೆಯುತ್ತ ಹಣವಿಟ್ಟು ಇಸ್ಪೀಟ್ ಆಡುತ್ತಿದ್ದಾರೆ. ಇನ್ನೂ ಮುಂದೆ ಸಂಕೂ ಪೂಜಾರಿಯ ಹೆಂಡದಂಗಡಿ. ಅಲ್ಲಿ ಗಿಜಿಗಿಜಿ ಎನ್ನುವ ಜನರ ಗುಂಪು. ಪೂಜಾರಿ ಬಗ್ಗಿಸಿ ಕೊಡುವ ಹೆಂಡ ಕುಡಿದು ಮೈಮರೆತು ನಗುತ್ತಿದ್ದಾರೆ ಎಲ್ಲರೂ. ಈ ಮುಸ್ಸಂಜೆಯ ವೇಳೆಯಲ್ಲಿ ಅಹಲ್ಯಳೊಡನೆ ಬರಬಾರದಿತ್ತು ಎಂದೆನಿಸಿತು. ರಾತ್ರಿಯಾಗುತ್ತಿದ್ದಂತೆ ಇಲ್ಲಿ ಹೊಸದೊಂದು ಜಗತ್ತೇ ತೆರೆದುಕೊಳ್ಳುತ್ತಿತ್ತು.

ಇಬ್ಬರೂ ಸರಸರನೆ ಮುಂದೆ ಹೆಜ್ಜೆಯಿರಿಸಿದರು. ಪದುವಿನ ಬಯಲು ಕಳೆದರೆ ಕಾಡಿನ ದಾರಿ ನಿರ್ಜನ. ಎಲ್ಲೋ ದೂರದಲ್ಲಿ ಚನಿಯನ ದುಡಿಯ ಸದ್ದು. ಕಾಡಿನ ಹಕ್ಕಿಗಳು ಗೂಡಿಗೆ ಹಿಂತಿರುಗುವ ತವಕದ ಕಲರವ!

"ಹೋಯ್... ನಿಲ್ಲಿ... ನಿಲ್ಲಿ. ಇದೇನು ಈ ಕಡೆ ಸವಾರಿ?" ಹತ್ತಿರದಲ್ಲಿ ಕೇಳಿ ಬಂದ ಪ್ರಶ್ನೆ ಚಕಿತಗೊಳಿಸಿತು ಇಬ್ಬರನ್ನೂ. ಹೊರಳಿ ನೋಡಿದರೆ ಬದಿಯ ಇಳಿಜಾರು ಪ್ರದೇಶದಿಂದ ಮೇಲೇರಿ ಬರುತ್ತಿದ್ದಾರೆ ಸೋಮಶೇಖರ ಶಾಸ್ತ್ರಿಗಳು. ಶುಭ್ರ ಬಿಳಿವಸನಧಾರಿ, ಹಣೆಯ ಮೇಲೆ ಗಂಧ, ವಿಭೂತಿ, ನಾಮ, ತುಂಬಿದ ಗಂಭೀರ ಮುಖ, ಹೆಗಲಿಗೊಂದು ಚೀಲ, ಮಳೆರಕ್ಷಣೆಗೆ ಕೊಡೆ. ಇಲ್ಲೇ ಸಮೀಪ ಯಾರದೋ ಮನೆಗೆ ಹೋದವರು, ಕತ್ತಲೆಗೆ ಮೊದಲೇ ಮನೆ ಸೇರುವ ಆತುರ.

"ಮುಸ್ಸಂಜೆಯ ಹೊತ್ತಿನಲ್ಲಿ ಎಲ್ಲಿಂದ ಬರ್ತಾ ಇದ್ದೀರಿ? ರೋಗಿಗಳನ್ನು ನೋಡಲು ಹೋಗಿದ್ದಿರಾ?" ಕೇಳಿದರು ಶಾಸ್ತ್ರಿಗಳು ಅವರ ಜೊತೆಗೂಡುತ್ತ.

"ವಾಮನನ ಹೆಂಡತಿಯನ್ನು ನೋಡಲು ಹೋಗಿದ್ದೆವು. ಹಾಗೇ ಇವಳಿಗೆ ಈ ಕಡೆ ಒಂದು ತಿರುಗಾಟವೂ ಆಯ್ತು."

"ಹಾಗೋ ! ಸಾಯಂಕಾಲದ ನಂತರ ಈ ಹಾಡಿ, ಕಾಡು ತಿರುಗಾಟ ಯೋಗ್ಯವಲ್ಲ ಮಹಾರಾಯರೆ. ಮಾತಿಗೆ ಅಂದೆ ಅನ್ನಿ."

"ಯಾಕೆ? ಭೂತಪ್ರೇತಗಳ ಹೆದರಿಕೆಯೇ?"

"ಛೇ, ವೈದ್ಯರಾದ ನೀವು ಭೂತಪ್ರೇತಗಳಿಗೆ ಹೆದರ್ತೀರಾ? ಎಷ್ಟು ಹೆಣ, ಅಸ್ಥಿಪಂಜರದ ಜೊತೆ ಗುದ್ದಾಡಿದ್ದೀರೋ ! ಮಾತಿಗೆ ಅಂದೆ ಅನ್ನಿ" ಅಹಲ್ಯಳತ್ತ ಸಹಜ ಸ್ನೇಹದ ನಗು ಬೀರಿದರು.

"ಡಾಕ್ಟರೇ, ಮೊದಲು ಈ ಸ್ಥಳದಲ್ಲಿ ಎಂತಹ ದಟ್ಟಕಾಡು ಇತ್ತು ಗೊತ್ತುಂಟಾ ಮಾರಾಯ್ರೆ! ಒಬ್ಬರೇ ಹಗಲಿನಲ್ಲೂ ತಿರುಗಾಡಲು ಹೆದರಿಕೆ. ಕಾಡಿನ ಹಕ್ಕಿ ಕ್ವಾಕ್ ಅಂದರೂ ಎದೆನಡುಕ. ಈಗ ಈ ಕಾಡು ಅಲ್ಲಲ್ಲಿ ಬೋಳಾಗಿ ಜನವಸತಿ ಕಾಣ್ತಾ ಇದೆ. ನಿಮಗೆ ಗೊತ್ತಲ್ಲ, ಭೂತಪ್ರೇತಗಳ ಕಾಲ ಕಳೆದು ಈಗ ಜನರಿಗೇ ನಾವು ಹೆದರುವ ಕಾಲ ಬಂದಿದೆ. ದಾರಿಯಾಚೆ ಬಯಲು, ಸರಕಾರಿ ಕುಮ್ಕಿ ಭೂಮಿ ಎಲ್ಲಾ ಯಾರ್ಯಾರಿಗೋ ದರಖಾಸ್ತು ಆಗಿಹೋಗಿವೆ. ಹರಿಜನರಿಗೂ ಕೆಲವು ಮೀಸಲಾತಿ ಭೂಮಿ ಹಂಚಿದ್ದಾರಂತೆ. ಅವೆಲ್ಲ ಅವರಿಗೆ ದಕ್ಕದೆ ಹಣದ ಆಮಿಷಕ್ಕೆ ಬೇರೆಯವರಿಗೆ ಸಿಕ್ಕಿದೆ ಅಂತ ಸುದ್ದಿ. ಇವೆಲ್ಲ ಹೇಳುವಂತಹದಲ್ಲ ಅನ್ನಿ."

"ಶಾಸ್ತ್ರಿಗಳೇ..." ಥಕ್ಕನೆ ನೆನಪಾಗಿ ಕೇಳಿದ ಅವಿನಾಶ, "ರಾಜಣ್ಣ ನಿಮ್ಮ ಹತ್ರ ತನ್ನ ಸಮಸ್ಯೆ ಬಗ್ಗೆ ಪ್ರಶ್ನೆ ಕೇಳಲು ಬಂದಿದ್ದನಂತೆ. ಏನಾಯ್ತು ಅವನ ವಿಷಯ?"

"ಒಂದೆರಡು ತಿಂಗಳ ಹಿಂದೆ ಬಂದಿದ್ದ. ಉತ್ತರ ಕೊಟ್ಟಿದ್ದೇನೆ, ಏನು ಉತ್ತರಿಸಿದೆ ಅಂತ ಈಗ ನೆನಪಿಲ್ಲ."

"ನನಗೆ ನೆನಪಿದೆ. ಆದರೆ ಅವನ ಎರಡು ಗಂಡುಮಕ್ಕಳು, ಸೀತಮ್ಮ ನನ್ನ ಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಬೇರೆ ನಿವೃತ್ತಿಯಿಂದ ಖಂಡಿತ ಅಲ್ಲ!"

ಕತ್ತಲೆಯನ್ನು ಬೆಳಗಿಸುವಂತೆ ನಕ್ಕರು ಶಾಸ್ತ್ರಿಗಳು.

"ಒಂದು ಪ್ರಶ್ನೆ ಕೇಳಲೇ?" ಅನುಮಾನಿಸಿದ ಅವಿನಾಶ, "ನೀವು ಜನರ ಪ್ರಶ್ನೆ, ಸಮಸ್ಯೆಗಳಿಗೆ ಕವಡೆಗಳನ್ನು ಫಲಫಲಿಸಿ ಉತ್ತರ ಕೊಡುತ್ತೀರಂತೆ, ಹೇಗೆ?"

ಶಾಸ್ತ್ರಿಗಳು ಮತ್ತೆ ನಕ್ಕರು. "ರೋಗಿಗಳನ್ನು ಪರೀಕ್ಷಿಸಿ ನೀವು ಹೇಗೆ ಕಾಹಿಲೆ ಕಂಡುಹಿಡಿಯುತ್ತೀರಿ? ಅಷ್ಟೇ ಸುಲಭದಲ್ಲಿ ನಾನೂ ಕವಡೆಗಳಿಂದ ಉತ್ತರಿಸಬಲ್ಲೆ! ಅದರ ಗುಟ್ಟು ನನಗೆ ಮಾತ್ರ ಗೊತ್ತು. ಈಗ ಮನೆಗೆ ಬರ್ತೀರಾ?" ಕಾಡುದಾರಿ ಮುಗಿಯುತ್ತಿದ್ದಂತೆ ಕೇಳಿದರು.

ಅವರ ಆಹ್ವಾನವನ್ನು ನಿರಾಕರಿಸುವ ಇಚ್ಛೆಯಿಲ್ಲದಿದ್ದರೂ ಚಿಕಿತ್ಸಾಲಯ ಬಿಟ್ಟು ಆಗಲೇ ಎರಡು ತಾಸು ಕಳೆದಿದೆ. ಕೆಲವರಾದರೂ ತನಗಾಗಿ ಕಾದಿರಬಹುದು. "ಇನ್ನೊಮ್ಮೆ ಬರ್ತೇನೆ" ಎಂದ ನಯವಾಗಿ.

"ಹಾಗಾದರೆ ನಾಡಿದ್ದು ಶುಕ್ರವಾರ ಮನೆಯಲ್ಲಿ ತ್ರಿಕಾಲ ಪೂಜೆಯಿದೆ. ರಾತ್ರೆ ಬಂದರೆ ಮಹಾಪ್ರಸಾದ ತಗೊಂಡು ಹ್ಹೋಗಬಹುದು. ಅಮ್ಮನೂ ಬರಲಿ. ಆದರೆ ಡಾಕ್ಟರೇ, ಆ ದಿನ ನಾನು ಕವಡೆ ಮುಟ್ಟುವುದಿಲ್ಲ. ಬೇರೆ ದಿನಗಳಲ್ಲಿ ಬೆಳಗ್ಗೆ ಎಂಟು ಗಂಟೆಯಿಂದ ರಾತ್ರೆ ಎಂಟರ ತನಕ ನಿರಾತಂಕವಾಗಿ ಕವಡೆಗಳನ್ನು ಆಡಿಸುತ್ತಿರುತ್ತೇನೆ, ಬಂದು ನೋಡಿ!"

ನಗುತ್ತ ಇನ್ನೊಮ್ಮೆ ಇಬ್ಬರನ್ನೂ ಆಹ್ವಾನಿಸಿ ಶಾಸ್ತ್ರಿಗಳು ತಮ್ಮ ಮನೆ ದಾರಿ ಹಿಡಿದರು. ಅವರು ಕಣ್ಮರೆಯಾದೊಡನೆ ಗದರಿಕೊಂಡಳು ಅಹಲ್ಯ.

"ಶಾಸ್ತ್ರಿಗಳಿಗೆ ನಿಮ್ಮ ಮಾತಿನಿಂದ ಬೇಸರವಾಗಿರಬೇಕು. ಅವರನ್ನು ಆ ರೀತಿ ಪ್ರಶ್ನಿಸಬಾರದಿತ್ತು."

"ಯಾಕೆ ನಿನಗೂ ಅವರ ಮೇಲೆ ನಂಬಿಕೆಯೇ?" ನಕ್ಕ ಅವಿನಾಶ. ಅವರ ವ್ಯಕ್ತಿತ್ವ ಅವನಿಗಿನ್ನೂ ಒಗಟು. ಕಲ್ಲಳ್ಳಿಯಲ್ಲಿ ಅವರ ಹೆಸರು ಮನೆ ಮಾತಾಗಿದ್ದು ಅವರಿಗೆ ಜನತೆ ಕೊಡುವ ಗೌರವವೂ ಅಪಾರ. ಮದುವೆ, ಮುಂಜಿ, ಶ್ರಾದ್ಧ, ತಿಥಿಗಳಿಗೆ ಅವರನ್ನು ಕೇಳಿಯೇ ದಿನ ನಿಶ್ಚಯಿಸುವುದು. ಭೂತ-ಪ್ರೇತಗಳ ಗಾಳಿ ಬಡಿದರೆ ಭಸ್ಮ; ಮನೆ ತಾಪತ್ರಯ, ಕೊಟ್ಟಿಗೆಯ ರಕ್ಷಣೆಗೆ ಅವರು ಮಂತ್ರಿಸಿದ ರಕ್ಷೆ. ಅವರ ಒಂದೊಂದು ನುಡಿಯೂ ವೇದ ವಾಕ್ಯ. ತಮ್ಮ ಹೆಗ್ಗಳಿಕೆಯನ್ನು ಯಾರೊಡನೆಯೂ ಕೊಚ್ಚಿಕೊಳ್ಳುವ ಸ್ವಭಾವವಲ್ಲ. ಅವಿನಾಶನಿಗೆ ಅವರ ಮೇಲೆ ಅನಾದರವಿಲ್ಲ, ಗೌರವವಿದೆ. ಆದರೆ ಪ್ರಶ್ನೆ, ಮಂತ್ರ, ಭಸ್ಮಗಳಿಂದ ಜನರನ್ನು ನಂಬಿಸಿ ಅವರ ಅಜ್ಞಾನವನ್ನು ಬೆಳೆಸಿ ತಾವು ದೊಡ್ಡವರಾಗುತ್ತಾ ಇದ್ದಾರಲ್ಲ. ಇದಕ್ಕಿಂತ ಬೇರೆ ಅನ್ಯಾಯವಿದೆಯೇ?"

"ನಮ್ಮ ಜನರಲ್ಲಿ ಏನೋ ದುರ್ಬಲತೆಯಿದೆ" ಅವನೆಂದ, "ಅದರ ಲಾಭವನ್ನು ಇನ್ನೊಬ್ಬ ವ್ಯಕ್ತಿ ಪಡೆದುಕೊಳ್ಳುತ್ತಾನೆ. ಇದೂ ಶೋಷಣೆಯ ಇನ್ನೊಂದು ಮುಖ. ಇನ್ಮೇಲೆ ರಾತ್ರೆ ಶಾಲೆಯಲ್ಲಿ ಇವನ್ನೆಲ್ಲ ಚೆನ್ನಾಗಿ ಖಂಡಿಸಿ ಜನರಿಗೆ ಬುದ್ಧಿ ಹೇಳಬೇಕು."

"ಸರಿಹೋಯ್ತು, ನಿಮ್ಮ ತಲೆಗೆ ಕಲ್ಲು ಬಿದ್ದೀತು ! ಅರೆ, ಅದೇನು?" ಅಹಲ್ಯ ಗಕ್ಕನೆ ನಿಂತಳು. ಅವಿನಾಶನ ಕಾಲುಗಳೂ ತಡೆದವು. ಆಂಜನೇಯ ಗುಡಿಯ ಮುಂಭಾಗದ ಅರಳೀಕಟ್ಟೆಯ ಬದಿಯಲ್ಲಿ ದೊಡ್ಡ ಫಲಕ. ಫಲಕದ ಬರಹ ಕಣ್ಣು ಕುಕ್ಕಿತು.

'ಡಾ. ಮಹಾದೇವ, ಬಿ.ಎಸ್‌ಸಿ., ಆರ್.ಎಮ್.ಪಿ.' ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿದೆ. ಅದರ ಕೆಳಗೆ, 'ಡಾ. ಮಹಾದೇವರ ಹೊಸ ದವಾಖಾನೆ 'ಸೇವಾಸದನ'ವನ್ನು ಶೀಘ್ರದಲ್ಲಿ ಅಂಚೆಕಛೇರಿಯ ಎದುರು ತೆರೆಯಲಾಗುವುದು. ಗಿಡಿಮೂಲಿಕೆಗಳಿಂದ ತಯಾರಿಸಿದ ಶುದ್ಧ ಆಯುರ್ವೇದ ಔಷಧಿ, ಎಣ್ಣೆ, ಘೃತವನ್ನೂ ಕೊಡಲಾಗುತ್ತದೆ. ಎಲ್ಲ ವಿಧದ ರೋಗ, ಹಳೆ ಜ್ವರ, ಹೆಂಗಸರ ಕಾಹಿಲೆ, ಗರ್ಭಿಣಿ, ಬಾಣಂತಿಯರಿಗೆ ಸೂಕ್ತ ಚಿಕಿತ್ಸೆಯನ್ನು ಇಲ್ಲಿ ಮಾಡಲಾಗುತ್ತದೆ.'

ಓದುತ್ತ ಅವಿನಾಶ ಅಟ್ಟಹಾಸ ನಗುನಕ್ಕ. ಇನ್ನೂ ದವಾಖಾನೆ ತೆಗೆದಿಲ್ಲ, ಆಗಲೇ ಪ್ರಚಾರಕ್ಕಾಗಿ ಮೈಲುದ್ದದ ಫಲಕ! ಸರ್ವಕಾಹಿಲೆಗಳಿಗೆ ಕೊಡುವ ಸಂಜೀವಿನಿ ಇದೆಯಂತೆ! ಇದೆಂತಹ ಡಿಗ್ರಿ ಹೊಸದು!

"ನಾವಿಲ್ಲಿಗೆ ಬಂದಾಗ ಒಬ್ಬ ವೈದ್ಯನೂ ಇದ್ದಿರಲಿಲ್ಲ. ಈಗ ಇವನೊಬ್ಬ ಪ್ರತಿಸ್ಪರ್ಧಿ " ಆತಂಕಗೊಂಡಳು ಅಹಲ್ಯ.

"ಪ್ರತಿಸ್ಪರ್ಧಿಯಿಲ್ಲದೆ ಯಾವ ಕ್ಷೇತ್ರದಲ್ಲಿ ಮಜಾ ಇದೆ? ನಾನು ಇಲ್ಲಿಗೆ ಬಂದಂತೆ ಅವನೂ ಬರುತ್ತಾ ಇದ್ದಾನೆ. ತನ್ನ ಅದೃಷ್ಟ ಪರೀಕ್ಷೆಗೆ. ಬರಲಿ, ಇನ್ನು ಇಲ್ಲಿಂದ ಒಬ್ಬಳೇ ಮನೆಗೆ ಹೋಗ್ತಿಯಾ? ನಾನು ಚಿಕಿತ್ಸಾಲಯ ಮುಚ್ಚಿ ಬೇಗ ಬರ್ತೇನೆ, ರಾತ್ರೆಗೆ ಖಾರದ ಅಡುಗೆ ಇರಲಿ."

ಎರಡು ತಾಸುಗಳು ಆಗಲೇ ವ್ಯಯವಾಗಿದ್ದವು. ಚಿಕಿತ್ಸಾಲಯದಲ್ಲಿ ರೋಗಿಗಳು ಕಾಯುತ್ತಿದ್ದಾರೆ ಅವನಿಗಾಗಿ. ದೊಡ್ಡ ದೊಡ್ಡ ಚಿಮಣೀ ದೀಪಗಳ ಬೆಳಕಿನಲ್ಲಿ ಪರೀಕ್ಷಿಸಬೇಕು. ಬೇರೆ ದಿನಗಳಲ್ಲಾದರೆ ಇಷ್ಟು ಹೊತ್ತಿಗೆ ಬಾಗಿಲು ಮುಚ್ಚಿಬಿಡುತ್ತಾನೆ. ಇನ್ನೇನು ಒಂದು ತಿಂಗಳು. ಈಗಾಗಲೇ ವಿದ್ಯುತ್ ಕಂಬಗಳನ್ನು ಎಲ್ಲಾ ಕಡೆಗೂ ಹಾಕಿ ತಂತಿಗಳನ್ನು ಎಳೆಯಲಾಗಿದೆ. ಕಿರಾಣಿ ಅಂಗಡಿಗೂ ಅವನ ಚಿಕಿತ್ಸಾಲಯಕ್ಕೂ ವಿದ್ಯುದ್ದೀಪ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ವಿದ್ಯುತ್ ಇಲಾಖೆಯವರು ಹಳ್ಳಿಗೆ ಬಂದು ಪರಿಶೀಲಿಸಿದ ನಂತರ ಕನೆಕ್ಷನ್ ಕೊಡುತ್ತಾರೆ. ಆಮೇಲೆ ರಾತ್ರೆ ಒಂಬತ್ತರ ತನಕ ತೊಂದರೆಯಿಲ್ಲ.

ಗೋವಿಂದ ಮೆಲ್ಲನೆ ಉಸುರಿದ : "ನಿಮ್ಮನ್ನು ಆಗಿನಿಂದಲೂ ಒಬ್ಬರು ಕಾಯ್ತಾ ಇದ್ದಾರೆ. ಅವರನ್ನು ಮೊದಲು ಕಳುಹಿಸಲೇ? ರೋಗಿಗಳನ್ನೇ?"

"ಬಂದವರು ರೋಗಿಯಿರಲಿ, ದೊಡ್ಡ ಅಧಿಕಾರಿಯಿರಲಿ, ಸರದಿಯಂತೆ ನನ್ನನ್ನು ಭೇಟಿ ಮಾಡಬೇಕು. ಇದು ನನ್ನ ಶಿಸ್ತು."

ಹೊರಗೆ ಕುಳಿತ ಮಹನೀಯರ ಸರದಿ ಬರುವಾಗ ಆರ್ಧಗಂಟೆ ಕಳೆದಿತ್ತು. ಅೀವಿಯಲ್ಲಿ ಬೂಟುಗಾಲನ್ನು ಅಪ್ಪಳಿಸುತ್ತ ದರ್ಪದಲ್ಲಿ ಕುಳಿತರು ಕುರ್ಚಿಯ ಮೇಲೆ. ದೊಡ್ಡ ಚಿಮಣೀ ದೀಪವನ್ನು ಇನ್ನೂ ದೊಡ್ಡದಾಗಿ ಬೆಳಗಿಸಿದ. ಮಧ್ಯವಯಸ್ಸು ಮೀರಿದ ವ್ಯಕ್ತಿ, ಬೋಳುತಲೆ, ಎತ್ತರದ ಹಣೆ, ಗಡ್ಡ ತೆಗೆದ ನುಣ್ಣನೆಯ ಮುಖ. ಉದ್ದ ತೋಳಿನ ಅಂಗಿ ಹಾಕಿದ್ದಾರೆ. ಕೈಯಲ್ಲಿ ಒಂದು ಕಪ್ಪು ಬ್ಯಾಗು. ಇಷ್ಟು ಹೊತ್ತು ಕಾಯುವಂತಾಯಿತೆಂಬ ಅಸಮಾಧಾನದ ಎಳೆ ಮುಖದ ಮೇಲೆ.

"ಕ್ಷಮಿಸಿ, ತುಂಬಾ ಹೊತ್ತು ಕಾಯಿಸಿದೆ, ಏನಾಗಬೇಕು?" ಕೇಳಿದ. ಬಂದವನು ಶ್ರೀಮಂತ ವ್ಯಕ್ತಿಯೆಂದು ನೋಡಿದಾಕ್ಷಣ ತಿಳಿದುಹೋಯಿತು.

"ಒಂದು ತಾಸಾಯಿತು ಬಂದು. ಸೀದಾ ಹೋಗೋಣ ಎಂದುಕೊಂಡಿದ್ದೆ" ಕೈಗಡಿಯಾರದತ್ತ ದೃಷ್ಟಿ ಹಾಯಿಸಿ ಅಂದರು, "ಆಯ್ ಹ್ಯಾವ್ ನೋ ಟಾಯಿಮ್. ನಾಳೆ ನಸುಕಿಗೆ ಹೊರಟು ಹೋಗ್ತೀನಿ. ಅಷ್ಟರಲ್ಲಿ ನಿಮ್ಮನ್ನು ಒಮ್ಮೆ ಭೇಟಿ ಆಗೋಣ ಅಂತ ಬಂದೆ. ನೀವು ತುಂಬಾ ಶಿಸ್ತಿನ ಡಾಕ್ಟರ್ ಅಲ್ಲವೇ?"

"ಹೂಂ, ಶಿಸ್ತು ತಪ್ಪಿದರೆ ಉಗ್ರ ಕೋಪ ಬರುತ್ತದೆ. ನನ್ನಿಂದ ಏನಾಗಬೇಕು ಹೇಳಿ."

"ನನ್ನ ಹೆಸರು ಡಾ. ಮಹಾದೇವ" ಒಂದು ಕಾಗದವನ್ನು ಮೇಜಿನ ಮೇಲಿರಿಸಿದರು. ಅವರ ಪರಿಚಯದ ಕಾಗದ ಅದು.

ಕಣ್ಣುಗೊಂಬೆಗಳನ್ನು ಕಿರಿದುಗೊಳಿಸಿ ನೋಡಿದ, ಸ್ವಲ್ಪ ಹೊತ್ತಿನ ಮೊದಲು ರಸ್ತೆಯಲ್ಲಿ ಓದಿದ ಫಲಕದ ಒಕ್ಕಣೆ ! ಎದುರು ಕುಳಿತವನು ಡಾ. ಮಹಾದೇವ! ಮುಗುಳ್ನಗೆ ಚೆಲ್ಲಿ ಕೈಕುಲುಕಿದ.

"ನಿಮ್ಮ ಪರಿಚಯದಿಂದ ಸಂತೋಷವಾಯಿತು. ಇದೇ ಹಳ್ಳಿಗೆ ಬರ್ತಾ ಇದ್ದೀರಾ? ಬನ್ನಿ. ನನಗಿಂತ ಅನುಭವದಲ್ಲಿ ನೀವು ಎಷ್ಟೋ ಹಿರಿಯರು. ಇಷ್ಟು ವರ್ಷ ಯಾವ ಊರಿನಲ್ಲಿ ಪ್ರ್ಯಾಕ್ಟೀಸ್ ಮಾಡ್ತಾ ಇದ್ದಿರಿ?"

"ಪ್ರ್ಯಾಕ್ಟೀಸ್ ಬಹಳ ಕಡೆ ಮಾಡಿದ್ದೇನೆ. ಹಲವು ಊರು, ಶಹರಿನ ನೀರು ಕುಡಿದವನು. ಅದೇ, ಓದಿದ್ದು ಬಿ.ಎಸ್‌ಸಿ. ಐದು ವರ್ಷ ಸರಕಾರಿ ಆಸ್ಪತ್ರೆಯಲ್ಲಿ ಕಂಪೌಂಡರನಾಗಿದ್ದೆ. ಸತ್ಯ ಸಂಗತಿ ಹೇಳ್ತೇನೆ. ಅಂದರೆ ನಮ್ಮಿಬ್ಬರಲ್ಲಿ ಮುಚ್ಚುಮರೆ ಇರಬಾರದು. ಆಮೇಲೆ ಎಂಟು ವರ್ಷ ಚಿತ್ರದುರ್ಗದಲ್ಲಿ ಖಾಸಗಿ ವೈದ್ಯರ ಬಳಿ ಕಂಪೌಂಡರ್ ಆಗಿದ್ದೆ. ಅಲ್ಲಿ ಅವರಿಗೂ ನನಗೂ ಆಗಿಬರಲಿಲ್ಲ. ನಂತರ ವಿರಾಜಪೇಟೆಗೆ ಬಂದೆ. ಅಲ್ಲಿಯೂ ಡಾಕ್ಟರರ ಬಳಿ ಹೊಂದಿಕೆಯಾಗದೆ ಒಬ್ಬ ಆಯುರ್ವೇದ ಪಂಡಿತರಲ್ಲಿ ಏಳೆಂಟು ವರ್ಷ ಪಳಗಿದೆ, ಹಾಗೇ..."

ಅವಿನಾಶ ಹುಬ್ಬೇರಿಸಿದ. ಡಾ. ಮಹಾದೇವರ ನೆರಳು ವಿಚಿತ್ರವಾಗಿ ಕುಣಿಯುತ್ತಿತ್ತು ಗೋಡೆಯ ಮೇಲೆ.

"ಡಾಕ್ಟರುಗಳೆಲ್ಲ ಶುದ್ಧ ಅಪ್ರಯೋಜಕರು. ಕ್ಷಮಿಸಿ, ನಿಮಗೆ ಹೇಳಲಿಲ್ಲ ಈ ಮಾತನ್ನು. ಎಲ್ಲರಿಗೂ ಹಣ ಮಾಡುವುದೊಂದೇ ಗುರಿ. ನನಗೆ ನೋಡಿ ನೋಡಿ ರೋಸಿ ಹೋಗಿದೆ. ನಿಜ ಹೇಳ್ತೇನೆ, ಬುದ್ಧಿಜೀವಿಗಳು ಇನ್ನೊಬ್ಬರ ಕೈಕೆಳಗೆ ಯಾವತ್ತೂ ಕೆಲಸ ಮಾಡಬಾರದು. ನಮ್ಮ ಸ್ವತಂತ್ರ ವ್ಯಕ್ತಿತ್ವಕ್ಕೆ ಅವಮಾನ. ದೇವರ ಮೇಲೆ ಭಾರ ಹಾಕಿ ಒಂದಾರು ತಿಂಗಳು ನಾನೇ ಜನರಿಗೆ ಔಷಧಿ ಕೊಟ್ಟೆ, ಎರಡು ವರ್ಷದಿಂದ ಹೀಗೇ ಕೊಡ್ತಾ ಇದ್ದೇನೆ. ಕೈಗುಣ ಚೆನ್ನಾಗಿಯೇ ಇದೆ. ರೋಗಿಗೆ ಗುಣ ಸಿಗುತ್ತೆ."

"ನಿಮ್ಮ ಪ್ರಾಮಾಣಿಕ ಮಾತಿಗೆ ಮೆಚ್ಚಿಗೆಯಾಗುತ್ತದೆ."

"ಹೌದು, ಮನುಷ್ಯ ಹಣ, ಅಂತಸ್ತು, ಕೀರ್ತಿಗೆ ಬೆಲೆ ಕೊಡಬಾರದು. ಪ್ರಾಮಾಣಿಕ ವ್ಯಕ್ತಿತ್ವಕ್ಕೆ ಬೆಲೆ ಕೊಡಬೇಕು. ಹಳ್ಳಿ ಜನರ ಚಿಕಿತ್ಸೆಗೆ ನನ್ನ ವಿದ್ಯೆ, ಅನುಭವ ಸಾಕು!"

"ಆದರೆ, ಹಳ್ಳಿಯವರು ನಮಗಿಂತ ಬುದ್ಧಿವಂತರು!"

"ಇರಲಿ, ಅವರ ಚಿಂತೆ ನಮಗೆ ಬೇಡ. ನಿಮ್ಮ ಪ್ರ್ಯಾಕ್ಟೀಸ್ ಚೆನ್ನಾಗಿರುವ ವಿಷಯ ಕೇಳಿದೆ, ಸಂತೋಷ. ಮುಂದಿನ ವಾರ ಕ್ಲಿನಿಕ್ ತೆರೀತೇನೆ. ನೀವೂ ಬಂದು ಬಿಡಿ" ಡಾ. ಮಹಾದೇವ ಸುತ್ತಲೂ ದೃಷ್ಟಿ ಬೀರಿದರು. "ಈ ಚಿಕ್ಕ ಕೋಣೆಯಲ್ಲಿ ಹೇಗೆ ಪರೀಕ್ಷೆ ಮಾಡ್ತೀರಿ?"

ಕೋಣೆ ಚಿಕ್ಕದಾದರೂ ನನ್ನ ಮಂಡೆ ದೊಡ್ಡದಾಗಿದೆಯಲ್ಲ!"

ಡಾ. ಮಹಾದೇವ ಹೋಹೋ ಎಂದು ನಗುತ್ತ, ಮುಂದಿನ ವಾರ ಸೇವಾ ಸದನದ ಸರಳ ಉದ್ಘಾಟನೆಗೆ ಬರಬೇಕೆಂದು ಇನ್ನೊಮ್ಮೆ ಆಹ್ವಾನಿಸಿ ಹೊರಟು ಹೋದರು. ಮೇಜಿನ ಮೇಲಿದ್ದ ಅವರ ಪರಿಚಯದ ಕಾಗದ ನಕ್ಕಿತು ಜೋರಾಗಿ. ವೈದ್ಯಕೀಯ ಶಿಕ್ಷಣ ಪಡೆಯದ ಸಾಮಾನ್ಯ ಕಂಪೌಂಡರ್‌ನಾಗಿದ್ದವನು ಹಳ್ಳಿಯಲ್ಲಿ ವೈದ್ಯ ! ಈ ವೈದ್ಯ ಹಳ್ಳಿಗರಿಗೆ ತನ್ನ ವಿದ್ಯೆ ಸಾಕು ಎನ್ನುತ್ತಾನೆ. ಓ... ದೇವರೇ, ಎಷ್ಟು ವಿಧದಲ್ಲಿ ಜನರನ್ನು ಶೋಷಣೆ ಮಾಡುತ್ತಾನೋ. ಅವಿನಾಶನ ಹೃದಯ ತುಯ್ದಾಡಿತು. ಕಂಪೌಂಡರ್ ವೈದ್ಯನ ಮೇಲೆ ಉದಯಿಸಿತು ತನ್ನದೇ ಸ್ವಾರ್ಥದ ಮತ್ಸರ. ಅವನ ಬೆರಳುಗಳು ಕಾಗದವನ್ನು ಹರಿದು ಚೂರು ಮಾಡಿ ಎಸೆದವು ಕೆಳಗೆ.

ಅದೇ ವಾರದ ಕೊನೆಯಲ್ಲಿ 'ಸೇವಾಸದನ' ಯಾವ ಸದ್ದುಗದ್ದಲವಿಲ್ಲದೆ ಸರಳ ರೀತಿಯಲ್ಲಿ ಪ್ರಾರಂಭವಾಯಿತು. ಅವಿನಾಶ ಮತ್ತು ಅಹಲ್ಯ ಇಬ್ಬರೇ ಅಂದಿನ ವಿಶೇಷ ಅತಿಥಿಗಳು. ಲಘು ಉಪಾಹಾರ, ಪಾನೀಯ ಸ್ವೀಕರಿಸಿದ ನಾಲಿಗೆ ಶುಭ ನುಡಿದವು.

ಒಬ್ಬ ಮುದುಕನಿಂದ ಖರೀದಿಸಿದ ಮೂರು ಕೋಣೆಗಳ ಮನೆ ಈಗ 'ಸೇವಾಸದನ'ವಾಗಿ ರೂಪುಗೊಂಡಿತು. ಸೇವಾಸದನದ ಒಳಗೆ ಬದಿಯಲ್ಲಿ ಎಲ್ಲಿ ನೋಡಿದರೂ ಸೊಪ್ಪಿನ ರಾಶಿ, ವಿವಿಧ ಬೇರುಗಳು, ಗಡ್ಡೆಗಳು, ಮದ್ದು ಅರೆಯಲು ಇಬ್ಬರು ಹೆಣ್ಣಾಳುಗಳನ್ನು ಮತ್ತು ಸಹಾಯಕ್ಕೆ ಒಬ್ಬ ಹುಡುಗನನ್ನು ನಿಯಮಿಸಿದ್ದಾರೆ. ಸಣ್ಣ ಸಣ್ಣ ಎರಡು ಪಾತ್ರೆಗಳಿವೆ ಎಣ್ಣೆ ಕಾಯಿಸಲು. ನೋವಿನ ಎಣ್ಣೆ ಕಾಯಿಸಬೇಕು ಎನ್ನುತ್ತಿದ್ದಾರೆ ಡಾ. ಮಹಾದೇವ.

ಅವರ ಹೆಂಡತಿ ಮತ್ತು ಉದ್ಯೋಗದಲ್ಲಿರುವ ಇಬ್ಬರು ಗಂಡುಮಕ್ಕಳು ಬೆಂಗಳೂರಿನಲ್ಲಿ ಇದ್ದಾರೆ. ಕಲ್ಲಳ್ಳಿಯಲ್ಲಿ ಸರಿಯಾಗಿ ಪ್ರ್ಯಾಕ್ಟೀಸ್ ನಡೆದರೆ ಹೆಂಡತಿಯನ್ನು ಕರೆತರುತ್ತಾರಂತೆ.

ದಿನಸರಿದಂತೆ ಸೇವಾಸದನ ತನ್ನತ್ತ ಜನರನ್ನಾಕರ್ಷಿಸತೊಡಗಿತು. ಅಲ್ಲಲ್ಲಿ ಕೇಳಲಾರಂಭಿಸಿತು ಪ್ರಶಂಸೆಯ ನುಡಿ, ಹೊಗಳಿಕೆ. ಡಾ. ಮಹಾದೇವ ನುರಿತ ಆಯುರ್ವೇದ ಪಂಡಿತನೆಂದೂ, ಹಳೆ ಕಾಹಿಲೆಯನ್ನು ಗುಣಪಡಿಸುವರೆಂದೂ ಅಲ್ಲಲ್ಲಿ ಎದ್ದಿತು ಗುಸುಗುಸು. ಕ್ರಮೇಣ ಧನ್ವಂತರಿ ಚಿಕಿತ್ಸಾಲಯದೊಡನೆ ನೇರ ಸ್ಪರ್ಧೆಗೆ ಇಳಿಯಿತು ಸೇವಾಸದನ.

೮

ಅವಿನಾಶನ ಚಿಕಿತ್ಸೆಯಿಂದ ವಾಮನನ ಹೆಂಡತಿ ಚೇತರಿಸಿಕೊಳ್ಳುತ್ತ ಮಳೆಗಾಲ ಮುಗಿದು ಗದ್ದೆಕೊಯ್ಲಿನ ಸಮಯದಲ್ಲಿ ಮನೆಗೆಲಸ ಮಾಡುವಷ್ಟು ಆರೋಗ್ಯವಂತಳಾದಳು. ವಾಮನನ ಪಾಲಿಗೆ ಅವಿನಾಶ ದೇವರ ಸಮಾನ. ತನ್ನ ಚಿಕಿತ್ಸೆಗೆ ಹೆಚ್ಚಿನ ಹಣ ಆಶಿಸದೆ "ನಿನ್ನ ಕೈಲಾದಷ್ಟು ಕೊಡು" ಎಂದಿದ್ದ.

ಆ ದಿನ ಅವನ ಮನೆಯಿಂದ ಮೋಟಾರ್ ಬೈಕ್‌ನಲ್ಲಿ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ಎದುರಾದ ಚನಿಯ. ಮಹತ್ವದ ವಿಷಯ ಹೇಳಲು ಕಾತರನಾದವನಂತೆ ತಡೆದು ನಿಲ್ಲಿಸಿದ ಬೈಕನ್ನು.

"ಅಯ್ಯನೋರೇ, ಕರಿಯ ಹೇಳ್ದ ನೀವು ಹೊಸ ಕಟ್ಟಡ ಕಟ್ಟಿಸಲು ಜಾಗ ಹುಡುಕ್ತಾ ಇದ್ದೀರಂತೆ" ದೇಹ ಮುದುಡಿಸಿದ ಚನಿಯ, "ನಮ್ಮ ತುಕ್ರನಿಗೆ ಸರಕಾರೀ ಭೂಮಿ ಸಿಕ್ಕಿದೆ. ನೀವು ಬಂದು ನೋಡಿ !" ಎಂದ.

ಈ ದಿನಗಳಲ್ಲಿ ಅವಿನಾಶ ಒಂದು ಆಸ್ಪತ್ರೆಯನ್ನು ಕಟ್ಟಿಸುವ ಆಲೋಚನೆಯಲ್ಲಿ ಸ್ಥಳ ಹುಡುಕುತ್ತಿದ್ದಾನೆ. ಆಸ್ಪತ್ರೆಯಲ್ಲಿ ಒಳ ಮತ್ತು ಹೊರರೋಗಿಗಳಿಗೆ ಉಳಿದುಕೊಳ್ಳುವ ಏರ್ಪಾಟು, ಔಷಧಿಗಳ ಸಂಗ್ರಹದ ವ್ಯವಸ್ಥೆ, ಹೆರಿಗೆ ವಿಭಾಗ, ಅನುಕೂಲವಾದರೆ ಎಕ್ಸರೇ ವಿಭಾಗವನ್ನು ತೆರೆಯುವ ಯೋಜನೆ. ಅವನ ವೃತ್ತಿಯಲ್ಲಿ ಕಲ್ಲಳ್ಳಿ ಚಿನ್ನದ ಗಟ್ಟಿ ನೀಡಿದೆ. ಅದು ತನ್ನ ಸ್ವಾರ್ಥಕ್ಕೆ ವಿನಿಯೋಗವಾಗದೆ ಹತ್ತು ಜನರಿಗೆ ಉಪಕಾರವಾಗಬೇಕು. ಸುಂದರರಾಜನದೂ ಪ್ರೋತ್ಸಾಹ.... ಕಲ್ಲಳ್ಳಿಯಲ್ಲಿ ದೊಡ್ಡ ಆಸ್ಪತ್ರೆಯಾದರೆ ಜನರಿಗೂ ಹೆಮ್ಮೆ, ಅನುಕೂಲ.

ಇತ್ತೀಚೆಗೆ ಡಾ. ಮಹಾದೇವರಲ್ಲಿ ಅವನಿಗೇನೋ ಅನುಮಾನ. ತನ್ನ ಅನುಮಾನವನ್ನು ಸುಂದರರಾಜನಿಗೆ ತಿಳಿಸಲು ಹಲವು ಬಾರಿ ಯೋಚಿಸಿದ್ದ. ಆದರೆ ಒಂದೇ ವೃತ್ತಿ ವೈಷಮ್ಯದಿಂದ ದೂಷಣೆ ಮಾಡುತ್ತಾರೆಂದು ತಿಳಿದಾನೆಂದು ಏನೂ ಹೇಳದೆ ಸತ್ಯವನ್ನು ಒರೆಗಲ್ಲಿಗೆ ಹಚ್ಚಿದ ನಂತರ ಅದೇ ಬಯಲಿಗೆ ಬರುತ್ತದೆಂದು ಸುಮ್ಮನಾದ. ಈ ಮಧ್ಯೆ ಧನ್ವಂತರಿ ಚಿಕಿತ್ಸಾಲಯ ಮತ್ತು ಸೇವಾಸದನದ ನೇರ ಸ್ಪರ್ಧೆಯೇ ಅವನನ್ನು ಹೊಸ ಆಸ್ಪತ್ರೆ ಕಟ್ಟಲು ಉತ್ತೇಜಿಸಿದೆ!

ಇದೇ ಸಮಯದಲ್ಲಿ ಚನಿಯ ಭೂಮಿ ವಿಷಯ ಹೇಳಿದಾಗ ಅರೆಗಳಿಗೆ ಅನುಮಾನಿಸಿದ. ಸೋಂಪನ ಮಗ ತುಕ್ರ ಮತ್ತು ಅವನ ತಮ್ಮನಿಗೆ ಸರಕಾರದಿಂದ ತಲಾ ಇಪ್ಪತ್ತು ಸೆಂಟ್ಸ್ ಸ್ಥಳ ಸಿಕ್ಕಿದೆ ಮನೆ ಕಟ್ಟಿಕೊಳ್ಳಲು. ಸಿಕ್ಕಿದ್ದು ಅವಿನಾಶನ ಮನೆ ಎದುರಿನ ಕಲ್ಲುಬೆಟ್ಟದ ಬದಿಯಲ್ಲಿ. ಹಳ್ಳಿ ಮುಖ್ಯರಸ್ತೆಗೆ ಸಮೀಪ, ಅಂಚೆಕಛೇರಿಗೆ ಹತ್ತಿರ. ಶಾಲೆ ಕೇವಲ ನಾಲ್ಕು ಮಾರು ದೂರ.

ಪ್ರಶಸ್ತವಾದ ಪದುವಿನಂತಹ ಸ್ಥಳ. ಅಡಿಪಾಯ ಹಾಕುವುದು ಸುಲಭ. ಮೊದಲು ಅದೇ ಸ್ಥಳ ಬೇಕೆಂದು ಅವನೂ ಅರ್ಜಿ ಹಾಕಿದ್ದ. ಆದರೆ ಆಗಲೇ ಅದು ಬೇರೆಯವರಿಗೆ ಮಂಜೂರು ಆಗಿದೆ ಎಂಬ ಸುದ್ದಿ ಸಿಕ್ಕಿತ್ತು. ಬೇರೆಯವರು ಎಂದರೆ ಚನಿಯ ಹೇಳಿದ ತುಕ್ರ ಮತ್ತು ಅವನ ತಮ್ಮನಿಗೆ. ಕೆಲವು ತಿಂಗಳ ಮೊದಲು ಚನಿಯ ಇವರಿಬ್ಬರಿಗೂ ಮನೆ ಆಗಬೇಕೆಂದು ಗ್ರಾಮದ ತಹಶೀಲ್ದಾರರು, ಸೆಕ್ರೆಟರಿ ಅವರನ್ನು ಅಂಗಲಾಚಿ ಭೂಮಿ ದರಖಾಸ್ತಿಗೆ ಒದ್ದಾಡಿದ್ದಾನೆ. ಭೂಮಿ ಮಂಜೂರಾಗಿ ಬಂದಾಗ ಅದನ್ನು ಮಾರುವ ತರಾತುರಿ.

"ನಿನ್ನ ಕಡೆಯವರಿಗೆ ಸಿಕ್ಕಿದ ಭೂಮಿ ನನಗ್ಯಾಕೆ?" ಬೈಕ್‌ನಿಂದ ಇಳಿಯದೆ ಅಂದ ಅವಿನಾಶ, "ಸರಕಾರ ಮನೆಗಾಗಿ ಸಹಾಯಧನ ಕೊಡುತ್ತದೆ. ನೀವೇ ಅದನ್ನು ಕಟ್ಟಿಸಿಕೊಳ್ಳಿ."

"ಅವರಿಗೆ ಮನೆಯೂ ಬೇಡ, ಮಣ್ಣೂ ಬೇಡ. ನೀವು ಊರಿನ ಧರ್ಮಾತ್ಮಾ! ನಿಮ್ಮ ಹೆಸರಿಗೇ ಬರೆದು ಹಾಕ್ತಾರಂತೆ. ನಿಮಗೆ ಬೇಡವಾದರೆ ಸೇವಾಸದನದಲ್ಲಿ ಇದ್ದಾರಲ್ಲ, ಅವರಿಗೆ ಬೇಕಂತೆ."

"ಅವರು ಬೇಕು ಅಂದಿದ್ದಾರಾ ಆ ಸ್ಥಳವನ್ನು?" ಕ್ಷಣ ಹೊತ್ತು ಚಿಂತಿಸಿದ. ತನಗೆ ಅಗತ್ಯದ ಸ್ಥಳವನ್ನು ಸೇವಾಸದನದವರು ತೆಗೆದುಕೊಳ್ಳಬಾರದು. ಬೈಕ್ ಹೊರಡಿಸುತ್ತ ಅಂದ, "ನಾಳೆ ಬೆಳಗ್ಗೆ ಬಾ, ಆಲೋಚಿಸಿ ಹೇಳ್ತೇನೆ."

ಆ ರಾತ್ರೆ ಮನೆಗೆ ಬಂದ ಸುಂದರರಾಜನಿಂದ ತಿಳಿದ ವಿಷಯವೇ ಬೇರೆ. ಹರಿಜನಕೇರಿಯ ಒಡೆಯ ಕರಿಯ, ಅವನ ಸ್ನೇಹದ ನೆರಳಿನಲ್ಲಿ ಚನಿಯ ಮತ್ತು ತುಕ್ರ ಈ ಮೂವರದೂ ನರಿಬುದ್ಧಿ. ತಮ್ಮೊಳಗೆ ಮಾಡಿಕೊಂಡ ವ್ಯವಸ್ಥೆಯ ಗುಟ್ಟನ್ನು ಹೊರಹಾಕಲಾರದ ಜಾಣರು. ಕರಿಯ ತನ್ನ ಗುಂಪಿನ ಜನರಿಗೆ ಭೂಮಿ ಬೇಕೆಂದು ಅರ್ಜಿ ಹಾಕಿಸುತ್ತಾನೆ. ಚನಿಯ ಅಷ್ಟಿಷ್ಟು ಹಣದೊಂದಿಗೆ ಅಧಿಕಾರಿಗಳ ಮನೆ ಬಾಗಿಲು, ಕಛೇರಿಗೆ ಅಲೆಯುತ್ತಾನೆ. ತುಕ್ರ ಹಳ್ಳಿಯಲ್ಲಿ ಯಾರಿಗೆ ಭೂಮಿ ಅಗತ್ಯವೆಂದು ತಿಳಿದು ಅವರತ್ತ ಗಾಳ ಎಸೆಯುತ್ತಾನೆ. ಸರಕಾರದಿಂದ ಹರಿಜನ, ಗಿರಿಜನರಿಗೆ ದೊರೆತ ಭೂಮಿಯನ್ನು ಪಡೆದು ಅನುಭವಿಸುವ ಮಂದಿ ಅವರಲ್ಲ, ಇನ್ನಾರೋ ! ಈಗಾಗಲೆ ಹತ್ತಾರು ಹರಿಜನರ ಹೆಸರಿಗಾದ ಭೂಮಿ ಬೇರೆಯವರ ಸೊತ್ತಾಗಿದೆ.

ಕಳೆದ ವರ್ಷ ಮೂನಣ್ಣನಿಗೆ ಸಿಟ್ಟು ಬಂದಿತ್ತು. ಅವನ ಹೆಸರಿಗೆ ದರ್ಖಾಸ್ತು ಆಗಿದ್ದ ಭೂಮಿಯನ್ನು ಮಾರುವ ಸಿದ್ಧತೆಯಲ್ಲಿದ್ದ ಕರಿಯನ ಮಾತಿಗೆ ಬೆಲೆಕೊಡದೆ, ಅವನ ವಿರುದ್ಧ ಸಿಡಿದೆದ್ದು, ಜಪ್ಪಯ್ಯ ಅಂದರೂ ಬಗ್ಗದೆ ಆ ಭೂಮಿಯಲ್ಲಿ ತಾನೇ ಮನೆ ಕಟ್ಟಿಸಿಕೊಂಡು ಎಲ್ಲರ ಕೋಪಕ್ಕೆ ತುತ್ತಾದ. ಕರಿಯ ಸಹ ಅವನೊಡನೆ ಮಾತು ಬಿಟ್ಟ. ಉಳಿದವರೂ ಯಜಮಾನನ ಹೇಳಿಕೆಗೆ ತಲೆಬಾಗಿ ಮೂನಣ್ಣನನ್ನು ತಮ್ಮ ಕೇರಿಯಿಂದ ಹೊರಗಟ್ಟಿದರು.

ಮೂನಣ್ಣ ಹೆದರದೆ ಘಟ್ಟದ ಮೇಲಿನ ಹುಡುಗಿಯನ್ನು ಮದುವೆಯಾಗಿ ತನ್ನ ಪಾಡಿಗೆ ಪ್ರತ್ಯೇಕವಾಗಿದ್ದಾನೆ.

ಸುಂದರರಾಜ ವಿವರಿಸುತ್ತ ಮುಷ್ಟಿ ಗುದ್ದಿದ, "ಈಗ ಚನಿಯ ನಿಮ್ಮ ತಲೆ ಹಿಡಿದಿದ್ದಾನೆ. ನಿಮಗಿಷ್ಟವಿದ್ದರೆ ತಗೊಳ್ಳಿ."

"ಅನ್ಯಾಯ, ಅವರಿಗೆ ಸಿಕ್ಕಿದ್ದು ನನಗೇಕೆ? ಆದರೆ ಆ ಸ್ಥಳ ನನಗೆ ಸಿಕ್ಕಿದ್ದರೆ ತುಂಬಾ ಉಪಕಾರವಿತ್ತು. ಅಲ್ಲ, ಕರಿಯ ಯಾಕೆ ತನ್ನ ಜನರ ಏಳ್ಗೆಯನ್ನು ಸಹಿಸುವುದಿಲ್ಲ?"

"ಹಣ ಯಾವಾಗಲೂ ಸಿಹಿ, ಡಾಕ್ಟರೇ. ಸುಲಭವಲ್ಲಿ ಹಣವನ್ನು ಕೊಳ್ಳೆ ಹೊಡೆಯುವ ಬುದ್ಧಿವಂತಿಕೆ! ಕರಿಯ ಹರಿಜನರ ಗುರಿಕಾರ. ಇದರಿಂದ ಅವನ ತಪ್ಪುಗಳೂ ಮುಚ್ಚಿ ಹೋಗುತ್ತವೆ. ತನ್ನ ಜನರನ್ನೇ ಶೋಷಣೆ ಮಾಡಿ ರಕ್ತ ಹೀರುವ ಜಿಗಣೆ ಅವನು."

ಅಂಗೈ ಮೇಲೆ ಕುಳಿತು ರಕ್ತ ಹೀರುತ್ತಿದ್ದ ಸೊಳ್ಳೆಯನ್ನು ಓಡಿಸುತ್ತ ಕೇಳಿದ ಅವಿನಾಶ, "ನಿಮ್ಮಿಂದ ಈ ಶೋಷಣೆಯನ್ನು ತಪ್ಪಿಸಲು ಸಾಧ್ಯವಿಲ್ಲವೇ?"

"ತಪ್ಪಿಸಲು ನೋಡಿದೆ, ಆದರೆ ಹಣ ಕೈಯಿಂದ ಕೈಗೆ ಹೋಗುತ್ತ ಒಬ್ಬರನ್ನೊಬ್ಬರು ಅದರೊಳಗೇ ಬಚ್ಚಿಡುವುದರಿಂದ ಅಲ್ಲಿ ಶೋಷಣೆ, ಅನ್ಯಾಯ ನಡೆಯುತ್ತಲೇ ಇರುತ್ತದೆ. ಇನ್ನು ಮುಂದಕ್ಕೂ ಹೀಗೇ ಇರುತ್ತೆ ಅನ್ನಿ."

ಅನಂತರ ಮಾತು ಹೊರಳಿದ್ದು ರಾತ್ರಿ ಶಾಲೆಯತ್ತ. ಒಕ್ಕಣ್ಣಿನ ಮಹಾಬಲಯ್ಯ 'ಕೇವಲ ನೂರು ರೂಪಾಯಿಗಳಿಗೆ ಎರಡು ತಾಸು ಗಂಟಲನ್ನು ಒಣಗಿಸಿಕೊಳ್ಳಲಾರೆ, ಇನ್ನೂರು ಬೇಕು' ಎನ್ನುತ್ತಿದ್ದಾರೆ. ಅಷ್ಟು ಹಣ ಕೊಡಲು ಯುವಕ ಮಂಡಳಿಗೆ ಸಾಧ್ಯವಾಗದು. ಬೇರೆ ನಿರುದ್ಯೋಗಿ ಪದವೀಧರ ಯುವಕರಿದ್ದರೂ ಅವರಿಗೆ ರಾತ್ರಿ ಶಾಲೆಯ ಕೆಲಸ ಗೌರವಕ್ಕೆ ಕುಂದು. ಶಿಕ್ಷಕರಿಲ್ಲದಿದ್ದರೆ ಶಾಲೆ ಹೇಗೆ ನಡೆದೀತು?

"ಬೇರೆ ಶಿಕ್ಷಕರು ಸಿಗುವ ತನಕ ಮುದುಕ ಹೇಳಿದಷ್ಟು ಕೊಡೋಣ. ಇನ್ನೊಂದು ವಿಷಯ, ಇದೇ ನವಂಬರ ತಿಂಗಳಲ್ಲಿ ಕುಟುಂಬ ಯೋಜನೆಯ ಸಪ್ತಾಹವನ್ನು ಆಚರಿಸೋಣವೇ? ಪಟ್ಟಣದಿಂದ ಕೆಲವು ಡಾಕ್ಟರರನ್ನು ಉಪನ್ಯಾಸಕ್ಕೆ ಕರೆಯಿಸೋಣ. ಹಾಗೇ ಇಷ್ಟವಿದ್ದ ಗಂಡಸರು ಹೆಂಗಸರು ಶಸ್ತ್ರಚಿಕಿತ್ಸೆ ಮಾಡಿಕೊಳ್ಳಲಿ."

"ಓಹೋ, ಒಳ್ಳೆಯ ಯೋಚನೆ!" ಚಪ್ಪಾಳೆ ತಟ್ಟಿದ ಸುಂದರರಾಜ, "ನಮ್ಮ ಹಳ್ಳಿಗೆ ಆ ಸಮಯಕ್ಕೆ ವಿದ್ಯುದ್ದೀಪ ಬಂದಿರುತ್ತದೆ. ರಾತ್ರಿ ಆ ಬಗ್ಗೆ ಸಾಕ್ಷ್ಯಚಿತ್ರವನ್ನೂ ತೋರಿಸೋಣ. ಡಾಕ್ಟರೆ, ಜನರ ಅಜ್ಞಾನ ತೊಲಗದ ಹೊರತು ಕುಟುಂಬ ಕಲ್ಯಾಣ ಆಗದು. ನೀವೇ ನೋಡಿದ್ದೀರಲ್ಲ, ಹಳ್ಳಿಯಲ್ಲಿ ಹೆಣ್ಣು ಹೆರುವ ಯಂತ್ರ."

"ನಿಜ, ತಮ್ಮ ಸಂಪ್ರದಾಯ, ಧರ್ಮ, ಮತೀಯ ಕುರುಡು ನಂಬಿಕೆಯಲ್ಲಿ ಜನರು ಸುಖೀ ಕುಟುಂಬದತ್ತ ಗಮನಹರಿಸಿದ್ದು ಕಡಿಮೆ. ಶತಮಾನಗಳ ಹಿಂದೆ ಹೇಗಿದ್ದರೋ ಈಗಲೂ ಹಾಗೆಯೇ ಇದ್ದಾರೆ. ಅವರು ಇನ್ನೂ ಬದಲಾಗಿಲ್ಲ!"

"ಅಷ್ಟು ಸುಲಭದಲ್ಲಿ ಬದಲಾಗಲಾರರು, ಡಾಕ್ಟರೆ. ಮನೆಮನೆಗೆ ಹೋಗಿ ತಿಳಿವಳಿಕೆ ಕೊಟ್ಟರೂ ಜನರು ಕಿವಿ ಮೇಲೆ ಹಾಕಿಕೊಳ್ಳಲಾರರು."

"ಕುಟುಂಬ ಯೋಜನೆ ಮಾಡದೆ ಯಾರ ಸಮಸ್ಯೆಯೂ ಪರಿಹಾರವಾಗದು. ಜನರ ಬಡತನ ತೊಲಗಬೇಕಾದರೆ ಮೊದಲು ಹುಟ್ಟುವ ಮಕ್ಕಳ ಸಂಖ್ಯೆ ಸೀಮಿತಗೊಳಿಸಬೇಕು."

"ನೀವು ಹೇಳಿದಂತೆ ಕುಟುಂಬ ಯೋಜನೆಯ ಸಪ್ತಾಹವನ್ನು ಆಚರಿಸೋಣ. ಆದರೆ ಜನರು ನಮ್ಮನ್ನೇ ಗೇಲಿಮಾಡ್ತಾರೆ, ಯಾಕೆ ಗೊತ್ತೇ?"

"ಜನರ ಬಾಯಿಗೆ ಯಾಕೆ ಹೆದರ್ತೀರಿ? ಸಕ್ಕರೆ ರುಚಿಯನ್ನು ಸವಿದವನಿಗೇ ಗೊತ್ತು. ತಿಳಿಯದ ವಿಷಯವನ್ನು ಮೊದಲು ತಿಳಿಸುವಾಗ ಅರ್ಥವಾಗದೆ ಗೇಲಿಮಾಡುವುದು ಸಹಜ. ನಮ್ಮ ದೇಶದ ಜನಸಂಖ್ಯೆಯನ್ನು ಹತೋಟಿಗೆ ತಾರದೆ ಹೋದರೆ ಸರಕಾರ ಅಥವಾ ನಾವು ಮಾಡಿದ ಯೋಜನೆಗಳೆಲ್ಲ ನಿಷ್ಫಲ."

"ನಿಮ್ಮ ಮಾತು ನೂರಕ್ಕೆ ನೂರು ಸತ್ಯ. ಜನರು ನನ್ನ, ನಿಮ್ಮ ಮಾತಿಗೆ ಬೆಲೆ ಕೊಡ್ತಾರೆ ನಿಜ, ಆದರೆ ಹೇಗೆ, ಯಾವ ಬಾಯಲ್ಲಿ ಹೇಳೋಣ? ಎಷ್ಟಾದರೂ ನಾನು ಈಗ ಮದುವೆಯಾಗದ ಉಂಡಾಡಿ. ನೀವು... ಇನ್ನೂ ಮಕ್ಕಳಾಗದವರು! ಮಕ್ಕಳ ಯೋಗ್ಯತೆ ಇವರಿಗೇನು ಗೊತ್ತು? ಎಂದು ಆಡಿಕೊಳ್ಳಲಾರರೇ?"

ಅದೇ ಸಮಯದಲ್ಲಿ ಅಹಲ್ಯ ಕಾಫಿ ಮತ್ತು ಬಾಳೆಹಣ್ಣನ್ನು ತಂದಿರಿಸಿದಳು. ಅವಳ ಮುಖ ಮ್ಲಾನವಾಗಿದ್ದು ಹೆಚ್ಚು ಹೊತ್ತು ನಿಲ್ಲದೆ ಒಳಗೆ ಹೊರಟು ಹೋದಳು. ಅವಿನಾಶನಿಗೂ ಕಾಫಿ ಕಹಿಯಾದಂತೆ ಅನ್ನಿಸಿ ಹಾಗೇ ಕೆಳಗಿರಿಸಿದ.

ಸುಂದರರಾಜ ಹೊರಟುಹೋದ ಮೇಲೆ ಚನಿಯ ಹೇಳಿದ ವಿಷಯವನ್ನು ಚಿಂತಿಸುತ್ತಿದ್ದ ಅವಿನಾಶ ಹೆಂಡತಿಯ ಮುಖವನ್ನು ಗಮನಿಸಲಿಲ್ಲ. ರಾತ್ರಿ ಮಲಗುವ ಸಿದ್ಧತೆಯಲ್ಲಿದ್ದಾಗ ಅವಳ ಅತ್ತು ಕೆಂಪಾದ ಕಣ್ಣುಗಳನ್ನು ನೋಡಿ ಕಣ್ಣರಳಿಸಿದ. ಯಾವಾಗಲೂ ನಗುತ್ತ ಅವನ ಮೈತುಂಬಾ ನಲಿದಾಡುವ ಅಹಲ್ಯ, ಈ ದಿನ ಅಳುತ್ತ ಮೌನವಾಗಿ ಹಾಸಿಗೆ ತುದಿಯಲ್ಲಿ ಮಲಗಿಬಿಟ್ಟಿದ್ದಾಳೆ. ಅಲ್ಲೇ ತಂತಿಯಲ್ಲಿ ನೈಲೆಕ್ಸ್ ಸೀರೆ ಮುದ್ದೆಯಾಗಿ ಬಿದ್ದುದನ್ನು ನೋಡಿ ಸಾಯಂಕಾಲ ಎಲ್ಲೋ ಹೋಗಿ ಬಂದಿದ್ದಾಳೆ ಎಂದುಕೊಂಡು ಕೇಳಿದ,

"ಸಾಯಂಕಾಲ ಮಹಿಳಾ ಸಂಘಕ್ಕೆ ಹೋಗಿದ್ದೆ. ಇವತ್ತೇ ಕಡೆ. ಇನ್ಮೇಲೆ ಸಂಘಕ್ಕೆ ಹೋಗೋದಿಲ್ಲ" ಎಂದಳು ನೀರಸ ಧ್ವನಿಯಲ್ಲಿ.

"ಯಾಕೆ, ಏನಾಯ್ತು ಅಲ್ಲಿ?"

ಅಹಲ್ಯ ಮುಖ ಮುಚ್ಚಿ ಬಿಕ್ಕಿ ಬಿಕ್ಕಿ ಅತ್ತಳು. ಅಲ್ಲಿ ಯಾರೋ ತಮಾಷೆ ಮಾಡಿದರಂತೆ ಅವಳನ್ನು. "ನಿಮಗೆ ಹೇಗೂ ಮಕ್ಕಳಿಲ್ಲ. ಅಧ್ಯಕ್ಷೆಯಾಗಿ ಸಂಘದ ಕಾರ್ಯನಿರ್ವಹಿಸಿರಿ" ಎಂದಳಂತೆ ಒಬ್ಬಳು. "ಮಕ್ಕಳ ತಾಪತ್ರಯವಿಲ್ಲದೆ ಇದ್ದೀರ. ಕಸೂತಿ, ಹೊಲಿಗೆ ಕಲಿಯಲು ಸಮಯವಿದೆ" ಎಂದರಂತೆ ಇನ್ನೊಬ್ಬರು.

"ನನಗೆ ತಲೆಚಿಟ್ಟು ಹಿಡಿಯಿತು" ಬಿಕ್ಕುತ್ತ ಅಂದಳು. "ನನಗೆ ಮಕ್ಕಳಿಲ್ಲದ ಕೊರತೆ ಒಂದೇ ಇವರಿಗೆ ಕಂಡದ್ದು. ನನ್ನ ಯೋಗ್ಯತೆಯನ್ನು ಯಾರೂ ಅಳೆಯಲಿಲ್ಲ. ಸಂಘಕ್ಕೆ ಕೈಚೆಲ್ಲಿ ಹಣ ಕೊಟ್ಟಿದ್ದೆ. ವಾಮನನ ಹೆಂಡತಿಗೆ ಬೇಕಾದಷ್ಟು ದಾನ ಮಾಡಿದ್ದೆ. 'ಇದ್ದವರು ಕೊಡುವುದರಲ್ಲಿ ವಿಶೇಷವಿಲ್ಲ. ಹೇಗೂ ಮಕ್ಕಳಿಲ್ಲ' ಅಂದರು ನನ್ನ ಎದುರಿಗೇ. ಎಂತಹ ಕೊಂಕು ಮಾತು!

ಅವಳನ್ನು ತನ್ನತ್ತ ಎಳೆದುಕೊಳ್ಳುತ್ತ ಎಡಗೈಯಿಂದ ತಲೆ ನೇವರಿಸಿದ. "ಹಳ್ಳಿ ಹೆಂಗಸರು ಕಂಡದ್ದನ್ನು ನೇರವಾಗಿ ಆಡಿಬಿಡ್ತಾರೆ. ಒಳಗೊಂದು ಹೊರಗೊಂದು ನಯವಾಗಿ ಹೇಳಲು ತಿಳಿಯದು."

"ಮತ್ತೆ ಲೀಲಾ... ಚೋಟುದ್ದ ಪೋರಿ, 'ಅಮ್ಮ, ನಿಮ್ಮ ಮನೆಯಲ್ಲಿ ಒಂದು ಮಗುವೂ ಇಲ್ಲ. ನೀವು ಬಂಜೆಯಂತೆ' ಎಂದೆನ್ನಬೇಕೇ? ಎಲ್ಲರೂ ನನ್ನನ್ನು ಬಂಜೆ ಅಂತ ಆಡಿಕೊಳ್ತಿದ್ದಾರೆ."

ಅವನ ಭುಜದ ಮೇಲೆ ತಲೆಯಿರಿಸಿ ಮತ್ತೆ ಬಿಕ್ಕಳಿಸಿದಳು. "ನನಗೆ ಕೇಳಿ ಕೇಳಿ ಸಾಕಾಯ್ತು. ನಿಮ್ಮ ಸ್ನೇಹಿತ ಸುಂದರರಾಜನೂ ಈಗ ತಾನೇ ನಿಮ್ಮೆದುರಿಗೆ 'ನೀವು ಇನ್ನೂ ಮಕ್ಕಳಾಗದವರು' ಎಂದನಲ್ಲ. ಹಾಗೆ ಎದುರಿಗೆ ನೇರವಾಗಿ ಹೇಳಿಬಿಡುವುದೇ?"

ಅವನ ಸಾಂತ್ವನದ ನುಡಿ ಅವಳನ್ನು ಸಮಾಧಾನಪಡಿಸಲಿಲ್ಲ.

"ನಾನೊಂದು ಮಾತು ಕೇಳಲೇ? ಸೇವಾಸದನದಲ್ಲಿ ನನ್ನಂಥವಳಿಗೆ ಆಯುರ್ವೇದ ಔಷಧಿ ಕೊಡ್ತಾರಂತೆ. ಹೋಗಿ ಮಾಡಿಸಲೇ?"

ಅಹಲ್ಯಳಿಂದ ನಿರೀಕ್ಷಿಸಿರದ ಈ ಮಾತಿನಿಂದ ಅವಿನಾಶ ದಿಙ್ಮೂಢನಾದ. ಆ ಕಂಪೌಂಡರ್ ಡಾಕ್ಟರು ಇವಳಿಗೆ ಔಷಧಿ ಕೊಡುತ್ತಾನೆಯೇ? ಅವನು ಆಯುರ್ವೇದ ಔಷಧಿ ಕೊಡುತ್ತಾನೋ ಅಥವಾ ಅರ್ಧಂಬರ್ಧ ಆಲೋಪತಿ ಔಷಧಿ ಕೊಡುತ್ತಾನೋ, ದೇವರೇ ಬಲ್ಲ ! ಅವನ ನಯವಿನಯದ ಹಿಂದೆ ಇನ್ನೇನೋ ಒಂದು ಸೋಗು. ಮೋಸ ಇರಲೇಬೇಕು.

"ಇವತ್ತು ಪದ್ಮಲೆ ಬಂದಿದ್ದಳು" ಅಹಲ್ಯ ನುಡಿದಳು. "ಅನೇಕ ಸಮಯದಿಂದ ಕಾಡುತ್ತಿದ್ದ ತಲೆನೋವು ಡಾ. ಮಹಾದೇವರ ಔಷಧಿಯಲ್ಲಿ ಸಂಪೂರ್ಣ ಕಡಿಮೆಯಾಯಿತಂತೆ. ಗುರುವಿನ ಸಣ್ಣ ಮಗು ಭೇದಿಯಲ್ಲಿ ನರಳುತ್ತಿತ್ತಲ್ಲ, ನೀವು ಮೂರು ತಿಂಗಳು ಚಿಕಿತ್ಸೆ ಮಾಡಿದರೂ ಕಡಿಮೆಯಾಗಿರ್ಲಿಲ್ಲ, ಅದೇ ಅವರ ಔಷಧಿಯಲ್ಲಿ ಟಕ್ ಅಂತ ವಾರದಲ್ಲಿ ಭೇದಿ ನಿಂತು ಮಗು ಹುಷಾರು ! ನಾವು ತಿಳಿದಂತೆ ಅವರು ಪಡಪೋಶಿ ಡಾಕ್ಟರಲ್ಲ!"

"ನನಗಿಂತ ಅವರ ಮೇಲೆ ನಿನಗೆ ನಂಬಿಕೆ ಬಂದಿದೆಯಲ್ಲವೇ?" ಗೊಣಗುತ್ತ ಅವಳ ಮುಖದತ್ತ ನೋಡುವ ಸಾಹಸ ಮಾಡಿದ. ತನ್ನ ಪ್ರತಿಸ್ಪರ್ಧಿ ಮಹಾದೇವರನ್ನು ತನ್ನ ಹೆಂಡತಿ ಹೊಗಳಿದಳೇ? ತನಗೆ ಚುಚ್ಚುನುಡಿ ಆಡಿದಳೇ? 'ನಿನಗೆ ಖಂಡಿತ ಮಕ್ಕಳಾಗುತ್ತವೆ' ಎಂದು ತಾನು ಹೇಳಿದ ಮಾತಿನಲ್ಲಿ ಅಪನಂಬಿಕೆ ತಳೆದ ಅವಳ ಮನಸ್ಸು ನೆಗೆಯುತ್ತಿದೆ ಬೇರೆಲ್ಲಿಗೋ! ಅವಳು ಸೇವಾಸದನಕ್ಕೆ ಕಾಲಿಟ್ಟರೆ ತಮಗಿಬ್ಬರಿಗೂ ಅವಮಾನ.

ಅವಳೊಂದಿಗೆ ಮಾತನಾಡುವ ಇಚ್ಛೆಯಿಲ್ಲದೆ ದೀಪ ಆರಿಸಿದ. ಕಿಟಕಿಯ ಆಚೆ ಯಾರೋ ನಾಲ್ಕಾರು ಜನರು ಹೆಂಡ ಕುಡಿದು ಜಗಳವಾಡುವ ಗಲಾಟೆ. ಎಲ್ಲೋ ನಾಯಿ ಬೊಗಳಿದ ಸದ್ದು.

ಕಣ್ಣೆವೆ ಮುಚ್ಚಿದರೂ ಎದುರಿನಲ್ಲಿ ಬಂದು ನಿಲ್ಲುತ್ತಿದ್ದಾನೆ ಮಹಾದೇವ. ತನಗಿಂತಲೂ ಅವನು ಹೆಚ್ಚು ಜನಪ್ರಿಯನಾಗುವನೇ ಎಂಬ ಸಂಶಯ ಬಲಿಯುತ್ತಿದೆ. ತನಗೆ ಕಲ್ಲಳ್ಳಿ ಜನರಿಂದ ದೊರೆತ ವಿಶ್ವಾಸವನ್ನು ಎಂದಿಗೂ ಕಳೆದುಕೊಳ್ಳಬಾರದು. ಶೀಘ್ರದಲ್ಲಿ ಆಸ್ಪತ್ರೆ ಕಟ್ಟಿಸಿ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಚನಿಯ ಹೇಳಿದ ಸ್ಥಳವನ್ನು ತಾನು ತೆಗೆದುಕೊಂಡರೆ ಪ್ರಯೋಜನ ಹೆಚ್ಚು. ಅದಕ್ಕೆ ಹೊಂದಿರುವ ಸರಕಾರಿ ಭೂಮಿಯನ್ನೂ ದರ್ಖಾಸ್ತು ಮಾಡಿಕೊಂಡರೆ ಆಸ್ಪತ್ರೆಯ ಹೊರ ಆವರಣಕ್ಕೂ ಒಂದು ಶೋಭೆ. ಆದರೆ ತನ್ನ ಆದರ್ಶವೇನು? ನ್ಯಾಯವೇನು? ತಾನೂ ಅಕ್ರಮ ದಾರಿಯಲ್ಲಿ ಹೆಜ್ಜೆಯಿರಿಸಬೇಕೇ?

ಸ್ಥಳದ ಆಲೋಚನೆಯನ್ನು ತಳ್ಳಿಹಾಕುವ ಮೊದಲೇ ತನ್ನ ಮನೆಯ ಎದುರು ಸೇವಾಸದನದ ಕಟ್ಟಡ ಮೇಲೇರಿ ಬಂದಂತೆ, ಅಲ್ಲಿ ಬೆಲ್ಲಕ್ಕೆ ಮುತ್ತಿದ ಇರುವೆಯಂತೆ ಜನ ಸೇರುವುದನ್ನು ಕಂಡಾಗ ಕಸಿವಿಸಿಗೊಂಡ. ತನ್ನ ಪ್ರತಿಸ್ಪರ್ಧಿ ತನಗಿಂತ ಮೇಲೇರಬಾರದು. ಒಂದು ಉತ್ತಮ ಕಾರ್ಯಕ್ಕೆ ಅನ್ಯಾಯದಿಂದ ಮಾರುವ ಭೂಮಿಯನ್ನು ತೆಗೆದುಕೊಂಡರೆ ತಪ್ಪೇನಿಲ್ಲ. ತನ್ನ ಈ ಸ್ವಾರ್ಥ ಸಾರ್ವಜನಿಕರಿಗೆ ಉಪಕಾರದ ಲಾಭ ಕೊಡುವಂತಿದೆ.

ಅವನು ಅಹಲ್ಯಳ ಸಲಹೆ ಕೇಳಲು ಬದಿಗೆ ಹೊರಳಿದರೆ ಅವಳು ಹಾಸಿಗೆ ಬಡಿಯುತ್ತ ಸುಮ್ಮನೆ ಕುಳಿತಿದ್ದಾಳೆ ಮೂದೇವಿಯಂತೆ.

ಮುಂದೆ ಒಂದು ವಾರದಲ್ಲಿ ತುಕ್ರ ಮತ್ತು ಅವನ ತಮ್ಮನ ಹೆಸರಿಗಾದ ನಲ್ವತ್ತು ಸೆಂಟ್ ಸ್ಥಳ ಅವಿನಾಶನ ಹೆಸರಿಗೆ ವರ್ಗಾಯಿಸಲಾಯಿತು. ತಹಶೀಲ್ದಾರರು, ಇನ್ನೂ ಅನೇಕ ಅಧಿಕಾರಿಗಳು ಬಂದು ಸ್ಥಳವನ್ನು ಪರೀಕ್ಷಿಸಿ, ಅವಿನಾಶನ ಕೈಕುಲುಕಿ, ತಮ್ಮ ಜೇಬನ್ನು ತುಂಬಿಸಿಕೊಂಡು ಹೊರಟು ಹೋದರು. ತುಕ್ರನ ಹೆಸರಿನಲ್ಲಿ ಗುರಿಕಾರ ಕರಿಯ, ಚನಿಯ, ತುಕ್ರರೆಲ್ಲ ಸಂತೃಪ್ತರಾದರು. ಅವರಿಂದ ತುಕ್ರ ಮತ್ತು ಅವನ ತಮ್ಮನಿಗೆ ಒಂದು ವಾರಕ್ಕೆ ಬೇಕಾದ ಹೆಂಡ, ನಾಲ್ಕು ಕೋಳಿಗಳು, ಅರ್ಧ ಮುಡಿ ಅಕ್ಕಿ ಮುಫತ್ತಾಗಿ ದೊರೆತವು.

ಹೊಸ ಕಟ್ಟಡದ ಕೆಲಸವು ಹೆಚ್ಚು ಉತ್ಸಾಹದಿಂದ ಪ್ರಾರಂಭವಾಯಿತು ಆ ಸ್ಥಳದಲ್ಲಿ. ನವೆಂಬರ್ ತಿಂಗಳ ಮೊದಲ ವಾರದಲ್ಲಿ ಕಟ್ಟಡದ ಅಡಿಪಾಯ ಮುಗಿದು ಗೋಡೆ ಏರಿಸಲು ಪ್ರಾರಂಭ.

ನವಂಬರ್ ತಿಂಗಳ ಅಂತ್ಯದಲ್ಲಿ ಅವಿನಾಶನ ನೇತೃತ್ವದಲ್ಲಿ ಕಲ್ಲಳ್ಳಿಯಲ್ಲಿ ಕುಟುಂಬ ಯೋಜನಾ ಸಪ್ತಾಹ ನೆರವೇರಿತು. ಅವಿನಾಶನ ಮಾತು, ಪತ್ರಗಳಿಗೆ ಬೆಲೆ ಕೊಟ್ಟು ಬೇರೆ ಬೇರೆ ಪಟ್ಟಣಗಳಿಂದ ಅವನ ಪರಿಚಿತ ವೈದ್ಯ ಮಿತ್ರರನೇಕರು ಬಂದು ಅವನಲ್ಲಿ ತಂಗಿದರು. ಕಲ್ಲಳ್ಳಿ ರಸ್ತೆಯಲ್ಲಿ ಕಾರುಗಳ ಸಾಲೇ ಸಾಲು. ವಿಶೇಷ ಕೆಲಸಗಾರರು, ಪಟ್ಟಣದ ದಾದಿಯರು, ಸಿಬ್ಬಂದಿ ವರ್ಗ, ಸಾಕ್ಷ್ಯಚಲನಚಿತ್ರ ಮಂಡಳಿಯವರು ಸುಂದರರಾಜ ಮತ್ತು ಅವನ ಮಿತ್ರರ ಮನೆಗಳಲ್ಲಿ ಉಳಿದುಕೊಂಡರು. ಮೂವರು ಸ್ತ್ರೀ ವೈದ್ಯರೂ ಆಗಮಿಸಿದರು. ಪ್ರಾಥಮಿಕ ಶಾಲೆಯಲ್ಲಿ ಗಂಡಸರಿಗೂ, ಮಹಿಳಾ ಸಂಘದಲ್ಲಿ ಹೆಂಗಸರಿಗೂ ಶಸ್ತ್ರಚಿಕಿತ್ಸೆ ಮಾಡುವ ಏರ್ಪಾಟು ಮಾಡಲಾಯಿತು.

ಕಲ್ಲಳ್ಳಿಯವರಿಗೆ ಹೊಸ ಬಗೆಯ ನೋಟ. ವಾರವೆಲ್ಲ ಜಾತ್ರೆಯಂತೆ ಸೇರಿದರು ಹಳ್ಳಿ ಜನರು. ಪ್ರತಿದಿನ ವೈದ್ಯರಿಂದ ಸುಖೀ ಕುಟುಂಬದ ಮೇಲೆ ಉಪನ್ಯಾಸ, ಬೋಧನೆ. ರಾತ್ರಿ ಕುಟುಂಬ ಯೋಜನೆಯ ಸಾಕ್ಷ್ಯಚಿತ್ರ ಪ್ರದರ್ಶನ. ದೊಡ್ಡ ಸಂಸಾರದ ಕಷ್ಟ, ಚಿಕ್ಕ ಸಂಸಾರದ ಸುಖವನ್ನೂ ಎತ್ತಿತೋರಿಸಲಾಯಿತು. ಜನರು ನೋಡಿದರು, ಕೇಳಿದರು, ಅರಿತುಕೊಂಡರು. ರಾತ್ರಿ ಹಗಲು ವಿದ್ಯುದ್ದೀಪದ ಝಗಝಗಿಸುವ ಬೆಳಕಿನಲ್ಲಿ ತಮ್ಮ ಬಡತನ, ಆರ್ಥಿಕ ಮುಗ್ಗಟ್ಟು, ಆಹಾರದ ಅಭಾವಕ್ಕೆ ದೊಡ್ಡ ಸಂಸಾರವೇ ಕಾರಣವೆಂದು ಹೆಚ್ಚಿನವರಿಗೆ ಮನವರಿಕೆಯಾಯಿತು. ರಾತ್ರಿ ಶಾಲೆಯಲ್ಲಿ ಮಾಡುವ ಉಪನ್ಯಾಸಕ್ಕಿಂತ ಈ ಸಪ್ತಾಹ ಹೆಚ್ಚು ಪರಿಣಾಮಕಾರಿಯಾದಂತೆ ತೋರಿತು.

ಆದರೆ ಹೊಸ ಬದಲಾವಣೆಯನ್ನು ಸ್ವೀಕರಿಸಲು ಜನರಿಗೆ ಇನ್ನೂ ಭೀತಿ. ಹೀಗಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಎಲ್ಲೋ ಕೆಲವರು ಮುಂದೆ ಬಂದರು. ಉಳಿದವರನ್ನು ಹುರಿದುಂಬಿಸಲು ಯತ್ನಿಸಿದಾಗ ಅಲ್ಲಲ್ಲಿ ಕೇಳಿಸಿತು ಗೊಣಗಾಟ.

"ನಮ್ಮ ವೈಯಕ್ತಿಕ ವಿಷಯದಲ್ಲಿ ಇವರಿಗೇಕೆ ಅಧಿಕಪ್ರಸಂಗತನ?"

ವೈಯಕ್ತಿಕ ಪ್ರಶ್ನೆಯೇ ರಾಷ್ಟ್ರದ ಪ್ರಶ್ನೆಯೆಂದು ಬೋಧಿಸಿದ್ದು ವ್ಯರ್ಥ. ಸಪ್ತಾಹ ಮುಗಿದು ಅತಿಥಿಗಳು ಹೊರಟುಹೋದ ಮೇಲೆ ಅವಿನಾಶ ಮತ್ತು ಸುಂದರರಾಜರಿಗೆ ತಮ್ಮ ಕಾರ್ಯ ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ ಎಂದೆನಿಸಿತು. ಎಲ್ಲ ವರ್ಗಗಳಿಂದ ಬೆಂಬಲ, ಪ್ರೋತ್ಸಾಹ ಸಿಗಲಿಲ್ಲ. ಡಾ. ಮಹಾದೇವ ಬೆಂಗಳೂರಿಗೆ ಹೋದರು. ಒಂದು ವಾರದ ನಂತರ, ಈ ಸಪ್ತಾಹ ಮುಗಿದ ಮೇಲೆ ಹಿಂದಿರುಗಿದರು. ಅವರಿಗೇಕೆ ಈ ಅಳುಕು? ಸೋಮಶೇಖರ ಶಾಸ್ತ್ರಿಗಳು, "ಜನರನ್ನು ಸುಧಾರಿಸುವ ನೆಪದಲ್ಲಿ ಅವರ ನಂಬಿಕೆಯನ್ನು ಕಸಿಯಬೇಡಿ. ಅವರ ಪಾಡಿಗೆ ಅವರಿರಲಿ. ಇದರಿಂದ ನಿಮಗೂ ಒಳಿತು" ಎಂದರು.

ಸಪ್ತಾಹಕ್ಕೂ ನಂಬಿಕೆಗೂ ಎಲ್ಲಿ ನಂಟು? ಆದರೂ ಅವಿನಾಶನ ವಿರುದ್ಧ ಅಲ್ಲಲ್ಲಿ ಕೇಳಲಾರಂಭಿಸಿತು ಟೀಕೆಗಳು.

೬

ಕುಟುಂಬ ಯೋಜನಾ ಸಪ್ತಾಹಕ್ಕೆ ಪರವೂರಿನಿಂದ ಬಂದ ವೈದ್ಯರಲ್ಲಿ ಹೆಚ್ಚಿನವರು ಸೋಮಶೇಖರ ಶಾಸ್ತ್ರಿಗಳ ಪರಿಚಯ ಮಾಡಿಕೊಂಡರೆಂದು ಅವಿನಾಶನಿಗೆ ತಿಳಿದುಬಂತು. ಊರಿನ ಗಣ್ಯವ್ಯಕ್ತಿ, ವಿದ್ವಾಂಸ, ಪರಿಚಯ ಮಾಡಿಕೊಂಡದ್ದು ಒಳ್ಳೆಯದೇ. ಆದರೆ ಅವರಲ್ಲಿ ಒಂದಿಬ್ಬರು ತಮ್ಮ ದವಾಖಾನೆಯಲ್ಲಿ ಚೆನ್ನಾಗಿ ಪ್ರ್ಯಾಕ್ಟೀಸ್ ಆಗಬೇಕೆಂದು ಶಾಸ್ತ್ರಿಗಳಿಂದ ಮಂತ್ರಿಸಿದ ತಗಡನ್ನು ತೆಗೆದುಕೊಂಡಿದ್ದಾರೆ! ಅವಿನಾಶನಿಗೆ ವಿಸ್ಮಯ, ವೈದ್ಯಕೀಯ ಪದವಿ ಪಡೆದ ತನ್ನ ಮಿತ್ರರು ಶಾಸ್ತ್ರಿಗಳ ತುಂಡು ಕಾಗದ, ನೂಲಿಗೆ ಯಾಕೆ ಬೆಲೆ ಕೊಡುತ್ತಾರೆ? ಪ್ರ್ಯಾಕ್ಟೀಸು ಚೆನ್ನಾಗಿಲ್ಲ ಎಂದ ಮೇಲೆ ಅವರ ಕೈಗುಣ ಚೆನ್ನಾಗಿಲ್ಲ ಎಂದರ್ಥ. ಅದಕ್ಕಾಗಿ ರಕ್ಷೆಯೆ?

ಶಾಸ್ತ್ರಿಗಳು ಯಾವಾಗಲೋ ಅಂದಿದರು, 'ನಮ್ಮ ಮನೆಗೆ ಬನ್ನಿ. ಬೆಳಗ್ಗೆ ಎಂಟು ಗಂಟೆಯಿಂದ ರಾತ್ರಿ ಎಂಟರ ತನಕ ನಿರಾತಂಕವಾಗಿ ಕವಡೆ ಆಡಿಸುತ್ತಿರುತ್ತೇನೆ' ಎಂದು. ಅಂದು ತ್ರಿಕಾಲ ಪೂಜೆಗೆ ಹೋಗಿದ್ದರೂ ಕವಡೆ ಆಡಿಸುವುದನ್ನು ನೋಡಿರಲಿಲ್ಲ. ಕಲ್ಲಳ್ಳಿ ಸಡಗರ ಮುಗಿದ ಮೇಲೆ ಹೋಗೋಣ ಎಂದುಕೊಂಡಿದ್ದಾನೆ.

ಈ ಮಧ್ಯೆ ಕಲ್ಲುಬೆಟ್ಟದ ವಿಗ್ರಹ ಪ್ರಸಿದ್ಧಿಪಡೆಯುತ್ತಿದೆ. ಪ್ರತಿದಿನ ಬೆಳಗ್ಗೆ ಮತ್ತು ರಾತ್ರೆ ಅದಕ್ಕೆ ಮಹಾಪೂಜೆ. ಜನರೂ ಪೂಜೆಗಾಗಿ ಪ್ರತಿ ದಿನ ಬೆಟ್ಟವೇರುತ್ತಿದ್ದಾರೆ. ಜನರ ಇಷ್ಟಾರ್ಥವನ್ನು ದೇವತೆ ಪೂರೈಸುತ್ತಾಳೆ ಎನ್ನುವ

ಸುದ್ದಿ ಕಲ್ಲಳ್ಳಿಯ ಇಂಚು ಇಂಚು ನೆಲವನ್ನು ತುಂಬುತ್ತಿದೆ. ಕಾಲಿಲ್ಲದ ತನ್ನ ಮಗನನ್ನು ಒಬ್ಬಾತ ಬೆಟ್ಟದ ಮೇಲೆ ಹೊತ್ತುಕೊಂಡು ಹೋಗಿದ್ದನಂತೆ. ಹಿಂದಿರುಗುವಾಗ ಅವನ ಕಾಲುಗಳು ಸರಿಯಾಗಿದ್ದವಂತೆ! ಎಲ್ಲಾ ವಿಗ್ರಹದೇವತೆಯ ಮಹಿಮೆ ! ಕುಟುಂಬ ಯೋಜನಾ ಸಪ್ತಾಹಕ್ಕೆ ಬಂದ ದೂರದೂರಿನವರೆಲ್ಲ ಬೆಟ್ಟ ಏರಿ ವಿಗ್ರಹದ ಮಹಿಮೆ ಕೇಳಿ ದಂಗಾಗಿದ್ದಾರೆ. ಒಂದು ವಿಶಿಷ್ಟ, ನಿಗೂಢ, ವಿಸ್ಮಯದ ಹೊಸತನದ ಪ್ರಭಾವ!

"ಜನಕ್ಕೆ ಬುದ್ಧಿಯಿಲ್ಲ" ಅಹಲ್ಯ ತಮಾಷೆ ಮಾಡುತ್ತ ಅಂದಿದ್ದಳು. "ಆ ವಿಗ್ರಹ ಒಂದು ಆಟದ ಗೊಂಬೆಯಂತೆ ಇದೆ. ಅದಕ್ಕೆ ಅಲ್ಲಿ ಪೂಜೆ ! ಹೆಡ್ಡ ಜನರು. ತಮ್ಮ ಕಲ್ಪನೆಯ ಮೇಲೆ ಜನರು ನಂಬಿಕೆಯನ್ನು ಬೆಳಸಿಕೊಳ್ಳುತ್ತಿದ್ದಾರೆ. ನಾಲ್ಕು ಜನರು ಹೊಗಳಿದರೆ ಸೈ, ಎಲ್ಲರೂ ಸೇರಿಸಿದರು ತಮ್ಮ ಧ್ವನಿ. ಅಂತೆ ಕಂತೆಯ ಪವಾಡದಿಂದ ಇತಿಹಾಸದ ಸೃಷ್ಟಿ."

ನಿನ್ನೆ ಶ್ರೀಕಂಠಯ್ಯನವರ ಕಾಗದ ಬಂದಿತ್ತು. 'ಕಲ್ಲಳ್ಳಿಯ ವಿಗ್ರಹ ದೇವತೆ ವಿಷಯ ಪೇಪರಿನಲ್ಲಿ ಬಂದಿತ್ತು. ನಮಗೆ ಅದನ್ನು ಇನ್ನೊಮ್ಮೆ ನೋಡುವ ಆಸೆಯಾದುದರಿಂದ ನಾನೂ, ನಿನ್ನ ಅಮ್ಮನೂ ಸದ್ಯದಲ್ಲಿ ಅಲ್ಲಿಗೆ ಬರಲಿದ್ದೇವೆ.'

ಅಬ್ಬಬ್ಬ ! ವಿಗ್ರಹದ ಕೀರ್ತಿ ಬಹಳ ದೂರದ ತನಕ ಹಬ್ಬಿದೆ. ಬೆಟ್ಟದ ಬೈರಾಗಿ ಸಾಮಾನ್ಯ ಕುಳವಲ್ಲ. ಅವನನ್ನು ಭೇಟಿಯಾಗಬೇಕು, ಹಾಗೇ ಬರುತ್ತಾ ಶಾಸ್ತ್ರಿಗಳನ್ನು ನೋಡಬೇಕು ಎಂದು ಈ ಆದಿತ್ಯವಾರವನ್ನು ನಿಶ್ಚಯಿಸಿದ. ಆದರೆ ಅಹಲ್ಯಳಿಗೆ ಹಾಸಿಗೆ ಬಿಟ್ಟು ಏಳುವಾಗಲೇ ಜ್ವರ, ತಲೆನೋವು, ಅಹಲ್ಯಳಿಗೆ ಬೆಟ್ಟ ಏರುವುದರಲ್ಲಿ ಆಸಕ್ತಿ ಇರಲಿಲ್ಲ. ಈಗ ಶಾಸ್ತ್ರಿಗಳ ಮನೆಗೆ ಹೋಗಿ ಬರೋಣವೆಂದು ಬೆಳಗ್ಗೆಯೇ ಅಲ್ಲಿಗೆ ಹೊರಟುಬಿಟ್ಟ.

ಇನ್ನೂ ಬೆಳಗಿನ ಒಂಬತ್ತರ ಸಮಯ. ಆಗಲೇ ಶಾಸ್ತ್ರಿಗಳಲ್ಲಿ ಹತ್ತಾರು ಜನ ಸೇರಿಬಿಟ್ಟಿದ್ದಾರೆ. ಉದ್ದದ ಜಗಲಿಯ ಮಧ್ಯೆ ಗೋಡೆಗೆ ಹೊಂದಿಕೊಂಡಂತೆ ಹಾಸಿದ ಚಾಪೆಯ ಎದುರು ಅಗಲವಾದ ಮರದ ಪೀಠ, ಅದರ ಮೇಲೆ ಕವಡೆರಾಶಿ, ಕೆಂಪು ಮತ್ತು ಹಸಿರುಮಣಿಗಳು, ಎರಡು ಪುಸ್ತಕಗಳು, ಕನ್ನಡಕದ ಗೂಡು. ಚಾಪೆಯ ಒಂದು ಬದಿಯಲ್ಲಿ ನೀರು ತುಂಬಿದ ತಾಮ್ರದ ಚೊಂಬು. ಇನ್ನೊಂದು ಹಿತ್ತಾಳೆಯ ಪಾತ್ರೆ. ಶಾಸ್ತ್ರಿಗಳು ಚಾಪೆ ಮೇಲೆ ಕುಳಿತು ಏನನ್ನೋ ಪ್ರಶ್ನಿಸುತ್ತಿದ್ದಾರೆ ಗಂಭೀರವಾಗಿ.

"ಜಾತಕ ಹತ್ತಾಣೆ ಸರಿ ಹೋಗುತ್ತದೆ. ಕೂಟಗಳು, ಗ್ರಹಗಳು ಚೆನ್ನಾಗಿ ಹೊಂದುವುದಿಲ್ಲ. ಹುಡುಗೀ ಜಾತಕ ಸೌಮ್ಯ, ಹುಡುಗನದು ಉಗ್ರ. ಈ ಸಂಬಂಧವನ್ನು ಮುರಿಯುವುದು ಲೇಸು."

"ಗಂಡಿನವರಿಗೆ ಹುಡುಗಿ ಇಷ್ಟವಾಗಿದ್ದಾಳೆ. ಒಮ್ಮೆ ಪ್ರಶ್ನೆ ಇಡಿಸಿ, ಅವರಿಗೂ ನಮಗೂ ನಿರಾಶೆ ಆಗಬಾರದು" ಎಂದ ಒಬ್ಬ ಯುವಕ.

ಶಾಸ್ತ್ರಿಗಳು ಕವಡೆಗಳನ್ನು ಮುಷ್ಟಿಯಲ್ಲಿರಿಸಿ ಅರೆಗಳಿಗೆ ಕಣ್ಣು ಮುಚ್ಚಿ ಮೂರು ಬಾರಿ ಘಲಘಲಿಸಿ ಪೀಠದ ಮೇಲೆ ಹಾಕಿದರು. ತಮ್ಮದೇ ಲೆಕ್ಕದಲ್ಲಿ ಬೆರಳಿನಿಂದ ಗುಣಿಸಿ ಉತ್ತರಿಸಿದರು.

"ಸಂಬಂಧ ಈಗ ಹೊಂದಿಕೆಯಾದಂತಿದೆ. ಆದರೂ ನಿಮ್ಮ ಧೈರ್ಯಕ್ಕೆ ಆಂಜನೇಯನ ಪ್ರಸಾದ ಕೇಳಿಕೊಳ್ಳಿ."

ಪ್ರಶ್ನೆ ಕೇಳಿದವನ ಮುಖದ ಮೇಲೆ ನಗುವಿನ ಛಾಯೆ. ಐದರ ನೋಟನ್ನು ಹಿತ್ತಾಳೆ ಪಾತ್ರೆಗೆ ಹಾಕಿ, "ನೀವು ಹೇಳಿದ ಮೇಲೆ ಎರಡು ಮಾತಿಲ್ಲ, ಪ್ರಸಾದ ಕೇಳಿಕೊಳ್ತೇನೆ" ಎನ್ನುತ್ತ ನಮಸ್ಕರಿಸಿ ಹೊರಟುಹೋದ.

ಅದೇ ಸಮಯದಲ್ಲಿ ಶಾಸ್ತ್ರಿಗಳ ದೃಷ್ಟಿ ಬಾಗಿಲತ್ತ ಹರಿಯಿತು. ಅವಿನಾಶ ನಿಂತಿದ್ದಾನೆ. ಮುಗುಳ್ನಗೆ ಬೀರಿ ಕುಳಿತಲ್ಲಿಂದ ಏಳುವ ಮೊದಲೇ 'ಕೆಲಸ ಮುಂದುವರಿಯಲಿ' ಎಂದು ಸನ್ನೆ ಮಾಡಿದ. ಒಬ್ಬ ಹುಡುಗ ಅವನಿಗೆ ಕುರ್ಚಿ ತಂದಿರಿಸಿದ. ಹಣ ಮತ್ತು ವೃತ್ತಿಗೆ ಕೊಡುವ ಬೆಲೆ!

ಅವಿನಾಶ ಬೆಂಚಿನುದ್ದಕ್ಕೂ ದೃಷ್ಟಿ ಚೆಲ್ಲಿದ. ಹೆಚ್ಚಿನವರ ಮುಖದ ಮೇಲೆ ನಿಸ್ತೇಜ ಕಳೆ, ಮಾಸಿದ ಬಟ್ಟೆಯಲ್ಲಿ ಕೆಲವರು, ಉತ್ತಮ ಉಡುಪು ತೊಟ್ಟವರು ಕೆಲವರು. ಒಂದಿಬ್ಬರು ಕಾಲೇಜು ಕಲಿಯುವ ತರುಣರು. ಒಬ್ಬೊಬ್ಬರದು ಒಂದೊಂದು ಸಮಸ್ಯೆ. ಶಾಸ್ತ್ರಿಗಳು ನಿರಾತಂಕವಾಗಿ ಉತ್ತರಿಸುತ್ತಿದ್ದಾರೆ ಎಲ್ಲರಿಗೂ.

ಹೊಸ ಮನೆಗೆ ಅಡಿಪಾಯ ಹಾಕಲು ಮುಹೂರ್ತ ಕೇಳಲು ಬಂದವನು ಒಬ್ಬ. ಅವನ ಜನ್ಮದಿನ, ನಕ್ಷತ್ರವನ್ನು ಬರೆದು ಪಂಚಾಂಗವನ್ನು ನೋಡಿ ದಿನ ನಿಶ್ಚಯಿಸಿ ಕೊಟ್ಟ ಮೇಲೆ ಇನ್ನೊಬ್ಬನ ಪ್ರಶ್ನೆಗೆ ಉತ್ತರ. 'ಮನೆಯಲ್ಲಿ ಮಕ್ಕಳಿಗೆಲ್ಲ ಅಸೌಖ್ಯ. ಗುಳಿಗನ ಕಾಟವಿದ್ದೀತೇ?' ಎಂದು ಕೇಳಲು ಆತ ಬಂದಿದ್ದಾನೆ.

ಕವಡೆಗಳು ಘಲಘಲಿಸಿದವು. ಹದಿನೈದು ನಿಮಿಷ ಜಗಲಿಯಲ್ಲಿ ಮೌನ. ಅನಂತರ ಗಂಭೀರ ಧ್ವನಿಯಲ್ಲಿ ಉತ್ತರ.

"ನಿಮ್ಮ ಮನೆಯ ಹಿಂದೆ ಭೂತಸ್ಥಾನವಿದೆ. ಆ ಭೂತಕ್ಕೆ ಬೇಕಾದುದನ್ನು ನೀನು ಮಾಡಿಲ್ಲ. ರಕ್ಷೆ ತಾಯಿತ ಕೊಡ್ತೇನೆ. ಮಕ್ಕಳಿಗೆ ಇದರ ಕಾಟದ ಜೊತೆಗೆ ಹುಳದ ಉಪದ್ರವ. ಔಷಧಿ ಮಾಡಿಸು."

ಮುದುಕನೊಬ್ಬನಿಗೆ ಹಾಲು ಕರೆಯುವ ದನ ತರುವ ಇಚ್ಛೆ. ಮತ್ತೆ ಕವಡೆಗಳು ಉರುಳಿದವು.

"ಭಾಗ್ಯಲಕ್ಷ್ಮಿಯಂತೆ ಆ ದನ ಮನೆಗೆ ಬರುತ್ತಾಳೆ, ತಂದು ಕಟ್ಟಿಕೋ."

ಈಗ ಒಬ್ಬ ಯುವಕನ ಸರದಿ. ಅವಿನಾಶನಿಗೆ ಅವನನ್ನು ಎಲ್ಲೋ ನೋಡಿದ ನೆನಪು.

"ತುಂಬಾ ದಿನಗಳಿಂದ ಹೊಟ್ಟೆ ನೋವು, ಪ್ರತಿದಿನ ಸುಸ್ತು."

ಶಾಸ್ತ್ರಿಗಳು ಹತ್ತಿರ ಕರೆದು ನೇರವಾಗಿ ನಿಲ್ಲುವಂತೆ ಸೂಚಿಸಿ ತನ್ನ ಕಣ್ಣುಗಳನ್ನೇ ದಿಟ್ಟಿಸಲು ಹೇಳಿದರು. ಯುವಕ ಬಾಗಿದ ಬೆನ್ನನ್ನು ನೇರ ಮಾಡಿ ಅವರ ವಿಶಾಲ ಹಣೆಯನ್ನು ದಿಟ್ಟಿಸಿದ. ಐದು ನಿಮಿಷ ಮೌನ.

"ನಿಮ್ಮ ಮನೆ ಹತ್ತಿರ ಒಂದು ದೂಪದ ಮರವಿದೆ. ನಾಗನ ಬನ ನಿಮ್ಮ ಸ್ಥಳದಲ್ಲಿ ಇರಬೇಕು. ಅದಕ್ಕೆ ವರ್ಷಾವಧಿ ತಂಬಿಲ ಕೊಟ್ಟಿಲ್ಲ."

"ನಾನು ಕೊನೆ ವರ್ಷದ ಬಿ.ಎ. ಓದ್ತಾ ಹಾಸ್ಟೆಲ್‌ನಲ್ಲಿ ಇದ್ದವನು. ತಂಬಿಲ ಕೊಟ್ಟಿದ್ದಾರೋ ಇಲ್ಲವೋ."

"ತಂಬಿಲ ತಪ್ಪಿಸಬಾರದು. ಅದರ ಕಾಟವಿದೆ. ನಿನಗೆ ಹೊಟ್ಟೆ ಕಾಹಿಲೆಯೂ ಇರುವುದರಿಂದ ಡಾಕ್ಟರರಿಗೆ ತೋರಿಸಿ ಔಷಧಿ ತಗೋ."

ಯುವಕ ನಿಂತು ಸುಸ್ತಾಗಿದ್ದ. ಭಸ್ಮವನ್ನು ತೆಗೆದುಕೊಂಡು ಹತ್ತರ ನೋಟನ್ನು ಹಿತ್ತಾಳೆ ಪಾತ್ರೆಯಲ್ಲಿಟ್ಟು ಹಿಂದೆ ಸರಿದ. ಶಾಸ್ತ್ರಿಗಳು ಮಗನನ್ನು ಕೂಗಿ ಕರೆದು ಅವಿನಾಶನಿಗೆ ಒಳಗೆ ಕಾಫಿ ಕೊಡುವಂತೆ ತಿಳಿಸಿದಾಗ ಮೊದಲು ಕಾಣಿಸಿದ ಹುಡುಗ ಅವನನ್ನು ಒಳಗೆ ಕರೆದೊಯ್ದ.

ಒಳಕೋಣೆಯ ಇನ್ನೊಂದು ಜಗಲಿಯಲ್ಲಿ ಶಾಸ್ತ್ರಿಗಳ ಹೆಂಡತಿ ಕಾಫಿ ಮತ್ತು ಉಪಾಹಾರವಿರಿಸಿದ್ದರು. ಬೇಡವೆಂದರೂ ತೆಗೆದುಕೊಳ್ಳಬೇಕಾಯಿತು. ಶಾಸ್ತ್ರಿಗಳ ಇಬ್ಬರು ಗಂಡುಮಕ್ಕಳು ದೂರದ ಪಟ್ಟಣದಲ್ಲಿ, ಕೊನೆ ಮಗ ಶಾಸ್ತ್ರಿಗಳ ಜೊತೆ ಅದೇ ವೃತ್ತಿ ಮುಂದುವರಿಸಲು ಸಿದ್ಧನಾಗುತ್ತಿದ್ದಾನೆ. ನಾಲ್ವರು ಹುಡುಗಿಯರು ಪತಿಗೃಹದಲ್ಲಿ. ಸ್ವಂತದ ಭೂಮಿಕಾಣಿ ಇಲ್ಲದೇ ಇದ್ದರೂ ಕಲ್ಲಿನಿಂದ ಕಟ್ಟಿಸಿದ ಮನೆಯಲ್ಲಿ ಎಲ್ಲ ತರಹದ ಸೌಕರ್ಯಗಳು. ನಿಜ, ಕವಡೆಗಳ ಮುಖಾಂತರ ಮಾಡಿದ ಹಣ! ದಿನಕ್ಕೆ ಕಡಿಮೆಯೆಂದರೂ ಹತ್ತಿಪ್ಪತ್ತು ಜನರು ಬಂದೇ ಬರುತ್ತಾರೆ. ಮನುಷ್ಯಜೀವಿಯ ಪ್ರತಿಸಮಸ್ಯೆ ಚಿಂತೆಗಳಿಗೆ ಪರಿಹಾರ ನೀಡಿ ಅವರ ಮನಸ್ಸನ್ನು ಗೆಲ್ಲುವ ಏನೋ ಒಂದು ಮೋಡಿ ಅವರಲ್ಲಿದೆ. ಭಸ್ಮ, ರಕ್ಷೆ, ತಾಯಿತಬಲ್ಲಿ ಜನರಿಗೆ ತೃಪ್ತಿ, ಮಾನಸಿಕ ಶಾಂತಿ ಸಿಕ್ಕುತ್ತೆ. ಬಂದಾತ ಕನಿಷ್ಠ ಐದು ರೂಪಾಯಿಗಳನ್ನಾದರೂ ಹಾಕುತ್ತಾನೆ ಆ ಹಿತ್ತಾಳೆ ಪಾತ್ರೆಗೆ.

"ನಿಮ್ಮನ್ನು ತುಂಬಾ ಹೊತ್ತು ಕಾಯಿಸಿದೆ" ಒಳಗೆ ಬರುತ್ತ ಅಂದರು ಶಾಸ್ತ್ರಿಗಳು, "ನಿಮಗೇನಾದರೂ ಪ್ರಶ್ನೆ ಕೇಳುವುದಿದ್ದರೆ ಒಳಕೋಣೆಯಲ್ಲಿ ಮಾತನಾಡೋಣ."

ಇಬ್ಬರೂ ಅವರ ವ್ಯಾಸಂಗದ ಕೋಣೆಗೆ ಬಂದರು. ಅದೊಂದು ಚಿಕ್ಕದಾದ ಪುಸ್ತಕದ ರಾಶಿಯಿರುವ ಕೋಣೆ. ಸಂಸ್ಕೃತ, ಇಂಗ್ಲೀಷು, ಕನ್ನಡ, ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳು ಅವರ ಜ್ಞಾನ ಸಂಪತ್ತಿನ ಹಿರಿಮೆಯನ್ನು ಹೇಳುತ್ತಿವೆ. ನೆಲದ ಮೇಲೆ ಹತ್ತಾರು ಜಾತಕಗಳ ನಕಲು. ಯಾರ್ಯಾರೋ ಪರಿಶೀಲನೆಗೆ ಕೊಟ್ಟದ್ದು. ಅವಿನಾಶ ಪುಸ್ತಕಗಳ ಕಪಾಟಿನಿಂದ ಕೆಲವು ಪುಸ್ತಕಗಳನ್ನು ಹೊರಗೆಳೆದು ನೋಡಿದ. ಅವನಿಗೆ ಆಸಕ್ತಿಯಿಲ್ಲದ ಪುಸ್ತಕಗಳು!

"ಇವತ್ತು ಬಂದವನಿಗೆ ನೀವು ಜಾತಕ ಪರಿಶೀಲಿಸಿ ಮದುವೆ ಸಂಬಂಧ ಆಗುವುದಿಲ್ಲ ಎಂದಿರಿ. ಆಮೇಲೆ ಕವಡೆಗಳಿಂದ ಒಪ್ಪಿಗೆ ಕೊಟ್ಟಿದ್ದೀರಲ್ಲ ಹೇಗೆ?" ಕೇಳಿದ ಅವಿನಾಶ ಸ್ಟೂಲಿನಲ್ಲಿ ಕುಳಿತುಕೊಳ್ಳುತ್ತ.

"ಜಾತಕವನ್ನು ಸುಳ್ಳು ಎನ್ನುವವರಿದ್ದಾರೆ" ಕಪಾಟಿಗೆ ಒರಗಿ ನಿಂತು ಅವರೆಂದರು, "ಅದು ಅವರವರ ನಂಬಿಕೆಗೆ ಬಿಟ್ಟ ವಿಷಯ. ಒಬ್ಬ ವ್ಯಕ್ತಿ ಹುಟ್ಟಿದ ಗಳಿಗೆ, ಮುಹೂರ್ತ ಸರಿಯಾಗಿದ್ದರೆ ಅದರ ಮೇಲೆ ನಾವು ಮಾಡುವ ಜಾತಕ ನೂರಕ್ಕೆ ನೂರು ಸತ್ಯವಾಗಿರುತ್ತದೆ. ಇದು ನನ್ನ ನಂಬಿಕೆ. ಈ ದಿನ ಬಂದವನಿಗೆ ಜಾತಕದಲ್ಲಿ ನಂಬಿಕೆ. ಜಾತಕ ಕೂಡಿ ಬರಲಿಲ್ಲ ಎಂದಾಕ್ಷಣ ಅವನಿಗಾದ ನಿರಾಶೆ ಅವನ ಮುಖದಿಂದಲೇ ನನಗೆ ತಿಳಿದುಹೋಯಿತು. ಅವನಿಗೆ ನಿರಾಶೆ ಆಗಬಾರದೆಂದು ಕವಡೆ ಆಡಿಸಬೇಕಾಯಿತು."

"ಕವಡೆ ಮಾತನಾಡುತ್ತದೆಯೇ?"

"ನಾನು ಮಾತನಾಡಿಸುತ್ತೇನೆ! ಈ ಅಂಗೈ ಮೇಲೆ ಕುಣಿಯುವ ಪ್ರತಿ ಕವಡೆಯನ್ನೂ ನಾನು ಬಲ್ಲೆ. ನನ್ನ ಅಜ್ಜ, ಅಪ್ಪ, ಚಿಕ್ಕಪ್ಪ ಎಲ್ಲರೂ ಕವಡೆಗಳೊಡನೆ ಮಾತನಾಡಿದವರು" ನಗುತ್ತಾ ಅವರೆಂದರು, "ಜನರಿಗೆ ನಮ್ಮ ಮೇಲೆ ನಂಬಿಕೆಯಿದೆ. ಈ ನಂಬಿಕೆ ಅವರಿಗೆ ಒಳಿತು ಮಾಡುತ್ತದೆ. ಕೆಲವೊಮ್ಮೆ ಬಂದವರ ಮುಖಭಾವ ಗಮನಿಸಿ ಉತ್ತರಿಸುತ್ತೇನೆ. ಕೆಲವೊಮ್ಮೆ ಅನುಮಾನದ ಪ್ರಶ್ನೆ ಕೇಳುತ್ತೇನೆ. ಆಗ ಅವರ ಸಮಸ್ಯೆ, ಪ್ರಶ್ನೆಗಳಿಗೆ ಅವರಿಂದಲೇ ಉತ್ತರ ದೊರೆಯುತ್ತದೆ. ಇದು ನನ್ನ ಅನುಭವ."

"ಹಾಗಾದರೆ ಜನರ ನಂಬಿಕೆಯ ದುರುಪಯೋಗವನ್ನು ನೀವು ಮಾಡಿದ ಹಾಗಾಗುವುದಿಲ್ಲವೇ?"

"ಹೇಳಿದೆನಲ್ಲ, ನಂಬಿಕೆಯಿದ್ದವನಿಗೆ ನನ್ನ ಮಾತುಗಳು ಫಲಕಾರಿಯಾಗುತ್ತದೆ. ನಂಬಿಕೆಯಿಲ್ಲದವ ಅನುಮಾನದ ಪ್ರಶ್ನೆ ಕೇಳಲು ಬಂದರೆ ನಾನು ಉತ್ತರಿಸುವವನಲ್ಲ. ಡಾಕ್ಟರೇ, ಇದೇನು ಮಹಾವಿದ್ಯೆಯಲ್ಲ. ಆದರೂ ಅನೇಕ ಗ್ರಂಥಗಳನ್ನು, ಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ನಾವು ಓದಿ ಕಲಿಯಬೇಕಾಗುತ್ತದೆ. ಆಮೇಲೆ ಎಲ್ಲಾ ಅನುಭವ."

"ಬೇಸರಿಸಬೇಡಿ, ಹಣವಿಲ್ಲದೆ ನೀವು ಯಾರ ಪ್ರಶ್ನೆಗಳಿಗೂ ಉತ್ತರಿಸುವುದಿಲ್ಲ, ಅಲ್ಲವೆ? ಜನರ ನಂಬಿಕೆಯ ನೆವದಲ್ಲಿ ಹಣ..."

ಅವಿನಾಶನ ಮಾತು ಮುಗಿಯುವ ಮೊದಲೇ ಶಾಸ್ತ್ರಿಗಳ ಮುಖದಲ್ಲಿ ಕ್ರೋಧ ಕಾಣಿಸಿತು. ಈತನಕ ಯಾರೂ ಕೇಳದ ಪ್ರಶ್ನೆ. ಅವರ ಕಣ್ಣುಗಳು ತಮಗಿಂತ ಎಷ್ಟೋ ಕಿರಿಯನನ್ನು ನೇರವಾಗಿ ಸಂಧಿಸಿದವು.

"ಜನರ ದೌರ್ಬಲ್ಯದ ಲಾಭವನ್ನು ನೀವು ಪಡೆದುಕೊಳ್ಳುತ್ತೀರಿ. ನಿಜವಾಗಿಯೂ ಅದರ ಅನೇಕ ಸಮಸ್ಯೆಗಳಿಗೆ ಅರ್ಥವಿರುವುದಿಲ್ಲ. ನೀವು ಅದರಲ್ಲೇ ಅರ್ಥ ಹುಡುಕಿ ಹೊಸ ಸಮಸ್ಯೆಗೆ ದಾರಿ ಮಾಡಿಕೊಡುತ್ತೀರಿ. ನಿಜವೇ ನನ್ನ ಮಾತು?"

"ಹಾಗೆ ನೋಡಿದರೆ ,ಯಾರಿಗೂ ಸಮಸ್ಯೆಗಳಿರುವುದಿಲ್ಲ. ಅವರವರ ಮನೋಧರ್ಮವೇ ಸಮಸ್ಯೆಗಳಿಗೆ ಕಾರಣ. ನನ್ನ ಹತ್ತಿರ ಬನ್ನಿ ಎಂದು ಯಾರನ್ನೂ ನಾನು ಒತ್ತಾಯಿಸಲಾರೆ. ಬಂದವರಿಗೆ ಸಮಾಧಾನ ಹೇಳಿ ಅವರ ಬೆಂದ ಹೃದಯಕ್ಕೆ ತಂಪೆರೆಯಬಲ್ಲೆ ಎಂಬ ವಿಶ್ವಾಸ ನನಗಿದೆ. ಅನೇಕರ ಮನೆ ಜಗಳ, ವೈರತ್ವ, ಮನಸ್ತಾಪ, ಮಾನಸಿಕ ಕ್ಲೇಶ, ಚಿಂತೆ ಇವಕ್ಕೆಲ್ಲ ಪರಿಹಾರ ಸೂಚಿಸಿ ಸರಿಪಡಿಸಬಲ್ಲೆ. ಇದು ಹೊಗಳಿಕೆ ಮಾತಲ್ಲ."

"ಮಾಟಮಂತ್ರ, ಭೂತಪ್ರೇತ, ರಕ್ಷೆ ತಾಯಿತಗಳಲ್ಲಿ ಶಕ್ತಿಯಿದೆ ಎಂಬ ಮೂಢನಂಬಿಕೆಯನ್ನು ನಮ್ಮ ಹಿರಿಯರು ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದ ಕೈತುತ್ತಿನಂತೆ ತಿನ್ನಿಸಿ ಬೆಳೆಸಿದ್ದಾರೆ. ಅದರ ಫಲ ಅವರು ಯಾವುದನ್ನೂ ವೈಜ್ಞಾನಿಕ ಒರೆಗಲ್ಲಿಗೆ ಹಚ್ಚಿ ನೋಡುವುದಿಲ್ಲ. ಮೊನ್ನೆ ನನ್ನ ಮಿತ್ರರಿಬ್ಬರು ತಮ್ಮ ಕ್ಲಿನಿಕ್‌ನಲ್ಲಿ ಪ್ರ್ಯಾಕ್ಟೀಸ್ ಆಗಲಿಲ್ಲವೆಂದು ನಿಮ್ಮಿಂದ ರಕ್ಷೆಯ ತಗಡು ತೆಗೆದುಕೊಂಡು ಹೋದರು. ಛೀ, ಓದಿದ್ದು ಬರೀ ದಂಡಕ್ಕೆ ! ಚಿಕ್ಕಂದಿನಿಂದ ಅದೇ ಹಾಳು ನಂಬಿಕೆ ತುಂಬಿತ್ತು ನೋಡಿ, ತಮ್ಮ ಸೋಲಿಗೆ ಇನ್ನಾರೋ ಕಾರಣರು ಎಂದು...."

ಶಾಸ್ತ್ರಿಗಳು ಅವನ ಮಾತನ್ನು ಮೀರಿಸಿ ಗಹಗಹಿಸಿ ನಕ್ಕರು. "ಓದಿದ್ದು ದಂಡಕ್ಕೆ ಎನ್ನಬೇಡಿ. ಪಾಪ, ಸಾವಿರಾರು ರೂಪಾಯಿ ಖರ್ಚು ಮಾಡಿ ಕಲಿತ ವಿದ್ಯೆ. ಆದರೆ ಕ್ಲಿನಿಕ್‌ನಲ್ಲಿ ನೊಣ ಹೊಡೆಯುವ ಪರಿಸ್ಥಿತಿ. ಆ ನಿಮ್ಮ ಮಿತ್ರರಿಬ್ಬರೂ ತಮ್ಮ ಮೇಲೆ, ತಮ್ಮ ಹಸ್ತಗುಣದ ಮೇಲೆ ನಂಬಿಕೆಯನ್ನೂ ಕಳೆದುಕೊಂಡಿದ್ದರು. ನನ್ನ ಮಂತ್ರಿಸಿದ ರಕ್ಷೆ ಅವರಿಗೆಷ್ಟೋ ಸಮಾಧಾನ ನೀಡಿದೆ." ಅವರು ಚಪ್ಪಾಳೆ ತಟ್ಟಿ ಕೈಬೆರಳಿನಿಂದ ಚಿಟಿಕೆ ಹೊಡೆದರು, "ಈ ಸಮಾಧಾನದಿಂದ ಅವರ ಹಸ್ತಗುಣದಲ್ಲಿ ಬದಲಾವಣೆಯಾಗದಿದ್ದರೂ ಆದಂತೆ ಅನ್ನಿಸುತ್ತದೆ. ಸರಿ, ರೋಗಿಗಳನ್ನು ಗುಣಪಡಿಸಲು ಸ್ವಲ್ಪ ಶ್ರಮಪಡುತ್ತಾರೆ. ಮತ್ತೆ ಕೇಳಬೇಕೇ, ಕ್ಲಿನಿಕ್‌ನಲ್ಲಿ ರೋಗಿಗಳ ಗುಂಪು ! ನನ್ನ ಮಾತನ್ನು ಗೋಡೆ ಮೇಲೆ ಬರೆದಿಟ್ಟುಕೊಳ್ಳಿ."

ಅವಿನಾಶ ಅವರ ಮುಖದತ್ತ ನೋಡಿದ. ಅವರು ಜಾತಕದ ನಕಲುಗಳನ್ನು ಒಂದುಗೂಡಿಸುತ್ತ, "ನೀವು ಮಾಡುವುದು ಇಷ್ಟೇ ಕೆಲಸ. ನಿಮ್ಮ ಹತ್ತಿರ ರೋಗಿಗಳು ಬಂದಾಗ ಭರವಸೆಯ ನುಡಿ ಹೇಳುತ್ತ, ಔಷಧಿ ಕೊಡುತ್ತ ನಿಮ್ಮ ಮೇಲೆ ನಂಬಿಕೆ ಬರುವಂತೆ ಮಾಡುತ್ತೀರಿ. ನಿಮ್ಮಿಂದ ಪ್ರಯೋಜನ ಪಡೆದವರಿಗೆ ಅನಂತರ ನೀವು ಯಾವ ಔಷಧಿ ಕೊಟ್ಟರೂ ನೂರಕ್ಕೆ ನೂರು ಗುಣ ಸಿಗುವುದು ಖಂಡಿತ. ಮಾನಸಿಕತಜ್ಞರು ಮನೋರೋಗಿಗಳನ್ನು ಗುಣಪಡಿಸುವುದೂ ನಂಬಿಕೆಯ ಆಧಾರದ ಮೇಲೆ. ಬ್ರೇನ್‌ವಾಶ್ ಮಾಡಿದ ರೀತಿಯಲ್ಲಿ ಅವರನ್ನು ತಮ್ಮತ್ತ ಒಲಿಸಿಕೊಳ್ಳುತ್ತಾರೆ. ಅದು ಆಧುನಿಕ ಕ್ರಮ. ಇಲ್ಲಿ ಹಳ್ಳಿಯಲ್ಲಿ ಹಳೆ ಕ್ರಮ. ರಕ್ಷೆ, ತಾಯಿತಗಳಿಂದ ಜನರಿಗೆ ನೆಮ್ಮದಿ" ಎಂದರು.

ಅವಿನಾಶ ಖಂಡಿಸಿದ ಈ ಮಾತನ್ನು. ಇಬ್ಬರಲ್ಲಿಯೂ ಎದ್ದಿತು ವಾದ ವಿವಾದ. ವಾದ ಬೇರೆಬೇರೆ ವಿಷಯಗಳತ್ತ ಹೊರಳಿತು. ಬೀದಿಬೀದಿಯಲ್ಲಿ, ಸಂತೆಕಟ್ಟೆಯಲ್ಲಿ, ದೇವಸ್ಥಾನದ ಎದುರು, ಹೀಗೆ ಅಲ್ಲಲ್ಲಿ ಒಂದೊಂದು ವೇಷಗಳು; ಗಿಳಿಯ ಮೂಲಕ ಶಕುನ ಹೇಳುವವರು, ಅದೃಷ್ಟ ಪರಿಶೀಲಿಸುವವರು, ಹಸ್ತಪರೀಕ್ಷಕರು ತುಂಬಿಹೋಗಿದ್ದಾರೆ. ಹಣ ಸಂಪಾದನೆಗೆ ಈ ಮಾರ್ಗ ಸುಲಭ ! ಶಾಸ್ತ್ರಿಗಳು ಇದಕ್ಕೇನು ಉತ್ತರಿಸುತ್ತಾರೆ? ಶಾಸ್ತ್ರಿಗಳು ಮನೆಯೊಳಗೆ, ಉಳಿದವರು ಹೊರಗೆ ಮಾಡುವ ವೃತ್ತಿ ಒಂದೇ.

ಸೋಮಶೇಖರ ಶಾಸ್ತ್ರಿಗಳು ಇನ್ನೊಮ್ಮೆ ನಕ್ಕರು. "ನಮ್ಮ ಜನರ ಕಥೆ ಕೇಳಬೇಡಿ. ಮುಂದುವರಿದ ಶ್ರೀಮಂತ ರಾಷ್ಟ್ರಗಳಲ್ಲಿ ಬೀದಿಗೊಬ್ಬ ಮಾನಸಿಕ ತಜ್ಞ ಇದ್ದಾರೆ ಅನ್ನೋದನ್ನು ಒಪ್ಪಿಕೊಳ್ತೀರಾ, ಡಾಕ್ಟರೇ? ಮಾನಸಿಕ ತಜ್ಞನಿಗೆ ಸಾವಿರಾರು ರೂಪಾಯಿ ತೆತ್ತು ಅಲ್ಲಿ ಜನ ಮಾನಸಿಕ ಶಾಂತಿಯನ್ನು ಪಡೀತಾರೆ. ಆದರೆ ಇಲ್ಲಿ.... ಕೇವಲ ನಾಲ್ಕು ಆಣೆಯಿಂದ ಐದು ರೂಪಾಯಿ ಒಳಗೆ ಸುಲಭದಲ್ಲಿ ಮನಃಶಾಂತಿ ಸಿಗುತ್ತೆ. ಮೂಲತಃ ಮನುಷ್ಯನ ಬುದ್ಧಿ ಎಲ್ಲಾ ಕಡೆಗೂ ಒಂದೆಯೇ" ಅವರು ಅಲ್ಲಿಂದೇಳುತ್ತ ಅಂದರು, "ಇವೆಲ್ಲ ಚರ್ಚೆಗೆ ಸಿಗುವ ವಿಷಯವಲ್ಲ."

"ಕ್ಷಮಿಸಿ, ನನ್ನ ಮಾತಿನಿಂದ ನಿಮಗೆ ನೋವಾಗಿರಬೇಕು."

"ನೀವು ನೂರು ಅಂದರೂ ನನಗೆ ನೋವಾಗಲಾರದು, ಬನ್ನಿ, ಸಾಯಂಕಾಲದವರೆಗೂ ನಾನು ಹೇಗೆ ನೊಂದ ಜನರಿಗೆ ತಂಪು ಕೊಡುತ್ತೇನೆ ಎಂದು ಪರೀಕ್ಷಿಸಿ."

"ಇಲ್ಲ, ನಿಮ್ಮ ಕೆಲಸ ಮುಂದುವರಿಸಿ, ಬರ್ತೇನೆ" ಎಂದು ಕೈಮುಗಿದು ಹೊರಬಿದ್ದ ಅಲ್ಲಿಂದ. ಅವನ ಮನಸ್ಸು ವ್ಯಗ್ರವಾಗಿತ್ತು. ತನ್ನ ಚಿಕಿತ್ಸಾಲಯಕ್ಕೆ ಬರುವವರಿಗಿಂತಲೂ ಅಧಿಕ ಜನರು ಇಲ್ಲಿ ! ತನ್ನ ದಿನದ ಔಷಧಿ ಬೆಲೆ

ಎರಡು ರೂಪಾಯಿಗಳಾದರೆ ಇಲ್ಲಿ ಸರ್ವಾಸರಿ ಐದು ರೂಪಾಯಿ ! ಮನಸ್ಸು ಬೇಡವೆಂದರೂ ಅವರ ಗಳಿಕೆಯ ಹಣ ಚಿಂತಿಸಿತು.

ಅರ್ಧ ಕಟ್ಟಿದ ತನ್ನ ಆಸ್ಪತ್ರೆ ಕಟ್ಟಡದ ಬಳಿ ಬಂದಾಗ ಹೊಟ್ಟೆ ನೋವಿನಿಂದ ನರಳುತ್ತ ಶಾಸ್ತ್ರಿಗಳಲ್ಲಿ ಬಂದ ಯುವಕ ಕಾಣಲು ಸಿಕ್ಕಿದ. ಈಗಲೂ ಅವನು ಯಾರೆಂದು ತಿಳಿಯಲಿಲ್ಲ. ಅವನತ್ತ ಮುಗುಳ್ನಗೆ ಬೀರುವ ಮೊದಲೇ "ನಮಸ್ಕಾರ" ಎಂದ ಯುವಕ ಸೌಜನ್ಯದಲ್ಲಿ.

"ಎಲ್ಲಿ ನಿನ್ನ ಮನೆ?"

"ನನ್ನ ಗುರುತು ಸಿಗಲಿಲ್ಲವೇ? ನಾನು ಸುಂದರರಾಜನ ತಮ್ಮ ಮುಕುಂದ."

ಅವಿನಾಶ ಬೆರಗಾದ. ಆದರ್ಶವಾದಿಯ ತಮ್ಮ ಶಾಸ್ತ್ರಿಗಳ ಬಳಿ ಪ್ರಶ್ನೆ ಕೇಳಲು ಬಂದಿದ್ದಾನೆ ! ಇನ್ನೂ ಕಾಲೇಜು ಕಲಿಯುವ ಹುಡುಗ. ಮುಖ ನೋಡಿದರೆ ಅಲ್ಸರ್ ಅಥವಾ ಬೇರೇನೋ ನೋವಿನಲ್ಲಿ ಬಳಲುತ್ತಿದ್ದಾನೆ. ಆತ್ಮೀಯವಾಗಿ ಮಾತನಾಡುತ್ತ ತನ್ನ ಮನೆಗೆ ಕರೆತಂದ. ಮಧ್ಯಾಹ್ನದ ಸಮಯ. "ಊಟ ಮಾಡಿ ಹೋಗು" ಎಂದಾಗ ಸಂಕೋಚ ತೋರಿಸಲಿಲ್ಲ.

ಊಟಕ್ಕೆ ಕುಳಿತರೆ ನಾಲ್ಕು ತುತ್ತು ಅನ್ನ ಗಂಟಲಿನಿಂದ ಇಳಿಯದೆ ಮಜ್ಜಿಗೆ ಕುಡಿದು ಎದ್ದು ಬಿಟ್ಟ. ಅನೇಕ ಸಮಯದಿಂದ ಕಾಡುತ್ತಿದ್ದ ಹೊಟ್ಟೆ ನೋವು ಅವನ ಜೀವ ತಿನ್ನುತ್ತಿದೆಯಂತೆ.

ಅವಿನಾಶ ಅವನನ್ನು ಪರೀಕ್ಷಿಸಿ ಮೈದಡವಿದ, ಕನಿಕರದಿಂದ. "ಬಿ.ಎ. ಓದುವವನು, ವಿಜ್ಞಾನದ ಬಗ್ಗೆ ಏನೂ ಗೊತ್ತಿಲ್ಲವೇ? ಹೊಟ್ಟೆಯಲ್ಲಿ ಅಲ್ಸರ್ ತರಹ ಹುಣ್ಣಾಗಿರಬೇಕು. ಎಷ್ಟು ದಿನ ಇಲ್ಲಿರ್ತೀಯಾ?"

"ಹೊಟ್ಟೆ ನೋವು ತಡೆಯಲಾರದೆ ಕಾಲೇಜಿಗೆ ರಜೆ ಮಾಡಿ ಬಂದಿದ್ದೇನೆ. ಗುಣವಾಗದೆ ಹೇಗೆ ಹೋಗಲಿ?"

"ನಾಳೆ ನನ್ನ ಚಿಕಿತ್ಸಾಲಯಕ್ಕೆ ಬಾ. ನಿನ್ನ ರಕ್ತ, ಮಲ, ಮೂತ್ರ ಪರೀಕ್ಷಿಸಿ ಔಷಧಿ ಕೊಡ್ತೇನೆ."

"ಔಷಧಿ ದಕ್ಕುವುದಿಲ್ಲ ಡಾಕ್ಟರೇ" ಮುಕುಂದ ಮುಖ ಕಿವುಚಿದ. "ಅಮ್ಮ ಹೇಳ್ತಾಳೆ, ನಾನು ಹುಟ್ಟಿದ ಗಳಿಗೆ ಸರಿಯಿಲ್ಲವಂತೆ. ಈ ಕೆಟ್ಟ ಗಳಿಗೆಯಿಂದ ಎಲ್ಲ ಗ್ರಹಗಳು ಮಾರಕವಾಗಿ ನನ್ನನ್ನು ಹಿಂಸಿಸುತ್ತವಂತೆ. ಈಗ ನನಗೆ ಶನಿದೆಸೆ. ಅಬ್ಬಬ್ಬ! ಕೇಳಿದರೆ ಮೈಯೆಲ್ಲ ನಡುಕ."

ಅವಿನಾಶ ನಗುತ್ತ ಅವನ ತಲೆ ನೇವರಿಸಿದ. "ನಿನ್ನ ಶನಿದೆಸೆ, ಕೆಟ್ಟ ಗ್ರಹಗಳನ್ನು ನನಗೆ ಕೊಟ್ಟರೆ ಅವನ್ನು ಬಂದೋಬಸ್ತಿನಲ್ಲಿ ಇಡ್ತೇನೆ. ಯಾಕೆ? ಸುಂದರರಾಜ ನಿನ್ನ ಬಗ್ಗೆ ಕಾಳಜಿ ತೆಗೆದುಕೊಳ್ಳುವುದಿಲ್ಲವೇ?"

ಅಣ್ಣನ ಹೆಸರು ಕೇಳಿದಾಕ್ಷಣ ಸಿಡಿದೆದ್ದ ಮುಕುಂದ. "ಅವನೊಬ್ಬ ಸಮಾಜದ ಉದ್ಧಾರಕ ! ನಮ್ಮ ದೇವರ ಗುಣ ನಿಮಗೆಲ್ಲಿ ತಿಳಿದೀತು ಡಾಕ್ಟರೇ. ಪಾಪ, ತಮ್ಮಂದಿರನ್ನು ನೋಡಲು ಅವನಿಗೆ ಪುರುಸೊತ್ತಿಲ್ಲ. ಹಳ್ಳಿಗಾಗಿ ಎಷ್ಟೆಲ್ಲ ಕೆಲಸ ಮಾಡಿಸಿದ್ದಾನೆ. ಜನರು ಹೊಗಳಿ ಹೊಗಳಿ ಅಟ್ಟಕ್ಕೇರಿಸಿದ್ದಾರೆ. ಮನೆಗೆ ಕಾಸು ಕೊಡು ಅಂದರೆ ಲೊಟ್ಟೆ ತೋರಿಸ್ತಾನೆ. ಅವನ ಜೇಬಿಗೆ ಎಲ್ಲಿಂದ ಹಣ ತುಂಬುತ್ತೋ ನಾ ಕಾಣೆ. ವಾಮನನ ಮನೆಗೆ, ಆಂಜನೇಯನ ಗುಡಿ ಜೀರ್ಣೋದ್ಧಾರಕ್ಕೆ, ಕುಟುಂಬ ಯೋಜನಾ ಸಪ್ತಾಹಕ್ಕೆ – ಹೀಗೆ ಊರಲ್ಲಿ ಸಂಗ್ರಹವಾದ ಹಣದಲ್ಲಿ ಎಷ್ಟು ಇವನ ಜೇಬು ತುಂಬಿತೋ ಆ ಪರಮಾತ್ಮನೇ ಬಲ್ಲ. ಈ ತಮ್ಮನ ಮೇಲೆ ಅವನಿಗೆಲ್ಲಿದೆ ಕನಿಕರ?"

ಮುಕುಂದನ ನಾಲಿಗೆ ನಿಲ್ಲಲಿಲ್ಲ. ಸುಂದರರಾಜನನ್ನು ತೆಗಳಿದ. ಮನೆ ವಿಷಯ ಅವನಿಗೆ ತಲೆನೋವಂತೆ. ಕಾಯಿಲೆಯ ತಾಯಿಯನ್ನು ನೋಡಲೂ ಪುರುಸೊತ್ತಿಲ್ಲ. ತಂದೆ ಜೊತೆ ಮಾತಿಲ್ಲ. ಐದನೇ ಕ್ಲಾಸಿನಲ್ಲಿ ಓದುವ ತಂಗಿ ಪಟ್ಟಣಕ್ಕೆ ಹೋಗಿ ವಿದ್ಯೆ ಮುಂದುವರಿಸುವ ಹಟ ಹಿಡಿದಾಗ 'ಹುಡುಗಿಯರಿಗೆ ವಿದ್ಯೆ ಅನಗತ್ಯ' ಎಂದು ತಡೆದ. ಅವನಿಂದಲೇ ರಾತ್ರಿ ಶಾಲೆ ಪ್ರಚಾರ! ಹಳ್ಳಿಯಲ್ಲಿ ಮೆರೆದು ಹೆಸರುಗಳಿಸುವ ಆಸೆ! ಅಪ್ರಯೋಜಕ ಸಮಾಜವಾದಿ.

ಆವೇಶದಲ್ಲಿ ಮಾತನಾಡುವ ಮುಕುಂದನಿಗೆ ಅವಿನಾಶ ಸಮಾಧಾನ ಹೇಳಲು ನೋಡಿದ, "ಬೇರೆ ಗಂಡುಮಕ್ಕಳಿರುವುದರಿಂದ ಸುಂದರರಾಜ ಮನೆ ಚಿಂತೆ ಹಚ್ಚಿಕೊಂಡಿಲ್ಲ. ಹಳ್ಳಿಯವರು ಅವನ ಸೇವೆಯಿಂದ ಕೃತಾರ್ಥ ರಾಗಿದ್ದಾರೆ. ಈಗ ಬಡವರಿಗಾಗಿ ಜನತಾಗೃಹ ಕಟ್ಟಿಸುವ ಯೋಜನೆ."

"ಹೋ ಡಾಕ್ಟರೇ, ನಮ್ಮ ಮನೆ ಕುಸಿದುಬೀಳುವ ಸ್ಥಿತಿಯಲ್ಲಿದೆ. ಇವನು ಜನತಾಗೃಹ ಕಟ್ಟಿಸಲು ಕೈಹಾಕಿದ್ದಾನಾ? ಸಾರ್ಥಕವಾಯ್ತು! ಮನೆ ಕಷ್ಟ ಅರಿಯದವನು ಊರವರ ಕಷ್ಟ ಅರಿತಾನೆಯೇ? ಮನೆಗೆ ಮಾರಿ..."

"ಪರರಿಗೆ ಉಪಕಾರಿ ಅನ್ನು ! ಒಬ್ಬನ ತ್ಯಾಗದಿಂದ ನೂರಾರು ಜನಕ್ಕೆ ಉಪಕಾರ. ಉದ್ವೇಗದಿಂದ ಅನುಮಾನಪಡಬಾರದು." ಅವಿನಾಶ ಎರಡು ಮಾತ್ರೆಗಳನ್ನು ಅವನ ಕೈಲಿರಿಸಿದ, "ರಾತ್ರೆಯ ಊಟದ ಮೊದಲು ತೆಗೆದುಕೋ. ನಾಳೆ ಬೆಳಗ್ಗೆ ಚಿಕಿತ್ಸಾಲಯಕ್ಕೆ ಬಾ. ಪರೀಕ್ಷಿಸಿ ಔಷಧಿ ಕೊಡ್ತೇನೆ. ನೀನು ಹುಟ್ಟಿದ ಗಳಿಗೆ ಹೇಗಿದ್ದರೂ ಹದಿನೈದು ದಿನಗಳಲ್ಲಿ ನಿನ್ನ ಗ್ರಹಗತಿಯನ್ನು ಬದಲಾಯಿಸಿಕೊಡ್ತೇನೆ."

೧೦

ಸಾಯಂಕಾಲ ಜ್ವರದಿಂದ ಚೇತರಿಸಿಕೊಂಡಿದ್ದ ಅಹಲ್ಯಳಿಗೆ ಬೆಟ್ಟವೇರುವ ಆತುರ. ಕೋಡುಬಳೆ, ಅವಲಕ್ಕಿ, ಫ್ಲಾಸ್ಕ್‌ನಲ್ಲಿ ಬಿಸಿ ಕಾಫಿ ತುಂಬಿಸಿ ಕೊಳ್ಳುತ್ತಿದ್ದಂತೆ ಅವಿನಾಶ ತಮಾಷೆ ಮಾಡಿದ,

"ನಾವು ಹೋಗ್ತಾ ಇರುವುದು ಬೈರಾಗಿಯ ದರ್ಶನಕ್ಕೆ ಮತ್ತು ವಿಗ್ರಹ ದೇವತೆಯ ತನಿಖೆಗೆ. ಇದೇನು ತಿಂಡಿ ಸರಂಜಾಮು? ಪಿಕನಿಕ್‌ಗೆ ಹೋಗ್ತಾಯಿಲ್ಲ ಅಂತ ನೆನಪಿರಲಿ."

ಅಷ್ಟರಲ್ಲಿ ಬಾಗಿಲಲ್ಲಿ ಕಾಣಿಸಿಕೊಂಡರು ಪದ್ಮಲೆ, ಅವಳ ತಂದೆತಾಯಿ ಮತ್ತು ಸಣ್ಣ ತಮ್ಮ. ಡಾಕ್ಟರರನ್ನು ರಜಾ ದಿನದಲ್ಲಿಯೂ ಕಾಣುವ ಆತುರ, ಅವಸರ ! ಕರೆದು ಒಳಗೆ ಕುಳ್ಳಿರಿಸಿ ಪ್ರಶ್ನಾರ್ಥಕವಾಗಿ ನೋಡಿದ ಎಲ್ಲರನ್ನೂ. ಎಂದಿನಂತೆ ಕಿಲಕಿಲ ನಗುತ್ತಿರುವ ಪದ್ಮಲೆಯ ಹಣೆಯ ಮೇಲೆ ನಿರಿಗೆಗಳು! ತಾಯಿಯ ಮುಖದಲ್ಲಿ ಆತಂಕ, ಭಯದ ಭಾವ. ತಂದೆ ನಾಗಪ್ಪ ಹುಬ್ಬು ಗಂಟಿಕ್ಕಿದ್ದಾನೆ. ಬೆಂಚಿನ ತುದಿಯಲ್ಲಿ ಮುದುರಿಕೊಡುತ್ತ ಕೈಜೋಡಿಸಿದ.

"ಮುಂದಿನ ವಾರ ಪದ್ಮಲೆಗೆ ಮದುವೆ, ಅಯ್ಯನೋರೆ."

"ಸಂತೋಷ" ಅಭಿನಂದಿಸಿದ ಅವನ ಕಣ್ಣುಗಳು ಹುಡುಗಿಯನ್ನು ಸಂಧಿಸಿದವು. ಮೈಯಲ್ಲಿ ಲಘುಕಂಪನ. ಅವಳ ದಿಟ್ಟತನದಲ್ಲಿ ಹೊಳೆಯುವ ಕಣ್ಣುಗಳು ಅವನನ್ನು ದಿಟ್ಟಿಸುತ್ತಿವೆ.

"ಮನೆಯೆದುರು ಚಪ್ಪರ ಎದ್ದಿದೆ. ಆದರೆ ಈಗ ಇವಳನ್ನು ನೋಡಿದರೆ ಏನೋ ಎಡವಟ್ಟು ಮಾಡಿಕೊಂಡಿದ್ದಾಳೆ ಅಂತ ಅನುಮಾನ."

"ತಲೆನೋವು, ವಾಂತಿ, ಸುಸ್ತು ಅಂತಿದ್ದಳು" ತಾಯಿ ಒಣಗಿದ ಧ್ವನಿ ತೆಗೆದಳು, "ನಂಗ್ಯಾಕೋ ಅನುಮಾನ, ಒಮ್ಮೆ ಪರೀಕ್ಷಿಸಿಬಿಡಿ."

ಆದಿತ್ಯವಾರ ಅವಿನಾಶನಿಗೆ ವಿಶ್ರಾಂತಿ. ಮನೆಗೆ ಯಾರು ಬಂದರೂ ಪರೀಕ್ಷಿಸದೆ ನಿರ್ದಾಕ್ಷಿಣ್ಯವಾಗಿ ಹಿಂದಕ್ಕೆ ಕಳುಹಿಸುವ ಶಿಸ್ತಿನ ವ್ಯಕ್ತಿ. ಇಂದು ಅವರನ್ನು ಹಾಗೇ ಹಿಂದೆ ಕಳುಹಿಸುವ ಆಲೋಚನೆ ಬಂದರೂ ಏಕೋ ಸಂದಿಗ್ಧಕ್ಕೆ ಒಳಗಾಗಿ ಅನುಮಾನಿಸಿದ. ಮದುವೆ ನಿಶ್ಚಯವಾದ ಹುಡುಗಿಯನ್ನು ಹಾಗೇ ಕಳುಹಿಸುವುದು ಸರಿಯಲ್ಲ. ಅನುಮಾನದ ಸ್ಥಿತಿಯಲ್ಲಿ ಒಳಕೋಣೆಯ ಬೆಂಚಿನ ಮೇಲೆ ಮಲಗಲು ತಿಳಿಸಿದ. ಅನಿರೀಕ್ಷಿತವಾಗಿ ಅಪತ್ಕಾಲಕ್ಕೊಳಗಾದ ರೋಗಿ ಬಂದರೆ ಪರೀಕ್ಷಿಸುವ ಬೆಂಚು ಅದು.

ಪದ್ಮಲೆ ನಿಧಾನವಾಗಿ ನಡೆದು ಒಳಗೆ ಬಂದಳು. ಹಿಂದಿನಿಂದ ಬಂದ ತಾಯಿಗೆ "ನೀನು ಅಲ್ಲೇ ಬಿದ್ದಿರು!" ಎಂದು ಗದರಿಸಿ ತಾನೇ ಕೋಣೆಯ

ಬಾಗಿಲನ್ನು ಭದ್ರಪಡಿಸಿ ಬೆಂಚಿನ ಮೇಲೆ ಮಲಗಿ ಆತಂಕ, ಅನುಮಾನದಿಂದ ನೋಡಿದಳು ಅವಿನಾಶನನ್ನು. ಅವಳು ಗದರಿದ್ದು, ಬಾಗಿಲನ್ನು ಹಾಕಿದ್ದು ಏಕೆಂದು ಪ್ರಶ್ನೆಯಾಯಿತು ಅವನಿಗೆ. ವೈದ್ಯನಾಗಿ ಕರ್ತವ್ಯಚ್ಯುತಿಯಿಲ್ಲದೆ ಅವಳನ್ನು ಪರೀಕ್ಷಿಸಬೇಕಲ್ಲವೇ? ಕೇಳಬೇಕಾದ ಮಾಮೂಲಿ ಪ್ರಶ್ನೆಗಳನ್ನು ಕೇಳಿ ಅವಳ ಕೈ ಹಿಡಿದ ನಾಡಿಬಡಿತ ನೋಡಲು.

ಅವಳ ಕಣ್ಣುಗೊಂಬೆಗಳು ಬಾಗಿಲತ್ತ ಚಲಿಸಿದವು. ಮುಚ್ಚಿದ ಬಾಗಿಲು! ಅವಳು ಸ್ಪ್ರಿಂಗ್‌ನಂತೆ ಮೇಲೆದ್ದು ಅವನ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿದು ಕಾಲ ಕೆಳಗೆ ಕುಸಿದಳು. “ಹೇಗಾದರೂ ನನ್ನನ್ನು ರಕ್ಷಿಸಿ. ನನ್ನ ಮಾನ ಉಳಿಸಿ, ಪ್ರಾಣ ಉಳಿಸಿ. ನಿಮ್ಮ ದಮ್ಮಯ್ಯ ಅಂತೇನೆ.”

ಅವಿನಾಶ ಗಡಗಡನೆ ನಡುಗಿಹೋದ ಹೆದರಿಕೆಯಿಂದಲ್ಲ, ಅವಳ ವಿಚಿತ್ರ ವರ್ತನೆಯಿಂದ.

“ನನ್ನನ್ನು ಅವರು ಜೀವಂತವಾಗಿ ಉಳಿಸುವುದಿಲ್ಲ ಡಾಕ್ಟರೇ. ನಿಮ್ಮ ದಮ್ಮಯ್ಯ, ಹೇಗಾದರೂ ರಕ್ಷಿಸಿ.”

ಅವಳ ಮೃದುಸ್ಪರ್ಶದಿಂದ ತನ್ನನ್ನು ಸಾವರಿಸಿಕೊಳ್ಳುತ್ತ ಆ ಕೈಯನ್ನು ದೂರ ಸರಿಸಿ ಹಿಂದಕ್ಕೆ ಸರಿದ. ಪದ್ಮಲೆ ನೆಲದಲ್ಲಿ ಕುಳಿತು ಸೆರಗಿಗೆ ಬಾಯಿ ಹಚ್ಚಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಇದೇನು ಇವಳ ಹುಚ್ಚಾಟ ! ಬಾಗಿಲು ಹಾಕಿದೆ. ಬಿಕ್ಕಳಿಸುತ್ತಿದ್ದವಳು ತನ್ನ ಉದರದ ಮೇಲೆ ಕೈಯಿರಿಸಿ ತಾನಾಗಿಯೇ ವಿಷಯವನ್ನು ಬಯಲಿಗೆಳೆದಳು. ಪರೀಕ್ಷಿಸುವ ಅಗತ್ಯವಿರಲಿಲ್ಲ. ಅವಳಿಗೆ ಎಲ್ಲಾ ವಿಷಯ ತಿಳಿದಿದೆ. ಮದುವೆಗಿಂತ ಮೊದಲೇ ಮೂರು ತಿಂಗಳ ಗರ್ಭಿಣಿ!

ಅವಿನಾಶ ಬೆಚ್ಚಿದವನಂತೆ ನೋಡಿದ ಅವಳ ನೀರು ತುಂಬಿದ ನೇತ್ರದ್ವಯಗಳನ್ನು. ಮಲಗಿಸಿ ಪರೀಕ್ಷಿಸಿದ ತನ್ನ ಅನುಮಾನ ಪರಿಹಾರಕ್ಕೆ. ದಿಟವಾಗಿತ್ತು ಮಾತು, ಅಬ್ಬ, ಆದರೂ ಆ ದೃಷ್ಟಿಯಲ್ಲಿ ದಿಟ್ಟತನದ ಛಾಯೆ! ಅದಕ್ಕೆಂದೇ ಆ ಕಣ್ಣುಗಳನ್ನು ಸಂಧಿಸಿದಾಗಲೆಲ್ಲ ಅವನಿಗಿಂದೂ ವಿವರಿಸಲಾಗದ ಭಾವಪರವಶತೆ, ರಾತ್ರಿ ಶಾಲೆಯಲ್ಲಿ ಎಲ್ಲರೊಡನೆ ಚೆಲ್ಲುಚೆಲ್ಲಾಗಿದ್ದ ಈ ಹುಡುಗಿ ಕೆಲವು ದಿನಗಳಿಂದ ಬಂದಿಲ್ಲವೆಂದು ಈಗ ಗಮನಕ್ಕೆ ಬಂದಿತು. ಯಾರೊಡನೆಯೋ ಸ್ವೇಚ್ಛೆಯಿಂದ ವಿಹರಿಸಿದ ಪರಿಣಾಮ ಫಲಕಾರಿಯಾಗಿ ಅವಳಿಗೇ ತಂದಿತ್ತು ವಿಪತ್ತು. ಇನ್ನೊಂದು ವಾರದಲ್ಲಿ ಮದುವೆ. ಅವಳ ಸ್ಥಿತಿಗೆ ನಗಬೇಕೋ? ಅಥವಾ ವ್ಯಥೆ ಪಡಬೇಕೋ?

ಪದ್ಮಲೆ ಕೈಜೋಡಿಸಿದಳು, “ತಿಳಿಯದೆ ಆದ ಅನರ್ಥ. ಸೇವಾಸದನದ ಮದ್ದು ಕುಡಿದರೂ ಪ್ರಯೋಜನವಾಗಲಿಲ್ಲ. ನೀವು ಔಷಧಿ ಕೊಟ್ಟರೆ ಒಂದು ವಾರದಲ್ಲಿ ಗುಣವಾಗಬಲ್ಲದೇ?”

"ಈಗ ಔಷಧಿ ಕುಡಿಯುವುದೂ ಅಪಾಯಕರ."

"ಮದುವೆಯಾದರೆ ಆಮೇಲೆ ನನ್ನ ಹಗರಣ ಮುಚ್ಚಿ ಹೋಗುತ್ತಲ್ಲ."

ಹುಡುಗಿ ಬಹಳ ಘಾಟಿ, ಮುಂದಾಲೋಚನೆ, ತಿಳಿವಳಿಕೆಯಿರುವವಳು. ಒಮ್ಮಿಂದೊಮ್ಮೆಲೇ ಎದ್ದು ತನ್ನ ರವಕೆಯೊಳಗೆ ಬಚ್ಚಿರಿಸಿದ್ದ ಹತ್ತರ ಮೂರು ನೋಟುಗಳನ್ನು ಅವನ ಅಂಗಿ ಜೇಬಿಗೆ ತುರುಕಿಸಿದಳು.

"ಅಪ್ಪ-ಅಮ್ಮನಿಗೆ ಏನಾದರೂ ಸುಳ್ಳು ಹೇಳಿ, ಡಾಕ್ಟರೇ, ನನ್ನನ್ನು ನಿಮ್ಮ ತಂಗಿ ಅಂತ ತಿಳಿದು ನನ್ನ ಬಾಳನ್ನು ಉಳಿಸಿಕೊಡಿ."

"ಛೀಛೀ..." ಜೇಬನ್ನು ತಡವಿ ನೋಟನ್ನು ಹೊರಗೆಳೆಯಲು ನೋಡಿದರೆ ಪದ್ಮಲೆ ಅವನ ಮುಂಗೈಯನ್ನು ಬಿಗಿಯಾಗಿ ಹಿಡಿದು "ಹುಶ್, ಇದು ಲಂಚ ಅಲ್ಲ! ವಿಶ್ವಾಸದ ಕಾಣಿಕೆ! ನಂಗೇನೂ ಆಗಿಲ್ಲವೆಂದು ಹೊರಗಿನವರಿಗೆ ಹೇಳಿಬಿಡಿ" ಎಂದಳು.

ಅವಿನಾಶ ಕಣ್ಣು ಕೆಕ್ಕರಿಸಿದ, "ಯಾರಿಂದ ಹೀಗಾಯ್ತು? ಬೊಗಳು."

ನೆಲ ನೋಡಿದ ಹುಡುಗಿ ಬಾಯಿ ಬಿಡದೆ ಅವನನ್ನು ಮತ್ತೆ ಸಂದಿಗ್ಧ ಸ್ಥಿತಿಗೆ ನೂಕಿ ಧಡಾರನೆ ಬಾಗಿಲು ತೆರೆದು ಹೊರಗೆ ನಡೆದಳು. ಕಿಸೆಯನ್ನು ತುಂಬಿದ್ದ ಮೂವತ್ತು ರೂಪಾಯಿಗಳು. ಈ ತನಕ ಅಕ್ರಮ ವ್ಯವಹಾರದಲ್ಲಿ ಕೈಹಾಕದವನು ಪದ್ಮಲೆಗಾಗಿ ಈ ಸುಳ್ಳು ಹೇಳಬೇಕೇ? ಅವಳ ಮುಖಕ್ಕೆ ಎಸೆದು ಸತ್ಯಸಂಗತಿಯನ್ನು ಹೇಳಲು ಕಾಲಪ್ಪಳಿಸುತ್ತ ಹೊರಗೆ ಬಂದ. ಎರಡು ಆತಂಕ ತುಂಬಿದ ಮುಖಗಳು ಫಲಿತಾಂಶದ ನಿರೀಕ್ಷೆಯಲ್ಲಿ ಕಾತರಗೊಂಡಿವೆ.

ಅವಿನಾಶ ಜೇಬನ್ನು ತಡವಿಕೊಂಡ. ನೋಟುಗಳು ಬಿಸಿಯಾಗಿ ಕಾದ ಕುಲುಮೆಯಂತೆ ಒತ್ತುತ್ತಿವೆ ಹೃದಯವನ್ನು. ಪದ್ಮಲೆ ತನ್ನನ್ನು ಮರೆತವಳಂತೆ ಯಾಚನೆಯ ಕಂಗಳಲ್ಲಿ ಅವನಲ್ಲೇ ಸರ್ವಸ್ವವನ್ನೂ ಒಪ್ಪಿಸಿ ನಿಂತಿದ್ದಾಳೆ. ಅವಳನ್ನು ನೋಡುತ್ತ ಅವನಿಗರಿಯದಂತೆ ಮಾತುಗಳು ಹೊರಬಂದವು.

"ಯಾವ ಹೆದರಿಕೆಯೂ ಇಲ್ಲ. ಎಲ್ಲೋ ಸ್ವಲ್ಪ ಪಿತ್ತದ ಉಪದ್ರವ ಅಷ್ಟೇ. ಮದುವೆ ಸಂತೋಷದಲ್ಲಿ ಸರಿಯಾಗಿ ಊಟ ಮಾಡಿರಲಿಕ್ಕಿಲ್ಲ" ಎನ್ನುವಾಗ ನಾಲಗೆಯ ದ್ರವ ಪೂರ್ತಿ ಆರಿತ್ತು.

ನಾಗಪ್ಪ ನಿರಾಳವಾಗಿ ಉಸಿರು ತೆಗೆದರೆ ಅವನ ಹೆಂಡತಿ 'ಅಯ್ಯಬ್ಬ' ಎಂದಳು ಸಮಾಧಾನದಲ್ಲಿ. ಇಬ್ಬರ ಮೆಚ್ಚುಗೆಯ ನೋಟ ಮಗಳ ಮೇಲೆ.

"ಹುಡುಗ ಎಲ್ಲಿಯವನು? ಏನು ಮಾಡುತ್ತಾನೆ?"

ಹರ್ಷದ ನಗು ಚಿಮ್ಮಿತು ನಾಗಪ್ಪನ ಮುಖದ ಮೇಲೆ. "ಇಲ್ಲಿಂದ ನಾಲ್ವತ್ತು ಮೈಲು ದೂರ. ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ಕೆಲಸ. ಸ್ವಂತ ಆಸ್ತಿ, ಅತ್ತೆ, ಮಾವ ಇದ್ದಾರೆ. ಪದ್ಮಲೆ ಅದೃಷ್ಟವಂತೆ."

"ನನಗೆ ಆತಂಕವಿದ್ದದ್ದು ಅವಳ ಅಸೌಖ್ಯದ ಮೇಲೆ" ತಾಯಿ ಅಂದಳು. "ಗಂಡನ ಮನೆ ತುಂಬುವಾಗಲೇ ಹುಡುಗಿ ಅಸೌಖ್ಯದಲ್ಲಿದ್ದರೆ ಅತ್ತೆ ಮಾವನ ಕಣ್ಣುಗಳಲ್ಲಿ ಒಳಿತಲ್ಲ."

ಅವಿನಾಶ ಔಷಧಿ ತಂದು ನಾಗಪ್ಪನ ಕೈಲಿರಿಸಿದ. ಹಾಗೇ ಜೇಬಿನಿಂದ ಮೂರು ನೋಟುಗಳು ಹೊರಬಂದವು. "ಹಿಡಿ, ಇದು ಪದ್ಮಲೆ ಮದುವೆಗೆ ನನ್ನ ಉಡುಗೊರೆ!"

ಬೆಕ್ಕಸ ಬೆರಗಾದ ನಾಗಪ್ಪ ನಡುಗುತ್ತ ಸ್ವೀಕರಿಸಿದ. ಪದ್ಮಲೆ ಅವನ್ನು ನೋಡಿಯೇ ನಡುಗಿಹೋದಳು, ಎಲ್ಲಿ ಅವಿನಾಶ ನಿಜಸಂಗತಿ ಹೇಳುತ್ತಾನೋ ಎಂಬ ಭೀತಿ. ಓ... ನೆತ್ತಿಯ ಮೇಲೆ ಬಂದ ಕುತ್ತು ಹೀಗೆ ಸುಲಭದಲ್ಲಿ ನಿವಾರಣೆಯಾದೀತೇ?

ಅವರೆಲ್ಲರೂ ಹೊರಟುಹೋದ ಮೇಲೆ ಕಲ್ಲುಬೆಟ್ಟವೇರುವ ಉತ್ಸಾಹ ಹಿಂಗಿಹೋಯಿತು. ತಾನು ಮಾಡಿದ್ದು ಹುಚ್ಚು ಕೆಲಸ. ತನ್ನನ್ನು ನಂಬಿ ಬಂದ ದಂಪತಿಗಳಿಗೆ ಸುಳ್ಳು ಹೇಳಿ ಪದ್ಮಲೆಯನ್ನು ರಕ್ಷಿಸುವ ಹೊಣೆಗಾರಿಕೆ ಬೇಡವಾಗಿತ್ತು. ಇದರಿಂದ ಹೊಣೆಗಾರಿಕೆಯನ್ನು ಕಳಚಿಕೊಂಡಂತೆ ಆಗಲಿಲ್ಲ, ಬದಲಾಗಿ ಇನ್ನೂ ಒತ್ತಡ ಹೆಚ್ಚಿದೆ. ನಾಳೆ ಏನೋ ಒಂದು ಅವಾಂತರವಾಗಿ ಈ ರೂಪಾಯಿಗಳ ವಿಷಯ ಹೊರಬೀಳಲಾರದೇ? ಈಗಲೇ ನಾಗಪ್ಪನ ಮನೆಗೆ ಹೋಗಿ ಸತ್ಯಸಂಗತಿ ತಿಳಿಸಬೇಕು. ಮದುವೆ ಮುರಿದರೂ ಪದ್ಮಲೆಗೆ ಇನ್ನೊಂದು ಸಂಬಂಧ ಸಿಕ್ಕೀತು. ತನಗಾದರೆ ಹಾಗಲ್ಲ, ಈ ನೆಪದಲ್ಲಿ ತನ್ನ ಗೌರವ, ಪ್ರತಿಷ್ಠೆ, ಕೀರ್ತಿ ಎಲ್ಲವೂ ಮಣ್ಣು ಪಾಲು!

ತತ್‌ಕ್ಷಣ ನಾಗಪ್ಪನಲ್ಲಿಗೆ ಹೋಗಲೆಂದು ಬಾಗಿಲು ದಾಟಿದವನು ಮತ್ತೆ ಹಿಂದಕ್ಕೆ ಬಂದ. ನಾಗಪ್ಪನ ಕೈಸೇರಿದ ಮೂರು ನೋಟುಗಳು ಅವನ ಮನೆಯಲ್ಲಿ ಆನಂದದ ಕೋಲಾಹಲವನ್ನು ಎಬ್ಬಿಸಿರಬಹುದು. ತಾನು ಹೋಗಿ ಸುಮ್ಮನೆ ಕೆಸರು ಎರಚಿಕೊಳ್ಳುವಂತಾದೀತು. ತನಗಿಂತ ಪದ್ಮಲೆಗೆ ಧೈರ್ಯ ಹೆಚ್ಚು. ಮುಂದಿನದನ್ನು ಅವಳಾಗಿಯೇ ಎದುರಿಸಲು ಸಜ್ಜಾದಾಗ ತನಗೇಕೆ ಇಲ್ಲದ ಹೆದರಿಕೆ?

ಆದರೂ ಆ ಮೂರು ನೋಟುಗಳು ಎಲ್ಲೋ ದೂರದಲ್ಲಿ ಕೇಳಿಬರುವ ಮಂಗಳವಾದ್ಯದಲ್ಲಿ ತಕತಕನೆ ಕುಣಿಯುತ್ತ ಗಾಳಿಯಲ್ಲಿ ಹಾರುತ್ತ, ಅವನ ಎದೆ ನಡುಗಿಸಿ ಸವಾಲು ಹಾಕಿದವು, 'ಪದ್ಮಲೆ ಕೊಟ್ಟ ಹಣವನ್ನು ತಾನು ಯಾಕೆ ತೆಗೆದುಕೊಂಡೆ? ಇದು ಅನ್ಯಾಯ... ತಪ್ಪು' ಎಂದೂ ಅರಚಲು ಆರಂಭಿಸಿದವು.

ಈ ದಿನವೂ ಬೆಟ್ಟ ಏರಲು ಆಗಲಿಲ್ಲವೆಂದು ಗೊಣಗಿಕೊಂಡಳು ಅಹಲ್ಯ. ಕಟ್ಟಿಕೊಂಡ ತಿಂಡಿತೀರ್ಥ ಹಾಗೇ ಉಳಿಯಿತು. ಅವಿನಾಶ ಕಿಟಕಿ ಬದಿಯಲ್ಲಿ

ನಿಂತು ನೀರಸವಾಗಿ ನೋಡಿದ ಬೆಟ್ಟದ ನೆತ್ತಿಯನ್ನು. ಅಲ್ಲಿ ಮುಳುಗುವ ಸೂರ್ಯನ ಹೊಂಬಣ್ಣದ ಬೆಳಕು, ಶಿಖರದೆತ್ತ ಎಲ್ಲೋ ಹಾರುತ್ತಿರುವ, ಮರಳಿ ಗೂಡು ಸೇರಲು ತವಕಿಸುವ ಹಕ್ಕಿಗಳ ಸಾಲು, ಮೇಯಲು ಹೋದ ದನಕರುಗಳು ಬೆಟ್ಟವಿಳಿಯುವ ದೃಶ್ಯ, ಈ ನಡುವೆ ಆಹ್ಲಾದಕರವಾದ ಮುಸ್ಸಂಜೆಯಲ್ಲಿ ವಿಗ್ರಹದೇವತೆಯ ಪೂಜೆಗೆ ಹತ್ತಾರು ಗಂಡಸರು, ಹೆಂಗಸರು ಬೆಟ್ಟವೇರುತ್ತಿದ್ದಾರೆ. ಆಂಜನೇಯ ಗುಡಿಯ ಪೂಜೆಗಿಂತ ಹೊಸ ವಿಗ್ರಹಪೂಜೆಗೆ ವಿಶೇಷ ಮಹತ್ವ ! ಜನರು ಮೂಢರೋ? ಹುಚ್ಚರೋ? ಅರೆ, ಏನು ಆಕರ್ಷಣೆ ಇದೆ ಅಲ್ಲಿ?

ಪ್ರಶ್ನೆಗಳ ಗೊಂದಲವೆದ್ದಿತು ಅವಿನಾಶನಲ್ಲಿ.

೧೧

ಮರುದಿನ ಸಾಯಂಕಾಲ ಶ್ರೀಕಂಠಯ್ಯ ಮತ್ತು ನಾಗರತ್ನ ಚಿಕ್ಕಮಗಳೂರಿನಿಂದ ಬಂದಿಳಿದರು. ಹಿರಿಯರಿಬ್ಬರಿಂದ ಮನೆ ತುಂಬಿ ನಲಿಯಿತು ಸಂಭ್ರಮದಲ್ಲಿ. ಅಹಲ್ಯಳಿಗೆ ಅತ್ತೆ ಮಾವಂದಿರನ್ನು ಉಪಚರಿಸಿದಷ್ಟೂ ಕಡಿಮೆ.

ಶ್ರೀಕಂಠಯ್ಯ ಕಲ್ಲನ್ನೂ ಕರೆದು ಮಾತನಾಡಿಸುವ ಸ್ವಭಾವದವರು. ಅವಿನಾಶನಿಗೆ ಸಹಾಯ ಮಾಡುವ ನೆಪದಲ್ಲಿ ಧನ್ವಂತರಿ ಕ್ಲಿನಿಕ್‌ನಲ್ಲಿ ಅವರದೇ ಓಡಾಟ, ಸಲುಗೆ ಮಾತು. ಹಳ್ಳಿಯ ಮೂಲೆಮೂಲೆಗಳನ್ನು ಒಬ್ಬರೇ ಸುತ್ತಿಬಂದರು. ಹೋದೆಡೆಯಲ್ಲಿ ಅವಿನಾಶನ ಗುಣಗಾನ ಕೇಳಿಸಿಕೊಂಡು ತೃಪ್ತಿಯಿಂದ ಉಬ್ಬಿಹೋದರು. ಮಗ ಈ ಊರಿಗೆ ಬಂದ ಮೇಲೆ ಇದರ ರೂಪ ಬಹಳಷ್ಟು ಬದಲಾಗಿದೆಯೆಂಬ ಹೆಮ್ಮೆ. ಹೊಸದಾಗಿ ವಿದ್ಯುದ್ದೀಪ ಬಂದಿದೆ. ಡಾಂಬರು ಹಾಕಿದ ಮುಖ್ಯರಸ್ತೆಗಳು, ರಾತ್ರಿ ಶಾಲೆಯ ಪ್ರಗತಿ, ಹೊಸ ಸಹಕಾರಿ ಸಂಘ, ಇದೋ ಇಲ್ಲಿ ಮೇಲೇರುತ್ತಿರುವ ಹೊಸ ಆಸ್ಪತ್ರೆ ಕಟ್ಟಡ. ಅವರಿಗೆ ಎಷ್ಟು ನೋಡಿದರೂ ಸಾಲದು. ಕಟ್ಟಡದ ಕೆಲಸಗಾರರೊಡನೆ ಬೆರೆತು ಚರ್ಚಿಸಿದರು. ಅವಿನಾಶ ಎಂಟು ಮಂಚಗಳು ಸಾಕು ಎಂದರೆ ಇನ್ನೂ ನಾಲ್ಕು ಹೆಚ್ಚಿಗಿರಲಿ ಎಂದರು ಉತ್ಸಾಹದಲ್ಲಿ.

ಡಾ. ಮಹಾದೇವರ ಸೇವಾಸದನಕ್ಕೂ ಭೇಟಿ ಕೊಟ್ಟು ಅವರ ಪರಿಚಯ ಮಾಡಿಕೊಂಡು ಮಾತಿನ ಬೆಸುಗೆ ಬೆಸೆದರು. ಗಿಡಮೂಲಿಕೆ, ತೈಲ, ಅರಿಷ್ಟವನ್ನೆಲ್ಲ ಕೆದಕಿ ಶ್ಲಾಘಿಸಿ, ತಮ್ಮ ತಲೆಗೂ ಒಂದಷ್ಟು ಎಣ್ಣೆ ಖರೀದಿಸಿ 'ಆಯುರ್ವೇದಕ್ಕಿಂತ ಉತ್ತಮ ಔಷಧಿ ಇನ್ನೊಂದಿಲ್ಲ' ಎಂದರು ಮೆಚ್ಚಿಗೆಯಲ್ಲಿ. ರಾತ್ರಿ ಶಾಲೆಯಲ್ಲಿ

'ಪಟ್ಟಣವಾಸ' ಎಂಬ ವಿಷಯದ ಮೇಲೆ ಎರಡು ದಿನ ಉಪನ್ಯಾಸ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದರು. ಮಗನಿಗೆ ತಕ್ಕ ತಂದೆ! ಆಂಜನೇಯನ ಗುಡಿ ಹಿಂಭಾಗದಲ್ಲಿ ತಲೆ ಎತ್ತಿ ನಿಂತ ಶೇಂದಿ ಅಂಗಡಿಯನ್ನು ನೋಡಿ ಹುಬ್ಬೇರಿಸಿದರು.

ಆ ಶೇಂದಿ ಅಂಗಡಿಯನ್ನು ಅಲ್ಲಿಂದ ಕಿತ್ತೊಗೆಯಬೇಕೆಂದು ಅವಿನಾಶನೂ ಸುಂದರರಾಜನೂ ಪ್ರಯತ್ನಿಸಿದ್ದರು ಅನೇಕ ಬಾರಿ. ಆದರೆ ತೆಗೆಯುವ ಮಾತು ಹಾಗಿರಲಿ, ದಿನೇದಿನೇ ಅಲ್ಲಿ ಸೇರುವವರನ್ನು ತಡೆಯಲು ಸಾಧ್ಯವಾಗಲಿಲ್ಲ. ಈ ಕಾರಣದಿಂದಲೋ ಅಥವಾ ಮಧ್ಯವಯಸ್ಸಿನಲ್ಲಿ ದುಡಿಯುವ ಜೀವಕ್ಕೆ ಸ್ಲೇಟು, ಬಳಪಗಳಿಂದ ವಿಸ್ಮಯಪೂರ್ಣ ಜಗತ್ತನ್ನು ನೋಡುವುದು ಬೇಕಿರಲಿಲ್ಲವೋ ತಿಳಿಯದು. ರಾತ್ರಿ ಶಾಲೆಗೆ ಬರುವವರ ಸಂಖ್ಯೆ ಗಣನೀಯವಾಗಿ ಇಳಿದಿದೆ. ಪ್ರಚಾರದ ಮುಖ ಒಂದು ಬದಿಗೆ. ಜನರ ಮುಖ ಇನ್ನೊಂದು ಬದಿಗೆ. ವಯಸ್ಕರು ಎಳೆಯರಾಗಿ ಅಕ್ಷರಸ್ಥರಾಗ ಬೇಕೆಂಬ ಪ್ರಬಲ ಇಚ್ಛೆಯಿದ್ದರೆ ರಾತ್ರಿ ಶಾಲೆ ದೃಢವಾಗಿ ನಿಲ್ಲಬಲ್ಲದು. ಮಾಡಿದ ಕೆಲಸಕ್ಕೂ ಸಾರ್ಥಕ. ಕೆಲವೇ ಜನರ ಬಲದಿಂದ ಈಗ ನಿಂತಿದೆ ಶಾಲೆ. ಇತ್ತೀಚೆಗೆ ಶಾಲೆಯೆದುರೂ ಎದ್ದಿದೆ ಇನ್ನೊಂದು ಶೇಂದಿ ಅಂಗಡಿ.

ಶ್ರೀಕಂಠಯ್ಯ ಬಂದ ನಾಲ್ಕನೇ ದಿನ ಪದ್ಮಲೆಯ ಮದುವೆ. ಅವಿನಾಶ ಮತ್ತು ಶ್ರೀಕಂಠಯ್ಯ ಮದುವೆ ದಿನ ಸಾಯಂಕಾಲ ನಾಗಪ್ಪನಲ್ಲಿಗೆ ಬಂದು ಚಪ್ಪರದಲ್ಲಿ ಕುಳಿತು ಎಳನೀರು, ಬಾಳೆಹಣ್ಣು ಸೇವಿಸಿ, ಮದುಮಕ್ಕಳಿಗೆ ತಲಾ ಹತ್ತು ರೂಪಾಯಿ ಉಡುಗೊರೆಯಿತ್ತು ಹಿಂದಿರುಗಿದರು. ಪದ್ಮಲೆಯ ಹೊಳೆಯುವ ದಿಟ್ಟಕಣ್ಣುಗಳಲ್ಲಿ ಒಳ ತುಮುಲದ ಸ್ಪಷ್ಟ ಛಾಯೆ. ಅವಳ ನೂತನ ಪತಿ ದೃಢಶರೀರದ ಸೌಮ್ಯ ಮುಖದವನು. ಪದ್ಮಲೆಗೆ ಸರಿಯಾದ ಜೊತೆ. ಅಲ್ಲಿಂದ ಹಿಂದಿರುಗುವಾಗ ಅವಿನಾಶನಿಗೆ ತಾನೆಲ್ಲೋ ವಂಚನೆ ಮಾಡುತ್ತಿದ್ದೇನೆ ಎಂಬ ಅಳುಕು, ಒಳಗೊಳಗೇ ಛಳಕು.

ಅದೇ ಆದಿತ್ಯವಾರ ರಾಜಣ್ಣನಲ್ಲಿ ಅವರೆಲ್ಲರಿಗೆ ಸ್ನೇಹಾಚಾರದ ಆತ್ಮೀಯ ಭೋಜನ ಸಮಾರಂಭ. ಆ ಸಾಯಂಕಾಲ ಅಲ್ಲಿಂದಲೇ ಕಲ್ಲುಬೆಟ್ಟಕ್ಕೆ ಹೋಗಿ ಬರುವ ನಿರ್ಧಾರ. ಈ ಮೊದಲೇ ಶ್ರೀಕಂಠಯ್ಯ ಎರಡು ಬಾರಿ ಹೋಗಿಬಂದಿದ್ದಾರೆ. ಮತ್ತೆ ಮತ್ತೆ ಹೋಗಬೇಕೆನಿಸುತ್ತದೆಯಂತೆ. 'ಅಲ್ಲೇನೋ ವಿಶೇಷವಿದೆ. ನೋಡ್ತಾ ಇರು, ಒಂದು ಕಾಲಕ್ಕೆ ಆ ಬೆಟ್ಟ ಬಹಳ ಪ್ರಸಿದ್ಧಿಯಾಗುತ್ತದೆ' ಎಂದೂ ಭವಿಷ್ಯ ನುಡಿದಿದ್ದಾರೆ. ಅಹಲ್ಯ ಮುಸಿಮುಸಿ ನಕ್ಕದ್ದು ಮಾತ್ರ ಅವರಿಗೆ ತಿಳಿಯಲಿಲ್ಲ.

ಆದಿತ್ಯವಾರ ಮಧ್ಯಾಹ್ನ ರಾಜಣ್ಣನ ಮನೆಗೆ ಎಲ್ಲರೂ ತಾಸು ಮುಂಚಿತವಾಗಿ ಬಂದಾಗ ರಾಜಣ್ಣ ಮನೆಯಲ್ಲಿರಲಿಲ್ಲ. "ಕೆಲಸದವನ

ಮನೆಯಲ್ಲಿ ಗಲಾಟೆ, ನೋಡಿ ಬರಲು ಹೋಗಿದ್ದಾರೆ" ಎಂದಳು ಸೀತಮ್ಮ. ಈ ದಿನಗಳಲ್ಲಿ ಅವಳೂ ಆರೋಗ್ಯ ತುಂಬಿ ಗೆಲುವಾಗಿದ್ದಾಳೆ.

ಅರ್ಧ ಗಂಟೆಯಲ್ಲಿ ಹಿಂದಿರುಗಿದ ರಾಜಣ್ಣ ಯಾರೊಂದಿಗೂ ಮಾತನಾಡದೆ ಮೊದಲು ಸ್ನಾನ ಮುಗಿಸಿ ಊಟದ ಕೋಣೆಗೆ ಕಾಲಿರಿಸಿದ. ಅವನ ಮುಖ ವಿವರ್ಣವಾಗಿತ್ತು. ವಿಷಯವೇನೆಂದು ತಿಳಿಯುವ ಕುತೂಹಲ ಉಳಿದವರಿಗೆ. "ಮೊದಲು ಊಟವಾಗಲಿ. ಆಮೇಲೆ ಎಲ್ಲಾ ಹೇಳ್ತೇನೆ" ಎಂದ ರಾಜಣ್ಣ ಬಂದ ಅತಿಥಿಗಳನ್ನು ತಾನೇ ಪ್ರತ್ಯೇಕವಾಗಿ ಉಪಚರಿಸಿದ. ಒತ್ತಾಯಿಸಿ ಬಡಿಸಿದ. ಅವನದು ಕೇವಲ ಊಟ ಮಾಡಿದ ಶಾಸ್ತ್ರ.

"ಕೆಲಸದವನ ಮನೆ ಗಲಾಟೆ ನೋಡಿದರೆ ಇನ್ನು ನಾಲ್ಕು ದಿನ ಊಟ ಸೇರದು, ಡಾಕ್ಟರೇ" ಎಂದು ಎಲೆ-ಅಡಿಕೆ ತಟ್ಟೆಯನ್ನು ತಂದಿಟ್ಟ ರಾಜಣ್ಣ ವಿಷಾದದ ಧ್ವನಿ ತೆಗೆದ. "ರಾಮನಾಯ್ಕನ ಹೆಂಡತಿ ನತದೃಷ್ಟೆ. ಇವತ್ತಿಗೆ ಅವಳ ಈ ಲೋಕದ ಋಣ ಮುಗಿಯಿತು."

ಅನಂತರ ಹೇಳಿದ ಆ ಕಥೆ ಕೇಳುವವರ ಮನವನ್ನು ಕಲಕುವಂತಿತ್ತು. ರಾಜಣ್ಣನ ಕೆಲಸದಾಳು ರಾಮನಾಯ್ಕ ಮೂರು ವರ್ಷದ ಹಿಂದೆ ಮದುವೆ ಸಮಯದಲ್ಲಿ ಹುಡುಗಿಗೆ ಐದು ಪವನ್ ಚಿನ್ನ, ಒಂದು ಸಾವಿರ ರೂಪಾಯಿ ನಗದು ಹಣ ಕೊಡಬೇಕೆಂದು ಕರಾರಿನ ಮಾತು. ಹಣ ಸಂದಾಯವಾಗಿತ್ತು. ಚಿನ್ನ ಉಳಿದಿತ್ತು ಹಾಗೇ. ಹುಡುಗಿಯ ಮೈಮೇಲೇರದ ಚಿನ್ನಕ್ಕಾಗಿ ರಾಮನಾಯ್ಕ, ಅವನ ತಂದೆತಾಯಿ, ತಂಗಿ ಎಲ್ಲರಿಂದಲೂ ಅವಳಿಗೆ ಚಿತ್ರಹಿಂಸೆ. ಗಾಣದೆತ್ತಿನ ದುಡಿತ, ಬೈಗುಳದ ಒದೆತ, ಅರೆ ಹೊಟ್ಟೆ ಊಟ. ಮನೆ ನರಕವಾಸ. ಹೆತ್ತವರ ಮುಖದರ್ಶನವಿಲ್ಲ. ಅನೇಕ ಬಾರಿ ಸೀತಮ್ಮನೆದುರು ಗೋಳಾಡಿದ್ದಾಳೆ ಆ ಹುಡುಗಿ, "ರಾತ್ರೆ ಹಗಲು ಮಾಡಿದ ಕತ್ತೆ ಚಾಕರಿಗೆ ಅವರು ಸಂಬಳ ಕೊಟ್ಟಿದ್ದಾರೆ. ಇಷ್ಟು ಹೊತ್ತಿಗೆ ಹತ್ತು ಪವನ್ ಚಿನ್ನ ತೆಗೀಬಹುದಿತ್ತು. ನನ್ನನ್ನು ಮದುವೆ ಮಾಡಿಕೊಟ್ಟು ಅಪ್ಪ ಕೈ ತೊಳೆದುಕೊಂಡ. ಯಾರಿಂದಲೂ ಒಂದೇ ಒಂದು ಪ್ರೀತಿ ಮಾತು ಕೇಳ್ತೇನೆ ಅಂದ್ರೆ ಊಹೂಂ, ಇಲ್ಲಾ. ನಾನು ಸತ್ತರೂ ಒಂದೇ ಇದ್ದರೂ ಒಂದೇ !"

ಸಂದಾಯವಾಗದ ವರದಕ್ಷಿಣೆಯಿಂದ ಅವಳು ಬಲಿಪಶು. ತಾಳ್ಮೆಯಿಂದ ಸೋತ ಹುಡುಗಿ ಈ ದಿನ ಗಂಡನಿಗೆ ಎದುರುತ್ತರ ಕೊಟ್ಟದ್ದು ನೆಪವಾಯಿತು. ರಾಮನಾಯ್ಕನ ಕೋಪ ಭುಗಿಲೆದ್ದು ಅವಳ ಕೂದಲನ್ನು ಹಿಡಿದೆಳೆದು ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿದ್ದಾನೆ. ವಧುಸ್ಥಾನದಲ್ಲಿ ನಿಂತ ಅಪರಾಧಿ ಬೆಂಕಿಯಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದರೆ ಯಾರೊಬ್ಬರೂ ಬಂದು ಬಿಡಿಸಲಿಲ್ಲ. ಅವಳ ಗಲಾಟೆ, ಬೊಬ್ಬೆ, ಚೀರಾಟ ಹತ್ತಿರದ ಮನೆಯವರಿಗೆ ಕೇಳಿಸಿದ್ದರಿಂದ ಅವರು ರಾಜಣ್ಣನಿಗೆ ಸುದ್ದಿ ತಲುಪಿಸಿದ್ದಾರೆ. ರಾಜಣ್ಣ ಅಲ್ಲಿಗೆ ಹೋಗುವ ಮೊದಲೇ ಆಕೆಯ ಜೀವಂತ ದಹನವಾಗಿತ್ತು.

"ಓ... ದೇವರೇ !" ಗದ್ಗದಿತಳಾದಳು ಸೀತಮ್ಮ. "ಜೀವಂತ ಹತ್ಯೆಯನ್ನು ಮಾಡಿದ ಕಟುಕರು ಅವರು!"

"ನಿರಪರಾಧಿಯ ಹತ್ಯೆ ನಡೆದಾಗ ಸುಮ್ಮನಿರುವುದೇ? ಪೋಲೀಸರಿಗೆ ಮೊದಲು ಸುದ್ದಿ ತಿಳಿಸಬೇಕಿತ್ತು" ಕೆರಳಿ ಅಂದರು ಶ್ರೀಕಂಠಯ್ಯ.

"ರಾಮನಾಯ್ಕನಿಗೆ ಜೈಲಾದೀತು. ಆದರೆ ಸತ್ತವಳು ಮರಳಿ ಬರುತ್ತಾಳೆಯೇ?" ಪ್ರಶ್ನಿಸಿದ ಅವಿನಾಶ ತನ್ನಲ್ಲೇ ಮಿಡುಕುತ್ತ.

"ರಾಮನಾಯ್ಕ ಬುದ್ಧಿವಂತ. 'ತನ್ನ ಹೆಂಡತಿ ಬೆಂಕಿ ಉರಿಸುವಾಗ ಸೀರೆಗೆ ಬೆಂಕಿ ತಾಗಿ ಸತ್ತಳು' ಎಂದು ಆಗಿನಿಂದಲೂ ಲಬೋ ಲಬೋ ಅಂತ ಬಾಯಿ ಹೊಡಕೊಳ್ತಾ ಇದ್ದಾನೆ. ಅವನ ಸ್ಥಿತಿ ನೋಡಿದರೆ ಅನುಮಾನ ಬರುವ ಮಾತು ಹಾಗಿರಲಿ, ಯಾರಿಗಾದರೂ ಕರುಣೆ ಬಂದೀತು. ಪೋಲೀಸರು ಬಂದರೂ ಅವನು ಬಚಾವು !"

"ಇದು ಬಡಹೆಣ್ಣಿನ ಕಥೆಯಾಯಿತು" ಅಹಲ್ಯ ನೋವಿನ ಧ್ವನಿ ತೆಗೆದಳು, "ಸ್ಥಿತಿವಂತರಲ್ಲಿ, ಬುದ್ಧಿಜೀವಿಗಳಲ್ಲಿ, ಸುಸಂಸ್ಕೃತರಲ್ಲಿಯೂ ದಿನೇ ದಿನೇ ವರದಕ್ಷಿಣೆ ಪಿಡುಗು ಹೆಚ್ಚುತ್ತಿದ್ದು ಹೆಣ್ಣಿನ ಕಡೆಯವರನ್ನು ರಕ್ತಹೀರುವ ಜಿಗಣೆಗಳಂತೆ ಹೀರ್ತಾ ಇದ್ದಾರೆ. ಎಷ್ಟು ಕೊಟ್ಟರೂ ಅತೃಪ್ತಿ. ಹೆಣ್ಣು ದುಡಿದು ತಂದರೂ ಇನ್ನೂ ದುರಾಶೆ, ಇಂದಿಗೂ ಹೆಣ್ಣು ಗುಲಾಮಳು."

"ವರದಕ್ಷಿಣೆ ತೆಗೆದುಕೊಳ್ಳುವುದು ಕಾನೂನುಬಾಹಿರ ನಿಜ, ಆದರೆ ಹೀಗೆ ರಾಜಾರೋಷವಾಗಿ ಕೊಡು ತೆಗೆದುಕೊಳ್ಳುವ ವ್ಯವಹಾರ ನಡೆದಿದೆ." ಶ್ರೀಕಂಠಯ್ಯ ಸೊಸೆಯ ಮಾತಿಗೆ ಸ್ವರ ಸೇರಿಸುತ್ತಿದ್ದಂತೆ ಅಲ್ಲಿ ಹೊರಗೆ ಯಾರದೋ ಕೂಗು,

"ಅಯ್ಯನೋರೇ, ಪೋಲೀಸರು ಬಂದಿದ್ದಾರೆ, ಬರಬೇಕಂತೆ!"

ರಾಜಣ್ಣ ಗಡಿಬಿಡಿಯಿಂದ ಎದ್ದ. ಕೆಲಸದವನ ಮನೆಯಿಂದ ಹಿಂದಿರುಗುವಾಗ ಒಬ್ಬನನ್ನು ನಾಲ್ಕು ಮೈಲು ದೂರದಲ್ಲಿರುವ ಪೋಲೀಸ್ ಸ್ಟೇಶನ್ನಿಗೆ ಕಳುಹಿಸಿದ್ದ. ಅವರ ತನಿಖೆಯಾಗದೆ ಅರ್ಧಬೆಂದ ಶರೀರವನ್ನು ದಹನ ಮಾಡುವಂತಿಲ್ಲ. ಆಗಲೇ ಅವನು ಖಿನ್ನನಾಗಿದ್ದಾನೆ. ತನ್ನ ಸ್ಥಳದಲ್ಲಿ ಒಬ್ಬಳು ಜೀವಂತವಾಗಿ ದಹಿಸಿ ಸತ್ತು ತಾನು ಪೋಲೀಸರಿಗೆ ಹಣ ಚೆಲ್ಲಿ ನಷ್ಟಕ್ಕೊಳಗಾಗಲು ಕಾರಣವೇನು? ತನ್ನ ಮೇಲೆ ಅಣ್ಣ ಮಾಡಿದ ಮಾಟದ ಪ್ರಭಾವ! ಮಂತ್ರಿಸಿ ತಂದ ಭಸ್ಮ ರಕ್ಷೆಗೆ ಮೈಲಿಗೆಯಾಗಿರಬೇಕು. ಮಾಟದ ನಿವೃತ್ತಿಯಾಗದೆ ತನಗೆ ಸುಖವಿಲ್ಲ.

"ಇಲ್ಲಿಂದ ಹತ್ತಾರು ಮೈಲು ದೂರದಲ್ಲಿ ಒಂದು ಬನ ಇದೆಯಂತೆ" ರಾಜಣ್ಣ ಹೊರಟು ಸಿದ್ಧನಾಗುತ್ತ ಅಂದ, "ಅಲ್ಲಿ ಒಬ್ಬ ಯೋಗಿ ಈ ತರಹದ

ಮಾಟದ ಉಪಟಳಗಳ ನಿವೃತ್ತಿ ಮಾಡುತ್ತಾನಂತೆ. ಇನ್ನೆರಡು ದಿನಗಳಲ್ಲಿ ಹೋಗಿ ಬರ್ತೇನೆ."

"ಇನ್ನೂ ನಿನಗೆ ಇದೇ ನಂಬಿಕೆಯೇ?" ಕೆಣಕಿದ ಅವಿನಾಶ.

"ಆ ಬನವಾಸಿ ಯೋಗಿ ಮಾಡುವ ನಿವೃತ್ತಿಗೆ ಶಕ್ತಿ ಅಧಿಕವಂತೆ. ಹತ್ತಿಪ್ಪತ್ತು ವರ್ಷ ಹಿಮಾಲಯದಲ್ಲಿ ತಪಸ್ಸು ಮಾಡಿ, ಅಗೋಚರ ಶಕ್ತಿ ಪಡೆದವನು. ನೀವು ಏನೇ ಹೇಳಿ ಡಾಕ್ಟರೇ, ಯಾರೋ ಆಗದವರು ಮಾಟ ಮಾಡಿ ನನ್ನನ್ನು ಹಾಳುಮಾಡಲು ಇಚ್ಛಿಸಿದ್ದಾರೆ. ದಿನಾ ಕಷ್ಟ ಉಂಡು ಸಾಕಾಗಿದೆ. ಅದರ ನಿವೃತ್ತಿಯಾಗದಿದ್ದರೆ ನನ್ನ ಕೈಗೆ ಕರಟ–ಕೋಲು ಬರುವುದು ಖಂಡಿತ!"

ರಾಜಣ್ಣ ಹೊರಟು ಹೋದ ಮೇಲೆ ಬೆಕ್ಕಿನಂತೆ ಗುರುಗುಟ್ಟಿದಳು ಸೀತಮ್ಮ. ಬಂದವರೆದುರು ಅವನನ್ನು ನಿಂದಿಸಲಾರದೆ ಸೋತಳು, ಸೋತು ನಿಂದಿಸಿದಳು. ಇತ್ತೀಚೆಗೆ ಅವನ ನಡವಳಿಕೆ ವಿಪರೀತವಾಗಿದೆ. ಹಲವು ಹತ್ತು ಕಡೆ ಪ್ರಶ್ನೆ ಕೇಳುವ ಹುಚ್ಚು. ಒಬ್ಬೊಬ್ಬರದು ಒಂದೊಂದು ಪ್ರತಿಕ್ರಿಯೆ. 'ಗುರುವಿಗೆ ಅಪಚಾರ' ಎಂದು ಮತ್ತೊಬ್ಬರು. ಎಲ್ಲರ ತಾಳಕ್ಕೆ ತಕ್ಕಂತೆ ಕುಣಿಯುವ ರಾಜಣ್ಣ ನವಗ್ರಹಶಾಂತಿ, ನಾಗಪ್ರತಿಷ್ಠೆ ಮಾಡಿಸುವ ಆಲೋಚನೆಯಲ್ಲಿದ್ದಾನೆ. ಈ ಮಧ್ಯೆ ಒಬ್ಬರು 'ಬನವಾಸಿ'ಯನ್ನು ಕುರಿತು ಹೇಳಿದ್ದರಿಂದ ಅವನಿಗೆ ಅಲ್ಲಿಗೂ ಹೋಗಿ ಬರುವ ಮನಸ್ಸಾಯಿತು.

"ನಾನು ತಲೆ ಚಚ್ಚಿಕೊಂಡೆ ಡಾಕ್ಟರೇ, ಕಷ್ಟನಷ್ಟಗಳು ಮನುಷ್ಯನಿಗೆ ಬಾರದೆ ಮರಗಳಿಗೆ ಬರುತ್ತವೆಯೇ?" ಕಣ್ಣೀರು ತೊಡೆಯುತ್ತ ಅಂದರು ಸೀತಮ್ಮ. "ನಮ್ಮ ಭಾವ ಅಂದರೆ ದೇವರಂತಹ ಮನುಷ್ಯ. ಒಂದು ದಿನವೂ ಸ್ವರ ಏರಿಸಿ ಮಾತನಾಡಿದವರಲ್ಲ. ತಮ್ಮ ಅಂದರೆ ಹೊಟ್ಟೆ ಮಗನಿಗಿಂತಲೂ ಹೆಚ್ಚಿನ ಪ್ರೀತಿ. ಅವರು ಯಾಕೆ ನಮ್ಮ ಮೇಲೆ ಹಗೆ ಸಾಧಿಸ್ತಾರೆ ಹೇಳಿ? ಇವರ ಸ್ವಭಾವದಿಂದ ಒಬ್ಬರ ಮುಖ ಉತ್ತರಕ್ಕೆ, ಮತ್ತೊಬ್ಬರದು ದಕ್ಷಿಣಕ್ಕೆ. ಭಾವನಿಗೆ ಎದೆನೋವು ಬಂದದ್ದು ಇದೇ ದುಃಖದಿಂದ. ನೀವಾದರೂ ಬುದ್ಧಿ ಹೇಳಿ, ಡಾಕ್ಟರೇ."

"ನಾನೇನು ಹೇಳಲಿ? ತನ್ನನ್ನು ತಾನು ತಿದ್ದಿಕೊಳ್ಳದ ಹೊರತು ಮನುಷ್ಯ ಬದಲಾಗಲಾರ."

"ಹಣ ನೀರಿನಂತೆ ಖರ್ಚಾಗ್ತಾ ಇದೆ. ಡಾಕ್ಟರೇ. ನಮ್ಮಂತಹ ದುರ್ಬಲ ಮನಸ್ಸಿನವರನ್ನು ಸುಲಿಗೆ ಮಾಡಿ, ರಕ್ತ ಹೀರಿ ಶೋಷಿಸುವ, ನಾಯಿಕೊಡೆಗಳಂತೆ ಹುಟ್ಟಿಕೊಳ್ಳುವ ಧೂರ್ತರೆಷ್ಟು ಮಂದಿಯೋ ನಾನು ಕಾಣೆ. 'ಬನವಾಸಿ'ಯೂ ಒಬ್ಬ ಠಕ್ಕು ಯೋಗಿ!"

ಅವಿನಾಶನಿಗೆ ತಿಳಿದಿದೆ. ರಾಜಣ್ಣನ ಮನೋದೌರ್ಬಲ್ಯದೊಡನೆ ಆಡುತ್ತಿವೆ ಅನೇಕ ನಾಯಿಕೊಡೆಗಳಂತಹ ಬೊಗಳೆ ಸಾಧುಗಳು. ಆ

ನಾಯಿಕೊಡೆಗಳ ಕಪಿಮುಷ್ಟಿಯಲ್ಲಿ ರಾಜಣ್ಣನಂಥವರು ನಲುಗಿ ಹೋಗಿದ್ದಾರೆ. ನಿಜ, ಪರಸ್ಪರ ಪೂರಕವಾಗಿ ಬೆಳೆದುಕೊಳ್ಳುತ್ತಾ ಹೋಗುತ್ತಾರೆ. ಜನರ ದೌರ್ಬಲ್ಯ ಅರಿವಾದೊಡನೆ ನಾಯಿಕೊಡೆಗಳ ಸಂಖ್ಯೆ ಹೆಚ್ಚುತ್ತದೆ. ಒಮ್ಮೆ ಹುಟ್ಟಿದ್ದು ಮುಂದೆಂದೂ ಅಳಿಯುವುದಿಲ್ಲ. ಅದರ ಪಥಸಂಚಲನ ನೇರ!

ಅಷ್ಟರಲ್ಲಿ ಇಬ್ಬರು ಅಪರಿಚಿತರು ರಾಜಣ್ಣನನ್ನು ಕೇಳಿಕೊಂಡು ಬಂದರು ಅಲ್ಲಿಗೆ. ಇಬ್ಬರೂ ಮೂವತ್ತರೊಳಗಿನ ತರುಣರು. ಬೆಲೆಬಾಳುವ ಉಡುಪು ತೊಟ್ಟಿದ್ದಾರೆ, ಕೈಯಲ್ಲೊಂದು ಪುಸ್ತಕ. ನೋಡಿದಾಕ್ಷಣ ತಿಳಿದು ಹೋಯಿತು, ಇಬ್ಬರೂ ಬೈರಾಗಿಯ ಜೊತೆಯವರು!

ಬಂದವರಲ್ಲಿ ಒಬ್ಬ ಮುದ್ರಿತ ಕಾಗದದ ಒಂದು ಪ್ರತಿಯನ್ನು ಅವಿನಾಶನ ಕೈಲಿರಿಸಿದ. ಅದನ್ನು ಓದುತ್ತ ಆತನ ಹುಬ್ಬುಗಳು ಸಂಕುಚಿತವಾದವು.

"... ವಿಗ್ರಹದೇವತೆಗೆ ಕಲ್ಲುಬೆಟ್ಟದ ಮೇಲೆ ಗುಡಿ ಕಟ್ಟಿಸಲು ಸಹಾಯಧನ ಕೋರಲಾಗಿದೆ."

"ಪುರಾತನ ಕಾಲದ ಕಂಚಿನ ವಿಗ್ರಹ ಮಳೆಗಾಳಿಗೆ ಅನಾಥವಾಗಿದೆ. 'ನನಗೊಂದು ಗುಡಿಯನ್ನು ಕಟ್ಟಿಸು !' ಎಂದು ವಿಗ್ರಹದೇವತೆ ತನ್ನ ರಕ್ಷಕನಿಗೆ ಕನಸಿನಲ್ಲಿ ಅಪ್ಪಣೆ ಮಾಡಿದ್ದಾಳೆ. ಆ ಮೇರೆಗೆ ಕಲ್ಲುಬೆಟ್ಟದಲ್ಲಿ ವಿಗ್ರಹ ದೊರೆತ ಸ್ಥಳದಲ್ಲಿಯೇ ಗುಡಿ ಕಟ್ಟುವ ಆಲೋಚನೆ ಮಾಡಿದ್ದೇವೆ. ಈಗಾಗಲೇ ದೇವತೆಯ ಮಹಿಮೆ, ಪವಾಡದಿಂದ ಕೃತಾರ್ಥರಾಗಿದ್ದಾರೆ ಅನೇಕರು. ಕಾಲಿಲ್ಲದ ಹುಡುಗನಿಗೆ ಕಾಲು ಬಂದಿದೆ. ಪೂಜಾಪ್ರಸಾದ ಸ್ವೀಕರಿಸಿದ ಕ್ಯಾನ್ಸರ್ ರೋಗಿ ಅದರಿಂದ ಗುಣಮುಖನಾಗಿದ್ದಾನೆ. ಮಕ್ಕಳಿಲ್ಲದವರು 'ತೊಟ್ಟಿಲುಸೇವೆ ಮಾಡುತ್ತೇನೆ' ಎಂದರೆ ಸಾಕು, ಫಲಪ್ರಾಪ್ತಿ ! ದೇವತೆ ಭಕ್ತರ ಕನಸಿನಲ್ಲಿ ಬಂದು ಅವರ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ. ಭಕ್ತವೃಂದ ಇತ್ತ ಗಮನಹರಿಸಿ ಈ ಸೇವಾಕಾರ್ಯವನ್ನು ನೆರವೇರಿಸಿಕೊಡಬೇಕೆಂದು ಕೋರಿಕೆ.

(ಸಹಿ)

ಕಲ್ಲುಬೆಟ್ಟದ ಬೈರಾಗಿ

ಅವಿನಾಶ ಭುಜ ಎತ್ತರಿಸಿ ನೋಡಿದ. "ಕಲ್ಲುಬೆಟ್ಟದ ಮೇಲೆ ಗುಡಿ ನಿರ್ಮಾಣ? ನಿಮ್ಮ ವಾಸಸ್ಥಳ, ಊರು ಯಾವುದು? ಎಂದ.

"ಈಗ ಇದೇ ನಮ್ಮ ಊರು. ನಾಳೆ ಇನ್ನೆಲ್ಲಿ ಪಯಣವೋ ನಾವರಿಯೆವು. ಇಂದು ಮೃಷ್ಟಾನ್ನ ಸಿಕ್ಕಿದರೆ ಉಂಡೇವು, ನಾಳೆ ಭಿಕ್ಷಾನ್ನ ದೊರೆತರೆ ಅದೂ ಸಾಕು. ಮನೆ ಸಿಕ್ಕಿದರೆ ಉಳಿಯಬಲ್ಲೆವು. ಬಯಲು ಸಿಕ್ಕಿದರೆ ಅದೂ ಆದೀತು."

"ಭಲೆ!" ಎಂದು ಉದ್ಗರಿಸಿದರು ಶ್ರೀಕಂಠಯ್ಯ, "ಚಿಕ್ಕ ವಯಸ್ಸಿನಲ್ಲಿ ನಿರ್ಲಿಪ್ತರು–ಆಶ್ಚರ್ಯ!"

ಸೀತಮ್ಮ ಐದು ರೂಪಾಯಿ ತಂದುಕೊಟ್ಟಾಗ ಇಬ್ಬರೂ ಮುಖ ಸಿಂಡರಿಸಿ ಕೈ ಮುಂದೆ ಚಾಚಲಿಲ್ಲ. ಈಗಷ್ಟೇ ನೆರೆಹಳ್ಳಿಗೆ ಹೋಗಿ ಬಂದಿದ್ದಾರಂತೆ, ನೂರು ರೂಪಾಯಿಗೆ ಕಡಿಮೆಯಿಲ್ಲದಂತೆ ಪ್ರತಿ ಮನೆಯಿಂದ ಸಂಗ್ರಹಿಸಿದ ಹಣದ ರಶೀದಿ ಪುಸ್ತಕವನ್ನು ಅವಳ ಮುಂದಿರಿಸಿದರು. ಸೀತಮ್ಮ ಇನ್ನೊಂದು ಪೈಸೆಯನ್ನೂ ಹೆಚ್ಚಿಗೆ ಕೊಡಲು ಸಿದ್ಧಳಿರಲಿಲ್ಲ. ಬಂದವರು ಗೊಣಗುತ್ತ ಆ ಐದು ರೂಪಾಯಿಯನ್ನು ಮುಟ್ಟದೆಯೇ ಹಾಗೆ ಹೊರಟುಹೋದರು. ಒಬ್ಬಾತ 'ವಿಗ್ರಹದೇವತೆ ಸಾಮಾನ್ಯದವಳೆ! ಚೆನ್ನಾಗಿ ಬುದ್ಧಿ ಕಲಿಸುತ್ತಾಳೆ' ಎಂದದ್ದೂ ಕೇಳಿಸಿತು.

"ನೋಡಿದಿರಾ ಇವರ ಅಹಂಕಾರ? ಐದು ರೂಪಾಯಿ ಸಾಲದಂತೆ!" ಸೀತಮ್ಮ ಆ ನೋಟನ್ನು ಹಾಗೇ ಒಳಗಿಟ್ಟಳು.

"ಅಲ್ಲಿ ಯಾರಿಗಾಗಿ ಗುಡಿ ನಿರ್ಮಾಣ?" ಬೆರಗಾದಳು ಅಹಲ್ಯ.

"ನೀನೇ ಅಂದಿದ್ದೆಯಲ್ಲ, ಎಲ್ಲೋ ಸಂತೆಯಿಂದ ತಂದ ಗೊಂಬೆ ಎಂದು. ಪಾಪ, ಅದಕ್ಕೆ ರಕ್ಷಣೆ ಬೇಕಂತೆ!" ಪಕಪಕನೆ ನಕ್ಕ ಅವಿನಾಶ.

"ನೀನು ತಮಾಷೆ ಮಾಡಿ ನಗು. ಮೊನ್ನೆ ಬೆಟ್ಟಕ್ಕೆ ಹೋದಾಗ ಆ ಬೈರಾಗಿ ಗುಡಿ ಕಟ್ಟಿಸ್ತೇನೆ ಎಂದಿದ್ದ' ಶ್ರೀಕಂಠಯ್ಯ ಮೆಚ್ಚುಗೆಯಲ್ಲಿ ಅಂದರು, "ಕಟ್ಟಿಸಲಿ, ಊರು ಉದ್ಧಾರವಾಗಲು ಇಂತಹ ಗುಡಿಗಳು ಬೇಕು. ಇವತ್ತು ಬೆಟ್ಟಕ್ಕೆ ಹೋದವರು ಪೂಜೆಯನ್ನು ನೋಡಿಕೊಂಡೇ ಹಿಂದಿರುಗೋಣ."

೧೨

ಕಂಚಿನ ವಿಗ್ರಹ ದೊರೆತ ಬೆಟ್ಟದ ನೆತ್ತಿಯ ಮೇಲೆ ಈಗ ಗುರುತು ಸಿಗಲಾರದಷ್ಟು ಬದಲಾವಣೆ. ಅಲ್ಲೆಲ್ಲ ಕಲ್ಲು ಮಣ್ಣು ಅಗೆದು ಸಮತಟ್ಟು ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ ಹತ್ತಾರು ಕೆಲಸದವರು. ಗುಡಿಯ ನಿರ್ಮಾಣಕ್ಕೆ ಅನೇಕ ಸಾಮಾನುಗಳ ರಾಶಿ ಬಂದು ಬಿದ್ದಿವೆ. ಕಲ್ಲಿನಿಂದಲೇ ಕಂಬ, ಗೋಡೆಗಳನ್ನೂ ಕಟ್ಟುವುದರಿಂದ ಕೆಲವು ಕುಶಲಕರ್ಮಿಗಳು ಕೆತ್ತನೆಯ ಕೆಲಸದಲ್ಲಿ ನಿರತರಾಗಿದ್ದಾರೆ. ಸುತ್ತಲೂ ಕಲ್ಲು ಕೆತ್ತುವ ಟಪ್‌ಟಣ್ ಸದ್ದು. ಕೋಡುಗಲ್ಲಿನ ಬದಿಯಲ್ಲಿ ಒಂದು ಡೇರೆ. ಅದಕ್ಕೆ ಹೊದೆಯಿಸಿದ ಬಟ್ಟೆ ಗಾಳಿಗೆ ರಪ್‌ರಪಾ ಹೊಡೆದುಕೊಳ್ಳುತ್ತಿದೆ. ಡೇರೆಯ ಬಾಗಿಲಲ್ಲಿ ಕೆಲವು ಬಟ್ಟೆಗಳು, ಪಾತ್ರೆಗಳು, ಹೂಡಿದ ಒಲೆ, ಕೆಲವು ಮಣ್ಣಿನ ಪಾತ್ರೆಗಳು. ಒಬ್ಬ ಮುದುಕ ಒಲೆ ಬದಿಯಲ್ಲಿ ಮಲಗಿ ಅಗಸದತ್ತ ಮುಖ ಮಾಡಿದ್ದಾನೆ. ಇನ್ನೊಬ್ಬ ದೊಡ್ಡ ಪುಸ್ತಕದ ಪುಟ ತಿರುವುತ್ತಿದ್ದಾನೆ.

ವಿಗ್ರಹವಿರಿಸಿದ ಬಂಡೆಯ ಹೊರಗೆ ಚಿತ್ರವಿಚಿತ್ರ ಹೂವುಗಳ ರಾಶಿ. ನಾಜೂಕಾಗಿ ಎಳೆದ ರಂಗವಲ್ಲಿ. ಗಾಳಿಗೆ ಆರದಂತೆ ಗಾಜಿನ ಬುರುಡೆಯಲ್ಲಿ ಬೆಳಗುತ್ತಿರುವ ನೀಲಾಂಜನ. ಅದರ ಸುತ್ತಲೂ ಕುಂಕುಮದ ಓಕುಳಿ. ಹಣ್ಣು, ಹೂವು, ತೆಂಗಿನಕಾಯಿಗಳ ಹಲವು ಬುಟ್ಟಿಗಳು ಸಾಲಾಗಿ ಕುಳಿತಿವೆ ಸಾಯಂಕಾಲದ ಪೂಜೆಗೆ ಕಾಯುತ್ತ. ಒಂದು ಬುಟ್ಟಿಯಲ್ಲಿ ಸೀರೆ, ರವಿಕೆ, ಕಣ! ಯಾರೋ ಹೇಳಿಕೊಂಡ ಹರಕೆ. ವಿಗ್ರಹದ ಎದುರು ಗಡ್ಡ ಬಿಟ್ಟ ಬೈರಾಗಿ ಕಣ್ಮುಚ್ಚಿ ಕುಳಿತಿದ್ದಾನೆ.

ಕಲ್ಲಳ್ಳಿ ನೆಲದಿಂದ ಬೆಟ್ಟದ ಶಿಖರಕ್ಕೇರುವ ಹಾದಿಯಲ್ಲಿ ಇರುವ ಕುರುಚಲು ಪೊದೆ, ಕಲ್ಲು ಮುಳ್ಳುಗಳು ಸವೆದು ಕಿರುಹಾದಿಯ ಸೃಷ್ಟಿ. ಯಾರ್‍ಯಾರೋ ಮೂಡಿಸಿದ ಹೆಜ್ಜೆ ಗುರುತುಗಳು. ಅದರ ಮೇಲೆ ಅರಿಯದವರು, ಅಪರಿಚಿತರು ಕಣ್ಣು ಮುಚ್ಚಿ ಹೆಜ್ಜೆಯಿರಿಸಿದರೂ ಸಾಕು. ಹಾದಿ ಅವರನ್ನು ಕೈ ಹಿಡಿದಂತೆ ಮೇಲಕ್ಕೇರಿಸುತ್ತದೆ. ಸಾಯಂಕಾಲದ ಪೂಜೆಗಾಗಿ ಒಬ್ಬೊಬ್ಬರೇ ಆ ಹಾದಿಯಲ್ಲಿ ಮೇಲೇರಿ ಬರುತ್ತಿದ್ದಾರೆ. ಅವಿನಾಶ ಮತ್ತು ಅಹಲ್ಯೆಗೆ ಪೂಜೆ ನೋಡುವ ಕಾತರ ಇರದಿದ್ದರೂ ತಂದೆತಾಯಿಗಳ ಇಚ್ಛೆಗೆ ಅಡ್ಡಿಪಡಿಸದೆ ಮೌನ ತಳೆದಿದ್ದಾರೆ.

ಹೂ-ಕುಂಕುಮದಿಂದ ಮುಚ್ಚಿ ಹೋದ ವಿಗ್ರಹವನ್ನು ನೋಡುತ್ತ ಪ್ರಭಾವಿತಳಾದ ನಾಗರತ್ನ ಮೊಣಕಾಲನ್ನು ನೆಲಕ್ಕೂರಿ ಉದ್ದಕ್ಕೆ ನಮಸ್ಕಾರ ಮಾಡಿದಳು. ಕುಂಕುಮವನ್ನು ಹಣೆಗೊತ್ತಿದಳು. ಅಲ್ಲೇ ಇತ್ತು ಸರ್ಪದ ಆಕೃತಿಯ ಕಾಣಿಕೆ ಡಬ್ಬಿ. ಎರಡು ರೂಪಾಯಿ ನೋಟು ಹಾಕಿದಳು ಭಕ್ತಿ ಭಾವದಲ್ಲಿ. ಅವಿನಾಶನಿಗೆ ವಿಗ್ರಹವನ್ನು ನೋಡುವ ಕುತೂಹಲ. "ತೆಗೆದು ತೋರಿಸಿ" ಎಂದ ಬೈರಾಗಿಯೊಡನೆ.

"ಹೂವುಗಳಿಂದ ಅಲಂಕೃತವಾದ ದೇವತೆ, ಕರಂಡಕದಲ್ಲಿ ಇಟ್ಟಿದ್ದೇನೆ. ನಂಬಿಕೆ ಇಲ್ಲದವರಿಗೆ ಅದರ ದರ್ಶನ ಮಾಡಿಸಬಾರದು, ಅಲ್ಲವೇ?" ಎಂದು ಬೈರಾಗಿಯ ಕಂಚಿನ ಧ್ವನಿ ಮೊಳಗಿತು.

ಶ್ರೀಕಂಠಯ್ಯ ಬೆರಗಾದರು. ಮಗ-ಸೊಸೆಗೆ ನಂಬಿಕೆಯಿಲ್ಲವೆಂದು ತಿಳಿದದ್ದು ಬೈರಾಗಿ ಒಬ್ಬನಿಗೇ ! ಕಲ್ಲಳ್ಳಿ ಜನರು ಸುಳ್ಳು ಹೇಳುತ್ತಿಲ್ಲ, 'ಬೈರಾಗಿಯ ಮಾತುಗಳು ಅವನದಲ್ಲ, ವಿಗ್ರಹದೇವತೆ ಅವನ ನಾಲಗೆಯಲ್ಲಿ ನಿಂತು ತಾನು ಮಾತನಾಡುತ್ತಾಳೆ !" ನಿಜವಿರಬೇಕು. ಈಗಲೂ ಅದು ಯಾವ ದೇವತೆಯೆಂದು ಯಾರಿಗೂ ತಿಳಿದಿಲ್ಲ. ಮೊನ್ನೆ ಅವರಿಗೆ ಕಂಡದ್ದು ಲಕ್ಷ್ಮಿಯ ರೂಪದಲ್ಲಿ. ಈಗ ಹೂ-ಕುಂಕುಮದಿಂದ ಮುಚ್ಚಿದ ವಿಗ್ರಹದ ನೆತ್ತಿ ಒಂದೇ ಕಾಣುತ್ತಿದೆ.

"ಅಪ್ಪ-ಅಮ್ಮ ವಿಗ್ರಹದ ಖ್ಯಾತಿ ಕೇಳಿ ಬಹುದೂರದಿಂದ ಬಂದಿದ್ದಾರೆ. ಅವರಿಗೆ ಒಮ್ಮೆ ದರ್ಶನ ಮಾಡಿಸಿ" ಇನ್ನೊಮ್ಮೆ ಕೇಳಿದ ಅವಿನಾಶ.

"ದೇವತೆಯ ಇಚ್ಛೆ ಮುರಿಯುವುದು ಸಾಧ್ಯವೇ?" ಬೈರಾಗಿ ನಕ್ಕ. "ಅವಳು ಇಚ್ಛಿಸಿದರೆ ಪದೇ ಪದೇ ನಿಮ್ಮನ್ನು ಕರೆಯಿಸಿಕೊಳ್ತಾಳೆ. ಇಲ್ಲಾಂದ್ರೆ ಬೆಟ್ಟ ಏರಬೇಕೆಂದರೂ ನಿಮ್ಮಿಂದ ಅಸಾಧ್ಯ." ಅವನ ದೃಷ್ಟಿ ಅಹಲ್ಯಳತ್ತ ಹೊರಳಿತು, "ನನ್ನ ಮಾತು ಸುಳ್ಳಲ್ಲ ಅಮ್ಮಾ, ಹೀಗೇ ಬೆಟ್ಟಕ್ಕೆ ಬರ್ತಾ ಇರಿ. ಖಂಡಿತ ನಿಮಗೆ ಒಳಿತಾಗುತ್ತದೆ."

ನೆರೆದ ಜನರು ತಲೆದೂಗಿ "ನಮೋ ನಮೋ" ಎಂದರು.

"ಅಮ್ಮ, ಮನಸ್ಸಿನ ಇಷ್ಟಾರ್ಥಕ್ಕೆ ಸಂಕಲ್ಪ ಮಾಡಿಕೊಳ್ಳಿ. ಕಷ್ಟ ಬಂದಾಗ ದೇವತೆಯ ಮೇಲೆ ನಂಬಿಕೆಯಿರಿಸಿ, ನೆನಪು ಮಾಡುತ್ತ ಇರಿ, ಖಂಡಿತ ಒಳಿತಾಗುತ್ತದೆ. ನನ್ನ ಮಾತು ಸುಳ್ಳಲ್ಲ."

ಅವಿನಾಶನ ಕೋಪ ಭುಗಿಲ್ಲೆಂದಿತು. ನರಿ ಸ್ವಭಾವದ ಮೂರ್ಖ ಹೇಡಿ. ತನ್ನ ಗುಟ್ಟು ಹೊರಬೀಳಬಾರದೆಂದು ಆಟದ ಗೊಂಬೆಯನ್ನು ಹೂ-ಕುಂಕುಮದಿಂದ ಮುಚ್ಚಿದ ವಂಚಕ.

"ವಿಗ್ರಹದೇವತೆಯನ್ನು ಸಾಕ್ಷಾತ್ಕಾರ ಮಾಡಿಕೊಂಡ ಪುಣ್ಯಾತ್ಮರು ನೀವು. ಏಳೇಳು ಜನ್ಮಗಳ ಪುಣ್ಯ ಬೇಕು. ಹಿಡೀರಿ, ಇದು ನನ್ನ ಪಾಲಿನ ಕಾಣಿಕೆ." ಶ್ರೀಕಂಠಯ್ಯ ಐವತ್ತರ ನೋಟನ್ನು ಬೈರಾಗಿಯ ಮುಂದಿರಿಸಿ, "ಗುಡಿ ಕಟ್ಟುವ ಸಿದ್ಧತೆ ಮಾಡ್ತಾ ಇದ್ದರೆ ನೂರು ದಿಸೆಗಳಿಂದ ಹಣವು ನೀರಿನಂತೆ ಹರಿದು ಬರುತ್ತದೆ. ಕಲ್ಲಳ್ಳಿ ಜನರು ಧಾರಾಳಿಗಳು!"

ಬೈರಾಗಿ ಆ ರೂಪಾಯಿ ನೋಟನ್ನು ಕಣ್ಣಿಗೊತ್ತಿಕೊಂಡ, "ಅಹೋ... ಎಲ್ಲಾ ನಿನ್ನ ಇಚ್ಛೆ!"

ಸ್ವಲ್ಪ ಹೊತ್ತಿನಲ್ಲಿ ಜಾಗಟೆ, ಶಂಖವಾದ್ಯ, ಡೋಲಿನ ಹಿಮ್ಮೇಳದಲ್ಲಿ ಪೂಜೆ ನಡೆಯಿತು. ಪ್ರಸಾದವನ್ನು ಹಂಚಲಾಯಿತು. ಅವಿನಾಶ ಮತ್ತು ಅಹಲ್ಯ ಇಬ್ಬರೂ ಕೈ ಮುಂದೆ ಚಾಚಲಿಲ್ಲ. ಬೈರಾಗಿ ಮುಗುಳ್ನಗೆಯಿಂದ ಪ್ರಸಾದದ ತಟ್ಟೆಯನ್ನು ಅವರ ಮುಂದೆ ಹಿಡಿದ.

"ಆಂಜನೇಯನ ಗುಡಿಗೆ ಪ್ರತಿವಾರ ಪೂಜೆ ಕೊಡುತ್ತೀರಿ. ಅಂದ ಮೇಲೆ ಈ ಪ್ರಸಾದವೂ ಸ್ವೀಕಾರವಾಗಲಿ. ದೇವರಲ್ಲಿ ಭಿನ್ನವಿಲ್ಲ" ಎಂದ.

"ಮೊದಲು ವಿಗ್ರಹ ತೋರಿಸಿ, ಆಮೇಲೆ ಪ್ರಸಾದ."

"ಈ ಹಟ ಯಾಕೆ? ನಾಳೆ ನಸುಕು ಐದು ಗಂಟೆಗೆ ಬನ್ನಿ. ಹಳೆ ಹೂವನ್ನು ತೆಗೆದು ಹೊಸ ಹೂವನ್ನು ಏರಿಸುವ ಮೊದಲು ದರ್ಶನ ಪಡೆಯಬಹುದು. ಅಹೋ... ಆರು ಗಂಟೆಗೆಲ್ಲಾ ಪೂಜೆ ಮುಗಿದಿರುತ್ತದೆ."

"ಆಗಲೇ ನಾವು ಪ್ರಸಾದ ತಗೊಳ್ತೇವೆ, ಈಗ ಬೇಡ" ಅವಿನಾಶನ ಗಡಸುಧ್ವನಿಗೆ ಕೆಲವರು ಬೆಚ್ಚಿ ಹಿಂದೆ ಸರಿದರು.

ಶ್ರೀಕಂಠಯ್ಯ ತಾವು ಭಕ್ತಿಯಿಂದ ತೆಗೆದುಕೊಂಡ ಪ್ರಸಾದವನ್ನೇ ಮಗನ ತಲೆಗೆ ಪೂಸಿದರು. ಅವಿನಾಶ ಅದನ್ನೂ ಕೊಡಹಿ ಹಾಕಿದ. ಅವನಲ್ಲಿ ಎದ್ದಿತ್ತು ಪ್ರಶ್ನೆಗಳ ಸರಮಾಲೆ. ಕೆಲವು ದಿನಗಳಲ್ಲಿ ಇಲ್ಲೊಂದು ಗುಡಿ ನಿರ್ಮಾಣ, ಜನರ ಸಂದರ್ಶನ, ಪೂಜಾವಿಧಿಗಳು. ಕ್ರಮೇಣ ಇದೊಂದು ಯಾತ್ರಾಸ್ಥಳವೇ? ಹಾಗಾದರೆ ಇದರ ಮೂಲಪ್ರೇರಣೆ ಎಲ್ಲಿಂದ?

ಬೆಟ್ಟವಿಳಿದು ಬರುವಾಗ ಕಲ್ಲುಬಂಡೆಯೂ ಹುಡಿಯಾಗುವಂತೆ ಕಾಲು ಅಪ್ಪಳಿಸಿ ಹೆಜ್ಜೆಹಾಕಿದ. ಶ್ರೀಕಂಠಯ್ಯ ದಾರಿಯುದ್ದಕ್ಕೂ ಮಗನನ್ನು ಖಂಡಿಸಿದರು. ಜನರಲ್ಲಿ ಧರ್ಮಪ್ರಜ್ಞೆ ಬೆಳೆಯಲು ಇಂತಹ ಗುಡಿಗಳು ಅಗತ್ಯ. ತಮಾಷೆ ಮಾಡುವುದೇ ಪಾಪ ಎಂದು ಅವರ ತರ್ಕ.

"ಗುಡಿ ಕಟ್ಟುವವರ ಆಳವನ್ನು ಕೆದಕಬಾರದು. ಎಲ್ಲಿ ಹತ್ತು, ನೂರು ಜನ ಸೇರಿ ಒಂದು ಧರ್ಮಕಾರ್ಯ ಮಾಡುತ್ತಾರೋ ಅಲ್ಲಿ ದೇವರು ತಾನಾಗಿಯೇ ನೆಲೆಸಬಲ್ಲ."

"ಧರ್ಮಕಾರ್ಯ ಮಾಡಲು ಗುಡಿಯೇ ಆಗಬೇಕಿಲ್ಲ. ಆಂಜನೇಯ ಗುಡಿ ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು ಅದರ ಮಾಡು, ಅಡ್ಡ ತೊಲೆ ಕುಸಿದು ಬೀಳಲಿಕ್ಕಿಗಿದೆ. ಅದರ ಮೊಕ್ತೇಸರರು ಚಂದಾ ಸಂಗ್ರಹಿಸಿ ಗುಡಿಯ ಜೀರ್ಣೋದ್ಧಾರ ಮಾಡಲೆತ್ನಿಸಿದರೂ ವಂತಿಗೆ ಸಂಗ್ರಹವಾಗಲೇ ಇಲ್ಲ."

ಅವಿನಾಶನ ಮಾತು ದಿಟ. ಪುರಾತನ ಗುಡಿಯ ಜೀರ್ಣೋದ್ಧಾರವಾಗದೆ ಹಳ್ಳಿಗೆ ಇನ್ನೊಂದು ಹೊಸ ಗುಡಿ ಅನಗತ್ಯ. ವಂತಿಗೆ ಕೊಡುವವರೂ ಆಂಜನೇಯನ ಗುಡಿಗಾಗಿ ಕೊಡಬೇಕಾದ್ದು ನ್ಯಾಯ. ವಿಗ್ರಹದೇವತೆಗೆ ರಕ್ಷಣೆ-ಪೂಜೆ ಬೇಕಿದ್ದರೆ ಅದನ್ನು ಆಂಜನೇಯನ ಗುಡಿಯಲ್ಲಿ ತಂದಿಡಲಿ. ಜನರ ನಂಬಿಕೆ, ಶ್ರದ್ಧೆಗಳು ಒಂದೇ ಕಡೆಯಲ್ಲಿ ನೆಲೆಸಲು ಸಹಾಯಕ. ಅವಿನಾಶ ಯಾವ ದೇವರ ವಿರೋಧಿಯೂ ಅಲ್ಲ. ಪರಂಪರೆಯಿಂದ ಬಂದ ಆಂಜನೇಯ ಗುಡಿ ಮೇಲೆ ಜನರ ನಂಬಿಕೆ ಹೇರಬಾರದು. ಆ ಮೂಲಕ ಅವರನ್ನು ಶೋಷಿಸಬಾರದು ಎನ್ನುವವನು.

"ಹೊಸ ಗುಡಿಗೆ ಯಾರೂ ಆರ್ಥಿಕ ಸಹಾಯ ಮಾಡಬೇಡಿ ಎಂದು ನಾನು ಪ್ರಚಾರ ಮಾಡುತ್ತೇನೆ. ಛೆ! ವಂಚಕರನ್ನು ಬೆಳೆಯಲು ಬಿಡುವವರು ನಾವೇ!"

"ಬೇರೆಯವರಿಗೆ ಬುದ್ಧಿ ಹೇಳುವ ನಿನಗೆ ನಾನೊಂದು ಸಲಹೆ ಹೇಳಲೆ?" ಅನುಮಾನದಿಂದ ಕೇಳಿದರು ತಂದೆ, "ನಿಮಗಿಬ್ಬರಿಗೂ ಇನ್ನೂ ಮಕ್ಕಳ

ಯೋಗ ಕೂಡಿಬಂದಿಲ್ಲ. ಒಮ್ಮೆ ಶಾಸ್ತ್ರಿಗಳ ಹತ್ತಿರ ಪ್ರಶ್ನೆ ಇಡಿಸಿ ಸರಿಯಾದ ನಿವೃತ್ತಿ ಕೇಳಬಾರದೇ?"

"ರಾಜಣ್ಣನಂತೆ ನಾನೂ ದಿನಕ್ಕೊಬ್ಬರು ಹೇಳುವುದನ್ನು ತಲೆಯಲ್ಲಿ ತುಂಬಿಸಿ ಊರೆಲ್ಲ ತಿರುಗಬೇಕೆ? ಚೆನ್ನಾಗಿ ಹೇಳಿದಿ. ಅಪ್ಪಾ, ಲೋಪದೋಷಗಳಿರುವುದು ನಮ್ಮಲ್ಲೇ. ಅದನ್ನು ಇನ್ನೊಬ್ಬರ ಹತ್ತಿರ ಕೇಳುವುದೇನಿದೆ?"

ಬೆಟ್ಟಪಿಳಿದು ಎಲ್ಲರೂ ಮನೆಯತ್ತ ಹೆಜ್ಜೆ ಹಾಕಿದರೆ ಅವಿನಾಶ ಚಿಕಿತ್ಸಾಲಯದ ದಾರಿಹಿಡಿದ. ನಿನ್ನೆ ದಿನವೇ ಔಷಧಿಯ ಪಾರ್ಸಲ್ ಬಂದಿತ್ತು. ಬಿಚ್ಚಿ ಸರಿಪಡಿಸಿಬಿಟ್ಟರೆ ನಾಳೆಗೆ ಅನುಕೂಲ. ನಾಳೆ ಗೋವಿಂದನೂ ಕೆಲಸಕ್ಕಿಲ್ಲ. ನೆಂಟರಲ್ಲಿಗೆ ಹೋಗುತ್ತೇನೆಂದು ಇವತ್ತು ಬೆಳಗ್ಗೆಯೇ ಹೊರಟುಹೋಗಿದ್ದಾನೆ.

ನಾಲ್ಕು ಹೆಜ್ಜೆ ಮುಂದಿರಿಸುವಾಗ ಅವನನ್ನು ಅರಸುತ್ತ ಓಡಿಕೊಂಡು ಬಂದ ಸುಂದರರಾಜ, "ನಿಮಗಾಗಿ ಕಾಯ್ತಾ ಇದ್ದೆ ಡಾಕ್ಟರೇ, ಇತ್ಲಾಗೆ ಬನ್ನಿ. ಒಂದು ಗುಟ್ಟಿನ ವಿಷಯ" ದೊಡ್ಡ ಹುಳಿಮಾವಿನ ಮರದ ಕೆಳಗೆ ಕರೆದು ಅಚೆ ಈಚೆ ನೋಡಿದ, "ಸೇವಾಸದನದ ಡಾಕ್ಟರು ನಕಲಿ ಡಾಕ್ಟರಂತೆ! ನಿಮಗೆ ಗೊತ್ತೇ ವಿಷಯ?"

ಪ್ರಶ್ನೆ ತೀರ ಪರಿಚಿತ ಎಂದೆನಿಸಿತು ! ಅವಿನಾಶನ ಅನುಮಾನ ದಿಟ. ಮಹಾದೇವ ಯಾವ ವೈದ್ಯನ ಕೈಕೆಳಗೂ ಕಂಪೌಂಡರ್ ಆಗಿರಲಾರ, ಗೋವಿಂದನಂತೆ ಎಲ್ಲೋ ಸಣ್ಣಪುಟ್ಟ ಕೆಲಸದಲ್ಲಿ ಅಲೆದಾಡಿ ಕೊನೆಗೆ ಈ ವೃತ್ತಿ ಕೈಗೊಂಡಿರಬೇಕು. ಅದಕ್ಕೆಂದೇ ಯಾರೊಡನೆಯೂ ಬೆರೆಯದ ವ್ಯಕ್ತಿ, ತನ್ನೊಡನೆ ಮಾತನಾಡಲು ಅಳುಕು. ಕುಟುಂಬ ಯೋಜನಾ ಸಪ್ತಾಹದ ಸಮಯ ಹಳ್ಳಿಯಿಂದ ತಲೆಮರೆಯಿಸಿಕೊಂಡ ಹೇಡಿ!

"ನನಗೆ ಗೊತ್ತಿಲ್ಲ" ವಿಸ್ಮಯಗೊಂಡವನಂತೆ ಕಣ್ಣರಳಿಸಿದ ಅವಿನಾಶ, "ಒಂದೇ ವೃತ್ತಿಯಲ್ಲಿರುವ ನಾವು ಅನುಮಾನಪಡಬಾರದು."

"ಡಾ. ಮಹಾದೇವರವರು ತೀರ ಪರಿಚಿತರು. ಈ ವಿಷಯ ತಿಳಿಸಿದಾಗ ನಾನೇ ಅವರ ಬಳಿ ಹೋಗಿ ಧೈರ್ಯದಿಂದ ಕೇಳಿದೆ. ಅಬ್ಬ! ಅವರು ಲಘುವಾಗಿ ಮಾತನ್ನು ತಳ್ಳಿ ಹಾಕಿಬಿಟ್ಟರು. ಏನೇ ಆಗಲಿ, ಡಾಕ್ಟರೇ, ಒಮ್ಮೆ ತನಿಖೆ ಮಾಡುವುದು ಒಳಿತು. ನಾನು ಒಂದು ರಿಪೋರ್ಟ್ ಬರೆದು ಮೇಲಧಿಕಾರಿಗಳಿಗೆ ಕಳುಹಿಸ್ತೇನೆ. ನೀವು ನನಗೆ ಸಹಕಾರ ಕೊಡಿ."

"ಸಹಕಾರ ಕೊಡ್ತೇನೆ. ಆದರೆ ರಿಪೋರ್ಟ್‌ನಲ್ಲಿ ನನ್ನ ಸಹಿ ಬೇಡ. ಇದು ನನ್ನ ವೈಯಕ್ತಿಕ ಪ್ರಶ್ನೆ.

"ಹಾಗೇ ಆಗಲಿ, ನನಗೆ ತಿಳಿದಂತೆ ಅವರು ನಕಲಿ ವೈದ್ಯರಾದರೆ ತತ್‌ಕ್ಷಣ ಹಳ್ಳಿಯಿಂದ ಉಚ್ಚಾಟನೆ" ಚಿಟಿಕೆ ಹೊಡೆಯುತ್ತ ಅವಸರದಲ್ಲಿ ಹೊರಟುಹೋದ.

ಅವಿನಾಶನ ಮನದಲ್ಲಿ ವಿಚಿತ್ರ ಸಂತೋಷ. ಡಾ. ಮಹಾದೇವ ನಕಲಿ ವೈದ್ಯನೆಂದು ಸಾಬೀತಾಗಿ ಹಳ್ಳಿಯಿಂದ ಉಚ್ಚಾಟಿಸಲ್ಪಟ್ಟರೆ ಆಮೇಲೆ ತಾನೊಬ್ಬನೇ ಇಲ್ಲಿ ರಾಜ. ಇತ್ತೀಚೆಗೆ ಸೇವಾಸದನದಲ್ಲಿ ನೂಕುನುಗ್ಗಲು ಅಧಿಕವೆಂದೂ ತನ್ನಲ್ಲಿ ಬಂದ ಕೆಲವರು ಅಲ್ಲಿಗೆ ತೆರಳಿ ಕಾಹಿಲೆಯಿಂದ ಮುಕ್ತರಾಗಿದ್ದಾರೆಂದೂ ಹೇಳಿದ್ದ ಗೋವಿಂದ. ಅಪ್ರಿಯವಾದ ಕಹಿ ಸುದ್ದಿ. ಛೇ! ತನಗೇಕೆ ಈ ಸ್ವಾರ್ಥ ಬುದ್ಧಿ?

ಚಿಕಿತ್ಸಾಲಯದ ಬಳಿ ಬಂದಾಗ ರಸ್ತೆಯಿಂದಲೇ ಬಾಗಿಲಿನ ಬೀಗ ತೆಗೆದಿರುವುದು ಕಾಣಿಸಿತು. ಜೇಬನ್ನು ತಡವಿ ನೋಡಿದರೆ ಬೀಗದ ಕೈ ಕಿಸೆಯಲ್ಲಿದೆ ! ಬೀಗ ತೆಗೆದವರು ಯಾರು? ಅನುಮಾನಿಸುತ್ತ ತನ್ನ ಪಾದರಕ್ಷೆಗಳ ಸದ್ದು ಕೇಳಿಸದಂತೆ ಮೆತ್ತಗೆ ಮೆಟ್ಟಲೇರಿ ಬಂದ. ಒಳಗಿನಿಂದ ಕೇಳಿಸುತ್ತಿದೆ ಮಾತು.

"ಇನ್ನೂರು ರೂಪಾಯಿಗಳ ಔಷಧಿಯಿದೆ. ಕಳೆದ ಸಾರೆಯ ಇಪ್ಪತ್ತು ಇನ್ನೂ ಕೊಟ್ಟಿಲ್ಲ. ಒಟ್ಟು ಇನ್ನೂರ ಇಪ್ಪತ್ತು."

"ಅದನ್ನು ಸೇರಿಸಿ ಒಟ್ಟು ನೂರೈವತ್ತು ಕೊಡ್ತೇನೆ. ಬಾಕಿ ಎಪ್ಪತ್ತು ನಾಳೆ ಮಧ್ಯಾಹ್ನ ಸಂದಾಯ ಮಾಡ್ತೇನೆ. ನಾನು ಹೇಳಿದ್ದು ಬಂದಿದೆಯೇ?"

"ನಿನ್ನೆಯಷ್ಟೇ ಬಂದ ಪಾರ್ಸಲ್. ಇನ್ನೂ ಬಿಚ್ಚಿ ನೋಡಿಲ್ಲ. ಬಿಚ್ಚಿದ ಮೇಲೆ ಯಾವ ಯಾವ ಔಷಧಿಯಿದೆ ಅಂತ ನೋಡಿ ನೀವು ಹೇಳಿದ್ದನ್ನು ತೆಗೆದಿಡ್ತೇನೆ. ಬಾಟಲಿ ಖಾಲಿಯಾದ ಅನುಮಾನ ಡಾಕ್ಟರಿಗೆ ಬರಬಾರದು."

"ಹಿಡಿ ರೂಪಾಯಿ."

ಅವಿನಾಶ ಕಾಲಿನಿಂದ ಬಾಗಿಲನ್ನು ಜೋರಾಗಿ ನೂಕಿದ. ಮಬ್ಬುಗತ್ತಲೆಯಲ್ಲಿ ಸದ್ದಿಲ್ಲದಂತೆ ನಡೆಯುವ ವ್ಯವಹಾರ. ತೆರೆದ ಬಾಗಿಲನ್ನು ನೋಡಿ ಬೆಚ್ಚಿದ ಮುಖಗಳು ಹೊರಳಿದವು ಅವನತ್ತ. ಒಬ್ಬ ಗೋವಿಂದ ! ಇನ್ನೊಬ್ಬ ಯಾರೆಂದು ತಿಳಿಯಲಿಲ್ಲ. ದೀಪದ ಗುಂಡಿ ಒತ್ತಿದಾಕ್ಷಣ ಝಗ್ಗನೆ ಬೆಳಗಿತು ವಿದ್ಯುದ್ದೀಪ. ಅದರೊಂದಿಗೆ ಆ ಇನೊಬ್ಬ 'ಹಾಯ್' ಎನ್ನುತ್ತ ಕೈಯಲ್ಲಿದ್ದ ಬ್ಯಾಗ್‌ನ್ನು ಬಿಸಾಡಿ ಓಡಿದ ಹೊರಗೆ. ಅವನನ್ನು ಹಿಡಿಯಲು ಅವಿನಾಶ ಎರಡು ಕೈಗಳನ್ನು ಚಾಚಿದರೂ ತಪ್ಪಿಸಿಕೊಂಡು ಪರಾರಿ. ಹಿಂಬಾಲಿಸಿದ್ದರೆ ಹೇಗಾದರೂ ಹಿಡಿಯಬಹುದಿತ್ತು. ಆದರೆ ಇಲ್ಲಿದ್ದ ಗೋವಿಂದ ಓಡಿ ಹೋಗಬಹುದು. ಬಾಗಿಲು ಮುಚ್ಚಿ ಬ್ಯಾಗ್‌ನ ಮುಚ್ಚಳ ತೆರೆದ. ಅದರ ತುಂಬಾ ಬೆಲೆಬಾಳುವ ಔಷಧಿಗಳು! ಆತನು ತೀಕ್ಷ್ಣವಾಗಿ ನೋಡಿದ ಗೋವಿಂದನನ್ನು.

"ಯಾವಾಗಿನಿಂದ ನಡೀತಾ ಇದೆ ನಿಮ್ಮ ವ್ಯವಹಾರ? ಈಗ ಬಂದವನು ಯಾರು?" ಕೇಳಿದ ಏರು ಧ್ವನಿಯಲ್ಲಿ.

ಗೋವಿಂದ ಉತ್ತರಿಸಲಿಲ್ಲ. ನೆಂಟರ ಮನೆಗೆ ಹೋಗುತ್ತೇನೆಂದು ಸುಳ್ಳು ಹೇಳಿ ನಕಲಿ ಬೀಗದ ಕೈ ಉಪಯೋಗಿಸಿ ಬಾಗಿಲು ತೆರೆದಿದ್ದಾನೆ. ಅವನಿಗೆ ಗೊತ್ತು, ಅವಿನಾಶ ಈ ದಿನ ಕಲ್ಲುಬೆಟ್ಟಕ್ಕೆ ಸಂಸಾರ ಸಮೇತನಾಗಿ ಹೋಗಿದ್ದಾನೆ. ಚಿಕಿತ್ಸಾಲಯದ ಬಳಿ ಖಂಡಿತ ಬರಲಾರ ಎಂದು. ಆದರೆ ನಿರೀಕ್ಷೆ ಹುಸಿಯಾಗಿತ್ತು. ಅವಿನಾಶ ಇನ್ನೂ ಒಮ್ಮೆ ಪ್ರಶ್ನಿಸಿದರೂ ಉತ್ತರಿಸಲಿಲ್ಲ. ಛಟೀರನೇ ಬಾರಿಸಿದ ಕೆನ್ನೆಯ ಮೇಲೆ.

"ವಿಶ್ವಾಸಘಾತುಕ ! ನನ್ನ ಬೆನ್ನಿಗೆ ಚೂರಿ ಇರಿಯುವ ಬುದ್ಧಿ ನಿನಗೆ ! ಹೇಳು, ಯಾರ್‍ಯಾರಿಗೆ ಎಷ್ಟೆಷ್ಟು ಔಷಧಿ ಮಾರಿದ್ದೀಯಾ?"

ಕಮಕ್ ಕಿಮಕ್ ಎನ್ನಲಿಲ್ಲ ಗೋವಿಂದ. ಚೆನ್ನಾಗಿ ನಾಲ್ಕೇಟು ಬಿಗಿಯುವ ಕೋಪ ಉಕ್ಕಿತು ಅವಿನಾಶನಿಗೆ. ಚೋಟುದ್ದದ ಪೋರ ಪೆದ್ದನಂತೆ ನಟಿಸುತ್ತಿದ್ದು ಈಗ ಮಾಡಿದ್ದು ಜಾಣತನದ ಕೆಲಸ. ಸುಮ್ಮನೆ ಹೊಡೆದರೆ ಬಾಯಿ ಬಿಡಲಾರನೆಂದು ರಮಿಸಿ ಕೇಳಿ ನೋಡಿದ. ರೂಪಾಯಿ ನೋಟನ್ನು ಅವನ ಮುಂದೆ ಎಸೆದ. ಊಹೂಂ, ತುಟಿ ತೆರೆಯಲಿಲ್ಲ.

ತಡಮಾಡದೆ ಅವಿನಾಶ ಕಿರಾಣಿ ಅಂಗಡಿಯಲ್ಲಿರುವ ಜನರನ್ನು ಕೂಗಿ ಕರೆದ. ಕ್ಷಣಮಾತ್ರದಲ್ಲಿ ಗುಂಪು ನೆರೆಯಿತು ಚಿಕಿತ್ಸಾಲಯದಲ್ಲಿ. ಕಿರಾಣಿ ಅಂಗಡಿ ಯಜಮಾನನೂ ಹಾಜರು. ಔಷಧಿಯನ್ನು ಕದ್ದು ಮಾರಿ ಹಣ ಮಾಡುತ್ತಿದ್ದ ಗೋವಿಂದನ ವಂಚನೆಯ ಕೆಲಸ ಬಯಲಾಗುತ್ತಿದ್ದಂತೆಯೇ ಅನೇಕರು ಛೀಮಾರಿ ಹಾಕಿದರು. ಒಂದಿಬ್ಬರು "ಇವನು ಪ್ರತಿ ಆದಿತ್ಯವಾರ ಇಲ್ಲಿರುತ್ತಾನಲ್ಲ?" ಎಂದರು ಹುಬ್ಬೇರಿಸಿ.

"ಬಡಹುಡುಗ, ನೂರು ರೂಪಾಯಿ ತಿಂಗಳ ಸಂಬಳ ಸಾಲದು ಎಂದಿದ್ದರೆ ನಾನೇ ಹೆಚ್ಚಿಗೆ ಕೊಡ್ತಿರಲಿಲ್ಲವೇ? ಕದಿಯುವ ಬುದ್ಧಿ...." ಅವಿನಾಶ ಎಲ್ಲರೆದುರು ಅವನನ್ನು ನೂಕಿ ಹೊರಗೆ ಹಾಕಿದ, "ಹೋಗು, ಎಲ್ಲಿ ಬೇಕೋ ಅಲ್ಲಿ ಕದ್ದು ಬದುಕು...."

ಅನುಕಂಪದಿಂದ ಲೊಚಗುಟ್ಟಿತು ಗುಂಪು. "ಹುಡುಗುಬುದ್ಧಿ, ಏನೋ ಅರಿಯದೆ ಮಾಡಿದ" ಎಂದರು ಒಬ್ಬರು. "ಕಾಲು ಹಿಡಿದು ಕ್ಷಮೆ ಕೇಳು. ಇನ್ಮೇಲೆ ಇಂತಹ ಕೆಲಸ ಮಾಡಬೇಡ" ಎಂದರು ಮತ್ತೊಬ್ಬರು. ಗೋವಿಂದ ತಪ್ಪಿತಸ್ಥನಂತೆ ನಿಂತರೂ ಕ್ಷಮೆ ಕೇಳಲಿಲ್ಲ. ಕೇಳಿದ್ದರೆ ಅವಿನಾಶ ನಿಜವಾಗಿಯೂ ಕ್ಷಮಿಸುತ್ತಿದ್ದ. ತಂದೆಯ ಸಂಸಾರಕ್ಕೆ ಗೋವಿಂದನೇ ಆಧಾರ. ಆದರೆ ಅವನು ಅಂಗಿ ಝಾಡಿಸಿಕೊಳ್ಳುತ್ತ ಹೊರಟುಹೋದ. ಅಪರಾಧಿಯ ಕಣ್ಣುಗಳಲ್ಲಿ ತುಂಬಿತ್ತು ಕೋಪದ ಕಿಡಿಗಳು.

"ಈ ಹುಡುಗರ ಹಣೆಬರಹವೇ ಹೀಗೆ" ಕಿರಾಣಿ ಅಂಗಡಿ ಯಜಮಾನ ಹೇಳಿದ, "ಕೆಲಸಕ್ಕೆ ಸೇರುವಾಗ ಇಲಿಗಳ ತರಹ ಇರ್ತಾರೆ. ಆಮೇಲೆ ನಮ್ಮ

ಮೇಲೆ ಎಗರುವ ಹುಲಿಗಳಾಗ್ತಾರೆ! ಕೇಳಿದರೆ ಸಂಬಳ ಸಾಲಲಿಲ್ಲ ಅಂತ ಸುಳ್ಳು ಹೇಳ್ತಾರೆ."

"ಇವನಿಲ್ಲದಿದ್ದರೆ ಇವನ ಅಪ್ಪನಂಥವರು ಸಿಗ್ತಾರೆ! ನೋಡಿದಿರಲ್ಲ, ಹೇಗೆ ನನ್ನ ಮೇಲೆ ಕೋಪಿಸಿಕೊಂಡು ಹೊರಟುಹೋದ?"

"ಆದರೂ ಈಗಿನ ಕಾಲದಲ್ಲಿ ಸಂಭಾಳಿಸಿಕೊಳ್ಳಬೇಕು, ಡಾಕ್ಟರೇ. ಇವನ ಅಪ್ಪನಂಥವರು ಸಿಗ್ತಾರೆ ನಿಜ. ಆದರೆ ಒಮ್ಮೊಮ್ಮೆ ಉಮಿ ತಿನ್ನುವವನ ಬದಲಿಗೆ ತೌಡು ತಿನ್ನುವವನೂ ಸಿಗಬಹುದು!"

ಅಂಗಡಿ ಯಜಮಾನನ ಮಾತಿಗೆ ನೆರೆದವರು ಕೋಣೆ ಅದುರುವಂತೆ ಹೋಹೋ ಎಂದು ನಕ್ಕರು. ನಗುವಿನಲ್ಲಿ ಅಣಕದ ಛಾಯೆ! ಅವಿನಾಶನ ಮುಖ ಕೆಂಪೇರಿತು. ಅವರಿಗೇನಂತೆ, ಎಲ್ಲಿ ತನ್ನಂಥವರು ಸೋಲುತ್ತಾರೆಂದು ನೋಡಿ, ಚಪ್ಪಾಳೆ ತಟ್ಟಿ ಸಂತೋಷಿಸುವುದು ಗೊತ್ತು. ಗೋವಿಂದನನ್ನು ಗದರಿಸಲು ಇವರಿಗೆ ಆಗಲೇ ಇಲ್ಲ. ಅವನು ತಪ್ಪಿತಸ್ಥನಲ್ಲ ಎಂಬ ಅಣಕದ ನಗು!

ಅವನ ತಲೆ ಸಿಡಿಯಿತು. ನೆರೆದ ಗುಂಪು ತಲೆಗೊಂದರಂತೆ ಮಾತನಾಡುತ್ತ ಚದರಿತು ಅಲ್ಲಿಂದ. ಅವನು ಬ್ಯಾಗ್‌ನ ಔಷಧಿಯನ್ನು ಅಲ್ಲೇ ಒತ್ತಿಟ್ಟು, ಪಾರ್ಸಲ್ ಬಿಚ್ಚದೆ ಬಾಗಿಲಿಗೆ ಬೀಗ ಜಡಿದು ಹಾಗೇ ಮನೆಗೆ ಹಿಂದಿರುಗಿದ.

೧೩

ಮರುದಿನ ಗೋವಿಂದ ಕೆಲಸಕ್ಕೆ ಬರಲಿಲ್ಲ. ಅವನ ತಂದೆ ತಾನೇ ಮಗನ ಪರವಾಗಿ ಕ್ಷಮೆ ಕೇಳಿಕೊಳ್ಳುತ್ತ ಕಣ್ಣೀರು ಹರಿಸಿ, "ಹೇಗಾದರೂ ಅವನನ್ನು ಕೆಲಸಕ್ಕೆ ಇಟ್ಟುಕೊಳ್ಳಿ, ಅಯ್ಯ" ಎಂದು ಅಂಗಲಾಚಿದ.

"ಅವನು ಬಂದು ಕ್ಷಮೆ ಕೇಳಿ ಆಮೇಲೆ ಕೆಲಸಕ್ಕೆ ಸೇರಿಕೊಳ್ಳಲಿ" ಎಂದ, ಗೋವಿಂದ ಕೆಲಸಕ್ಕೆ ಅನರ್ಹನಾದರೂ ತಂದೆಗಾಗಿ ಮರುಗುತ್ತ.

ಆ ದಿನವೆಲ್ಲ ಮನಸ್ಸು ಉದ್ವಿಗ್ನಗೊಂಡಿತ್ತು. ಚಿಕಿತ್ಸಾಲಯಕ್ಕೆ ಬಂದವರೊಡನೆ ವಿಗ್ರಹದ ವಿಷಯ ಹೇಳುತ್ತ ಗುಡಿ ಕಟ್ಟಿಸಲು ಚಂದಾಹಣ ಕೊಡುವ ಮಹನೀಯರೆಲ್ಲ ಯೋಚಿಸಬೇಕೆಂದೂ ಸೂಚಿಸಿದ. ಆ ವಿಗ್ರಹ ಆಟದ ಗೊಂಬೆಯಂತೆ ಇದೆ ಎಂದೂ ವರ್ಣಿಸಿ "ಮೊದಲು ಆಂಜನೇಯ ಗುಡಿಯ ಜೀರ್ಣೋದ್ಧಾರ ಮಾಡಿ. ನಮಗೆ ಪುರಾತನ ಸಂಸ್ಕೃತಿಯ ಒಂದೇ ಗುಡಿ ಸಾಕು, ಎರಡು ಬೇಡ" ಎಂದು ಕಿವಿಯೂದಿದ.

ವಿಗ್ರಹದ ಮೇಲೆ ಅನುಮಾನ ತಳೆದವರು ಈ ಮಾತಿಗೆ ಬೆಲೆಯಿತ್ತರು. "ನಿಜ ಹೇಳಿದಿರಿ, ಡಾಕ್ಟರೆ, ದೇವರು-ಧರ್ಮದ ಹೆಸರಿನಲ್ಲಿ ಜನರನ್ನು ಹೇಗೆ ಶೋಷಣೆ ಮಾಡ್ತಿದ್ದಾರೆ. ಬೈರಾಗಿಗೆ ಜನರ ಬುದ್ಧಿ ಗೊತ್ತಾಗಿರಬೇಕು."

ರಾತ್ರಿ ಶಾಲೆಯಲ್ಲಿ ಇದೇ ಸುದ್ದಿಯ ಪ್ರಸಾರ. "ಹೊಟ್ಟೆಪಾಡಿಗೆ ಗೊಂಬೆಯಿರಿಸಿ ಮಕ್ಕಳಾಟ ಆಡ್ತಾ ಇದ್ದಾನೆ ಬೈರಾಗಿ. ಅದಕ್ಕೆ ಹೂವು ಕುಂಕುಮ ಅರ್ಚನೆ. ನೀವ್ಯಾರೂ ಆ ನಾಟಕ ನೋಡಬೇಡಿ, ಆಟದಲ್ಲಿ ಭಾಗವಹಿಸಬೇಡಿ, ಒಂದು ಪೈಸೆ ವಂತಿಗೆಯನ್ನೂ ಕೊಡಬೇಡಿ. ಆಂಜನೇಯನಲ್ಲೇ ನಿಮ್ಮ ಭಕ್ತಿ, ನಂಬಿಕೆಯನ್ನು ಮುಂದುವರಿಸಿ" ಎಂದ ಕಳಕಳಿಯಲ್ಲಿ.

ಹೇಳುವ ಕೆಲಸ ಅವನದು. ಒಪ್ಪುವ-ಬಿಡುವ ಕೆಲಸ ಉಳಿದವರದ್ದು. ಅಲ್ಲಿ ಇದ್ದವರು ಕೇವಲ ಹತ್ತು ಮಂದಿ. ಶಿಕ್ಷಕರೂ ಇರಲಿಲ್ಲ. ಈಗೀಗ ಸುಂದರರಾಜನಿಗೆ ಜನತಾಗೃಹದ ನಿರ್ಮಾಣದಿಂದ ಇತ್ತ ಬರಲು ಸಮಯವಿಲ್ಲ. ತಲೆ ನೆರೆತವರು ನುಸಿ ಹೊಡೆಯುತ್ತ ಒಂದಕ್ಷರ ಕಲಿಯದೆ ತಮ್ಮೊಳಗೆ ಗೊಣಗುತ್ತಿದ್ದಾರೆ. ಇವತ್ತೂ ಗೊಣಗಿದರು ಅವನೆದುರು. ಆದಷ್ಟು ಬೇಗ ಶಿಕ್ಷಕರನ್ನು ಗೊತ್ತು ಮಾಡುವ ಭರವಸೆಯಿತ್ತು ಅವಿನಾಶ ಅಲ್ಲಿಂದ ಹಿಂದಿರುಗಿದ.

ಅವನ ಮನೆಗೆ ಹೊರಳುವ ದಾರಿಯಲ್ಲಿ ಇದ್ದಕ್ಕಿದ್ದಂತೆ ನಾಲ್ಕು ಜನ ಧಾಂಡಿಗರು ಸುತ್ತುವರಿದರು ಅವನನ್ನು. ಬೀದಿದೀಪದ ಮಂದ ಬೆಳಕಿನಲ್ಲಿ ಮುಖಗಳು ಅಸ್ಪಷ್ಟ. ಗಂಡು ಧ್ವನಿಯೊಂದು ಗುಡುಗಿತು.

"ಡಾಕ್ಟರೇ, ವಿಗ್ರಹದೇವತೆಗೆ ಗುಡಿ ಕಟ್ಟುವ ವಿಷಯದಲ್ಲಿ ಟೀಕೆ ಪ್ರಾರಂಭಿಸಿದರೆ, ಅಪಪ್ರಚಾರ ಮಾಡಿದರೆ ನಿಮ್ಮನ್ನು ಸುಮ್ಮನೇ ಬಿಡುವವರಲ್ಲ, ಜಾಗ್ರತೆ!"

"ನಾನು ಹೇಳ್ತಾ ಇರ್ತೇನೆ, ನೀವ್ಯಾರು ಕೇಳುವವರು?"

"ಯಾರು ಅನ್ನೋದನ್ನ ಕಾರ್ಯದಲ್ಲಿ ತೋರಿಸ್ತೇವೆ. ಯಾರಿಗೂ ತೊಂದರೆ ಆಗದಂತೆ ತೆಪ್ಪಗೆ ಇದ್ದರೆ ನಿಮ್ಮ ಕೂದಲನ್ನೂ ಸೋಂಕೆವು. ಇಲ್ಲಾಂದ್ರೆ ನಿಮಗೇ ಒಳಿತಲ್ಲ, ಜಾಗ್ರತೆ!"

ಎಚ್ಚರಿಕೆಯ ಕರೆಗಂಟೆ ಬಾರಿಸಿ ಅವರೆಲ್ಲ ಕತ್ತಲೆಯಲ್ಲಿ ಕರಗಿಹೋದರು. ಅಬ್ಬಬ್ಬ! ತಾನು ಪ್ರಚಾರ ಮಾಡಿದರೆ ಇವರಿಗೇನಂತೆ? ಹೀಗೆ ಮಾಡುತ್ತಿರುತ್ತೇನೆ. ಏನು ಮಾಡುತ್ತಾರೋ ನೋಡಲೇಬೇಕು.

ಈ ವಿಷಯವನ್ನು ತಂದೆತಾಯಿಗೆ ತಿಳಿಸಲಿಲ್ಲ. ಅವನ ಅಭಿಪ್ರಾಯ ತಂದೆಗೆ ವಿರೋಧ. ಅಹಲ್ಯಳಿಗೆ ಹೇಳಬೇಕು ಎನ್ನುವಾಗ ಅವಳು ಎತ್ತಿದ ವಿಷಯವೇ ಬೇರೆ.

"ನಮಗೆ ಮಕ್ಕಳಾಗಲಿಲ್ಲವೆಂದು ನಿಮ್ಮ ತಂದೆ ಶಾಸ್ತ್ರಿಗಳ ಹತ್ತಿರ ಪ್ರಶ್ನೆ ಇಡಿಸಿ ಕೇಳಿಕೊಂಡು ಬಂದಿದ್ದಾರೆ."

ಬೆರಗಾಗಿ ಕಣ್ಣರಳಿಸಿದ, "ಏನು ಹೇಳಿದರು?"

"ಮಕ್ಕಳ ಯೋಗ ಇದೆಯಂತೆ" ಅವನ ಕಣ್ಣುಗಳನ್ನು ಸಂಧಿಸದೆ ಅಂದಳು, "ಪ್ರತಿ ತಿಂಗಳು ಪಂಚಮಿಯ ದಿನ ಉಪವಾಸವಿದ್ದು ಮಡಿ ಉಟ್ಟು ನಾಗನ ಬನಕ್ಕೆ ಹಾಲೆರೆದು ಬರಬೇಕಂತೆ. ಸರ್ಪದೋಷವಿದ್ದರೆ ನಿವೃತ್ತಿಯಾದೀತು, ಎಂದರಂತೆ."

ಅವನು ಉತ್ತರಿಸದೆ ಅವಳ ಮುಖ ನೋಡಿದ.

"ಮಕ್ಕಳಾಗದವರಿಗೆ 'ಸರ್ಪದೋಷ'ವಿದೆ ಎನ್ನುವುದು ವಾಡಿಕೆಯಾಗಿ ಹೋಗಿದೆ. ಉಪವಾಸವಿದ್ದು ನಾಗನ ಬನಕ್ಕೆ ಹಾಲೆರೆಯಲು ಆಗದವರು ಬೆಳ್ಳಿ ಅಥವಾ ಚಿನ್ನದ ಹೆಡೆ ಮಾಡಿಸಿ ಹಾಕಬೇಕಂತೆ."

ಈ ಬಾರಿ ಪಕಪಕನೆ ನಗಲಾರಂಭಿಸಿದ. "ಹಿಂದಿನಿಂದಲೂ ರೂಢಿಗತ ವಾಗಿ ಬಂದ ಕೆಲವು ನಂಬಿಕೆಗಳು ಜನರಲ್ಲಿ ಆಳವಾಗಿ ಬೇರೂರಿವೆ. ಚಿನ್ನ ಅಥವಾ ಬೆಳ್ಳಿ ಹೆಡೆ ಮಾಡಿ ಹಾಕಿದರೆ ಮಕ್ಕಳಾಗಲು ಸಾಧ್ಯವೇ? ಕೆಲವು ದುರ್ಬಲ ಮನಸ್ಕರಿಗೆ ಇದರಿಂದ ಸಮಾಧಾನ ಸಿಕ್ಕುವುದು. ಮಗುವಾಗುವುದೂ ಒಂದು ಕಾಕತಾಳೀ ನ್ಯಾಯದಂತೆ. ಆದರೆ, ಅಹಲ್ಯ ಈ ತರಹದ ನಂಬಿಕೆಗೆ ಶರಣು ಹೋಗಬೇಕೇ?"

"ಪ್ರಶ್ನೆ ಕೇಳಿದ ನಂತರ ನಿಮ್ಮ ತಂದೆ ಶಾಸ್ತ್ರಿಗಳಿಗೆ ಇಪ್ಪತ್ತು ರೂಪಾಯಿ ಒಂದು ಜೊತೆ ಪಂಚೆ-ಶಲ್ಯ ಕೊಟ್ಟು ಬಂದಿದ್ದಾರೆ. ನಮಗಾಗಿ ನಿಮ್ಮ ತಂದೆ-ತಾಯಿ ತಾವೇ ಹರಕೆ ಹೇಳಿಕೊಳ್ತಾರಂತೆ."

"ಹೇಳಿಕೊಳ್ಳಲಿ ಬಿಡು. ನಮಗಂತೂ ನಷ್ಟವಿಲ್ಲ. ಆದರೆ ನೀನು ಆ ದಾರಿಯಲ್ಲಿ ಹೆಜ್ಜೆಯಿಡುವುದು ಅರ್ಥವಿಲ್ಲದ ಮಾತು!"

ಮುಂದೆರಡು ದಿನಗಳಲ್ಲಿ ಶ್ರೀಕಂಠಯ್ಯ, ನಾಗರತ್ನ ಕಲ್ಲಳ್ಳಿಯಿಂದ ಹೊರಟು ಹೋದರು. ಅವರ ನಿರ್ಗಮನದ ನಂತರ ಅಹಲ್ಯಳಿಗೆ ಸಮಯ ಸರಿಯುವುದೇ ಕಷ್ಟಕರವಾಯಿತು. ಅವಿನಾಶ ಚಿಕಿತ್ಸಾಲಯಕ್ಕೆ ತೆರಳಿದ ಮೇಲೆ ಮನೆಯಲ್ಲಿ ಯಾರೊಬ್ಬರೂ ಇಲ್ಲ. ಲೀಲಾಳೊಡನೆ ಒಂದೆರಡು ಮಾತು ಅಷ್ಟೇ. ಅತ್ತೆ-ಮಾವನ ಕೊರಗು ಅವಳಿಗೆ ಅರ್ಥವಾಗಿದೆ. ಅವರಂತೆ ಹರಕೆ-ಪೂಜೆ-ನೇಮ-ನಿಷ್ಠೆಗಳಲ್ಲಿ ನಂಬಿಕೆ ಇಲ್ಲ. ಆದರೂ ಮೊನ್ನೆ ಶ್ರೀಕಂಠಯ್ಯ ಕೇಳಿ ಬಂದ ಪ್ರಶ್ನೆಯ ಉತ್ತರ ಅವಳನ್ನು ಒಳಗೊಳಗೇ ಕೆಣಕಿ ಹಿಂಸಿಸುತ್ತಿದೆ. "ಸರ್ಪದೋಷ ನಿಜವೇ?" ಎಂಬ ಪ್ರಶ್ನೆ ಕಾಡುತ್ತಿದೆ ಏಕಾಂತ ಮೌನದಲ್ಲಿ. ಅವಳಂತೂ ಒಂದು ಹುಳವನ್ನು ನೋಯಿಸಿದವಳಲ್ಲ. ಹಾಗಾದರೆ ದೋಷಕ್ಕೆ ಕಾರಣವೇನು? ಇದೇನು ಹಿಂದಿನ ಜನ್ಮದ ಕರ್ಮಫಲವೇ?

ಆಂಜನೇಯ ಗುಡಿಯ ಎದುರು ಭಾಗದಲ್ಲಿರುವ ಒಂದು ಹೆಡೆ ಮತ್ತು ಐದು ಹೆಡೆಗಳ ನಾಗನ ಬಿಟ್ಟ ಕಂಗಳ ನೋಟ ಚಿತ್ತಶಾಂತಿಯನ್ನು ಕಲಕುತ್ತಿದೆ. ಪದೇ ಪದೇ ಹಾಲೆರೆದು ಬರಬೇಕಂತೆ. ಸಾಧ್ಯವೇ? ಅರ್ಧಗ್ಲಾಸು ಹಾಲು ನಾಗನ ಕಲ್ಲಿನಿಂದ ಇಳಿದು ಯಾರ ಪ್ರಯೋಜನಕ್ಕಿಲ್ಲದೆ ಮಣ್ಣಿನಲ್ಲಿ ಇಂಗಿ ಹೋಗುತ್ತದೆ. ಮನಃಶಾಂತಿಗಾಗಿ ಮಾಡುವ ನಷ್ಟದ ಕೆಲಸ. ವಾಮನನ ಕೊನೆ ಮಗು ತಾಯಿ ಹಾಲಿಲ್ಲದೆ ಬಿಳುಚಿಕೊಂಡದ್ದು ನೆನಪಾಯಿತು ಅಹಲ್ಯಳಿಗೆ. ನಾಗನಿಗೆ ಎರೆಯುವ ಹಾಲನ್ನು ಆ ಮಗುವಿಗೆ ಕೊಟ್ಟರೆ ಒಂದು ಜೀವ ಉಳಿಸಿದ ಪುಣ್ಯ ಬಂದೀತು.

ಅಂದಿನಿಂದ ಪ್ರತಿದಿನ ವಾಮನನ ಮನೆಗೆ ಒಂದು ಗ್ಲಾಸು ಹಾಲು ಹೋಗಲಾರಂಭಿಸಿತು. ಈ ಮಧ್ಯೆ ಸುನೀತಾ ಶೆಟ್ಟಿ ಮಹಿಳಾ ಸಂಘದ ಅಧ್ಯಕ್ಷೆಯಾಗಿ ಇನ್ನೊಮ್ಮೆ ಸರ್ವಾನುಮತದಿಂದ ಆಯ್ಕೆಯಾದಳು. ಕಾರ್ಯದರ್ಶಿಯಾಗಿ ಅಹಲ್ಯಳ ಹೆಸರು. ಅಹಲ್ಯಳಿಗೆ ಈಗಾಗಲೇ ಸಂಘವೆಂದರೆ ತಿರಸ್ಕಾರ. ಕಳೆದ ವರ್ಷ ಬಂದ ಹೊಲಿಗೆಯಂತ್ರದಲ್ಲಿ ಎರಡು ನಾಪತ್ತೆ. ಅವುಗಳ ಬಿಡಿ ಭಾಗಗಳೂ ಕಣ್ಮರೆ. ಸಂಘಕ್ಕೆ ದೊರೆತ ಹಣದಲ್ಲಿ ಅರ್ಧಭಾಗ ಉದ್ಧಾರದ ಕಾರ್ಯ ಆಗಿಲ್ಲ. ಹರಿಜನ ಮಹಿಳೆಯರಿಗೆ ಇಲ್ಲಿ ಪ್ರತ್ಯೇಕ ಸ್ಥಾನ. ಹೊಲಿಗೆ ಕಲಿಯಲು ಬಂದರೂ ದೂರವಿರಬೇಕು. ಸಮಾನತೆಯ ಸುಳಿವಿಲ್ಲ. ಹಣವಿದ್ದವರ ದರ್ಬಾರು. ಅಹಲ್ಯ ಮತ್ತು ಸುನೀತಳ ಮಧ್ಯೆ ಗೌರೀಹಬ್ಬದ ಪೂಜೆಗಾಗಿ ಉಂಟಾದ ಬಿರುಕು ಇನ್ನೂ ಹಾಗೆಯೇ ಇದೆ. ಅದರೊಂದಿಗೆ ಈವರೆಗೂ ಅಹಲ್ಯಳಿಗೆ ಸಂಘದ ಕಾರ್ಯ ಹಿಡಿಸಿಲ್ಲ. ಹೀಗಾಗಿ ಕಾರ್ಯದರ್ಶಿ ಸ್ಥಾನವನ್ನು ಅಹಲ್ಯ ತಿರಸ್ಕರಿಸಿಬಿಟ್ಟಳು.

ಸಂಘ ಮತ್ತು ಅವಳ ಮಧ್ಯೆ ಸಂಪರ್ಕ ತಪ್ಪಿದ ಮೇಲೆ ಮನೆಗೆ ಬರುವ ಮಹಿಳೆಯರು ದೂರವಾಗಿ ಈ ಜಂಬದವಳು ಎಲ್ಲರಿಂದಲೂ ಪ್ರತ್ಯೇಕಳಾದಳು. ಹಿಂದೆಂದೂ ಅನುಭವಿಸದ ಒಂಟಿತನ ಕಾಡಿತು ಅವಳನ್ನು. ಧನ್ವಂತರಿ ಚಿಕಿತ್ಸಾಲಯದಲ್ಲಿ ಗೋವಿಂದನಿಲ್ಲದೆ ತೆರವಾದ ಸ್ಥಾನವನ್ನು ತಾನು ತುಂಬಲು ನೋಡಿದಳು. ಅವಿನಾಶನಿಗೆ ಜೊತೆಯಾಗಿ ಸಣ್ಣ ಪುಟ್ಟ ಸಹಕಾರಕ್ಕೆ ಅವಳು ಅಗತ್ಯವಾಗಿದ್ದಳು. ಆದರೆ ಹಳ್ಳಿಗರಿಗೆ ಇದೊಂದು ತಮಾಷೆ. ಅವರ ಹದ್ದಿನ ದೃಷ್ಟಿ ಅವಳ ದೇಹದುದ್ದಕ್ಕೂ ಹರಿದಾಗ, ತಮ್ಮೊಳಗೇ ನಕ್ಕಾಗ ದೇಹದಲ್ಲೆಲ್ಲ ಮುಜುಗರ. ಕಲ್ಲಳ್ಳಿಗೆ ಬಂದಂದಿನಿಂದಲೇ ಅವಿನಾಶನ ಜೊತೆ ಸಹಕರಿಸಿದ್ದರೆ ಜನರ ದೃಷ್ಟಿಯೂ ಅವರೊಡನೆ ಸಹಕರಿಸುತ್ತಿತ್ತು. ಈಗ ಗೋವಿಂದನ ಸ್ಥಾನವನ್ನು ಅವಳು ತುಂಬದಾದಳು. ಉತ್ಸಾಹ ನಿರೀಕ್ಷೆ ಮೀರಿ ನಿರುತ್ಸಾಹದತ್ತ ನೂಕಿತು.

ಮನೆಯಿಂದ ಹೊರಗೆಲ್ಲೂ ಹೋಗದೆ ಕಿಟಕಿಯ ಬಳಿ ಕುಳಿತು ಕಲ್ಲು ಬೆಟ್ಟವನ್ನು ನೋಡಲಾರಂಭಿಸಿದಳು. ದಿನೇದಿನೇ ಹೊಸ ದೃಶ್ಯ. ಪ್ರಕೃತಿ

ಸೊಬಗನ್ನು ಸೂರೆಗೊಳ್ಳುವಂತೆ ಕತ್ತಲು–ಬೆಳಕಿನ ತರಂಗಗಳಲ್ಲಿ ಕಣ್ಣು ಮುಚ್ಚಾಲೆಯಾಡುವ ಬೆಟ್ಟ ಬದಲಾಗುತ್ತಿದೆ. ಹೊಸತನದಲ್ಲಿ ಹಳೆ ಛಾಯೆ. ಹಳೆ ಛಾಯೆಯಲ್ಲಿ ನಿರ್ದಿಷ್ಟರೂಪದ, ಅಸ್ಖಲಿತ ಸ್ಪಂದನ. ಒಳಗೊಳಗೇ ಕೆಣಕಿ ಕೆದಕುವ ಸಂವೇದನೆ.

ಗೋವಿಂದನ ಬದಲಿಗೆ 'ತನಿಯ' ನೆಂಬ ಹರಿಜನ ಹುಡುಗ ಅವಿನಾಶನಲ್ಲಿ ಕೆಲಸಕ್ಕೆ ಸೇರಿದ. ನಾಲ್ಕನೇ ಕ್ಲಾಸು ಓದಿದ ಹದಿನೈದು ವರ್ಷದ ಚೋಟುದ್ದದ ಹುಡುಗ ಬಹಳ ಚೂಟಿ. ಸದಾ ಹಸನ್ಮುಖಿಯಾದ ಅವನಲ್ಲಿ ಗೋವಿಂದನನ್ನು ಮೀರಿಸಿ ಕೆಲಸ ಮಾಡುವ ತಾಕತ್ತು ಇದೆ. ಆದರೆ ಸಣ್ಣ ಕೋಣೆಯ ಓಡಾಟ ಬೇಸರ ಅವನ ಪಾಲಿಗೆ. ಕಾಡು ಬೆಟ್ಟ, ತೋಡು ನೀರು, ಬಯಲು ಗುಡ್ಡೆಯಲ್ಲಿ ವಿಹರಿಸುವ ಸ್ವತಂತ್ರ ಹಕ್ಕಿಯನ್ನು ಪಂಜರದಲ್ಲಿ ಇಟ್ಟ ಅವಸ್ಥೆ. ಬಂದ ಕೆಲವೇ ದಿನಗಳಲ್ಲಿ ಅವಿನಾಶನಿಗೆ ತಿಳಿಸದೆ ಎಲ್ಲೆಲ್ಲೋ ಹೊರಗೆ ಸುತ್ತಿ ಬರಲಾರಂಭಿಸಿದ.

"ಬಿಸಿಬಿಸಿ ನೂರು ರೂಪಾಯಿ ಕೊಡ್ತಾ ಇದ್ದೇನೆ. ಸರಿಯಾಗಿ ಕೆಲಸ ಮಾಡು !" ಅವಿನಾಶ ಗದರಿದರೆ ಅವನಿಗೆ ಕೇಳುವುದೂ ಇಲ್ಲ.

ಧನ್ವಂತರಿ ಚಿಕಿತ್ಸಾಲಯದಲ್ಲಿ ಮೆಲ್ಲನೆ ಕೇಳಲಾರಂಭಿಸಿತು ಉಳಿದ ರೋಗಿಗಳ, ಬರುವವರ ಗೊಣಗಾಟ, ತನಿಯನ ವಿನಯದ ಮಾತಿಗೆ ಯಾರೂ ಬೆಲೆ ಕೊಡುವುದಿಲ್ಲ. ಹತ್ತಿರ ಬಂದರೆ ಮುದುಡಿಕೊಳ್ಳುವುದೇ ಹೆಚ್ಚು. ಅವನು ಮುಟ್ಟಿದ ಕುಡಿಯುವ ನೀರಿನ ಪಾತ್ರೆ ಹೆಚ್ಚಿನ ಜನರಿಗೆ ಅಶುದ್ಧ ! ಕೆಲವರಿಗೆ ಔಷಧಿ ಬಾಟಲಿಯೂ ಮೈಲಿಗೆ ! "ನೀವೇ ತುಂಬಿಸಿ ಆ ಬಾಟಲಿಯನ್ನು ಇಲ್ಲಿ ಹೊರಗಿಡಿ, ಡಾಕ್ಟರೇ" ಎಂದರು ಒಂದಿಬ್ಬರು ಧೈರ್ಯವಂತರು.

ಅವಿನಾಶ ಕೆಲವು ದಿನ ಹಟದಿಂದ ತನಿಯನ ಕೈಯಿಂದ ಔಷಧಿ ಕುಡಿಸಿದ, ಕುಡಿಯುವ ನೀರನ್ನೂ ತುಂಬಿಸಿದ. ಆದರೆ ಕ್ರಮೇಣ ಹಟಕ್ಕೆ ಬಿದ್ದಿತು ಸೋಲಿನ ಮುದ್ರೆ. ಎಷ್ಟಾದರೂ ಕಲ್ಲಳ್ಳಿ ಹಳ್ಳಿ, ಜಾತಿಶೃಂಖಲೆಯ ಮುಸುಕು ಇನ್ನೂ ತೊಲಗಿಲ್ಲ. ತನಿಯ ಅಸ್ಪೃಶ್ಯನಾಗಿ ಹುಟ್ಟಿದ್ದೇ ದೊಡ್ಡ ತಪ್ಪು. ಎಲ್ಲರಂತೆ ಅವನಿಗೂ ರೂಪ, ಆಕಾರ, ಬಣ್ಣವಿದ್ದರೂ ಅವನು ಅಸ್ಪೃಶ್ಯ. ಅವನ ಮೈಚರ್ಮ ಕಪ್ಪಾದರೇನಂತೆ, ಅದನ್ನು ಸುಲಿದರೆ ಒಳಗೆ ಕಾಣುವ ಬಣ್ಣ ಎಲ್ಲರಂತೆ ಕೆಂಪು ! ಆದರೂ ಅವನು ಮುಟ್ಟಿದ್ದು ಮೈಲಿಗೆ, ಕೋಣೆಯಲ್ಲಿ ಓಡಾಡಿದರೆ ಮೈಲಿಗೆ.

ತನಿಯನನ್ನು ಕೆಲಸದಿಂದ ತೆಗೆಯಲೇ ಎಂದೂ ಯೋಚಿಸಿದ. ತಂದೆಯಿಲ್ಲದ ತಬ್ಬಲಿ ಹುಡುಗ. ಊರೂರು ಅಲೆಯುವ ಬದಲು ತನ್ನಲ್ಲಿ ನೆಲೆ ನಿಂತರೆ ಅವನಿಗೆ ನಾಲ್ಕು ಕಾಸು ಸಂಪಾದನೆ. ಹಾಗೇ ತನಗೂ ಉಪಕಾರ. ಜನ ಹೇಳುತ್ತಾ ಇರಲಿ, ಆಮೇಲೆ ಒಗ್ಗಿಕೊಳ್ಳುತ್ತಾರೆ ನಿಧಾನವಾಗಿ.

ಹೀಗಾಗಿ ಜನರ ಅಸಹನೆಯ ಗೋಣಗಾಟದ ಮಧ್ಯೆ ತನಿಯ ಅಲ್ಲಿಯೇ ಉಳಿದುಕೊಂಡ. ಇತ್ತ ಗೋವಿಂದ 'ಸೇವಾಸದನ'ದ ಕೃಪಾಕಟಾಕ್ಷದಲ್ಲಿ ಪ್ರವೇಶ ಗಿಟ್ಟಿಸಿಕೊಂಡ.

೧೪

ರಾಜಣ್ಣ ತನ್ನ ವೈಯಕ್ತಿಕ ವಿಷಯದಲ್ಲಿ ಯಾರ ಸಲಹೆಯನ್ನೂ ಕೇಳುವವನಲ್ಲ. ರಾಮನಾಯ್ಕನ ಸೊಸೆ ತೀರಿಹೋದ ನಾಲ್ಕನೇ ದಿನ ಕಲ್ಲಳ್ಳಿಯಿಂದ ಹದಿನೈದು ಮೈಲು ದೂರವಿರುವ 'ಬನ'ಕ್ಕೆ ತೆರಳಿ ಯೋಗಿಯ ದರ್ಶನ ಪಡೆದುಕೊಂಡ. ವಿವಿಧ ಹೂವು, ಗಿಡಮರಗಳಿಂದ ಸುತ್ತುವರೆದ ಆಶ್ರಮವನ್ನು 'ಬನ'ವೆಂದೂ ಅಲ್ಲಿರುವ ಯೋಗಿಗೆ 'ಬನವಾಸಿ' ಎಂದೂ ಜನರು ಹೇಳುವುದು ವಾಡಿಕೆ. ಅರವತ್ತರ ಬನವಾಸಿ ಹಠಸಾಧನೆಯಿಂದ ಅಗೋಚರ ಶಕ್ತಿ ಪಡೆದಿದ್ದಾನೆ ಎಂಬ ಪ್ರತೀತಿಯಿದೆ. ಜನರ ಎಲ್ಲ ತರಹದ ಕಷ್ಟ, ಸಮಸ್ಯೆಗಳನ್ನು ಸ್ವಪ್ನದರ್ಶನದ ಮುಖಾಂತರ ಸಮಾಧಿ ಸ್ಥಿತಿಯಲ್ಲಿ ಉತ್ತರಿಸುತ್ತಾನೆ, ಪರಿಹಾರ ಹೇಳುತ್ತಾನೆ. ಹೆಚ್ಚಾಗಿ ಕಾಗದದಲ್ಲಿ ಬರೆದುಕೊಟ್ಟ ಪ್ರಶ್ನೆಗಳಿಗೆ ಅವನು ಮರುದಿನ ಉತ್ತರಿಸುವುದು ರೂಢಿಯಾಗಿದೆ. ದೂರದಿಂದ ಬಂದವರಿಗೆ ರಾತ್ರೆ ಬನದಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯಿದೆ. ಅತಿಥಿಗಳ ಉಪಚಾರಕ್ಕೆ ಅವನ ಕಡೆಯ ಜನರು ಸದಾ ಆತುರರು. ರಾತ್ರಿ ಅಲ್ಲಿ ಹೋಮ-ಹವನ ನಡೆಯುತ್ತದೆ. ಬನದಲ್ಲಿ ಹಣದ ಪ್ರಶ್ನೆಯಿಲ್ಲ. ಬಂದವರು ತಮಗಿಷ್ಟ ಬಂದ ಕಾಣಿಕೆ ಕೊಟ್ಟರೆ ಅದೇ ತೃಪ್ತಿ. ನಿಃಸ್ವಾರ್ಥ ಸೇವೆ!

ರಾಜಣ್ಣ ಕೇಳಿದ್ದು ಎರಡು ಪ್ರಶ್ನೆ. ಒಂದು : "ನನ್ನ ಮೇಲೆ ಮಾಟ ಆಗಿದೆಯೇ?" ಎರಡು : "ನನ್ನ ಮನೆ ದೋಷವಿದೆಯೇ?"

ಮರುದಿನ ಸಮಾಧಿಸ್ಥಿತಿಯಲ್ಲಿ ಬನವಾಸಿಯಿಂದ ದೊರೆತ ಉತ್ತರ ಅವನನ್ನು ಗೊಂದಲಕ್ಕೆ ಈಡುಮಾಡಿತು. ಮೊದಲ ಉತ್ತರ : "ನಿನ್ನ ಮೇಲೆ ಮಾಟ ಆಗಿರುವುದು ಅನುಮಾನಾಸ್ಪದ." ಎರಡನೇ ಉತ್ತರ : "ಸ್ಥಳ ಮತ್ತು ಮನೆ ದೋಷವಿದೆ. ನಿವಾರಣೆ ಅಗತ್ಯ."

ನಿವಾರಣೆಯೆಂದರೆ ಅದೇನು ಖರ್ಚಿನ ಬಾಬ್ತಲ್ಲ. ನಾಲ್ಕು ಕುತ್ತಿ ತುಪ್ಪ, ಅರ್ಧ ಸೇರು ಕುಂಕುಮ, ಒಂದು ಕೆ.ಜಿ. ಒಣಗಿದ ದ್ರಾಕ್ಷಿ, ಬಾದಾಮಿ, ಎಂಟು ಸೇರು ಬೆಳ್ತಿಗೆ ಅಕ್ಕಿ ಇವನ್ನು ಬನಕ್ಕೆ ತಂದೊಪ್ಪಿಸಿದರೆ ಒಂದು ತಿಂಗಳು ರಾಜಣ್ಣನ ಹೆಸರಿನಲ್ಲಿ ಪ್ರತ್ಯೇಕ ಹೋಮ ಮಾಡಲಾಗುತ್ತದೆ. ಅದರ ಖರ್ಚು ಅಲಾಯಿದ ಇನ್ನೂರು ರೂಪಾಯಿ ಮುಂಗಡ ಕೊಡಬೇಕು. ಹೋಮ ಮುಗಿದ ಮೇಲೆ ಪ್ರಸಾದ.

ಕೇಳಿಯೇ ರಾಜಣ್ಣನ ಹೃತ್ಕ್ರಿಯೆ ನಿಂತ ಅನುಭವ. ನಿವೃತ್ತಿಗೆ ಒಂದು ಸಾವಿರ ಸಾಲದು. ಒಂದು ತಿಂಗಳು ತಾನೂ ಇಲ್ಲಿರಬೇಕು. ಆಲೋಚಿಸಿ ಹೇಳುತ್ತೇನೆಂದು ಹೇಳಿ, ಹೋದ ತಪ್ಪಿಗೆ ಹತ್ತು ರೂಪಾಯಿ ತೆತ್ತು ಸೀದಾ ಹೊರಟು ಬಂದ ಕಲ್ಲಳ್ಳಿಗೆ.

ಹಳ್ಳಿ ಸೇರಿದವನು ಮೊದಲು ಅವಿನಾಶನನ್ನು ಭೇಟಿ ಮಾಡಿದ. ಅವಿನಾಶ ಬನದ ವಿಷಯ ಕೇಳುತ್ತ ತಲೆ ಜಜ್ಜಿಕೊಂಡ. ಮನಃಸ್ಥೈರ್ಯ ಇಲ್ಲದವನಿಗೆ ಬನವಾಸಿ ಯಾವ ಪರಿಹಾರ ಮಾಡುತ್ತಾನೆ? ರಾಜಣ್ಣನ ಹಣ, ಶಕ್ತಿ, ಸಮಯ ವೃಥಾ ಪೋಲಾಗಿಹೋಗುತ್ತಿದೆ. ಇದರೊಂದಿಗೆ ರಾಜಣ್ಣ ತಂದಿದ್ದಾನೆ ಇನ್ನೊಂದು ಹೊಸ ಸುದ್ದಿ. ಇಲ್ಲಿಂದ ಇಪ್ಪತ್ತು ಮೈಲು ದೂರದಲ್ಲಿರುವ ಹಾಲಳ್ಳಿಯಲ್ಲಿ ಒಬ್ಬ ಕಿಶೋರನಿಗೆ 'ದೇವಿ' ಮೈಮೇಲೆ ಬರುತ್ತಾಳಂತೆ. ಆ ಸಮಯದಲ್ಲಿ ಅವನು ಹೇಳಿದುದೆಲ್ಲವೂ ನಿಜವಾಗುತ್ತದಂತೆ. ರಾಜಣ್ಣನಿಗೆ ಅಲ್ಲಿಗೆ ಹೋಗುವ ಮನಸ್ಸಾಗಿದೆ. ಬನವಾಸಿಯ ಢೋಂಗಿತನ ನೋಡಿಯೂ ಬದಲಾಗಿಲ್ಲ ರಾಜಣ್ಣ !

"ಹಾಲಳ್ಳಿಯ ಹುಡುಗ ನಮ್ಮ ಮುಖವನ್ನು ನೋಡಿ ಸತ್ಯಸಂಗತಿಯನ್ನು ಹೇಳುತ್ತಾನಂತೆ. ಅಮಾವಾಸ್ಯೆ ದಿನ ಅಲ್ಲಿ ಬಹಳ ವಿಶೇಷವಂತೆ ಡಾಕ್ಟರೇ, ನೀವೂ ನನ್ನ ಜೊತೆ ಬರ್ತೀರಾ?"

ಅವನ ಬೇಡಿಕೆಯ ಧ್ವನಿಗೆ ಇಲ್ಲವೆನ್ನಲಾಗಲಿಲ್ಲ. ಕಿಶೋರನಿಗೆ ದೇವಿ ಮೈಮೇಲೆ ಬಂದಾಗ ಹೇಗೆ ವರ್ತಿಸುತ್ತಾನೆ? ಏನು ಮಾತನಾಡುತ್ತಾನೆ? ಎಂದು ತಿಳಿಯುವ, ನೋಡುವ ಕುತೂಹಲ ಗರಿಗೆದರಿತು. ಅಮಾವಾಸ್ಯೆಯ ದಿನ ಇಬ್ಬರೂ ಮೋಟರ್ ಬೈಕ್‌ನಲ್ಲಿ ಹಾಲಳ್ಳಿಗೆ ಹೋಗುವುದೆಂದು ನಿಶ್ಚಯಿಸಿಕೊಂಡರು. ಈ ಸಲ ಅವಿನಾಶ ಅವನಿಗೆ ಬುದ್ಧಿ ಹೇಳಲಿಲ್ಲ. ಅವನು ಗಾಳಿ ಬಂದತ್ತ ಬೀಸುವ ತರಗೆಲೆ!

ಅಮಾವಾಸ್ಯೆಗೆ ಹದಿಮೂರು ದಿನಗಳಿವೆ. ಈ ಮಧ್ಯೆ ರಾಜಣ್ಣನ ಮನೆಯಲ್ಲಿ ನವಗ್ರಹ ಹೋಮ, ಶಾಂತಿಕಾರ್ಯಗಳು ನೆರವೇರಿದವು. ದಾನಧರ್ಮ, ಭೋಜನದ ಏರ್ಪಾಡು ಎಲ್ಲಾ ಸೇರಿ ಸಾವಿರ ಮೀರಿ ಖರ್ಚು ಮಾಡಿದ. ಅವಿನಾಶ–ದಂಪತಿಗಳನ್ನು ಆಹ್ವಾನಿಸಿದ್ದ ಅನ್ನಸಂತರ್ಪಣೆಗೆ. ಆದರೆ ಅದೇ ಹಳ್ಳಿಯಲ್ಲಿದ್ದ ಅಣ್ಣನ ಸಂಸಾರಕ್ಕೆ ಕರೆ ಕೊಡಲಿಲ್ಲ.

ಹಾಲಳ್ಳಿ–ಹೆಸರಿಗೆ ತಕ್ಕಂತೆ ಹಿಂದೆ ಹಾಲಿನ ಹೊಳೆ ಹರಿಯುತ್ತಿತ್ತಂತೆ. ಈಗ ಅಲ್ಲಿ ಹಾಲಿನ ಸಮೃದ್ಧಿ ಇದೆಯೋ ಇಲ್ಲವೋ ತಿಳಿಯದು, ಆದರೆ ಸುತ್ತಲೂ ಸಮೃದ್ಧ ಹುಲ್ಲುಗಾವಲಿದೆ. ದನಕರುಗಳಿಗೆ ಮೇಯಲು ಪ್ರಶಸ್ತವಾದ ಸ್ಥಳ. ಈ ಹುಲ್ಲುಗಾವಲಿನ ಮಧ್ಯೆ ನೂರಾರು ಮನೆಗಳು ತಲೆಯೆತ್ತಿವೆ. ಇತ್ತೀಚೆಗೆ ದನಕರುಗಳಿಗಿಂತ ಮನುಷ್ಯರೇ ಅಧಿಕ. ರಾಜಣ್ಣ ಹೇಳಿದ ಮನೆ

ಹಾಲಳ್ಳಿಯ ಮುಖ್ಯರಸ್ತೆಯಿಂದ ಒಂದು ಮೈಲು ಒಳಗೆ ನಿರ್ಜನ ಪ್ರದೇಶದಲ್ಲಿ, ಪಸಿರು ಹುಲ್ಲುಗಾವಲಿನ ಮಧ್ಯೆ ಅದೊಂದೇ ಹಂಚಿನ ಮನೆಯ ಶೋಭೆ.

ವಾಹನ ಹೋಗುವ ಮಣ್ಣು ರಸ್ತೆ ಮನೆಯಿಂದ ಎರಡು ಫರ್ಲಾಂಗ್ ದೂರದಲ್ಲೇ ಮುಗಿದುಹೋಗುತ್ತದೆ. ಅಲ್ಲಿಂದ ವಿಶಾಲವಾದ ಗದ್ದೆಬಯಲಿನ ಮಧ್ಯೆ ಇರುವ ಹುಣಿಯಲ್ಲಿ ನಡೆದು ಬರಬೇಕು. ಸುತ್ತಲೂ ಹಸಿರು ಬೆಟ್ಟ, ಹಸಿರು ಮರಗಳ ಸಾಲು, ಹಸಿರು ಸೀರೆಯುಟ್ಟ ಗದ್ದೆ ಬಯಲು, ಸುತ್ತಲೂ ಕಲ್ಪವೃಕ್ಷಗಳು, ಎದುರಿಗೆ ಭವ್ಯವಾದ ಮಾಳಿಗೆಯಿರುವ ಹಂಚಿನ ಮನೆ. ಅವರ ಹಿಂಭಾಗದಲ್ಲಿ ತೆಂಗಿನ ತೋಟವಿರಬೇಕು. ಅಲ್ಲಲ್ಲ ತೆಂಗಿನ ಸಾಮ್ರಾಜ್ಯ-ಹಿತವಾಗಿ ಬೀಸುವ ಮಂದಾನಿಲ.

ಅವಿನಾಶ ಮತ್ತು ರಾಜಣ್ಣ ತಮ್ಮ ವಾಹನವನ್ನು ಮಣ್ಣು ರಸ್ತೆಯ ಅಂಚಿನಲ್ಲಿ ನಿಲ್ಲಿಸಿ ಗದ್ದೆಹುಣಿಯಲ್ಲಿ ನಡೆದು ಬರುತ್ತಿದ್ದಂತೆ ಬೆಳಗಿನ ಹಿತವಾದ ಬಿಸಿಲು ಮುಖವನ್ನು ಸ್ಪರ್ಶಿಸಿತು. ಇಬ್ಬರ ಮನಸ್ಸು ಗಗನದಲ್ಲಿ ವಿಹರಿಸುವ ಹಕ್ಕಿಯಂತೆ ಇನ್ನೆಲ್ಲೋ ವಿಹರಿಸುತ್ತ ಹೊಸ ಸಾಮ್ರಾಜ್ಯದ ಸೃಷ್ಟಿ ಮಾಡಿತು.

ಗದ್ದೆ ಏರಿಯನ್ನೇರಿ ಮನೆ ಅಂಗಳಕ್ಕೆ ಬರುತ್ತಿದ್ದಂತೆ ಒಬ್ಬಾತ "ಸ್ವಾಮಿ, ಕಾಲು ತೊಳೆದುಕೊಂಡು ಒಳಗೆ ಹೋಗಿ" ಎಂದ ಕಟ್ಟಪ್ಪಣೆಯೊಂದಿಗೆ. ಮಣ್ಣಿನ ಬಾನಿಯಲ್ಲಿರಿಸಿದ ತಣ್ಣೀರು ಹಿತವಾಗಿತ್ತು ಕಾಲಿಗೆ. ಸಿಮೆಂಟಿನಿಂದ ಎರಕ ಹೊಯ್ದ ಎರಡು ಭೀಕರ ಸಿಂಹಗಳು ಸ್ವಾಗತಿಸಿದವು ಅವರನ್ನು. ಮಾವಿನ ಎಲೆಯ ತಳಿರುತೋರಣ ಚಾಮರವನ್ನು ಬೀಸಿತು. ಅಂದವಾದ ರಂಗವಲ್ಲಿ ಕಣ್ಮನವನ್ನು ಸೆಳೆಯಿತು. ಮನೆಯೆದುರು ವಿಶಾಲವಾದ ತೆಂಗಿನ ಮಡಲಿನ ಚಪ್ಪರ. ಅದರದೇ ಸುತ್ತಲಿನ ಮರೆ. ಸಿಮೆಂಟು ಸಾರಣೆ ಮಾಡಿದ ನೆಲದ ಮೇಲೆ ಹಾಸಿದ ಜಮಖಾನಗಳ ಸಾಲು. ಆಗಲೇ ಹತ್ತಿಪ್ಪತ್ತು ಜನ ಬಂದು ಕುಳಿತಿದ್ದಾರೆ. ಚಪ್ಪರದ ಒಂದು ಬದಿ ಕೆಂಪು ಸಾರಣೆ ಮಾಡಿದ ಸಿಮೆಂಟಿನ ಕಟ್ಟೆ. ಅವರ ಹಿಂಭಾಗದ ಗೋಡೆಗೆ ಇಳಿಬಿಟ್ಟ ಅರಿಶಿನ ಬಣ್ಣದ ಬಟ್ಟೆ. ಕಟ್ಟೆಯ ಕೆಳಗೆ ಒಬ್ಬ ಡೋಲಿನ ಇಬ್ಬರು ವಾದ್ಯದವರು ಕುಳಿತಿದ್ದಾರೆ.

ಚಪ್ಪರದ ಹಿಂಭಾಗದಲ್ಲಿ ಕಾವಿವಸ್ತ್ರ ಧರಿಸಿದ ಹತ್ತಾರು ಜನರು ಓಡಾಡುತ್ತಿದ್ದಾರೆ. ನಾಲ್ಕಾರು ಗಂಡಸರು ತೆಂಗಿನಕಾಯಿ ರಾಶಿಯನ್ನು ಸರಿಪಡಿಸುವುದರಲ್ಲಿ ನಿರತರಾಗಿದ್ದಾರೆ. ಎಲ್ಲೋ ಆಚೆ ಹೊಗೆಯು ಕಾಣುತ್ತಿದೆ. ಮಧ್ಯಾಹ್ನದ ಅಡಿಗೆ ತಯಾರಿ ! ಈಚೆಗೆ ಒಂದು ಮೂಲೆಯಲ್ಲಿ ಒದ್ದೆ ಬಟ್ಟೆ ಉಟ್ಟ ಇಬ್ಬರು ಯುವಕರು ಧ್ಯಾನಮಗ್ನರಾಗಿದ್ದಾರೆ. ಚಪ್ಪರದ ಮೂಲೆ ಮೂಲೆಯಲ್ಲಿ ದೇವಿಯ ಆಕರ್ಷಕ ಭಂಗಿಗಳ ಫೋಟೋಗಳು. ಅವುಗಳಿಗೆ ಹೂಹಾರಗಳ ಅಲಂಕಾರ. ಅನೇಕ ಧರ್ಮವಾಕ್ಯಗಳನ್ನು ತೂಗುಹಾಕಿದ ಫಲಕಗಳು. ಊದಿನಕಡ್ಡಿ, ಕರ್ಪೂರದ ಪರಿಮಳ ತುಂಬಿಹೋಗಿದೆ.

ಮನೆಯೊಳಗೂ ದೇವಿಯ ಅನೇಕ ಫೋಟೋಗಳು. ಅವುಗಳ ಎದುರು ಬೆಳ್ಳಿ ನೀಲಾಂಜನದಲ್ಲಿ ಬೆಳಗುತ್ತಿರುವ ದೀಪಗಳು. ಮನೆಯ ಕ್ರಮ, ಅದನ್ನು ಕಟ್ಟಿದ ರೀತಿ, ಒಳಗೆ ತುಂಬಿರುವ ಸಾಮಾನು ಸರಂಜಾಮು ಇವುಗಳನ್ನು ನೋಡಿದರೆ ಕನಿಷ್ಠ ಲಕ್ಷ ರೂಪಾಯಿ ಮೀರಿ ಖರ್ಚು ಮಾಡಿರಬಹುದು.

ಅವಿನಾಶ ಮತ್ತು ರಾಜಣ್ಣ ಚಪ್ಪರದಲ್ಲಿ ಕಾಲಿರಿಸಿ ಜಮಖಾನದ ಮೇಲೆ ಮಂಡಿಯೂರಿ ಕುಳಿತುಕೊಳ್ಳುತ್ತಿದ್ದಂತೆ ಎಲ್ಲಿಂದಲೋ ಕೇಳಿಸಿತು ಆರ್ತನಾದ "ಅಯ್ಯಮ್ಮೋ! ಬಿಡಿಸಿ ನನ್ನನ್ನು. ಬೇಡಪ್ಪ ಬೇಡ ಕೊಲ್ಲಬೇಡಾ..."

ಸಣ್ಣ ಹುಡುಗನ ಚೀತ್ಕಾರ, ಪ್ರಾಣಭಯದ ಆರ್ತನಾದ. ಸ್ವರ ಬಂದದ್ದು ಚಪ್ಪರದ ಹಿಂಭಾಗದಿಂದ. 'ಇದು ದೇವಿಯ ಸ್ವರವೇ?' ಅನುಮಾನ ತಳೆದ ರಾಜಣ್ಣ. ಅವಿನಾಶ ಕುಳಿತಲ್ಲಿಂದ ಜಿಗಿದೆದ್ದ. ಇದು ಯಾರ ಚೀತ್ಕಾರ? ಇಲ್ಲಿ ಕುಳಿತವರೆಲ್ಲ ಕಿವುಡರೇ? ಅವಿನಾಶ ರಾಜಣ್ಣನಿಗೂ ಏಳಲು ಸನ್ನೆ ಮಾಡಿದ. ಚಪ್ಪರದ ಹಿಂಭಾಗಕ್ಕೆ ಹೋಗಲು ಅನುಮತಿ ಬೇಕಿರಲಿಲ್ಲ.

ಹಿಂಭಾಗದಲ್ಲಿ ವಿಶಾಲವಾದ ಸಿಮೆಂಟಿನ ಛಾವಣಿ ಇಳಿಸಿದ ಚಪ್ಪರ, ಮಣ್ಣು ನೆಲಕ್ಕೆ ಇಲ್ಲಿ ಸೆಗಣಿ ಸಾರಿಸಲಾಗಿದೆ. ಪೂರ್ವದ ಮೂಲೆಯಲ್ಲಿ ಒಂದು ಕೋಣೆ. ಅಲ್ಲಿ ದೊಡ್ಡ ದೊಡ್ಡ ಕೊಳತಪ್ಪಲೆಗಳಲ್ಲಿ ಏನೇನೋ ಕುದಿಯುತ್ತಿದೆ. ತರಕಾರಿ, ತೆಂಗಿನಕಾಯಿ, ಇನ್ನಿತರ ದವಸಧಾನ್ಯಗಳ ರಾಶಿ ತುಂಬಿದೆ ಅಲ್ಲೆಲ್ಲ. ಇತ್ತ ದಕ್ಷಿಣದ ಮೂಲೆಯಲ್ಲಿ ಹತ್ತಿಪ್ಪತ್ತು ಜನರ ಗುಂಪು. ಗುಂಪಿನ ಮಧ್ಯೆ ಸುಮಾರು ಹನ್ನೊಂದು ವರ್ಷದ ಹುಡುಗನನ್ನು ಕಟ್ಟಿ ಹಾಕಿದ್ದಾರೆ. ಚಡ್ಡಿ ಒಂದೇ ಮೈಮೇಲೆ. ಇಬ್ಬರು ಟೊಣಪರು ಅವನ ಬದಿಯಲ್ಲಿ, ಒಬ್ಬಾತ ಅವನಿಂದ ತುಸುದೂರ ನೆಲದಲ್ಲಿ ಕುಳಿತಿದ್ದಾರೆ. ಒಂದು ಅಗ್ಗಿಷ್ಟಿಕೆಯಲ್ಲಿ ನಿಗಿನಿಗಿಸುವ ಕೆಂಡ.

"ಹೂಂ, ಬಾಯಿ ಬಿಡು. ಇಲ್ಲವಾದರೆ ನಿನ್ನನ್ನು ಬಿಡುವವನಲ್ಲ" ಎಂದು ಕುಳಿತವನು ಕೈಯಲ್ಲಿದ್ದ ಭಸ್ಮವನ್ನು ಕೆಂಡದತ್ತ ಊದಿದ. ಭುಗಿಲ್ಲನೆ ಎದ್ದಿತು ಜ್ವಾಲೆ.

"ಬೇಡಪ್ಪೋ ಬೇಡ... ನನ್ನನ್ನು ಬಿಡಿಸಿ... ಅಮ್ಮಾ! ನನ್ನ ಬಿಡಿಸು."

ವಿಲವಿಲನೆ ಒದ್ದಾಡುವ ಹುಡುಗನನ್ನು ನೋಡಿ ಆ ಮೂವರೂ ಕೇಕೆ ಹಾಕಿದರು. ಅವಿನಾಶನ ರಕ್ತ ಹೆಪ್ಪುಗಟ್ಟಿಹೋಯಿತು. ಗುಂಪಿನ ಮಧ್ಯೆ ತನ್ನ ತಲೆಯನ್ನೂ ತೂರಿ ನೋಡಿದವ ಬೆದರಿಹೋದ. ಅರಿಶಿನ, ಕುಂಕುಮ ಓಕುಳಿಯಾಡಿದ ಚಿತ್ರವಿಚಿತ್ರ ರಂಗವಲ್ಲಿಯ ಮೇಲೆ ನಿಂತ ಹುಡುಗನ ಮೈಮೇಲೆಲ್ಲ ಬಾಸುಂಡೆಯ ಗುರುತುಗಳು. ತುಟಿ ಕಚ್ಚಿ ರಕ್ತ ಬಂದಿದೆ. ಕಣ್ಣಲ್ಲಿ ನೀರು ಉಕ್ಕಿದೆ. ಅಸಹಾಯಕನಂತೆ 'ಯಾರಾದರೂ ಬಿಡಿಸಿ' ಎಂಬ ಬೊಬ್ಬೆ. ಕಂಬಕ್ಕೆ ಕಟ್ಟಿದ ಬಲಿಪಶು!

"ನೀನು ಬಾಯಿ ಬಿಡುವುದಿಲ್ಲವೇ?" ಕುಳಿತವನು ಚಿಮ್ಮಟದ ತುದಿಯಿಂದ ನಿಗಿನಿಗಿಸುವ ಕೆಂಡವನ್ನೆತ್ತಿ ಎದ್ದು ನಿಂತ. ಡೋಲುಗಳು ಥಮ್ ಥಮಾರ್ ಎಂದು ಹೊಡೆದುಕೊಳ್ಳುತ್ತಿದ್ದಂತೆ 'ವ್ಹಾವ್ ವ್ಹಾಯ್, ವ್ಹಾಹ್ ವ್ಹಾಯ್' ಎನ್ನುತ್ತ ಹುಡುಗನ ಹಿಂದೆ ಟೋಣಪರ ಕುಣಿತ.

"ಕಾಸುಬರೆ ಇಟ್ಟ ಮೇಲೆ ನೀನು ಬಾಯಿ ಬಿಡುತ್ತೀ ಅಲ್ಲವೇ? ಹೈ.... ಹೈ.... ಹೈ...."

ಅಟ್ಟಹಾಸದಿಂದ ಕೈಯಲ್ಲಿ ಕೆಂಡದೊಡನೆ ಯಮದೂತರಂತೆ ಬರುವವನನ್ನು ಹುಡುಗ ಕಂಡು ವಿಕಾರವಾಗಿ ಒರಲಿದ. ಬಿಡಿಸಿಕೊಳ್ಳಲು ಹೆಣಗಿದ. ಆದರೆ ಕೆಂಡ ಅವನ ಎಡತೊಡೆಯ ಮೇಲೆ ಮುತ್ತಿಟ್ಟಿತು; ಇನ್ನೊಮ್ಮೆ ಬಲ ತೊಡೆಗೆ. ಹುಡುಗ ಮತ್ತೊಮ್ಮೆ ಚೀತ್ಕರಿಸಿ ಅಲ್ಲೇ ಪ್ರಜ್ಞೆ ತಪ್ಪಿದ. ಮುಖ ಓರೆಯಾಯಿತು.

"ಹ್ಹಹ್ಹಹ್ಹ... ಇವನ ಮೈಯಿಂದ ತೊಲಗದೇ ಇದ್ದರೆ ನಾಳೆಯೂ ಇದೇ ಶಿಕ್ಷೆ. ಇವತ್ತಿಗೆ ಇಷ್ಟು ಸಾಕು. ಜೈ ದೇವಿ... ಮಂತ್ರಿಸಿದ ಹೂ, ಕುಂಕುಮ ಎರಚ್ತೇನೆ. ಇಲ್ಲಿಂದ ಈಗಲೇ ಹೊರಟುಹೋಗು!"

ಅವಿನಾಶ ನೋಡಲಾರದೆ ಹಿಂದೆ ಸರಿದ. ದೇವಿ ಎಲ್ಲಿದ್ದಳೋ? ಆದರೆ ಇಲ್ಲಿ ಮಾತ್ರ ಕ್ರೂರಶಿಕ್ಷೆ, ಚಿತ್ರಹಿಂಸೆ. ಆ ಹಿಂಸೆಯನ್ನು ನೋಡಲಾರದೆ ಅವನ ಮೈ ಬೆವರಿಟ್ಟಿತು. ಅಲ್ಲೇ ಒಂದು ಬದಿಯಲ್ಲಿ ಕಣ್ಣೀರು ಸುರಿಸುತ್ತ ಕುಳಿತಿದ್ದ ಮಧ್ಯವಯಸ್ಸಿನ ದಂಪತಿಗಳು. ಹುಡುಗನ ತಂದೆತಾಯಿ ಇರಬೇಕು, ಮಗನ ಶಿಕ್ಷೆಯನ್ನು ನೋಡಲಾರದೆ ಅನುಭವಿಸುತ್ತಿದ್ದಾರೆ ಮೂಕಸಂಕಟವನ್ನು. ಅವಿನಾಶ ಅವರ ಬಳಿ ಬಂದು ಕುಕ್ಕರುಗಾಲಿನಲ್ಲಿ ಕುಳಿತು ಮಾತಿನ ಬಲೆ ಹೆಣೆಯತೊಡಗಿದ.

ಡೋಲಿನ ಸದ್ದು ಕಡಿಮೆಯಾಗಿತ್ತು. ಕೆಂಡ ಹಿಡಿದವನು ತನ್ನ ಸ್ಥಾನದಲ್ಲಿ ಕುಳಿತು ಕಪ್ಪೆಯಂತೆ ವಟಗುಡುತ್ತ ಹುಡುಗನ ಮೇಲೆ ಕುಂಕುಮ ಎರಚುತ್ತಿದ್ದಾನೆ.

"ನಿಮ್ಮ ಮಗನಿಗೆ ಏನಾಗಿದೆ? ಇಲ್ಲಿಗೇಕೆ ಕರೆತಂದಿದ್ದೀರಿ?" ಕಳಕಳಿಯಿಂದ ಕೇಳಿದ ಅವಿನಾಶ, ಹುಡುಗನ ತಂದೆಯನ್ನು.

"ಏನಾಗಿದೆ ಅಂತ ಗೊತ್ತಾಗೋದಿಲ್ವೇ?" ಗಂಡಸು ಅರಚಿದರು, "ಅವನ ಮೈಮೇಲೆ ಭೂತ ಬಂದಿದೆ, ಭೂತ!"

"ಭೂತ! ಯಾರ ಭೂತ?"

ಗಂಡಸಿಗೆ ಹೇಳುವ ಮನಸ್ಸಿಲ್ಲ, ಅವಿನಾಶ ಬಿಡಲಾರ. ಪ್ರೀತಿಯಿಂದ ಮಾತನಾಡಿದನಂತರ ಅಳುಧ್ವನಿ ತೆಗೆದರು :

"ಅವನ ಅಕ್ಕನ ಭೂತ ಹಿಡ್ಕೊಂಡಿದೆ ಅವನನ್ನು. ಹತ್ತೂರು ತಿರುಗಿದರೂ ಆ ಪೀಡೆ ತೊಲಗಿಲ್ಲ. ಅವನ ಜೀವ ತಿನ್ತಾ ಇದೆ. ಇಲ್ಲಿ ದೇವೀ

ಮಹಿಮೆಯಿಂದ ಭೂತ ತೊಲಗಿ ಹೋಗ್ತದೆ ಎಂದಂದಿದ್ದರು ಯಾರೋ, ಕರ್ಕೊಂಡು ಬದ್ವಿ, ಆದರೆ ಹೀಗೆ ಚಿತ್ರಹಿಂಸೆ ಕೊಡ್ತಾರೆ ಅಂದ್ಕೊಂಡಿರಲಿಲ್ಲ, ಓ.... ದೇವರೇ....!"

"ಅವರನ್ನು ಭೂತ ಹೇಗೆ ಹಿಡ್ಕೊಂಡ್ತು ಸ್ವಲ್ಪ ವಿವರಿಸಿ. ನಾನೊಬ್ಬ ಡಾಕ್ಟರು, ಏನಾದರೂ ಪರಿಹಾರ ಹೇಳ್ತೇನೆ."

ಹುಡುಗನ ತಂದೆ ತಲೆತಗ್ಗಿಸಿದರು. "ಕಥೆ ಕೇಳಿ ಏನ್ಮಾಡ್ತೀರಿ, ಡಾಕ್ಟರೇ. ನಿಮ್ಮಿಂದ ಗುಣಪಡಿಸಲು ಸಾಧ್ಯವಿಲ್ಲ. ನನಗಿದ್ದದ್ದು ಎರಡೇ ಮಕ್ಕಳು. ಒಬ್ಬ ಇವನು, ಇನ್ನೊಬ್ಬಳು ಇವನಿಗಿಂತ ಎರಡು ವರ್ಷ ಹಿರಿಯವಳು. ಆರು ತಿಂಗಳ ಹಿಂದೆ ಹುಡುಗಿ ಬಾವಿ ನೀರನ್ನು ಸೇದ್ತಾ ಇದ್ದಾಗ ಕಾಲು ಜಾರಿ ಬಾವಿಗೆ ಬಿದ್ಲು. ಮೇಲೆ ಎತ್ತುವುದರೊಳಗೆ... ಏನು ಹೇಳಲಿ ಡಾಕ್ಟರೇ, ಉಸಿರು ನಿಂತು ಹೆಣವಾಗಿದ್ದಳು. ನಮ್ಮ ಹುಡುಗ ಬಿಟ್ಟ ಕಣ್ಣಿನಿಂದ ಹೆಣ ನೋಡಿದ, ಹೆಣ ಸುಟ್ಟದ್ದನ್ನು ನೋಡಿದ.

"ಒಂದೇ ಬಟ್ಟಲಿನಲ್ಲಿ ಉಂಡು, ಒಂದೇ ಹಾಸಿಗೆಯಲ್ಲಿ ಮಲಗಿ ದೊಡ್ಡವರಾದ ಅಕ್ಕ-ತಮ್ಮ ಅವರಿಬ್ಬರೂ. ಅಕ್ಕ ಸತ್ತ ನಾಲ್ಕು ದಿನ ಇವನು ಆಹಾರ ಮುಟ್ಟಿಲ್ಲ, ನಿದ್ರೆ ಮಾಡ್ಲಿಲ್ಲ. ಒಂದೇ ಪ್ರಶ್ನೆ- 'ಅಕ್ಕ ಎಲ್ಲಿ ಹೋದಳು?' ಮತ್ತೆ ನಾಲ್ಕು ದಿನಗಳು ಕಳೆದ ಮೇಲೆ 'ಅಕ್ಕ, ನಾನೂ ಬರ್ತೇನೆ' ಎನ್ನಲಾರಂಭಿಸಿದ. ಪ್ರತಿದಿನ ಬಾವಿ ಹತ್ತಿರ ನಿಂತು ಅವನೇ ಯೋಚನೆ ಮಾಡುತ್ತಿದ್ದ. ಆಮೇಲೆ ಒಂದು ದಿನ 'ಅಕ್ಕ, ನನ್ನನ್ನು ಕರೀತಾ ಇದ್ದಾಳೆ, ನಾನು ಹೋಗ್ತೇನೆ' ಎಂದು ಬಾವಿ ಬಳಿ ಓಡಿದಾಗಲೇ ನಮಗೆ ಇವನ ಪರಿಸ್ಥಿತಿ ಅರಿವಾದದ್ದು. ಅಕ್ಕ ಬಿದ್ದ ಬಾವಿಗೆ ತಾನೂ ಬೀಳಬೇಕೆಂಬ ಹಟ ಹಿಡಿದ."

"ಇರುವವನು ಇವನೊಬ್ಬ" ತಾಯಿ ಗದ್ಗದಿತಳಾದಳು. "ಎಲ್ಲಿ ಬಾವಿ ಹಾರಿಕೊಳ್ತಾನೋ ಅಂತ ನಮಗೆ ಹೆದರಿಕೆ. 'ನಾ ಹೋಗ್ತೇನೆ. ಅಕ್ಕ ಕರೀತಾಳೆ' ಈ ಒಂದೇ ಜಪ. ತಾನೊಬ್ಬಳು ಸತ್ತಳು, ಜೊತೆಗೆ ಇವನನ್ನೂ ಎಳ್ಕೊಂಡು ಹೋಗೋಣ ಅಂತಿದೆ ಅವಳ ಪೀಡೆ!"

"ಹುಡುಗಿಗೆ ಇವನೆಂದರೆ ಬಹಳ ಪ್ರೀತಿ. ಸತ್ತ ಮೇಲೆಯೂ ಬಿಡಲಿಲ್ಲ. ಇವನನ್ನು ಹಿಡ್ಕೊಂಡು ಆಟ ಆಡಿಸ್ತಾ ಇದ್ದಾಳೆ. ನೋಡಿ, ಅವಳ ಹಾಗೇ ಮಾತು, ನಗೆ.... ಎಲ್ಲಾ."

ಅವಿನಾಶನಿಗೆ ಅರ್ಥವಾಯಿತು. ಅಕ್ಕನನ್ನು ಅಪಾರವಾಗಿ ಪ್ರೀತಿಸುತ್ತಿದ್ದ ತಮ್ಮನಿಗೆ ಅವಳ ಅಕಾಲ ಮೃತ್ಯುವಿನಿಂದ ಮಾನಸಿಕ ಆಘಾತವಾಗಿದೆ. ಪ್ರೀತಿಯಿಂದ ವಂಚಿತವಾದ ಮನಸ್ಸಿಗೆ ಚಿಂತೆಯ ಎಳೆಗಳು. ಅವಳಿಲ್ಲದೆ ತಾನು ಬದುಕಲಾರೆ, ತಾನೂ ಬಾವಿ ಹಾರಬೇಕು ಎನಿಸಿದೆ. ಅಕ್ಕ ಬಾವಿಯಿಂದ ಕರೆಯುತ್ತಿರುವುದು ಅವನ ಮಾನಸಿಕ ವಿಕಲ್ಪದ ಒಂದು ರೂಪ. ಇದೇ

ಅವನ ಬದಲಾದ ನಡವಳಿಕೆಗೆ ಕಾರಣ. ತಂದೆ ತಾಯಿ ತಿಳಿದದ್ದು ಅಕ್ಕನ ದೆವ್ವ ಮೆಟ್ಟಿದೆ ಎಂದು.

"ನಿಮ್ಮ ಕಥೆ ಕೇಳಿ ವ್ಯಥೆಯಾಯಿತು, ನಿಮ್ಮ ಹೆಸರೇನು?"

"ಚಿತ್ರದುರ್ಗದ ಸಾಂಬಶಿವ."

"ಇವತ್ತೇ ಅವನನ್ನು ಊರಿಗೆ ಕರೆದೊಯ್ಯಿರಿ. ಸ್ವಲ್ಪ ಈ ಕಡೆ ಬನ್ನಿ." ಯಾರೂ ಇಲ್ಲದ ಮೂಲೆಗೆ ಅವರನ್ನು ಕರೆದ. "ನಿಮ್ಮ ಮಗನಿಗೆ ಯಾವ ಪೀಡೆಯ ಉಪದ್ರ ಇಲ್ಲ. ಇದು ಮಾನಸಿಕ ರೋಗ. ಹೀಗೆ ಚಿತ್ರಹಿಂಸೆ ಕೊಡ್ತಾ ಇದ್ದರೆ ಈ ಒಬ್ಬ ಮಗನನ್ನೂ ನೀವು ಕಳೆದುಕೊಳ್ಳಬಹುದು!"

"ನಾನೀಗ ಏನು ಮಾಡಲಿ?" ನಡುಗಿದರು ಸಾಂಬಶಿವ.

ಅವಿನಾಶ ಕಿಸೆಯಿಂದ ಪೆನ್ನು-ಕಾಗದ ತೆಗೆದು ತನಗೆ ಪರಿಚಿತರಾದ, ಈಗ ಬೆಂಗಳೂರಿನಲ್ಲಿ ನೆಲೆಸಿದ ಮಾನಸಿಕ ತಜ್ಞನ ಹೆಸರು-ವಿಳಾಸ ಬರೆದು ಅವರ ಕೈಲಿರಿಸಿದ. ಇನ್ನೊಂದು ಕ್ಕಾಗದದಲ್ಲಿ ಇಂಗ್ಲೀಷಿನಲ್ಲಿ ಏನೋ ಗೀಚಿದ.

"ಇದನ್ನು ನಾನು ಕೊಟ್ಟಿದ್ದೇನೆ ಅಂತ ಅವರಿಗೆ ತಿಳಿಸಿ ಕೊಡಿ. ನಿಮ್ಮ ಮಗನ ರೋಗವನ್ನು ಖಂಡಿತ ಗುಣಪಡಿಸಬಲ್ಲರು. ನಾಳೆಯೇ ಕರೆದೊಯ್ಯಿರಿ. ಅವನ ಆಘಾತಕ್ಕೆ ಆದಷ್ಟು ಬೇಗ ಚಿಕಿತ್ಸೆ ಬೇಕು."

ಸಾಂಬಶಿವ ಕಣ್ಣೀರು ಒರೆಸಿಕೊಂಡರು. "ನಿಮ್ಮಂತೆ ನಮಗೆ ಯಾರೂ ಮಾರ್ಗದರ್ಶನ ಮಾಡಲಿಲ್ಲ ಡಾಕ್ಟರೇ. ಭೂತಚೇಷ್ಟೆ ಅಂದುಕೊಂಡಿದ್ದೆವು. ಮಾನಸಿಕ ರೋಗವಾದರೆ ಆಗಲಿ, ಈ ಚಿತ್ರಹಿಂಸೆಯಿಲ್ಲದೆ ಅವನು ಗುಣವಾದರೆ ಸಾಕು." ಬಗ್ಗಿ ಅವನ ಪಾದಸ್ಪರ್ಶ ಮಾಡಿದರು. "ನನಗಿಂತ ನೀವು ಕಿರಿಯರು. ಆದರೂ ಈ ಸಮಯದಲ್ಲಿ ದೇವರಂತೆ ಬಂದಿರಿ. ನಿಮಗೆ ನೂರು ನಮಸ್ಕಾರ!"

"ಹುಡುಗನಿಗೆ ಗುಣವಾದ ಮೇಲೆ ನನಗೊಂದು ಕಾಗದ ಹಾಕಿರಿ. ತೆಗೆದುಕೊಳ್ಳಿ, ನನ್ನ ವಿಳಾಸ ಇಲ್ಲಿದೆ."

ಅಷ್ಟು ಹೊತ್ತಿಗೆ ಹೊರ ಚಪ್ಪರದಲ್ಲಿ ಡೋಲು, ಚಂಡೆ, ತಮ್ಮಟೆಗಳ ಸದ್ದು ಕೇಳಿಸಿತು. 'ದೇವಿ ಬಂದಳು' ಎನ್ನುತ್ತ ಅಲ್ಲಿ ಸೇರಿದವರು ಓಡಿದರು ಹೊರ ಚಪ್ಪರಕ್ಕೆ. ರಾಜಣ್ಣನೂ ಓಡಿದ. ಕೆಂಡದ ಮುಂದೆ ಕೆಲವೇ ಮಂದಿ. ಪ್ರಜ್ಞೆ ತಪ್ಪಿದ ಹುಡುಗನ ಮೈತುಂಬಾ ಕುಂಕುಮದ ಓಕುಳಿ.

"ತಗೋ ನಿನ್ನ ಮಗೂನ್ನ" ಕುಳಿತವನು ಗರ್ಜಿಸಿದ ಅವನ ತಾಯಿಯತ್ತ ತಿರುಗಿ, "ದೇವಿ ಬಂದಿದ್ದಾಳೆ, ಅವಳ ದರ್ಶನ ಪಡೆದು ಪಾದ ಮುಟ್ಟಿಸಿ ಪ್ರಸಾದ ತೆಗೆದುಕೋ."

ಟೋಣಪರು ಕಂಬದ ಹಗ್ಗವನ್ನು ಸಡಿಲಗೊಳಿಸಿ ಹುಡುಗನನ್ನು ಹೊತ್ತು ತಂದು ಮಲಗಿಸಿದರು ತಾಯಿಯೆದುರು. ಅವನಿಗಿನ್ನೂ ಪ್ರಜ್ಞೆ ಮರಳಿರಲಿಲ್ಲ. ಮೈಮೇಲೆ ಕೆಂಪು ಬಾಸುಂಡೆ, ತೊಡೆಯ ಕಾದ ಬರೆ ನೋಡಿ ತಂದೆ-

ತಾಯಿ ಎದೆಯೊಡೆದುಕೊಂಡರು. ಅವಿನಾಶ ಸಮಾಧಾನಪಡಿಸಬೇಕಾಯಿತು ಇಬ್ಬರನ್ನೂ.

ದೇವಿ ವೇಷ ಧರಿಸಿದ ಕಿಶೋರನಿಗೆ ಹದಿನೈದು ಅಥವಾ ಹದಿನಾರು ವರ್ಷವಿರಬಹುದು. ಇನ್ನೂ ಕಿರುಮೀಸೆ ಮೂಡುವ ಕಾಲ. ಹೆಣ್ಣಿಗಿಂತಲೂ ಹೆಚ್ಚಿನ ಅಂದದ ಚೆಂದದ ಮುಖ. ಅಚ್ಚ ಬಿಳಿ ಬಣ್ಣ, ಎತ್ತರದ ನಿಲುವು. ದೇವಿಯ ಮೂರ್ತಿಯಂತೆ ಅಷ್ಟೇ ಸೊಗಸಾಗಿ ಮಾಡಿದ ಶೃಂಗಾರ. ಕೆಂಪು ಜರತಾರೀ ಸೀರೆ, ಅದಕ್ಕೊಪ್ಪುವ ರವಕೆ, ಮೇಲಕ್ಕೆತ್ತಿಕಟ್ಟಿದಂತೆ ತೋರುವ ಕೃತಕ ಕುಚದ್ವಯಗಳು–ಇವಿಷ್ಟು ದೇವಿಯ ಉಡುಪು. ಕುತ್ತಿಗೆಗೆ ಹವಳದ ಸರ, ಮುತ್ತಿನ ಹಾರ, ಕರಿಮಣಿ ಪದಕ ; ತೋಳಬಂದಿ, ಸೊಂಟಪಟ್ಟಿ, ನೆತ್ತಿ ಎಳೆ, ಹೊಳೆಯುವ ಮುತ್ತಿನ ಓಲೆ, ಕಿವಿಯಿಂದ ಕಿವಿಗೆ ಎಳೆದ ಮುತ್ತಿನ ಎಳೆಯ ಚೈನು, ಮೂಗುತಿಯ ಥಳಕು, ಕಾಲಿಗೆ ಬೆಳ್ಳಿ ನೂಪುರ, ಮದರಂಗಿ ಹಚ್ಚಿದ ಬೆರಳುಗಳಿಗೆ ಕಲ್ಲಿನುಂಗುರ–ಇದು ಆಭರಣಗಳ ವೈಖರಿ! ಮಂದಾರ, ಸೇವಂತಿಗೆ, ಜಾಜಿಮಲ್ಲಿಗೆ ಮುಡಿದ ಜಡೆಮಾಲೆ. ಓ ಹೆಣ್ಣನ್ನೂ ಮೀರಿಸುವ ಅಪರೂಪದ ರೂಪರಾಶಿ! ವೇಷ ತೊಟ್ಟವನು ಹುಡುಗಿಯೇ ಎಂಬ ಅನುಮಾನ. ಆದರೆ ಹುಡುಗಿ ಅಲ್ಲ! ಇಲ್ಲಿ ಹುಡುಗ ದೇವಿಯಂತೆ ವೇಷ ಧರಿಸಿ ಕುಣಿಯುವುದೇ ಒಂದು ವಿಶೇಷ!

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಇಲ್ಲಿ ದೇವಿಯ ಬದಲಾವಣೆ. ಹದಿನೆಂಟು ವರ್ಷದೊಳಗಿನ ಹುಡುಗರು ಮಾತ್ರ ದೇವಿಯ ಪಾತ್ರಕ್ಕೆ ಅರ್ಹರು. ಮೇಲ್ವಿಚಾರಕರು, ಬಹಳ ಕಟ್ಟುನಿಟ್ಟಾಗಿ ಇದನ್ನು ಪಾಲಿಸುತ್ತಿದ್ದಾರೆ. ಕುಣಿಯುವ ದೇವಿಯನ್ನು ನೋಡುವುದು ಕಣ್ಣಿಗೊಂದು ಹಬ್ಬ. ಹಿಮ್ಮೇಳದವರೊಂದಿಗೆ ದೇವಿ ಮನೆಯೊಳಗಿನಿಂದ ಹೊರಚಪ್ಪರಕ್ಕೆ ಆಗಮಿಸುತ್ತಾಳೆ. ಹಿಮ್ಮೇಳದೊಂದಿಗೆ ಹೊಂದಿಕೊಳ್ಳುತ್ತವೆ ಅವಳ ಹೆಜ್ಜೆಗತಿ. ಒಂದು ಬಾರಿ ತುಂಬಿದ ಸಭೆಯನ್ನು ನೋಡಿ ಅಭಯಹಸ್ತವನ್ನೆತ್ತಿ ನಗುತ್ತಾಳೆ. ತುಟಿಯಂಚಿನಲ್ಲಿ ಮಿಂಚುವ ನಗು ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಅನಂತರ ಕುಣಿಯುತ್ತ ಚಪ್ಪರದ ಸುತ್ತಲೂ ಒಂದು ಪ್ರದಕ್ಷಿಣೆ. ಕುಣಿತದ ಗತಿ ಏರುತ್ತ ದೇವಿ ಕಟ್ಟೆ ಏರಿ ನೆಲ ಅದುರುವಂತೆ ಕಾಲಪ್ಪಳಿಸಿ ಹಾವಭಾವದೊಂದಿಗೆ ನರ್ತಿಸಿ ಕೈಯಲ್ಲಿರುವ ಕತ್ತಿಯೊಂದಿಗೆ ಕೆಳಗೆ ಹಾರಿ, ಜನರನ್ನು ಹೆದರಿಸುವಂತೆ ಕತ್ತಿಯೊಡನೆ ಸೆಣಸಾಡುತ್ತ ಕುಣಿದು ಅದನ್ನು ಅಲ್ಲೇ ಒಗೆದು ಪುನಃ ಕಟ್ಟೆ ಏರುತ್ತಾಳೆ. ಹಿಮ್ಮೇಳದ ವಾದ್ಯ ಒಮ್ಮಿಂದೊಮ್ಮೆಲೆ ಸ್ತಬ್ಧ. ದೇವಿ ಆಗ ನಿಲ್ಲುವ ಭಂಗಿ ಷಂಡ–ಭಂಡರನ್ನು ತುಂಡರಿಸಲು ಸಿದ್ಧಳಾಗುವ ಕಾಳಿಯಂತೆ!

ಡೋಲು, ತಮ್ಮಟೆ, ವಾದ್ಯಘೋಷಗಳ ಮಧ್ಯೆ ದೇವಿಯ ನೃತ್ಯ ಮುಗಿದ ನಂತರ ದೇವಿ ತನ್ನ ಬಲಬೆರಳಿನಿಂದ ತನಗಿಷ್ಟಬಂದವರನ್ನು ಆರಿಸಿ ಹತ್ತಿರ

ಕರೆಯುತ್ತಾಳೆ. ಇಲ್ಲಿ ಬರುವವರು ಭೂತ-ಪ್ರೇತ ಹಿಡಿದವರು, ಮಾಟ-ಮಂತ್ರಕ್ಕೊಳಗಾದವರು, ದೀರ್ಘಕಾಯಿಲೆಯಿಂದ ನರಳುವವರು, ಆರ್ಥಿಕ ಕಷ್ಟದಲ್ಲಿ ಇರುವವರು... ದೇವಿ ಅವರ ತಲೆಯ ಮೇಲೆ ತನ್ನ ಮದರಂಗಿ ಹಚ್ಚಿದ ಪಾದವಿರಿಸಿ ನಿಂತು ಅವರ ಕಷ್ಟಪರಿಹಾರ ಮಾಡುತ್ತಾಳೆ.

ಕುಣಿಯುತ್ತ ಬಂದ ದೇವಿ ಕಟ್ಟೆ ಏರಿ ಬಲಹೆಬ್ಬೆರಳನ್ನೆತ್ತಿ ಚಪ್ಪರದಲ್ಲಿ ಕುಳಿತ ಜನರತ್ತ ದೃಷ್ಟಿಹಾಯಿಸಿದ್ದಾಳೆ. ಕೆಂಗಣ್ಣು ಬಿಡುತ್ತ ಅವಿನಾಶನನ್ನು ನೋಡುತ್ತಿದ್ದಾಳೆ. "ಬಾ ಇಲ್ಲಿ..." ಹೂಂಕಾರದೊಂದಿಗೆ ಮೊದಲು ಅವನಿಗೆ ಆಜ್ಞೆ! ಕುಳಿತವರು "ಪುಣ್ಯಾತ್ಮ! ಮೊದಲ ಕೃಪೆ ಇವನಿಗೇ ದೊರೆಯಿತು" ಎಂದು ಲೊಚಗುಟ್ಟಿದರು. ಅವಿನಾಶನಿಗೆ ಅಚ್ಚರಿ. ಅವನು ಬಂದದ್ದು ರಾಜಣ್ಣನಿಗಾಗಿ, ಪ್ರಶ್ನೆ ಕೇಳುವುದಕ್ಕಲ್ಲ. ಎಲ್ಲೋ ತನ್ನ ಉಡುಪು, ಗಂಭೀರ ನಿಲುವು ನೋಡಿ ಹತ್ತಿರ ಕರೆದಿರಬೇಕು. ಎಷ್ಟಾದರೂ ಇಲ್ಲಿಯೂ ಪ್ರಭಾವ ಮೊದಲು.

ಅವನು ನಿಧಾನವಾಗಿ ಎದ್ದು ದೇವಿಯ ಹತ್ತಿರ ಬಂದು ನಿಂತ, ಪರೀಕ್ಷಾರ್ಥಿಯಂತೆ ದಿಟ್ಟಿಸಿದ ದೇವಿಯನ್ನು. ಪಾಪ, ಇನ್ನೂ ಲೋಕದ ಮುಖವನ್ನೂ ಕಾಣದ ಎಳೆ ವಯಸ್ಸು. ಈ ವಯಸ್ಸಿನಲ್ಲಿ ಸುಖವಾಗಿ ಉಂಡುಟ್ಟು ನಲಿದಾಡುವುದನ್ನು ಬಿಟ್ಟು ಈ ವೇಷ ಧರಿಸಿ ನಟಿಸುವ ಗ್ರಹಚಾರ ಇವನಿಗೇಕೆ ಬಂದಿತು? ಎಂತಹ ಸುಂದರ ಪಾದ! ಯಾರ ಮಗನೋ? ವೇಷ ಕಳಚಿದ ಮೇಲೆ ಹೇಗಿರಬಲ್ಲ? ಮುಂದೆ ಇವನ ಜೀವನದ ಗತಿಯೇನು?

ಪ್ರಶ್ನೆಯ ಅಲೆಗಳು ಏಳುತ್ತಿದ್ದಂತೆ ದೇವಿ ಅವನ ತಲೆ ಮೇಲೆ ತನ್ನ ಪಾದವನ್ನಿಡಲು ಕಾಲನ್ನೆತ್ತಿದ್ದಳು... ಅವನು ಹಿಂದೆ ಸರಿದು ಎದೆ ಸೆಟೆಸಿ ನಿಂತ. ಭಕ್ತಿಭಾವದಿಂದ ವಿನೀತವಾಗಿ ಕೈಜೋಡಿಸಲಿಲ್ಲ, ಅಡ್ಡಬೀಳಲಿಲ್ಲ. ದೇವಿ ಹೂಂಕಾರ ಮಾಡಿದಳು.

"ಎಲೈ ನರಶ್ರೇಷ್ಠನೇ, ನನ್ನ ಪಾದಧೂಳಿ ನಿನ್ನ ನೆತ್ತಿಗೆ ಸಿಗಲು-ಸಾವಿರ ಜನ್ಮದ ಪುಣ್ಯ ಬೇಕು. ನೀನಾರು ಎನ್ನುವುದು ನನಗೆ ಮಾತ್ರ ಗೊತ್ತು. ನನ್ನನ್ನು ಧಿಕ್ಕರಿಸಿ ಉದ್ಧಟತನದಿಂದ ದೂರ ನಿಂತೆಯಲ್ಲ... ಬಾ ಹತ್ತಿರ."

ಅವಿನಾಶ ಮಿಸುಕಾಡದೆ ಕೈಕಟ್ಟಿ ನಿಂತು ಮುಗುಳ್ನಗೆ ನಕ್ಕ. ಪ್ರತಿಯಾಗಿ ದೇವಿಯೂ ನಕ್ಕಳು. ನಿಂತ ಭಂಗಿಯನ್ನು ಬದಲಿಸಿ ಗಿರ್ರನೆ ಒಮ್ಮೆ ಕೈಯಲ್ಲೊಂದು ಕನ್ನಡಿ ಎತ್ತಿಕೊಂಡಳು. ಅರೆ! ಆಗ ಅವಳ ಬಳಿ ಇಲ್ಲದ ಕನ್ನಡಿ ತಿರುಗುವಾಗ ಎಲ್ಲಿಂದ ಕೈಗೆ ಬಂದಿತೋ? ಜನರೆಲ್ಲ 'ನಮೋ ನಮೋ' ಎಂದರು.

"ನಿನ್ನ ಮೇಲೆ ಅನುಕಂಪ ತೋರಿಸಿದ್ದೇನೆ, ವತ್ಸಾ! ಇದೋ ಕನ್ನಡಿ. ಇದರಲ್ಲಿ ನನಗೆಲ್ಲಾ ಕಾಣಿಸುತ್ತಿದೆ. ನಿನ್ನ ಮನೆಗೆ ಎರಡು ಬಾಗಿಲು..."

"ಅಲ್ಲ, ಮೂರು ಬಾಗಿಲು."

"ಒಂದು ಬಾಗಿಲನ್ನು ಮುಚ್ಚಿದ್ದರಿಂದ ಎರಡೇ ಬಾಗಿಲು! ಕೃಶಕಾಯಳಾದ ನಿನ್ನ ಹೆಂಡತಿ ಯಾವುದೋ ಕಾಣದ ರೋಗದಿಂದ ನರಳುತ್ತಿದ್ದಾಳೆ."

"ಇಲ್ಲ, ಅವಳಿಗೆ ರೋಗವೂ ಇಲ್ಲ, ಬಾಧೆಯೂ ಇಲ್ಲ. ನನಗಿಂತ ತೂಕದಲ್ಲಿ ಜಾಸ್ತಿಯಿದ್ದು ದಪ್ಪವಾಗಿದ್ದಾಳೆ. ನಿನ್ನ ಹಾಗೇ ಚೆಂದ!"

"ಗೊತ್ತು ನನಗೆ. ರೋಗ ಏನೆಂದು ನೀನರಿಯೆ, ವತ್ಸಾ. ನಿನಗಂತೂ ನಿನ್ನದೇ ಆರ್ಥಿಕ ಕಷ್ಟ, ಚಿಂತೆ ಅಧಿಕ."

"ಇಲ್ಲ, ನಿನ್ನ ಸಕಲ ಪರಿವಾರ, ಬಣ, ಗಣಗಳನ್ನು ಸಾಕುವ ತಾಕತ್ತು ನನಗಿದೆ!"

ದೇವಿಯ ಮುಖ ಓರೆಯಾಯಿತು. ಕನ್ನಡಿಯನ್ನು ತಿರುಗಿಸಿ ಭೂಮಿ ಅದುರುವಂತೆ ಕುಣಿದಳು. ಡೋಲು-ತಮ್ಮಟೆಗಳ ಭೀಕರ ಧ್ವನಿ ಕುಳಿತವರ ಎದೆ ನಡುಗಿಸಿತು. ದೇವಿ 'ಹೋ' ಎಂದು ಆರ್ಭಟಿಸಿದಳು.

"ಅಪಚಾರ.... ಇದು ನನಗೆ ಅಪಚಾರ! ಎಲೈ ನರಾಧಮನೇ, ಇಲ್ಲಿಗೆ ಯಾಕೆ ಬಂದೆ?"

"ನನ್ನ ಸ್ನೇಹಿತನಿಗಾಗಿ ಬಂದೆ."

"ನನ್ನನ್ನು ಪರೀಕ್ಷಿಸಲು ಬಂದಿದ್ದೀಯೋ?"

"ಅಗತ್ಯವೆನಿಸಿದರೆ ಪರೀಕ್ಷಿಸೋಣ ಎಂದೆನಿಸಿದೆ."

ದೇವಿ ಇನ್ನೂ ಜೋರಾಗಿ ಅಬ್ಬರಿಸುತ್ತ ಕುಡಿಗಣ್ಣಿನಿಂದ ನೋಡಿದಳು, ಕಾಲಪ್ಪಳಿಸಿದಳು. ಗಿರ್ರನೆ ತಿರುಗಿದಳು. "ಹೋ, ಯಾರಿದ್ದೀರಿ ಅಲ್ಲಿ? ಇವನ ಕತ್ತು ಹಿಡಿದು ನೂಕಿ ಹೊರಗೆ ಹಾಕಿ...."

ರಾಜಣ್ಣ ದಿಗ್ಗನೆ ಎದ್ದು ಓಡಿ ಬಂದು ದೇವಿಯ ಎರಡೂ ಪಾದಗಳನ್ನು ಭದ್ರವಾಗಿ ಹಿಡಿದುಕೊಂಡ. "ಅಮ್ಮಾ ತಾಯೇ, ನಿನಗೆಲ್ಲಾ ತಿಳಿದಿದೆ. ನಿನ್ನ ಪರೀಕ್ಷೆಗಾಗಿ ಬಂದಿಲ್ಲ. ನನಗಾಗಿ ಕರೆದುಕೊಂಡು ಬಂದಿದ್ದೆ. ನಾನೇ ಎಳೆದೊಯ್ಯುತ್ತೇನೆ."

"ಏಯ್!... ನೀನೂ ನನ್ನನ್ನು ಪರೀಕ್ಷಿಸಲು ಬಂದಿದ್ದೀಯಾ?"

"ಇಲ್ಲ ತಾಯೀ, ನಿನಗೆಲ್ಲ ತಿಳಿಯುತ್ತದೆ. ನಾನು ನನ್ನದೇ ಕಷ್ಟಪರಿಹಾರಕ್ಕೆ ಬಂದವನು."

"ಎಲ್ಲೆಲ್ಲೊ ತಿರುಗಿ ಕೊನೆಗೆ ನನ್ನ ಬಳಿ ಬಂದಿದ್ದೀಯಲ್ಲವೇ?" ಅವನ ತಲೆ ಮೇಲೆ ಪಾದ ಊರಿದ ದೇವಿ ಗರ್ಜಿಸಿದಳು. "ನಿನ್ನ ಕಷ್ಟ ಗೊತ್ತು ನನಗೆ. ಯಾರೋ ಅಲ್ಲಿ, ಮೊದಲು ಬಂದವನನ್ನು ನೂಕಿ ಹೊರಗೆ."

ನೂಕಿ ಕಳುಹಿಸುವ ಅಗತ್ಯವಿರಲಿಲ್ಲ. ಅವಿನಾಶ ತಾನೇ ಕಾಲಪ್ಪಳಿಸುತ್ತ ಹೊರಗೆ ನಡೆದ. ದೇವಿ ಹಿಂದಿನಿಂದ ಗಹಗಹಿಸಿ ನಕ್ಕಳು. "ಮುಠ್ಠಾಳ!

ನಿನ್ನಂತಹ ನೂರು ಜನರನ್ನು ಕಂಡಿದ್ದೇನೆ. ಎಳ್ಳೈ ಭಕ್ತಾ !" ಅವಳ ಕರುಣೆಯ ದೃಷ್ಟಿ ರಾಜಣ್ಣನತ್ತ ಹೊರಳಿತು. "ತುಂಬಾ ಕಷ್ಟ ಅಲ್ಲವೆ?"

"ಹೌದು ತಾಯೀ, ಒಡಹುಟ್ಟಿದ ಅಣ್ಣ ನನಗೇನೋ ಮಾಟ..."

"ಎಲ್ಲಾ ತಿಳಿದಿದೆ ನನಗೆ. ಅದೇ ನಿನಗೆ ಬೇಸರ" ಮಾತಿನ ಎಳೆ ಮೇಲೆ ದೇವಿ ಅದನ್ನೇ ಎಳೆದಳು, "ಒಳಹೊರಗೆಲ್ಲಾ ತೊಂದರೆ. ನೀರು... ಆಗಸ ಹೇಗೋ ಏನೋ. ಇಟ್ಟಿದ್ದು ಇಲ್ಲಿ, ತೆಗೆದದ್ದು ಅಲ್ಲಿ. ಮನುಷ್ಯನಿಗೆ ಒಂದು, ಭೂತಕ್ಕೆ ಎರಡು." ದೇವಿ ಕನ್ನಡಿ ನೋಡುತ್ತ ಅಂದಳು. "ಹಿಂದಿಲ್ಲ-ಮುಂದಿಲ್ಲ, ಮೇಲಿಲ್ಲ ಕೆಳಗಿಲ್ಲ. ಮನೆಯ ಪೂರ್ವಬಾಗಿಲಲ್ಲಿ ಪಶ್ಚಿಮದ ತುದಿಯಲ್ಲಿ ಉತ್ತರದ ದೆಸೆ. ಭಕ್ತಾ, ಬೇರೆ ಮನೆ ಕಟ್ಟಿಸು."

ಹೊರಗೆ ನಿಂತ ಅವಿನಾಶ ಕೈ ಹಿಸುಕಿಕೊಂಡ. ಇವೆಲ್ಲ ಅರ್ಥವಿಲ್ಲದ ಅಸಂಬದ್ಧ ಮಾತುಗಳು. ಅರ್ಥವಿಲ್ಲದ್ದು ಹೆಚ್ಚು ನಿಗೂಢ!

"ನನ್ನದು ಹೊಸ ಮನೆ ಕಟ್ಟಿ ಮೂರು ವರ್ಷ ಆಗಿಲ್ಲ."

"ಗೊತ್ತು ನನಗೆ. ಬೇರೆ ಮನೆ ಎಂದರೆ ಇನ್ನೊಂದು ತುಂಡು ಸೇರಿಸಿ ಆಕಾರ ಬದಲು ಮಾಡು. ಗ್ರಹಚಾರ ಪರಿಹಾರಕ್ಕೆ ಇದೇ ಆಶ್ರಮದಲ್ಲಿ ಹೋಮ ಮಾಡಿಸು. ದೇವಿಯ ನೆರಳಿನಲ್ಲಿ ನಿನಗೂ ಮನೆಯವರಿಗೂ ಒಳಿತಾಗಲಿ. ಹಿಡಿ ಪ್ರಸಾದ." ದೇವಿ ಒಂದು ಮುಷ್ಟಿ ಕುಂಕುಮವನ್ನು ರಾಜಣ್ಣನ ಕೈಗೆ ಹಾಕಿದಳು. "ಕಾಣಿಕೆ ನೂರು ರೂಪಾಯಿ ಹಾಕಿ ಹೋಗು!"

ರಾಜಣ್ಣ ಜೇಬನ್ನು ತಡಕಾಡಿ ಹೇಗೋ ನೋಟುಗಳನ್ನು ಒಂದು ಮಾಡಿ ದೇವಿಯ ಪದತಲದಲ್ಲಿರಿಸಿ ಹೊರಗೆ ನಡೆದ. ಹಿಂದಿನಿಂದ ಡೋಲು-ತಮ್ಮಟೆಗಳ ಸದ್ದು. ದೇವಿ ಬೇರೆಯವರನ್ನು ಹತ್ತಿರ ಕರೆಯುತ್ತಿದ್ದಾಳೆ. ಚಪ್ಪರದ ಇನ್ನೊಂದು ಪ್ರವೇಶದ್ವಾರದಿಂದ ಸಾಂಬಶಿವ, ಅವರ ಹೆಂಡತಿ ಮತ್ತು ಮಗ ದೇವಿಗೆ ನಮಸ್ಕಾರ ಮಾಡುತ್ತ ಒಳಗೆ ಬರುತ್ತಿದ್ದಾರೆ.

"ಹೋಮ ಮಾಡಿಸ್ತೀರಾ? ನಿಮ್ಮ ಹೋಮಕ್ಕೆ ಐನೂರು ರೂಪಾಯಿ ಆಗಬಹುದು." ರಾಜಣ್ಣ ಹೊರ ಅಂಗಳದಲ್ಲಿ ನಿಂತ ಅವಿನಾಶನನ್ನು ಕೂಡಿಕೊಳ್ಳುತ್ತಿದ್ದಂತೆ ಒಬ್ಬಾತ ಬಂದು ಕೇಳಿದ. ಅವನ ಕೈಯಲ್ಲಿ ಒಂದು ಪುಸ್ತಕವಿತ್ತು.

ಹೋಮಕ್ಕೆ ಐದು ನೂರು ರೂಪಾಯಿ ! ಎಲ್ಲಿಂದ ತರಲಿ? ಸಹಜವಾಗಿ ಅವಿನಾಶನನ್ನು ನೋಡಿದ. ಅಲ್ಲಿ ಯಾವ ಭಾವನೆಗಳೂ ಇರಲಿಲ್ಲ.

"ಒತ್ತಾಯ ನಮ್ಮದಲ್ಲ. ಊರಿಗೆ ಹೋದ್ಮೇಲೆ ತಿಳಿಸಿದರೆ ಸಾಕು. ದೇವಿ ಸನ್ನಿಧಿಯಲ್ಲಿ ಮಾಡುವ ಹೋಮಕ್ಕೆ ವಿಶೇಷ ಫಲಪ್ರಾಪ್ತಿಯಿದೆ."

"ನೆನಪಿರಲಿ" ಇನ್ನೊಬ್ಬ ಟೊಣಪನಂತಿದ್ದ ಗಂಡಾಳು ಚಪ್ಪರದ ಹಿಂಭಾಗದಿಂದ ಬಂದು, "ಇವತ್ತು ದೇವಿಯ ಎದುರಿನಲ್ಲಿ ಉದ್ಧಟತನದ ಪರಮಾವಧಿಯಾಗಿದೆ. ಹಾಲಳ್ಳಿಯ ವಿಷಯದಲ್ಲಿ ಹಾಗೆ ಹೀಗೆ ಅಂತ ಅಪಪ್ರಚಾರ ಮಾಡಿದರೆ ಪರಿಣಾಮ ನೆಟ್ಟಗಾಗದು. ತೆಪ್ಪಗೆ ಬಾಯಿ ಮುಚ್ಚಿಕೊಂಡಿರಿ, ಕೇಳಿಸಿತಲ್ಲವೇ?" ಎಂದ.

ತನ್ನ ತಲೆ ಮೇಲಿನ ಧೂಳನ್ನು ಒರೆಸಿಕೊಳ್ಳುತ್ತ ರಾಜಣ್ಣ ಇಬ್ಬರನ್ನೂ ನೋಡಿದ. ಅವಿನಾಶನಿಗೆ ತಡೆಯಲಾರದ ನಗು. ಅದೇ ಸಮಯದಲ್ಲಿ ಸಾಂಬಶಿವ ದೇವಿಯ ಪಾದಧೂಳಿಯನ್ನು ನೆತ್ತಿಗೆ ಒತ್ತಿಕೊಳ್ಳುವುದು ಕಾಣಿಸಿದಾಗ ವ್ಯರ್ಥ ಆಲಾಪ. ಮನೋರೋಗಿಗೆ ನಾಳೆ ಮತ್ತೆ ಅದೇ ಶಿಕ್ಷೆ. ಹುಡುಗನನ್ನು ಜೀವಂತ ದಹನ ಮಾಡುತ್ತಿದ್ದಾರೆ. ಅವಿನಾಶ ಇಲ್ಲಿಯ ದೇವಿ, ಹೋಮ, ಜನರ ದೌರ್ಬಲ್ಯ, ಜನರನ್ನು ಶೋಷಿಸುವ ವಂಚಕರನ್ನು ಪ್ರತಿಭಟಿಸಲು ಹೆಜ್ಜೆ ಮುಂದಿರಿಸಿದ. ಆದರೆ ಇಲ್ಲೀಗ ಅವನೊಬ್ಬನೇ. ಮನದ ಬಲ ದೇಹಕ್ಕಿಲ್ಲ. ತನ್ನ ಮಾತನ್ನು ಆಲಿಸುವ ಬುದ್ಧಿ ಯಾರಿಗೂ ಇಲ್ಲ. ತನ್ನಂಥವರು ಒಬ್ಬೊಬ್ಬರು ತಲೆಯೆತ್ತಿದರೂ ಸಾಕು. ಅದೆಷ್ಟೋ ಅಂಧಶ್ರದ್ಧೆ, ಮೂಢನಂಬಿಕೆಯಿಂದ ಜನರನ್ನು ಪಾರು ಮಾಡಬಹುದು.

ತುಸು ಕೋಪದಿಂದ ರಾಜಣ್ಣನ ಬೆನ್ನ ಮೇಲೆ ಗುದ್ದಿದ, "ನಾನಂತೂ ಉದ್ಧಟ, ದುಷ್ಟ ಅಂದುಕೋ. ಹೋಗು, ಐನೂರು ಕೊಟ್ಟು ಪಾಪ ಪರಿಹಾರ ಮಾಡಿಕೋ. ಆನಂತರ ಬೇರೆ ಎಲ್ಲಿಯಾದರೂ ಅಂಜನ ಇಡಿಸಿ ಕೇಳಿಕೋ. ಆವತ್ತು ಹೇಳಿದ್ದಿ, ಮಾಟಕ್ಕೆ ಪರಿಹಾರ ಮಾಡದಿದ್ದರೆ ನಮ್ಮ ಕೈಗೆ ಕರಟಕೋಲು ಗತಿ ಎಂದು. ಈಗ ಆಗ್ತಾ ಇರೋದು ಅದೇ, ಸಹೋದರನ ವೈರತ್ವ ಕಟ್ಟಿಕೊಂಡು ಸಿಕ್ಕಿದ ಕಡೆ ನೀರಿನಂತೆ ಹಣ ಖರ್ಚು ಮಾಡ್ತಾ ಇದ್ದೀ. ಹೀಗೆ ಇನ್ನೂ ಮುಂದುವರಿದರೆ ನಿನ್ನ ನೌಕರಿ ಖೋತಾ, ಮನಃಶಾಂತಿ ಹಾಳು, ತೋಟ ಹಡೀಲು. ನೀನು ಹೇಳಿದಂತೆ ಕರಟಕೋಲು ಗತಿ ಖಂಡಿತ!"

ರಾಜಣ್ಣನ ಮನಸ್ಸು ತಿರುಗಣೆಮಡು. ಅವನೊಳಗೆ ಎದ್ದಿದೆ ಬಿರುಗಾಳಿ. ಮನೋರೋಗಿ ಹುಡುಗನಿಗೆ ಕೊಟ್ಟ ಶಿಕ್ಷೆ, ದೇವಿಯ ವಿಚಿತ್ರ ನಗೆ, ವೇಷ ಕುಣಿತ, ಕೇಳಿದ ಕಾಣಿಕೆಯಿಂದ ಅವನ ನಂಬಿಕೆಯೆಲ್ಲಾ ಧೂಳಿಪಟವಾಗಿದೆ. ಎಲ್ಲರೂ ದೂರದ ಬೆಟ್ಟಗಳು, ಒಬ್ಬೊಬ್ಬರದು ಒಂದೊಂದು ರೀತಿ. ತಮ್ಮದೇ ರೀತಿಯಲ್ಲಿ ಧರ್ಮದ ಹೆಸರಿಟ್ಟು ಹಣ ಮಾಡುವ ಬುದ್ಧಿವಂತಿಕೆ. ಇವನ್ನೆಲ್ಲ ತಾನು ಕಿತ್ತೆಸೆದು ತನ್ನ ಮನೋದೌರ್ಬಲ್ಯವನ್ನೂ ಗೆಲ್ಲಬೇಕು, ತನ್ನಿಂದ ಸಾಧ್ಯವೇ?

೧೫

ಮೋಟಾರ್ ಬೈಕ್‌ನಲ್ಲಿ ರಾಜಣ್ಣನನ್ನು ಅವನ ಮನೆಯಲ್ಲಿಳಿಸಿ, ಅಲ್ಲೇ ಮಧ್ಯಾಹ್ನದ ಊಟವನ್ನೂ ತೀರಿಸಿ ಅವಿನಾಶ ಹಿಂದಿರುಗುತ್ತಿದ್ದಾಗ ಸೇವಾಸದನದ ಬಾಗಿಲಿನಲ್ಲಿ ಕಾಣಿಸಿತು ಗಡಿಬಿಡಿಯ ದೃಶ್ಯ. ಬೈಕ್‌ನ್ನು ಅತ್ತ ಹೊರಳಿಸಿ ಒಂದು ಮರದ ಕೆಳಗೆ ನಿಲ್ಲಿಸಿದ. ಆಗಲೇ ಅಲ್ಲಿಗೆ ಎರಡು ಮೋಟಾರ್ ಬೈಕ್, ಎರಡು ಕಾರು, ಒಂದು ಜೀಪು ಬಂದು ನಿಂತಿವೆ.

ಸೇವಾಸದನದ ಡಾಕ್ಟರರ ವಿರುದ್ಧ ಸುಂದರರಾಜ ಕಳುಹಿಸಿದ ದೂರುಪತ್ರದ ತನಿಖೆಗೆ ಅಧಿಕಾರಿಗಳು ಬಂದಿದ್ದಾರೆ ಎಂದು ಕ್ಷಣದಲ್ಲಿ ತಿಳಿದು ಹೋಯಿತು. ಖಾಕಿವಸ್ತ್ರ ಧರಿಸಿದ ಇಬ್ಬರು ಪೊಲೀಸರು, ಬೇರೆ ಕೆಲವರು ನಿಂತಿದ್ದಾರೆ ಹೊರಗೆ. ಹೆಲ್ಮೆಟ್ ಕೈಯಲ್ಲಿ ಹಿಡಿದುಕೊಂಡೇ ಸೇವಾಸದನವನ್ನು ಪ್ರವೇಶಿಸಿದ. ಒಳಗೆ ಇಬ್ಬರು ಅಧಿಕಾರಿಗಳು, ಆರೋಗ್ಯ ಮಂತ್ರಿ, ಮೆಡಿಕಲ್ ಕಾಲೇಜಿನ ಮುಖ್ಯ ಅಧಿಕಾರಿ, ಇನ್ನಿಬ್ಬರು ಡಾಕ್ಟರು, ಸುಂದರರಾಜ ಇವರೆಲ್ಲ ಡಾಕ್ಟರ್ ಮಹಾದೇವರ ತನಿಖೆಯಲ್ಲಿ ಮಗ್ನರಾಗಿದ್ದಾರೆ. ಅವಿನಾಶನನ್ನು ನೋಡಿ ಮುಗುಳ್ನಗೆ ಬೀರಿ ಕೈಕುಲುಕಿದರು. ಪರಸ್ಪರ ನಮಸ್ಕಾರ, ಪರಿಚಯದ ವಿನಿಮಯ.

ತನಿಖೆ ಬಹಳ ಹೊತ್ತಿನಿಂದ ಮುಂದುವರಿಯುತ್ತಿರಬೇಕು, ಮೇಜಿನ ಮೇಲೆಲ್ಲಾ ಕಾಗದಪತ್ರಗಳು ಸಿಕ್ಕಾಪಟ್ಟೆ ಬಿದ್ದಿವೆ. ಒಬ್ಬೊಬ್ಬರದು ಒಂದೊಂದು ಪ್ರಶ್ನೆ. ಡಾ. ಮಹಾದೇವ ಉತ್ತರಿಸುತ್ತಿದ್ದಾರೆ ಶಾಂತಚಿತ್ತದಿಂದ. ಮೆಡಿಕಲ್ ಕಾಲೇಜಿನ ಅಧಿಕಾರಿ ಕೆಲವು ಮುಖ್ಯ ಪತ್ರಗಳನ್ನು ಅವಿನಾಶನ ಕೈಲಿರಿಸಿದರು, "ನೀವೂ ಓದಿ."

ಅವಿನಾಶ ತೆಗೆದು ನೋಡಿದ. "ಬಿ.ಎಸ್‌ಸಿ. ಪ್ರಶಸ್ತಿ ಪತ್ರ, ಸರ್ಕಾರಿ ಆಸ್ಪತ್ರೆಯ ಕಂಪೌಂಡರ್‌ನಾಗಿರುವ ಪ್ರಮಾಣಪತ್ರ, ಇನ್ನೂ ಕೆಲವು ಸಾಕ್ಷ್ಯಪತ್ರಗಳ ಕಟ್ಟು. ನೈಜವನ್ನು ಮರೆಮಾಡಿ ಸುಳ್ಳಿನ ಹೊದ್ದಿಕೆ ಹೊದ್ದ ನಕಲಿ ಕಟ್ಟುಗಳ ಕಂತೆ! ನಕಲಿ ಡಿಗ್ರಿಗಳಿಗೆ, ನಕಲಿ ಕಾಗದಗಳಿಗೆ, ನಕಲಿ ಸಹಿಗಳು!! ಮಹಾದೇವರಲ್ಲಿ ತಳೆದಿದ್ದ ಅನುಮಾನ ದಿಟ. ವೈದ್ಯನೆಂಬ ಸೋಗಿನಲ್ಲಿ ಔಷಧಿ ಕೊಡುತ್ತಿದ್ದ ಸಭ್ಯತೆಯ ಮುಖವಾಡ ಧರಿಸಿದ ಒಬ್ಬ ಸಾಮಾನ್ಯದವ ಈ ಮಹಾದೇವ, ಬಿ.ಎಸ್‌ಸಿ. ಡಿಗ್ರಿಯೂ ಇಲ್ಲದ ದಡ್ಡರಲ್ಲಿ ಜಾಣ! ವೈದ್ಯಕೀಯ ವೃತ್ತಿ ನಡೆಸಲು ಬೇಕಾದ ದೃಢೀಕರಣದ ಕಾಗದದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಹಿ ನಾಪತ್ತೆ. ಮಹಾದೇವರ ಧೈರ್ಯಕ್ಕೆ ಭಲೇ ಅನ್ನಬೇಕು!

"ನೋಡಿದಿರಾ, ಈ ಮನುಷ್ಯನಿಗೆ ಯೋಗ್ಯತೆ ಇಲ್ಲ. ಡಾಕ್ಟರನೆಂಬ ಬಿರುದು ಹಾಕಿಕೊಂಡಿದ್ದಾನೆ. ಒಬ್ಬರು ಅಧಿಕಾರಿ ಅಂದರು, "ನಿಮ್ಮೆಲ್ಲರ ಗಮನಕ್ಕೆ ಬಂದದ್ದು ಒಳಿತಾಯ್ತು, ಇಲ್ಲವಾದರೆ ಹಳ್ಳಿ ಜನರೆಲ್ಲ ಇವನ ಪ್ರಯೋಗಕ್ಕೆ ಬಲಿಗಳು."

"ನನಗನ್ನಿಸುತ್ತೆ, ನಾವೇ ಲೆಕ್ಕಕ್ಕಿಲ್ಲದವರು" ಎಂದರು ಒಬ್ಬ ಡಾಕ್ಟರು ನಗುತ್ತಾ. "ಆರೇಳು ವರ್ಷ ವೈದ್ಯಕೀಯ ಕಲಿತು ಹತ್ತೈವತ್ತು ಸಾವಿರ ಖರ್ಚು ಮಾಡಿ ವಿದೇಶಕ್ಕೂ ಹೋಗಿ ಒದ್ದಾಡಿ ಬರ್ತೇವಲ್ಲ, ಎಲ್ಲಾ ದಂಡ. ಈಗ ನೋಡಿದರೆ ಹಳ್ಳಿ ಮೂಲೆಗೆ ಯಾವ ಡಿಗ್ರಿಯೂ ಬೇಡ."

"ನಿಜ ನಿಜ, ಶಿಕ್ಷಣವಿಲ್ಲದೆ 'ಡಾ' ಎಂಬ ಒಂದು ಬಿರುದು ಸಾಕು ಪ್ರ್ಯಾಕ್ಟೀಸ್ ಮಾಡಲು. ಬಣ್ಣದ ನೀರು ಕೊಟ್ಟರಾಯಿತು."

"ಪ್ರತಿಯೊಬ್ಬ ಕಲಿತ ವೈದ್ಯನೊಂದಿಗೆ ಹತ್ತು ನಕಲಿ ವೈದ್ಯರಿದ್ದಾರಂತೆ ನಮ್ಮ ದೇಶದಲ್ಲಿ. ಖೋಟಾ ನಾಣ್ಯಗಳಿದ್ದಂತೆ" ತಡೆಯಲಾರದೆ ಅಂದ ಅವಿನಾಶ. "ಜನರೂ ಮೂಢರು. ಎಲ್ಲಿ ಕಡಿಮೆ ಬೆಲೆಗೆ ಔಷಧಿ ಸಿಗುತ್ತೋ ಅಲ್ಲಿಗೆ ಕಣ್ಣು ಮುಚ್ಚಿ ಹೋಗ್ತಾರೆ."

"ನಿಜ, ನಮ್ಮ ಈ ನಕಲಿ ವೈದ್ಯರು ಕೊಡುವುದೆಲ್ಲ ಕಲಬೆರಕೆಯ ಔಷಧಿ, ಪರೀಕ್ಷಿಸಿ ನೋಡಿ" ಧ್ವನಿ ಎತ್ತಿದ ಸುಂದರರಾಜ.

ಅಲ್ಲಿರುವ ಔಷಧಿಗಳ ತನಿಖೆಯಾಯಿತು. ನಾರು-ಬೇರು-ಸೊಪ್ಪಿನೊಂದಿಗೆ ಏನೇನೋ ಔಷಧಿಗಳ ಬಾಟಲಿಗಳು. ಎಲ್ಲವನ್ನೂ ಪರೀಕ್ಷಿಸಲಾಯಿತು. ಕೆಲವನ್ನು ಹೆಚ್ಚಿನ ಪರೀಕ್ಷೆಗಾಗಿ ತೆಗೆದುಕೊಂಡರು. ನಕಲಿ ಕಾಗದಗಳೂ ಅಧಿಕಾರಿಗಳ ವಶವಾದವು. ಆದರೆ ಡಾ. ಮಹಾದೇವ ಒಂದಿನಿತೂ ವಿಚಲಿತರಾಗದೆ ಸೌಮ್ಯವಾಗಿ ನಗುತ್ತಿದ್ದಾರೆ.

"ನಿಮ್ಮ ಕಾಗದ, ಡಿಗ್ರಿ ಸರ್ಟಿಫಿಕೇಟ್ ಎಲ್ಲಾ ಪರಿಶೀಲಿಸಲಾಗುತ್ತದೆ." ಪೊಲೀಸು ಅಧಿಕಾರಿ ನುಡಿದ, "ಸದ್ಯ ನಿಮ್ಮನ್ನು ಅರೆಸ್ಟ್ ಮಾಡಿ ಕರೆದೊಯ್ಯುತ್ತೇವೆ."

ಮಹಾದೇವ ಆಗಲೆಂಬಂತೆ ಒಪ್ಪಿಕೊಂಡರು. ಅವರನ್ನು ಮರ್ಯಾದೆಯಿಂದ ಜೀಪಿನಲ್ಲಿ ಕುಳ್ಳಿರಿಸಿದರು ಇಬ್ಬರು ಪೊಲೀಸರು. ಅನಂತರ ಸೇವಾಸದನಕ್ಕೆ ಬೀಗ ಹಾಕಲಾಯಿತು. ಈ ಹೊತ್ತಿನಲ್ಲಿ ಗೋವಿಂದ ಎಲ್ಲಿ ಕಣ್ಮರೆಯಾದನೋ ತಿಳಿಯಲಿಲ್ಲ. ಹೊರಗೆ ಆಗಲೇ ಹಳ್ಳಿ ನೆರೆದಿತ್ತು. ತಮ್ಮೂರಿಗೆ ಬಂದವರು ನಕಲಿ ವೈದ್ಯರೆಂದು ಕೆಲವರಿಗೆ ಅರ್ಥವಾದರೆ ಹೆಚ್ಚಿನವರಿಗೆ ಅವರ ಬಂಧನ ಒಂದು ನಿಗೂಢ ಸಮಸ್ಯೆ.

ಡಾ. ಮಹಾದೇವ ಸುಂದರರಾಜನ ಕೈಕುಲುಕಿ ಮುಗುಳ್ನಗೆ ನಕ್ಕರು. "ಇನ್ನೊಂದು ತಿಂಗಳಲ್ಲಿ ಭೇಟಿ ಆಗೋಣ."

ಜೀಪು, ಕಾರು, ಬೈಕ್‌ಗಳು ನಿರ್ಗಮಿಸಿದವು. ಸೇವಾಸದನದ ಬಾಗಿಲು ಕಾಯುತ್ತ ಮೌನ ತಳೆಯಿತು ಬೀಗ. ಅವಿನಾಶ ಸುಂದರರಾಜನ ಕೈಕುಲುಕಿದ.

"ಯಾರೋ ಹೇಳಿದರೆಂದು ನೀವೂ ನಿರ್ಲಕ್ಷ್ಯ ಮಾಡಿದ್ದರೆ ಈ ನಕಲಿ ವೈದ್ಯ ಇನ್ನೆಷ್ಟು ದಿನ ತನ್ನ ಬೇಳೆ ಬೇಯಿಸುತ್ತಿದ್ದನೋ. ಸದ್ಯ, ಊರ ಜನರ ಅದೃಷ್ಟ ಚೆನ್ನಾಗಿದೆ!

"ನಿಜ ಡಾಕ್ಟರೇ, ನಕಲಿ ವೈದ್ಯರ ವೇಷ ಯಾರಿಗೂ ತಿಳಿಯದು. ಆದರೆ ಡಾ. ಮಹಾದೇವರ ಔಷಧಿಯಲ್ಲಿ ಗುಣಮುಖರಾದವರು ಬಹಳಷ್ಟು ಮಂದಿ ಇದ್ದಾರೆ."

"ಉಗುಳಿ ಉಗುಳಿ ರೋಗ, ಹಾಡಿ ಹಾಡಿ ರಾಗ ಎಂಬಂತೆ ಈತನಿಗೆ ರೋಗಿಗಳನ್ನು ನೋಡಿ ನೋಡಿ ಅನುಭವ! ಅನೇಕ ವರ್ಷಗಳಿಂದ ವಂಚನೆಯಲ್ಲಿ ನಡೆದು ಬಂದ ವೃತ್ತಿ, ಕೈ ಪಳಗಿದೆ. ಗುಣ ಸಿಗದವರು ಎಷ್ಟು ಮಂದಿಯೆಂದು ನಮಗೇನು ಗೊತ್ತು?"

ಅನಂತರ ತಾನು ಹಾಲಳ್ಳಿಗೆ ಹೋಗಿ ಬಂದ ವಿಷಯ ಹೇಳುತ್ತ ಅವಿನಾಶ ಜೋರಾಗಿ ನಗಲಾರಂಭಿಸಿದ. ದೇವಿ ವೇಷ ಧರಿಸಿ ಕುಣಿಯುವ ಹಾಲಳ್ಳಿದೇವಿ. ಗಂಡು ಹೆಣ್ಣಾಗಿ ನಲಿದು ಜನರಿಗೆ ಮೋಡಿ ಹಾಕುವ ಹೊಸ ವೈಖರಿ, ಮಂದಮತಿಗಳ ಶಿರದ ಮೇಲೆ ಪಾದ ಊರಿ ಪ್ರಸಾದ ನೀಡುವ ಗತ್ತು ಎಲ್ಲಾ ಬಣ್ಣಿಸಿದ, "ನೀವೂ ಒಮ್ಮೆ ನೋಡಿ ಬನ್ನಿ."

"ಹಾಲಳ್ಳಿದೇವಿ ವಿಷಯ ಕೇಳಿ ಗೊತ್ತು, ಹೋಗಿಲ್ಲ. ಪ್ರಸಿದ್ಧಿ ಪಡೆದ ದೇವಿಯಂತೆ. ನಿಮಗೆ ಅದರ ಹಿನ್ನೆಲೆ ತಿಳಿದಿರಲಾರದು ಡಾಕ್ಟರೇ. ದೇವಿ ಕಾರ್ಯ ನಡೆಸುವವನು ಉತ್ತರ ಹಿಂದೂಸ್ಥಾನದಿಂದ ಬಂದು ಇಲ್ಲಿ ತಳವೂರಿದ್ದಾನೆ. ಬರುವಾಗ ಅವನ ಕೈಯಲ್ಲಿ ಒಡಕು ಕಾಸಿಗೂ ಗತಿ ಇರಲಿಲ್ಲ."

"ಹಾಗೋ! ಬಂದು ವರ್ಷ ಎಷ್ಟಾಯ್ತಂತೆ?"

"ವರ್ಷದ ಲೆಕ್ಕ ಯಾತಕ್ಕೆ? ಈಗ ಸೊಗಸಾದ ಹಂಚಿನ ಮನೆ, ದೇವಿ ಹೆಸರಿನಲ್ಲಿ ಭೂಮಿ, ತೋಟ ತೆಗೆದುಕೊಂಡು ಹಾಯಾಗಿದ್ದಾನೆ."

"ದೇವರ ಹೆಸರಿನಲ್ಲಿ ಅದನ್ನು ನಡೆಸುವವರಿಗೆ ಹಣದ ಬೆಳೆ."

"ಜನರಿಗೆ ದೇವರು ಅಂದರೆ ಹೆದರಿಕೆ. ನನಗೂ ಇದೆ ಅನ್ನಿ ! ಆದರೆ ಈ ತರಹದ ಮೋಸ, ವಂಚನೆ ನಡೀತಾ ಇರೋದನ್ನ ನೋಡಿದರೆ ಬೇಸರವಾಗುತ್ತೆ."

"ಸ್ವಾಮಿಗಳು, ಬಾಬಾಗಳು, ಸರ್ಪದರ್ಶನದವರು, ಫಕೀರರು, ಒಬ್ಬರೇ ಇಬ್ಬರೇ.... ಅವರವರದೇ ಆಶ್ರಮ ಕಟ್ಟಿಕೊಂಡು ಜನರಿಗೆ ಮೆಚ್ಚಿಗೆಯಾಗುವ ರೀತಿಯಲ್ಲಿ ದಂಧೆ ಮುಂದುವರಿಸಿದ್ದಾರೆ. ಇದನ್ನು ಹ್ಯಾಗೆ ನಿಲ್ಲಿಸೋಣ?"

"ನಿಲ್ಲಿಸುವುದು ಸುಲಭ ಅಂದುಕೊಂಡಿರಾ? ಪ್ರವಾಹಕ್ಕೆ ತಡೆ ಒಡ್ಡಿದರೆ ಅದು ಇನ್ನೂ ರಭಸದಿಂದ ಕೊಚ್ಚಿಕೊಂಡು ಹೋಗುತ್ತದೆ. ನಮ್ಮ ಕಣ್ಣಿಗೆ

ಕಂಡದ್ದನ್ನು ಸತ್ಯ ಮತ್ತು ಸುಳ್ಳಿನ ಒರಗಲ್ಲಿಗೆ ಹಚ್ಚದೆ ಕುರುಡರಂತೆ ಒಪ್ಪಿಕೊಳ್ಳುವ ಜಾಯಮಾನ ನಮಗಿರುವುದರಿಂದಲೇ ದೇವರ ಹೆಸರಿನಲ್ಲಿ ನೂರಾ ಎಂಟು ಅವತಾರಗಳು, ಅವಾಂತರಗಳು! ನಮ್ಮ ಹಳ್ಳಿಗೆ ಕೆಲವು ವರ್ಷಗಳ ಹಿಂದೆ ಒಬ್ಬಳು ಮಾತೆ ಬಂದಿದ್ದಳು, ಶ್ರೀರಾಮನ ಭಕ್ತೆಯಂತೆ. ಅವಳೊಡನೆ ಶಿಷ್ಯ, ಶಿಷ್ಯೆಯರ ಪರಿವಾರ. ಆಂಜನೇಯ ಗುಡಿಯಲ್ಲಿ ಅವರ ಠಿಕಾಣೆ. ಪ್ರತಿದಿನ ಭಜನೆ, ಕೀರ್ತನೆ, ಪ್ರತಿ ಸಾಯಂಕಾಲ ಭಜನೆಯ ಕೊನೆಯಲ್ಲಿ ಮಾತೆಗೆ ಶ್ರೀರಾಮ ಮೈಮೇಲೆ ಬರುತ್ತಿದ್ದ. ಆಗ ನೋಡಬೇಕು ಅವಳ ಮೋಹಕ ರೂಪದ ಆವೇಶ. ಜನರಂತೂ ನೂಕುನುಗ್ಗಲಿನಲ್ಲಿ ಮುಗಿಬಿದ್ದು ಅವಳ ಪಾದಧೂಳಿ ಸ್ವೀಕರಿಸುತ್ತಾ ಇದ್ದರು. ಆ ಸಮಯದಲ್ಲಿ ಹಣ, ಸೀರೆ, ಒಡವೆಗಳನ್ನು ಮಾತೆಗೆ ಕಾಣಿಕೆ ಹಾಕಿದ್ದೇ ಹಾಕಿದ್ದು. ಹದಿನೈದು ದಿನಗಳ ನಂತರ ಮಾತೆ ಪರಿವಾರ ಸಮೇತ ಹಳ್ಳಿಯಿಂದ ಹೊರಡುವಾಗ ಅವಳಿಗೆ ಹನ್ನೆರಡು ಸಾವಿರಕ್ಕೂ ಮೀರಿ ಹಣ ಸಂಗ್ರಹವಾಗಿತ್ತು. ಜನ ಮರುಳರೋ ಜಾತ್ರೆ ಮರುಳೋ! ಆ ಮಾತೆ ಬುದ್ಧಿವಂತಳೋ ಇನ್ನೂ ನಮಗೆ ಅರ್ಥವಾಗಿಲ್ಲ!"

"ನಕಲಿ ವೈದ್ಯನನ್ನು ಹಿಡಿದುಕೊಟ್ಟಂತೆ ಈ ತರಹದ ನಕಲಿ ವೇಷಧಾರಿಗಳನ್ನು ಹಿಡಿಯಲು ಸಾಧ್ಯವಿಲ್ಲವೇ ನಿಮ್ಮಿಂದ?"

ಸುಂದರರಾಜ ಬೆಪ್ಪನಂತೆ ಬೆಟ್ಟದತ್ತ ಕೈಚಾಚಿದ, "ಡಾಕ್ಟರೇ, ಜನರ ಮನೋಭಾವ ಬದಲಾಗದೆ ಇದ್ದರೆ ನಮ್ಮ ಪ್ರಚಾರ ಕೆಸರಿಗೆ ಕಲ್ಲು ಎರಚಿದಂತೆ. ಅರರೆ.... ಹೊತ್ತಾಯ್ತು. ನನ್ನ ಹೊಟ್ಟೆ ಸೇವೆ ಆಗಿಲ್ಲ ಇನ್ನೂ. ಜನತಾಗೃಹದ ಸಬ್ಸಿಡಿ ಹಣ ಬಂದಿದೆಯಂತೆ ಹೋಗಿ ತಗೋಬೇಕು. ಅಂದ್ಹಾಗೆ ಯಾವಾಗ ಆಸ್ಪತ್ರೆ ಕಟ್ಟಡದ ಉದ್ಘಾಟನೆ?"

"ಮಳೆಗಾಲದ ಮೊದಲು ಮಾಡೋಣ ಎಂದ್ಕೊಂಡಿದ್ದೆ. ಆದರೆ ಪೂರ್ತಿ ಕೆಲಸ ಆಗಿಲ್ಲ. ನನ್ನಲ್ಲಿ ಬರುವ ಅರ್ಧದಷ್ಟು ಕೆಲಸಗಾರರು ಗುಡಿಕಟ್ಟುವ ಕೆಲಸಕ್ಕೆ ಹೋಗ್ತಾ ಇದ್ದಾರೆ. ಅದೇ ತಾಪತ್ರಯ" ಅವಿನಾಶ ಬೈಕ್ ಹೊರಡಿಸುತ್ತ ಅಂದ. "ನೀವೂ ನಮ್ಮ ಮನೆ ದಾರಿಯಿಂದಲೇ ಹೋಗಬೇಕು ತಾನೇ? ಬನ್ನಿ, ಅಲ್ಲೀತನಕ ನಿಮ್ಮನ್ನು ಡ್ರಾಪ್ ಕೊಡ್ತೇನೆ."

ಅದೇ ದಿನ ಹಾಲಳ್ಳಿದೇವಿಯ ಮೇಲೆ ಹತ್ತು ಪುಟಗಳ ವಿಮರ್ಶಾತ್ಮಕ ಲೇಖನ ಬರೆದು ಬೆಟ್ಟದ ವಿಗ್ರಹದೇವತೆಯ ಕಟುಟೀಕೆಯನ್ನು ಸೇರಿಸಿ 'ಗಂಡುದೇವಿ, ಬೊಂಬೆ ಮೋಡಿ!' ಎಂಬ ತಲೆಬರಹ ಕೊಟ್ಟು ಕನ್ನಡದ ಎರಡು ಸುಪ್ರಸಿದ್ಧ ಪತ್ರಿಕೆಗಳಿಗೆ ಕಳುಹಿಸಿಕೊಟ್ಟ. ಲೇಖನ ಕೆಲವು ಜನರ ಕಣ್ಣು ತೆರೆದರೆ ಎಷ್ಟೋ ಉಪಕಾರ.

೧೬

ಡಾ. ಮಹಾದೇವರ ಬಂಧನದ ಸುದ್ದಿ ಮರುದಿನ ಬೆಳಕಾಗುವುದರಲ್ಲಿ ಇಡೀ ಕಲ್ಲಳ್ಳಿಯನ್ನು ತಲುಪಿ ಅಚ್ಚರಿಗೊಳಿಸಿತು. ಅಲ್ಲಲ್ಲಿ ಸೇರಿತು ಜನರ ಗುಂಪು. ಗೊತ್ತಿದ್ದವರು ಗೊತ್ತಿಲ್ಲದವರಿಗೆ ವಿವರಿಸಿದರು. ಅವರಿಗಾಗಿ ಕಣ್ಣೀರು ಮಿಡಿದರು. ಕಲ್ಲಳ್ಳಿಗೆ ಬಂದ ವರ್ಷದೊಳಗೆ ಎಲ್ಲರ ಜನಮನ ಗೆದ್ದ ಸಹೃದಯಿ. ದೀನದಲಿತರೊಡನೆ ಮಿಡಿಯುವ ಅವರ ಜೀವನಾಡಿ ಅವರ ಆದರಾಭಿಮಾನಗಳನ್ನು ಪ್ರತ್ಯಕ್ಷವಾಗಿ ಗಳಿಸಿತ್ತು. ಕಡಿಮೆ ಹಣ, ಅನುಕಂಪದ ನುಡಿ, ಪ್ರೀತಿವಾತ್ಸಲ್ಯದ ಸಲುಗೆ, ಭ್ರಾತೃಪ್ರೇಮದ ಮೆಲುನಗೆ, ಬಡವರ ಸಂಕಷ್ಟಗಳಿಗೆ ಕೊರಗುವ ಜೀವ. ಇರುವಾಗ ಅವರ ಬಗ್ಗೆ ಯಾರೂ ಚಿಂತಿಸಿರಲಿಲ್ಲ. ಅವರ ನಿರ್ಗಮನದ ನಂತರ ಬೆಲೆ ತಾನಾಗಿಯೇ ಏರಿತು. ನಕಲಿ ವೈದ್ಯನೆಂದು ಒಪ್ಪಿಕೊಳ್ಳುವುದಕ್ಕೂ ಅನುಮಾನ. ಅವರನ್ನು ಬಂಧಿಸಿ ಕಳುಹಿಸಿದವರು ನಕಲಿ ವೈದ್ಯನಿರಬೇಕು ಎಂಬ ಸಿಟ್ಟು ! ಕೆಲವರು ಸೇವಾಸದನದ ಬಾಗಿಲು ಕಾದರು. ಗೋವಿಂದನನ್ನು ಕೆಣಕಿ ಕೆಣಕಿ ಕೇಳಿದರು.

ತನ್ನ ಪ್ರಾಕ್ಟೀಸ್ ಕಡಿಮೆಯಾಗಬಹುದೆಂದು ಹೆದರಿ ಅವಿನಾಶ ಅವರ ಮೇಲೆ ಸುಳ್ಳು ಅರ್ಜಿ ಹಾಕಿಸಿ ಪೊಲೀಸರ ವಶಕ್ಕೆ ಒಪ್ಪಿಸಿದ್ದಾನೆ ಎಂದು ಆಡಿಕೊಂಡರು ಅನೇಕರು. ಚಿಕಿತ್ಸಾಲಯಕ್ಕೆ ಬರುವ ಒಬ್ಬೊಬ್ಬರ ಮುಖದ ಮೇಲೆಯೂ ಅಸಮಾಧಾನವನ್ನು ಗುರುತಿಸಿದ ಅವಿನಾಶ. 'ಅವರ ಜನಪ್ರಿಯತೆ ತನ್ನನ್ನೂ ಮೀರಿಸಿತ್ತೇ?' ಅಳುಕಿದ ಮನದಲ್ಲಿ.

ಆ ದಿನ ಚಿಕಿತ್ಸಾಲಯಕ್ಕೆ ಹೊರಟಾಗ ಬಾಗಿಲಲ್ಲಿ ಪ್ರತ್ಯಕ್ಷನಾದ ವಾಮನ ಈ ದಿನಗಳಲ್ಲಿ ಎದೆಗೂಡಿನ ಎಲುಬುಗಳನ್ನು ಎಣಿಸುವಷ್ಟು ಕ್ಷೀಣನಾಗಿದ್ದಾನೆ. ಕಣ್ಣುಗಳಲ್ಲಿ ಹತಾಶಭಾವ, ಸೋತ ಛಾಯೆ. ಹೆಂಡತಿ ಮಕ್ಕಳೊಡನೆ ಹಳ್ಳಿ ಬಿಟ್ಟು ಹೋಗುವ ಸಿದ್ಧತೆಯಲ್ಲಿದ್ದಾನೆ. ಹೀಗಾಗಿ ಭೂಮಿ ಪಂಚಾಯ್ತಿಗೆ ಅವಿನಾಶನನ್ನು ಕರೆದೊಯ್ಯಲು ಬಂದಿದ್ದಾನೆ.

ಕೊನೆಗೂ ವಾಮನ ಸೋಲಿನ ನಿರ್ಣಯ ಮಾಡಬೇಕಾಯಿತು. ಗಡಿ ತಕರಾರು, ತೆಂಗು-ಅಡಿಕೆಯ ಕಳವು, ಜಗಳದಿಂದ ಬಿಡುಗಡೆಗೆ ಹಾರೈಸಿದೆ ಅವನ ಜೀವ. ಮುತ್ತಣ್ಣ ಮತ್ತು ಅವನ ಗಂಡುಮಕ್ಕಳು ಕೆಣಕಿದ ಸರ್ಪದಂತೆ ಹಿಂಬಾಲಿಸಿದರೆ ಆ ನೆರಳಲ್ಲಿ ಎಲ್ಲಿ ಸುಖವಿದೆ? ಅವರು ಹಾಳುಗೆಡವಿದ್ದನ್ನು ಸರಿಪಡಿಸಿ ಛಲದಿಂದ ಹೋರಾಡಿ ಅವರೊಂದಿಗೇ ಬದುಕಲು ಯತ್ನಿಸಿದ. ಇಂದಲ್ಲ ನಾಳೆ ಮುತ್ತಣ್ಣ ತನ್ನನ್ನು ಬದುಕಲು ಬಿಡುತ್ತಾನೆ ಎಂದೂ ಹಾರೈಸಿದ್ದ. ಆದರೆ ಮರೆಯಿಂದ ಬಾಣ ಹೂಡುವ ತಂತ್ರದ ಮುತ್ತಣ್ಣನಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ಕಾನೂನು ಬಲದಿಂದ ದೊರೆತ ಭೂಮಿಯ

ರಕ್ಷಣೆಗೆ ಜನಬಲ, ದೇಹಬಲ, ಹಣಬಲ ಮುಂತಾದ್ದು ಇರಲಿಲ್ಲ. ಇದರಿಂದಾಗಿ ದುಃಖ, ವಿಷಾದದಿಂದ ಹಳ್ಳಿ ಬಿಡಲು ಸಿದ್ಧನಾಗಿದ್ದಾನೆ. ಮುತ್ತಣ್ಣ ನಾಲ್ಕು ಸಾವಿರ ರೂಪಾಯಿ ಪರಿಹಾರ ಕೊಡುತ್ತೇನೆ ಎಂದವನು ಸೋಲುತ್ತಿರುವವನ ದಯನೀಯ ಸ್ಥಿತಿಯನ್ನು ನೋಡಿ ಒಂದು ಸಾವಿರದಷ್ಟು ಕಡಿಮೆ ಮಾಡಿದ್ದಾನೆ!

"ಕುಮ್ಕಿ ಭೂಮಿ, ಗದ್ದೆ, ತೋಟ ಎಲ್ಲಾ ಸೇರಿ ನಾಲ್ಕು ಎಕರೆ ಇದೆ. ಎಕರೆಗೆ ಒಂದು ಸಾವಿರದಂತೆ ಕೊಡಬೇಡವೇ?" ವಾಮನ ದೂರು ಹೇಳಿಕೊಂಡ, "ಮೂರನೆಯವನಿಗೆ ಮಾರೋಣ ಅಂದ್ರೆ ಮುತ್ತಣ್ಣನ ನೆರೆ ಯಾರಿಗೂ ಬೇಡವಂತೆ. ನೀವು ಪಂಚಾಯ್ತಿ ಮಾಡಿ ನನಗೆ ನಾಲ್ಕು ಸಾವಿರ ಸಿಗುವಂತೆ ಮಾಡಿ, ಅಯ್ಯ."

ಸಣ್ಣ ಉಪಕಾರಕ್ಕೆ ಇಲ್ಲವೆನ್ನಲಾಗದೆ ಅವನ ಜೊತೆಯಲ್ಲಿ ಸೀದಾ ಹೊರಟು ಬಂದ ಮುತ್ತಣ್ಣನ ಮನೆಗೆ. ಅಪರೂಪಕ್ಕೆ ಬಂದ ಅವಿನಾಶನನ್ನು ಸಂಭ್ರಮದಿಂದ ಸ್ವಾಗತಿಸಿದ ಮುತ್ತಣ್ಣ ಅವನಿಗಾಗಿ ಎಳೆನೀರು, ಬಾಳೆಹಣ್ಣು ತಂದಿರಿಸಿದ. ತೋಟದಲ್ಲಿದ್ದ ಗಂಡುಮಕ್ಕಳೂ ಓಡಿಬಂದರು. ಅವಿನಾಶನ ಹೃದಯ ಕುಟುಕಿತು, ಸಿರಿವಂತಿಕೆಯಲ್ಲಿ ಓಲಾಡುವ ಮನೆಯನ್ನು ನೋಡಿ. ಹೊಸದಾದ ಹಂಚಿನ ಮನೆ, ಬೆಲೆಬಾಳುವ ಮೇಜು–ಕುರ್ಚಿಗಳು, ವಿದ್ಯುದ್ದೀಪದ ಅಲಂಕಾರ, ಅಂಗಳದಲ್ಲಿ ಹೊಸ ಸ್ಕೂಟರ್, ಫಲಭರಿತ ತೆಂಗು–ಅಡಿಕೆ ತೋಟ, ದುಡಿಯುವ ಗಂಡುಮಕ್ಕಳು. ಓಹ್ ! ಕೊರತೆ ಕಾಣದ ಸಮೃದ್ಧ ಬದುಕು ಮುತ್ತಣ್ಣನದು. ಆದರೂ ವಾಮನನ ತುಂಡುಭೂಮಿಗೆ ಆಸೆ, ಒಂದು ಸಾವಿರ ಹೆಚ್ಚಿಗೆ ಕೊಡಲು ಜಿಪುಣತನ.

ಇದೇ ಮುತ್ತಣ್ಣನಿಂದ ಆಂಜನೇಯ ಗುಡಿಯ ಜೀರ್ಣೋದ್ಧಾರಕ್ಕೆ ಐನೂರು ರೂಪಾಯಿ, ವಿಗ್ರಹದೇವತೆಯ ಹೊಸ ಗುಡಿಗೆ ಸಾವಿರ ರೂಪಾಯಿ ಕಾಣಿಕೆ! ಕಲ್ಲುದೇವರನ್ನು ತೃಪ್ತಿಪಡಿಸಿದರೆ ಸಾಕೆ? ಮಾನವೀಯತೆ ಇಲ್ಲದ ಕಾಣಿಕೆ, ನಿರ್ದಯದ ಬೆಲೆ. ಮನುಷ್ಯರಲ್ಲಿ ದೇವರನ್ನು ನೋಡದೆ, ದೀನರನ್ನು ಪ್ರೀತಿಸದೆ, ಅವರೊಡನೆ ಹೊಂದಿಕೊಳ್ಳದೆ ಕಲ್ಲುದೇವರನ್ನು ಆರಾಧಿಸಿದರೆ ಏನು ಫಲ? ವಾಮನನ ಸಂಸಾರಕ್ಕೆ ಕಿಚ್ಚಿಡದಿದ್ದರೆ ಇವನಿಗೆಷ್ಟೋ ಪುಣ್ಯ ದಕ್ಕುತ್ತಿತ್ತು. ಕನಿಕರದಿಂದ ನೋಡಿದ ಅಂಗಳದಲ್ಲಿ ನಿಂತ ವಾಮನನನ್ನು.

ಅವಿನಾಶ ಭೂಮಿ ಪಂಚಾಯ್ತಿಗೆ ಬಂದನೆಂದು ತಿಳಿದಾಗ ಮುತ್ತಣ್ಣ ನಮ್ರನಾದ. ಆದರೂ ಮೂರು ಸಾವಿರಕ್ಕಿಂತ ಹೆಚ್ಚಿಗೆ ಕೊಡಲಾರೆನೆಂದು ಸ್ಪಷ್ಟವಾಗಿ ತಿಳಿಸಿಬಿಟ್ಟ. ಅವಿನಾಶ ವಾಮನನ ಪರ ಮಾತನಾಡುತ್ತ ಇನ್ನೊಮ್ಮೆ ಅಂದ,

"ನಾಲ್ಕು ಸಾವಿರ ರೂಪಾಯಿಯೂ ಕಡಿಮೆಯಾಯ್ತು. ಅಷ್ಟಕ್ಕೆ ಅವನು ಒಪ್ಪಿದ್ದು ನಿಮ್ಮ ಪುಣ್ಯ. ಅವನ ಗಂಡುಮಕ್ಕಳು ಪ್ರಾಯಕ್ಕೆ ಬಂದರೆ ನಾಲ್ಕು ಕಾಸೂ ನಿಮಗೆ ದಕ್ಕಲಾರದು, ಭೂಮಿಯೂ ಇಲ್ಲ."

"ನಮ್ಮ ಭೂಮಿಗೆ ಹಣ ಕೊಟ್ಟು ಕೊಂಡುಕೊಳ್ಳುವುದು ಯಾವ ನ್ಯಾಯ?"

"ನಿಮ್ಮ ಭೂಮಿ ಎನ್ನುವುದು ನಿಮ್ಮಜ್ಜನ ಕಾಲಕ್ಕಾಯಿತು. ಕಾನೂನು ಆಗ ನಿಮ್ಮ ಪರ ಇತ್ತು. ಅವರು ಬೆವರು ಸುರಿಸಿದ್ದು ನಿಮಗೆ ದಕ್ತಾ ಇತ್ತು. ಆದರೆ ಈಗ ಕಾನೂನು ಅವರ ಪರ ಇದೆ. ಒತ್ತಾಯದ ಒತ್ತಡ ಹೇರಿ ಕಿರುಕುಳ ಕೊಟ್ಟು ಅವರನ್ನು ಹಳ್ಳಿಯಿಂದ ಅಟ್ಟುವುದು ನ್ಯಾಯ ಅಲ್ಲ. ತೆಪ್ಪಗೆ ನಾಲ್ಕು ಸಾವಿರ ಕೊಡಿ. ಮಕ್ಕಳೊಂದಿಗ ಅವನ ಕಷ್ಟ ನೋಡಬಾರದೇ?"

ಬೇರೆ ಯಾರಾದರೂ ಈ ಮಾತನ್ನು ಹೇಳಿದ್ದರೆ ರೇಗಿಬಿಡುತ್ತಿದ್ದ ಮುತ್ತಣ್ಣ. ಆದರೆ ಹೇಳಿದವನು ಅವಿನಾಶ, ಹಿಂದೊಮ್ಮೆ ಮಧ್ಯರಾತ್ರಿ ಸುಂದರರಾಜನ ಕಡೆಯವರು ದೊಣ್ಣೆ ಹಿಡಿದು ಹಿಂಬಾಲಿಸುವಾಗ ರಕ್ಷಣೆಯಿತ್ತ ಮಹಾನುಭಾವ. ಆ ನೆನಪಿನ ಗೌರವದಿಂದ ಅವನ ಮಾತನ್ನು ಅಲಕ್ಷ್ಯದಲ್ಲಿ ತಳ್ಳಿಹಾಕದೆ "ಮೂರುವರೆ ಸಾವಿರ" ಎಂದ.

"ಅದಾಗದು, ನಾಲ್ಕು ಸಾವಿರ" ಎಂದ ಅವಿನಾಶ ನಿರ್ಧಾರದಲ್ಲಿ.

ಮರುಮಾತಿಲ್ಲದೆ ಒಪ್ಪಬೇಕಾಯಿತು ಮುತ್ತಣ್ಣ. ಆದರೂ ಕಣ್ಣು ಕೆಕ್ಕರಿಸಿ ವಾಮನನತ್ತ ಹೊರಳಿದ, "ಪದಿನ್ನೈದು ದಿನಗಳಲ್ಲಿ ಭೂಮಿ ಬಿಟ್ಟು ಕೊಡಬೇಕು. ಒಂದು ಎಳೆನೀರು, ತೆಂಗಿನಕಾಯಿ ಕೀಳಿಸಿದರೆ ಜಾಗ್ರತೆ!"

"ಅವನ ಹೆಸರಿನಲ್ಲಿರುವ ಗೇಣಿಚೀಟಿಯನ್ನು ನಿಮ್ಮ ಹೆಸರಿಗೆ ಬದಲಾಯಿಸುವಾಗ ತಗಲುವ ವೆಚ್ಚವನ್ನು ನೀವೇ ವಹಿಸಬೇಕು" ಎಂದ ಅವಿನಾಶ ಮುಂದಾಲೋಚನೆಯಿರುವ ಚಾಣಾಕ್ಷಮತಿ. ನಾಲ್ಕು ಸಾವಿರ ಪೂರ್ತಿಯಾಗಿ ಬಡವನಿಗೆ ಸಿಗಬೇಕೆಂಬುದು ಅವನ ಆಸೆ.

ಮುತ್ತಣ್ಣ ಮಾತಿಲ್ಲದೆ ಒಪ್ಪಿಕೊಂಡ. ಮುಂದಿನ ಮಾತುಕತೆ ಏನೂ ಉಳಿದಿರಲಿಲ್ಲ. ಅವಿನಾಶ ಅಲ್ಲಿಂದ ಹೊರಟು ನಿಂತಾಗ ಮುತ್ತಣ್ಣನ ಹಿರಿಮಗ ನಾಲ್ಕು ಸುಲಿದ ತೆಂಗಿನಕಾಯಿಗಳನ್ನು ತಂದು ಕೊಟ್ಟ. ಅವಿನಾಶ ಬೇಡವೆನ್ನಲಿಲ್ಲ. ದಾರಿಯಲ್ಲಿ ಬರುವಾಗ ಅವು ವಾಮನನ ಚೀಲದಲ್ಲಿ ಸೇರಿಕೊಂಡವು.

"ಕುಟುಂಬ ಸಮೇತನಾಗಿ ಎಲ್ಲಿಗೆ ಹೋಗ್ತಿಯಾ!" ಕೇಳಿದ ಕನಿಕರದಲ್ಲಿ

"ನೆರೆಹಳ್ಳಿಗೆ ಹೋದರೆ ಏನಾದರೂ ಕೆಲಸ ಸಿಕ್ಕೀತು, ಅಯ್ಯ."

"ಈ ಮಣ್ಣಿನ ಋಣ ತೀರಿಸಿ ಎಲ್ಲೆಲ್ಲೋ ಯಾಕೆ ಅಲೀತಿಯಾ?" ಯೋಚಿಸುತ್ತ ಅಂದ ಅವಿನಾಶ, "ಇದೇ ಹಳ್ಳಿಯಲ್ಲಿ ನಿನಗೊಂದು ಸ್ಥಳ ಸಿಗಲಾರದೇ ಉಳಿದುಕೊಳ್ಳಲು? ಇರು, ನನ್ನ ಹೊಸ ಆಸ್ಪತ್ರೆ ಆದ ಮೇಲೆ ಹೇಗಿದ್ದರೂ ನನಗೊಬ್ಬ ಜವಾನ ಬೇಕು. ಸಣ್ಣಪುಟ್ಟ ಕೆಲಸಗಳಿಗೆ ಒಂದಿಬ್ಬರು ಹುಡುಗರೂ ಬೇಕು. ನಿನ್ನ ಸಂಸಾರಕ್ಕೆ ನಾನೇ ಕೆಲಸ ಕೊಡ್ತೇನೆ. ಹೆದರಬೇಡ."

ವಾಮನ ಮೂಕವಿಸ್ಮಿತನಾಗಿ ಕರುಣೆಯೇ ಮೈವೆತ್ತುಬಂದಂತೆ ನಿಂತಿರುವ ಮೂರ್ತಿಯನ್ನು ನೋಡಿದ. ಅವನಿಗರಿಯದೆ ಕಣ್ಣುಗಳು ತುಂಬಿಬಂದವು.

ಚಿಕಿತ್ಸಾಲಯದಲ್ಲಿ ಆಗಲೇ ಜನ ಸೇರಿದ್ದಾರೆ. ಸೇವಾಸದನದ ಬಾಗಿಲು ಮುಚ್ಚಿದ್ದರಿಂದ ಇಲ್ಲಿ ರೋಗಿಗಳ ಸಾಲು ಹೆಚ್ಚಾಗೇ ಇತ್ತು. ಎಲ್ಲರ ಜೊತೆ ನಾಗಪ್ಪ ಮತ್ತು ಪದ್ಮಲೆ ಕುಳಿತಿರುವುದು ಕಾಣಿಸಿತು. ಮುಖ ಅರಳಿಸಿ, ನಗು ಚೆಲ್ಲಿ 'ಚೆನ್ನಾಗಿದ್ದೀರಾ?" ಎಂದು ಪ್ರಶ್ನಿಸಿ ಪರದೆಯಾಚೆ ಹೋಗುತ್ತಿದ್ದಂತೆ ಅವನನ್ನು ಹಿಂಬಾಲಿಸಿ ಬಂದ ನಾಗಪ್ಪ. ಮೇಜಿನ ಮೇಲೆ ಕಿಟ್ ಬ್ಯಾಗಿರಿಸಿ, ಕುರ್ಚಿ ಸರಿಪಡಿಸಿ ಮುಖ ಹೊರಳಿಸಿದ, ನಾಗಪ್ಪ ಕೆಂಗಣ್ಣು ಬಿಡುತ್ತಿದ್ದಾನೆ!

"ಪದ್ಮಲೆಯನ್ನು ಕರೆದುಕೊಂಡು ಬಂದಿದ್ದೇನೆ" ಒರಟಾದ ಗೊಗ್ಗರು ಧ್ವನಿ ಸಿಡಿಯಿತು, "ಅವಳನ್ನು ನೋಡಿ ಒಂದ್ಸಾರಿ."

"ಯಾಕೆ, ಮೈ ಚೆನ್ನಾಗಿಲ್ಲವೇ?" ಕೇಳಿದ ಕುರ್ಚಿಯಲ್ಲಿ ಮೈಚೆಲ್ಲಿ.

"ಸುಮ್ಮನೇ ಇಲ್ಲಿಗೆ ಕರೆತಂದಿದ್ದೇನೆಯೇ?" ಗೊಗ್ಗರು ಧ್ವನಿ ಗುಡುಗಿತು. "ನಿಮ್ಮನ್ನು ನಂಬಿ ನಾವು ಕೆಟ್ಟೆವು. ಪದ್ಮಲೆಯನ್ನು ಪರೀಕ್ಷಿಸಲು ತಿಳೀದ ಸುಳ್ಳುಗಾರ, ವಂಚಕ... ನೀವೂ ಒಬ್ಬ ಡಾಕ್ಟರೇ?"

ಅವಿನಾಶನಿಗೆ ತಬ್ಬಿಬ್ಬು. ನಾಗಪ್ಪ ಎಲ್ಲೋ ಕುಡಿದು ಬಂದಿರಬೇಕು. ಅವನು ಉಟ್ಟ ಮಾಸಿದ ಕೆಂಪು ಚೌಕಳಿ ಮುಂಡಿನಂತೆ ಕಣ್ಣುಗಳೂ ಕೆಂಪಾಗಿವೆ. ತುಟಿ ಅದರುತ್ತಿದೆ, ನಡುಗುತ್ತಿದೆ ಮೈ. ನೇರವಾಗಿ ಎದುರಿಸಿದ್ದಾನೆ ಅವನನ್ನು. ಆ ಸಮಯದಲ್ಲಿ ನಾಗಪ್ಪ ಹೇಳಿದ ವಿಷಯ ಕೇಳುತ್ತ ಅವಾಕ್ಕಾದ ಅವನು ಹಾಗೇ ಕುರ್ಚಿಯೊರಗಿದ. ಒಂದಲ್ಲ ಒಂದು ದಿನ ತಾನು ಇದನ್ನು ಎದುರಿಸಬೇಕಾಗುತ್ತೆ. ಮಾಡಿದ್ದು ಧರ್ಮಕಾರ್ಯವಲ್ಲ–ಎಂದು ಹಿಂದೆಯೇ ಅನ್ನಿಸಿತ್ತು. ಪದ್ಮಲೆಯ ಬೇಡಿಕೆಯ ಧ್ವನಿಗೆ ಅಂದು ಹೇಳಿದ ಸುಳ್ಳು ಇಂದು ತಲೆಯ ಮೇಲೆ ಎರಗಿದೆ.

ಪದ್ಮಲೆ ಸಂಭ್ರಮದಿಂದ ಪತಿಗೃಹ ಸೇರಿದ್ದು ನಿಜ. ಎರಡು ತಿಂಗಳು ಸಂತೋಷದಲ್ಲಿ ಕಳೆದಿದ್ದವು. ಅನಂತರ ನಿಜಸಂಗತಿ ಅವಳ ಶರೀರ ಹೊರಗೆಡವಿತು. ಪ್ರಕೃತಿಯೊಡನೆ ಕಣ್ಣುಮುಚ್ಚಾಲೆ ಆಟ ಸಾಧ್ಯವೇ? ಮನೆಯಲ್ಲಿ ಘಟಸ್ಫೋಟ. ಮದುವೆಯಾದ ಎರಡು ತಿಂಗಳಿಗೆ ಪದ್ಮಲೆ ಆರು ತಿಂಗಳ ಗರ್ಭಿಣಿ! ತಾವು ತಂದ ಹುಡುಗಿ ಪರಿಶುದ್ಧಳಲ್ಲ, ತಮಗೆ ಮೋಸವಾಗಿದೆ ಎಂಬ ಅರಿವಾದೊಡನೆ ಹೂವಿನಂತೆ ತಲೆಗೇರಿದ ಹುಡುಗಿ ಪಾದರಕ್ಷೆಗಿಂತಲೂ ನಿಕೃಷ್ಟಳಾಗಿ ಅತ್ತೆ–ಮಾವ–ಗಂಡನ ಕೋಪಕ್ಕೆ ತುತ್ತಾಗಿ ಅಟ್ಟಿಸಿಕೊಂಡು ಬಂದರು ತವರುಮನೆಗೆ. ಅವಳ ಗಂಡ ಕೂಗಾಡುತ್ತ ತಾನು ಕಟ್ಟಿದ ಕರಿಮಣಿಯನ್ನು ಕಿತ್ತು ತೆಗೆದುಕೊಂಡು 'ಇನ್ಮೇಲೆ ನಮ್ಮ ಮನೆ ಹೊಸಿಲು ತುಳಿಯಬೇಡ' ಎಂದು ಹೊರಟುಹೋಗಿದ್ದಾನೆ. ಮಗಳ ಸ್ಥಿತಿಗೆ ಮರುಗುವ ಬದಲು ನಾಗಪ್ಪ

ಅವಳನ್ನು ದನಕ್ಕೆ ಬಡಿದಂತೆ ಬಡಿದ. 'ಯಾರ ಜೊತೆ ಚೆಲ್ಲಾಟ ಮಾಡಿದ್ದೀ? ಬೊಗಳು' ಎಂದರೂ ಬಾಯಿ ಬಿಡಲಿಲ್ಲ. ನೀತಿಗೆಟ್ಟವಳನ್ನು ಮನೆಯಲ್ಲಿರಿಸಿ ಕೊಂಡರೆ ನಾಗಪ್ಪನ ಮರ್ಯಾದೆಗೆ ಕುಂದು. ಬೀಗರ ಮನೆಯಲ್ಲಿ ಅವನನ್ನು ಆಡಿಕೊಳ್ಳುವಂತಾಗಿದೆ. ಇಷ್ಟೆಲ್ಲ ಆದದ್ದು ಧನ್ವಂತರಿ ಚಿಕಿತ್ಸಾಲಯದ ಮಹಾಶಯನಿಂದ. ಅವನ ಬಳಿ ಹಿಂದೆ ಕರೆತಂದಾಗ ತಾವು ತಳೆದ ಅನುಮಾನವನ್ನು ಅವನು ಒಪ್ಪಿ ನಿಜಸಂಗತಿ ಹೇಳಿದ್ದರೆ ಮದುವೆ ಮುಂದೂಡಿ ಮರ್ಯಾದೆ ಉಳಿಸಿಕೊಳ್ಳಬಹುದಿತ್ತು.

"ನಮ್ಮನ್ನು ಮೋಸಪಡಿಸಿದಿರಿ, ಡಾಕ್ಟರೇ" ನಾಗಪ್ಪ ಬುಸುಗುಡುತ್ತ ಪದ್ಮಲೆಯನ್ನು ದರದರನೆ ಎಳೆದುತಂದು ನಿಲ್ಲಿಸಿದ ಅವನ ಎದುರು, "ಹೇಳಿ ಇವಳಿಗೇನಾಗಿದೆ?"

ಅವಿನಾಶ ಮುಖವೆತ್ತಿ ನೋಡಿದ ಎದುರು ನಿಂತವಳನ್ನು. ಮುಖ ಬಾಡಿ ಕಂಗೆಟ್ಟಿದೆ. ಈಗಲೇ ಧುಮುಕಲು ಸಿದ್ಧವಾದ ಕಣ್ಣೀರು; ಕೆನ್ನೆ, ಕೈಗಳ ಮೇಲೆ ಕೆಂಪು ಗುರುತು ; ಉಟ್ಟ ಸೀರೆಯಲ್ಲಿ ಎದ್ದು ಕಾಣುತ್ತಿದ್ದ ಹೊಟ್ಟೆ. ಒಂದು ಜೀವವನ್ನು ಹೊತ್ತು ನಿಂತಿದ್ದಾಳೆ. ಅಂದಿನ ದಿಟ್ಟ ಕಂಗಳ ಪದ್ಮಲೆ ಇವಳಲ್ಲ!

ಅವನ ಮೌನ ಕೆರಳಿಸಿತು ನಾಗಪ್ಪನನ್ನು. "ನಿಮ್ಮನ್ನು ನಂಬಿ ಇಲ್ಲಿಗೆ ಬಂದೆ. ನನ್ನ ಕರ್ಮ! ಸೇವಾಸದನಕ್ಕೆ ಕರೆದೊಯ್ದಿದ್ದರೆ ನಿಶ್ಚಿಂತೆಯಿತ್ತು. ಅವರು ನಕಲಿವೈದ್ಯ ಅಂತ ಹಳ್ಳಿಯಿಂದ ಓಡಿಸಿದಿರಿ. ನೀವೇನು ಸಾಚಾ ಇದ್ದೀರಾ?"

"ಜಗಳವಾಡಲು ಬಂದಿದ್ದೀಯೇನೋ ಇಲ್ಲಿಗೆ. ಹೋಗು ಹೊರಗೆ."

"ಜಗಳಕ್ಕೆ ಬಂದವನು! ನನ್ನ ಕೇರಿಯಲ್ಲಿ ನಮ್ಮ ಮನೆ, ಮನೆತನ ಹೆಸರುವಾಸಿಯಾದದ್ದು. ನಾಗಪ್ಪ ಅಂದರೆ ನಮ್ಮ ಜಾತಿ ಜನ ತಲೆ ಬಗ್ಗಿ ನಮಸ್ಕಾರ ಮಾಡುವವರು. ಅಂಥವನ ಮಗಳು ಹೀಗಾದಳು ಅಂದರೆ ನನಗೆಂತಹ ಅವಮಾನ? ಹ್ಯಾಗೆ ಊರಲ್ಲಿ ತಲೆ ಎತ್ತಿ ತಿರುಗಲಿ?"

"ಅದಕ್ಕೆ ನಾನಲ್ಲ ಹೊಣೆ. ಕೇಳು ನಿನ್ನ ಮಗಳನ್ನೇ."

"ನೀವೇ ಹೊಣೆ ! ಮದುವೆಗೆ ಎಂಟು ದಿನಗಳ ಮೊದಲು ಇಲ್ಲಿಗೆ ಕರೆ ತಂದಾಗ ಸುಳ್ಳು ಹೇಳಿದಿರಿ, ಅಲ್ಲ ನಿಮಗೆ ಅವಳನ್ನು ಪರೀಕ್ಷಿಸಲು ತಿಳಿಯಲಿಲ್ಲ. ಶುದ್ಧ ನಕಲೀ ಡಾಕ್ಟರಯ್ಯ ನೀವು! ಒಂದಿಷ್ಟಾದರೂ ಯೋಗ್ಯತೆಯಿಲ್ಲದವರು."

"ಮೊದಲು ಇಲ್ಲಿಂದ ಹೊರಗೆ ಹೋಗಿ ಬಾಯಿಬಾಯಿ ಬಡಿದುಕೋ. ಇಲ್ಲಾ, ಬೇರೆಯವರನ್ನು ನೋಡಿದ್ಮೇಲೆ ನಿನ್ನ ಹರಿಕಥೆ ಕೇಳ್ತೇನೆ ಕೂತ್ಕೋ."

ನಾಗಪ್ಪ ಹೂಂಕರಿಸಿದ ಜೋರಾಗಿ, "ಹೊರಗೆ ಕುಳಿತು ಏನ್ಮಾಡೋಣ? ನಡಿಯೇ ಬೇವಾರ್ಸಿ! ನಡಿ... ನಡಿ..."

ಇವರ ಗಲಾಟೆಗೆ ಉಳಿದವರೂ ಸುತ್ತುವರಿದಿದ್ದರು. ನಾಗಪ್ಪ ಎಲ್ಲರನ್ನು ನೂಕಿಕೊಂಡು ಬಿರುಗಾಳಿಯಂತೆ ನಡೆದೇಬಿಟ್ಟ. ಕಣ್ಣೀರು ಒರೆಸಿಕೊಳ್ಳುತ್ತ ಪದ್ಮಲೆಯೂ ಹಿಂದಿನಿಂದ ಹೆಜ್ಜೆ ಹಾಕಿದಳು. ಹುಬ್ಬೇರಿಸಿ ನಿಂತವರು ಇಬ್ಬರಿಗೂ ದಾರಿಬಿಟ್ಟರು.

ಅಂದು ಮಧ್ಯಾಹ್ನ ಅಹಲ್ಯಳಿಂದ ಕೇಳಿದ ವಿಷಯ ಅವಿನಾಶನನ್ನು ಯೋಚನೆಗೀಡು ಮಾಡಿತು. ನಾಗಪ್ಪ ಮಗಳನ್ನು ಮನೆಯಿಂದ ಹೊರಗೆ ಹಾಕಿದ್ದಾನೆ. ಆಶ್ರಯ ತಪ್ಪಿದ ಪದ್ಮಲೆ ಅಂಗಳದ ಬದಿಯಲ್ಲಿ ಮಾವಿನ ಮರದ ಕೆಳಗೆ ಕೂತಿದ್ದಾಳೆ. ಕತ್ತಲೆಗಿಂತ ಮೊದಲು ಅಂಗಳವನ್ನು ದಾಟಿ ಹೋಗಬೇಕು ಎಂದಿದ್ದಾನಂತೆ. ಛೀ, ಪಿತೃವಾತ್ಸಲ್ಯದ ಕನಿಕರವೂ ಬತ್ತಿ ಹೋಯಿತೇ? ತಾನೀಗ ಹೇಗೆ ಸಹಾಯ ಮಾಡಲಿ?

ಸಾಯಂಕಾಲ ನಾಗಪ್ಪ ಮಗಳನ್ನು ಹೊಡೆದು ಹೊಡೆದು ಅಂಗಳದಿಂದ ಬೀದಿಗೆ ನೂಕಿದ್ದಾನೆ ಎಂಬ ಸುದ್ದಿಯೂ ತಲುಪಿತು. ಮನೆಗೆ ಬಂದಾಗ ಅಹಲ್ಯಳ ಬಾಯಿಯಲ್ಲಿಯೂ ಇದೇ ವಿಷಯ. ಪದ್ಮಲೆಗೆ ನೆಂಟರಿಷ್ಟರು ನೆರೆಹೊರೆಯವರು ಆಶ್ರಯ ಕೊಡಲಿಲ್ಲವಂತೆ. ರಾತ್ರಿ ನಿರ್ಜನ ಬೀದಿಯಲ್ಲಿ ಅವಳೊಬ್ಬಳೇ!

"ನಾವೇನಾದರೂ ಸಹಾಯ ಮಾಡೋಣವೇ?" ಅಹಲ್ಯಳ ಅನುಕಂಪ ಹೊರಹೊಮ್ಮಿತ್ತು.

"ಮಾಡಬಹುದಿತ್ತು. ಆದರೆ ಪರಿಸ್ಥಿತಿ ನಮಗೇ ವಿರೋಧವಾಗಬಹುದು. ಸಹಾಯವೆಂದರೆ ನಮ್ಮಲ್ಲೇ ಆಶ್ರಯ !" ಅವಿನಾಶ ಅಳುಕಿದ. ಆ ದಿಟ್ಟ ಕಂಗಳ ಹುಡುಗಿಗೆ ಹೇಗೆ ಆಶ್ರಯ ಕೊಡಲಿ? ಹೆಗಲನ್ನೇರುವ ಹೊಣೆಯೊಂದಿಗೆ ಗೌರವ, ಪ್ರತಿಷ್ಠೆಗೆ ಕುಂದು.

ಈ ಅಪತ್ಕಾಲದಲ್ಲಿ ಸುಂದರರಾಜ ಸಹಾಯ ಮಾಡುತ್ತಾನೆಂದು ರಾತ್ರಿ ಒಂಬತ್ತರ ನಂತರ ಅವನ ಮನೆಗೆ ಹೋದರೆ ಅವನು ಮಾತನ್ನು ಹಗುರವಾಗಿ ಗಾಳಿಗೆ ತೂರಿ ಹಾಕಿದ.

"ಅವರ ವೈಯಕ್ತಿಕ ವಿಷಯದಲ್ಲಿ ನಾವ್ಯಾಕೆ ಮೂಗು ತುರುಕಬೇಕು ಡಾಕ್ಟರೇ? ಅವಳುಂಟು, ಅವಳ ಅಪ್ಪ ಉಂಟು!"

ನಿಜ, ಜವಾಬ್ದಾರಿ ಹೊರುವುದು ಯಾವಾಗಲೂ ಕಷ್ಟಕರ. ಸಮಾಜದ ಉದ್ಧಾರಕ ಕೈಚೆಲ್ಲಿಬಿಟ್ಟ. ಪದ್ಮಲೆ ಪ್ರಶ್ನೆ ಕೇವಲ ವೈಯಕ್ತಿಕವಾಗಿರಲಿಲ್ಲ. ನಾಲ್ಕಾರು ದಿನ ಅವಳದು ನಾಯಿಪಾಡು. ಬೀದಿಯಲ್ಲಿ ಉಪವಾಸ. ಹಗಲು ಎಲ್ಲೋ ತಿರುಗಿ ದುಡಿದಳು, ಕೊಟ್ಟದ್ದನ್ನು ತಿಂದಳು. ಅಪ್ಪ ಅಮ್ಮ ಅವಳನ್ನು ನೋಡಿದರೂ

ಸಂಬಂಧವಿಲ್ಲದ ಕಟುಕರಾದರು. ಅಂದಿನ ಚೆಲ್ಲಾಟದ ಹುಡುಗಿ ಅತ್ಯಂತ ದಯನೀಯ ಸ್ಥಿತಿಯಲ್ಲಿ ಅಹಲ್ಯಳ ಬಳಿ ಬಂದು ದುಃಖ ತೋಡಿಕೊಂಡಳು. ತುಂಬು ಯೌವನದ ಹುಡುಗಿ, ಬೀದಿವಾಸ ಅವಳನ್ನು ಮುಂದಕ್ಕೆ ಯಾವ ಸ್ಥಿತಿಗೂ ನೂಕಬಹುದಾಗಿದೆ. ಅಹಲ್ಯ ಸಮಾಧಾನ ಹೇಳಿ ಏನೋ ಸ್ವಲ್ಪ ತಿನ್ನುಣ್ಣಲು ನೀಡಿದಳು, ಅಷ್ಟೇ. ಅದಕ್ಕಿಂತ ಹೆಚ್ಚಿನದು ಅವಳಿಂದಾಗದು.

"ಅವಳ ಪಾಡು ನರಿ ನಾಯಿಗೂ ಬೇಡ. ಹೆತ್ತವರು ಕಟುಕರೆಂದು ತಿಳಿದದ್ದು ಈಗಲೇ" ಅಹಲ್ಯ ಮನಕರಗಿ ಅಂದಳು ಪತಿಗೆ, "ಹತ್ತಿರದಲ್ಲಿ ಅಬಲಾಶ್ರಮ ಅಥವಾ ಅನಾಥಾಶ್ರಮ ಇದ್ದರೆ ಪದ್ಮಲೆಯನ್ನು ಸೇರಿಸೋಣ. ಪಾಪ, ಬಸುರಿ ಹೆಂಗಸು."

ಆದರೆ ಕಲ್ಲಳ್ಳಿಯಲ್ಲಿ ಮತ್ತು ಸುತ್ತಮುತ್ತ ಯಾವುದೇ ಅಬಲಾಶ್ರಮ, ಅನಾಥಾಶ್ರಮ ಇರಲಿಲ್ಲ. ಐವತ್ತು ಮೈಲು ದೂರದಲ್ಲಿ ಒಬ್ಬ ಮಹಿಳೆ ನಡೆಸುತ್ತಿರುವ ಒಂದು ಅಬಲಾಶ್ರಮವಿದೆ. ಅವಿನಾಶ ಅಲ್ಲಿಗೆ ತೆರಳಿ ಪದ್ಮಲೆಯ ಸ್ಥಿತಿಯನ್ನು ವಿವರಿಸಿ ಅವಳನ್ನು ಆಶ್ರಮಕ್ಕೆ ಸೇರಿಸಿಕೊಳ್ಳುವಂತೆ ಕೇಳಿ ನೋಡಿದ.

ಅಬಲಾಶ್ರಮದ ಮೇಲ್ವಿಚಾರಕಳು ಒಬ್ಬ ಮಧ್ಯವಯಸ್ಸಿನ ಹೆಂಗಸು. ಈಗಾಗಲೇ ಅವಳ ಆಶ್ರಯದಲ್ಲಿ ಹತ್ತು–ಹದಿನೈದು ಮಂದಿ ಹೆಂಗಸರಿದ್ದಾರೆ. ಆಶ್ರಮಕ್ಕೆ ಬೇರೆ ಹುಟ್ಟುವಳಿ, ಆರ್ಥಿಕ ಸಹಾಯ ಇಲ್ಲದಿರುವುದರಿಂದ ಹೆಂಗಸರು ಅನೇಕ ಉಪಕಸುಬುಗಳಲ್ಲಿ ನಿಂತರು. ಯಾರಾದರೂ ಆರ್ಥಿಕ ಸಹಾಯ ಮಾಡಲು ಮುಂದಾದರೆ ಬೇಡ ಎನ್ನುವವರಲ್ಲ. ಮೇಲ್ವಿಚಾರಕಳು ಪದ್ಮಲೆಗಾಗಿ ಮರುಗುತ್ತ ಆಶ್ರಯ ಕೊಡಲು ಒಪ್ಪಿಕೊಂಡು ಮಗು ಹುಟ್ಟುವ ತನಕ ಮತ್ತು ಎರಡು ತಿಂಗಳವರೆಗೆ ನೋಡಿಕೊಳ್ಳುತ್ತೇನೆಂದು ಭರವಸೆ ಇತ್ತಳು, "ನೀವು ಕನಿಷ್ಠ ಐನೂರು ರೂಪಾಯಿ ಆಶ್ರಮಕ್ಕೆ ನೀಡಬೇಕು" ಎಂದೂ ಯಾಚಿಸಿದಳು.

ಅವಿನಾಶ ಕಣ್ಣರಳಿಸಿದ. ಹಣವಿಲ್ಲದೆ ಇಲ್ಲಿಯೂ ನಡೆಯದು ತನ್ನ ಕಾರ್ಯ. ಪದ್ಮಲೆ ಯಾರೋ, ತನಗೆ ಸಂಬಂಧವಿಲ್ಲ. ಅವಳಿಗಾಗಿ ತಾನು ಐದು ನೂರು ಕೊಡಬೇಕೇ?

"ಆಶ್ರಮ ತಮ್ಮಂಥವರ ದಯದಿಂದ ಇಷ್ಟಾದರೂ ತಲೆ ಎತ್ತಿ ನಿಂತಿದೆ, ಸ್ವಾಮೀ. ಒಂದು ಕಾಲಕ್ಕೆ ನಾನೂ ಪದ್ಮಲೆಯಂತೆ ಕಷ್ಟದ ನೋವನ್ನುಂಡು ಜನರ ಚುಚ್ಚು ನುಡಿಗೆ ಒಳಗಾದವಳು. ಗಂಡನಿಗೆ ನನ್ನ ಮೇಲೆ ಅನುಕಂಪವಿಲ್ಲದೆ ಬೀದಿಪಾಲಾದವಳು. ಯಾಕೆ ಅಂತ ಪ್ರಶ್ನಿಸಬೇಡಿ, ಸ್ವಾಮಿ. ನನ್ನ ಸ್ಥಿತಿ ಬೇರೆ ಹುಡುಗಿಯರಿಗೆ ಬರಬಾರದೆಂಬ ಅನುಕಂಪದಿಂದಲೇ ಆಶ್ರಮ ನಡೆಸ್ತಾ ಇದ್ದೇನೆ."

ಅವಿನಾಶನ ಕೈ ಜೇಬಿಗಿಳಿಯಿತು, ಇನ್ನೂ ಅನುಮಾನ.

"ಯಾಕೆ ಅನುಮಾನ, ಸ್ವಾಮೀ, ನಮ್ಮವರೆಲ್ಲ ನಿಷ್ಪ್ರಯೋಜಕರು" ಮಹಿಳೆ ಕೆರಳಿದಳು. "ಹಣ ಸೂರೆಸೂರೆಯಾಗಿ ಹೋಗ್ತಿದ್ದರೂ ನಿರ್ಗತಿಕರಿಗೆ ಆಶ್ರಯ ಕೊಡುವ ಸಂಸ್ಥೆಗೆ ಕೈಯೆತ್ತಿ ದಾನ ಮಾಡುವ ಬುದ್ಧಿಯಿಲ್ಲ. ದೇವರ ಹೆಸರಿನಲ್ಲಿ, ಗುಡಿಗೋಪುರ ಕಟ್ತೇವೆ ಅಂತ ಕೇಳಲಿ, ಎಲ್ಲಿ ಕಲ್ಲು ದೇವರ ಶಾಪ ತಗಲಿತೋ ಎಂದು ಹೆದರಿ ಎರಡೂ ಕೈಯಿಂದ ಬಾಚಿ ಬಾಚಿ ಕೊಡ್ತಾರೆ!"

ಅವಿನಾಶ ಬೆಚ್ಚಿದ ಅವಳ ಆಕ್ರೋಶದ ಧ್ವನಿಗೆ. ಕಲ್ಲಳ್ಳಿಗೆ ಒಂದು ಅಬಲಾಶ್ರಮ ಬೇಕೆಂಬ ಆಲೋಚನೆ ಯಾರಿಗೂ ಬಂದಿರಲಾರದು. ಅದಿದ್ದರೆ ಪದ್ಮಲೆಯಂಥವರಿಗೆ. ವರದಕ್ಷಿಣೆ ತೆರಲಾರದೆ ನರಳಿನರಳಿ ಸತ್ತ ರಾಮನಾಯ್ಕನ ಹೆಂಡತಿಗೆ... ಇವರಿಗೆಲ್ಲಾ ಎಷ್ಟೋ ಉಪಕಾರವಿತ್ತು.

"ಸ್ವಾಮೀ, ನಾವೇನು ಹಣಾನೇ ಕೊಡಿ ಎಂತ ಕೇಳುವುದಿಲ್ಲ. ಅಕ್ಕಿ, ಬೆಲ್ಲ, ತೆಂಗಿನಕಾಯಿ, ಬಟ್ಟೆ ಯಾವುದು ಕೊಟ್ಟರೂ ನಿರಾಕರಿಸುವುದಿಲ್ಲ. ಇಲ್ಲ ಸ್ವಾಮೀ, ಇಲ್ಲ. ಇಲ್ಲಿ ಮನುಷ್ಯನಿಗೆ ಬೆಲೆಯೇ ಇಲ್ಲ! ಇಷ್ಟವಿದ್ದರೆ ಕೊಡಿ, ಇಲ್ಲಾಂದ್ರೆ ಪದ್ಮಲೆಯನ್ನು ಕರೆದುಕೊಂಡು ಬನ್ನಿ. ಆಶ್ರಯ ಕೊಡ್ತೇನೆ."

ಅಲ್ಲಿಂದ ಹಿಂದಿರುಗಿ ಬಂದು ಪದ್ಮಲೆಗೆ ವಿಷಯ ತಿಳಿಸಿದಾಗ ಅವಳು ಆಶ್ರಮ ಸೇರಲು ಸಂತೋಷದಿಂದ ಒಪ್ಪಿಕೊಂಡಳು. ಅವಿನಾಶ ತನಗೆ ಕೇಡು ಮಾಡಲಾರ ಎಂಬ ನಂಬಿಕೆ.

"ಊರು, ಕೇರಿ ಜನ, ಅಪ್ಪ-ಅಮ್ಮ ನನ್ನನ್ನು ಒದ್ದು ಹಾಕಿದರೂ ನೀವೊಬ್ಬರು ಸಹಾಯ ಮಾಡಿದಿರಲ್ಲ, ಡಾಕ್ಟರೆ. ಈ ಬೀದಿವಾಸ ಸಾಕಾಯ್ತು. ಇದರೊಂದಿಗೆ ನನ್ನತನವನ್ನೂ ಕಾಪಾಡಿಕೊಳ್ಳಬೇಕು. ಇನ್ನೊಂದೆರಡು ದಿನ ಕಳೆದಿದ್ದರೆ..."

ಅವಳ ದೃಷ್ಟಿ ಇಳಿಮುಖವಾಯಿತು. "ಇಗರ್ಜಿಯ ಫಾದರ್ ಎರಡು ಬಾರಿ ಬಂದು ವಿಚಾರಿಸಿದರು. 'ನಮ್ಮ ಸಂಸ್ಥೆಗೆ ಸೇರಿಕೊಂಡರೆ ಯಾವ ಕಷ್ಟವಾಗದಂತೆ ನೋಡಿಕೊಳ್ತೇನೆ' ಎಂದಿದ್ದರು."

"ಏನಂದೆ? ನೀನು ಕ್ರೈಸ್ತಮತಕ್ಕೆ ಸೇರಬೇಕು ಅಂತಿದ್ದಿಯಾ?"

"ಇನ್ನೇನು ಮಾಡಲಿ? ನಮ್ಮ ಜನರಿಗೆ ನಾನು ಬೇಡ. ಜೀವ ತೆಗೆದುಕೊಳ್ಳೋಣ ಅಂದರೆ ಹೆದರಿಕೆ. ಇಗರ್ಜಿ ಫಾದರ್ ನಮ್ಮವರಿಗಿಂತ ಎಷ್ಟೋ ಒಳ್ಳೆಯವರು. ಈ ಎರಡು-ಮೂರು ದಿನ ಅವರು ಬಂದು ನನ್ನನ್ನು ವಿಚಾರಿಸಿದಂತೆ ನಮ್ಮವರು ವಿಚಾರಿಸಿದ್ದಾರಾ? ಹೇಗೂ ನನಗೆ ಗಂಡನ ಮನೆ ತಪ್ಪಿತು, ಅಪ್ಪನ ಮನೇಲಿ ನೆಲೆಯಿಲ್ಲ. ಮತ್ತೇನು, ಕ್ರೈಸ್ತಳಾಗೋಣ ಎಂದುಕೊಂಡೆ. ಆದರೆ ನೀವೀಗ ಹೇಳಿದ ಮೇಲೆ ಎರಡು ಮಾತಿಲ್ಲ. ಆಶ್ರಮಕ್ಕೆ ತಯಾರು."

ಪದ್ಮಲೆಯ ದಿಟ್ಟ ಮಾತಿಗೆ ಮೂಕನಾದ. ಎಷ್ಟೋ ಸಮಯಗಳ ನಂತರ ಆ ಕಣ್ಣುಗಳಲ್ಲಿ ಅದೇ ದಿಟ್ಟತನ. ಮರುದಿನ ನಸುಕಿನಲ್ಲಿ ಪದ್ಮಲೆಯೊಡನೆ

ಅಬಲಾಶ್ರಮಕ್ಕೆ ಬಂದು ಅವಳನ್ನು ಸೇರಿಸಿ, ತನ್ನ ಹೆಸರಿನಲ್ಲಿ ಒಂದು ಸಾವಿರ ರೂಪಾಯಿಯನ್ನು ಆಶ್ರಮಕ್ಕೆ ನೀಡಿದ. ಸದ್ಯ ಅವಳು ಸುಖಿಯಾಗಿರಲಿ, ಹೆರಿಗೆ ನಂತರ ಮುಂದಿನ ವ್ಯವಸ್ಥೆ.

ಆದರೆ ನಾಗಪ್ಪ ಕೆಂಡವಾಗಿ ಹೋದ. ಮೊದಲೇ ಅವಿನಾಶನ ವಿರುದ್ಧ ಸಿಡಿದೆದ್ದವನು, ಈಗ ಮಗಳ ಮೇಲಿನ ಅತಿ ಪ್ರೀತಿ ಕೋಪಕ್ಕೆ ತಿರುಗಿ ಅದರ ಬಾಣಗಳೆಲ್ಲ ಅವಿನಾಶನ ಮೇಲೆ. ತಾನು ಜೀವಂತವಾಗಿರುವಾಗ ತನ್ನ ಮಗಳ ಸುಖ–ದುಃಖ ಇವನಿಗೇಕೆ? ಯಾರಿಗೂ ಹೇಳದೆ ಯಾಕೆ ಅಬಲಾಶ್ರಮಕ್ಕೆ ಸೇರಿಸಿದ? ನಾಗಪ್ಪ ಎಲ್ಲರೊಡನೆ ವಟಗುಟ್ಟಲಾರಂಭಿಸಿದ. "ಪದ್ಮಲೆಗೂ ಅವನಿಗೂ ಏನೋ ಸಂಬಂಧವಿರಬೇಕು; ಅದಕ್ಕೆಂದೇ ಅವನಿಂದ ಉಪಚಾರ!" ಎನ್ನುವ ಪ್ರಚಾರ ಪ್ರಾರಂಭಿಸಿದ.

ಆಡಬಾರದ ಮಾತು, ಕೇಳಬಾರದ ಸುದ್ದಿ. ಅವಿನಾಶನಿಗೆ ಒಳಗೊಳಗೆ ಸಂಕಟ. ಪದ್ಮಲೆ ತನ್ನ ವ್ಯಥೆಯನ್ನು ಒಮ್ಮೆಯೂ ಅವನೆದುರು ಹೇಳಿಕೊಂಡಿಲ್ಲ, ಅವನೂ ಕೇಳಿಲ್ಲ. ಇಲ್ಲಿ ಅವನು ನೀಡಿದ್ದು ಕೇವಲ ಮಾನವೀಯ ಅನುಕಂಪದ ಸಹಾಯ. ಆದರೆ ಈ ಸಹಾಯ ಅವನಿಗೇ ಮುಳುವಾಗಿ ಅವನ ಸುತ್ತಲೂ ವ್ಯೂಹ ರಚಿಸಿತು. ಈ ಅಪಪ್ರಚಾರದೊಂದಿಗೇ ಬೆನ್ನಟ್ಟಿ ಬಂದ ಅಪವಾದ. ಅವನ ಕಿವಿಗಳು ಕೇಳಿದವು. ಎದುರು ಬೀಸುವ ಗಾಳಿಗೆ ಮುಖವೊಡ್ಡದೆ ಬೆನ್ನು ತಿರುಗಿಸಿದ.

ಅಹಲ್ಯ ತತ್ತರಿಸಿಹೋದಳು. ಹಳ್ಳಿಯಲ್ಲಿ ಗೌರವ, ಪ್ರತಿಷ್ಠೆ ಪಡೆದವನ ಹೆಸರಿಗೆ ಈಗ ಕಳಂಕದ ಮಸಿ! ಅವನು ದಿನೇ ದಿನೇ ಜನರ ಅಪಹಾಸ್ಯಕ್ಕೆ ಗುರಿಯಾಗುತ್ತಿದ್ದಾನೆ. ಓ..... ಹೇಗೆ ಸೈರಿಸಲಿ? ಪದ್ಮಲೆಗೆ ಅನುಕಂಪದ ಸಹಾಯ ನೀಡಿದ್ದು ಸಮಯೋಚಿತವಾಗಿದ್ದರೂ ಊರ ಜನರ ಟೀಕೆ ಕೇಳುವುದು ಅವಳಿಂದಾಗಲಿಲ್ಲ.

"ನಮಗೆ ಸಮಾನರಲ್ಲದವರೊಡನೆ ಬೆರೆಯಬಾರದಿತ್ತು" ನೊಂದು ಅಂದಳು ಅಹಲ್ಯ. "ನಮ್ಮ ಪಾಡಿಗೆ ನಾವಿದ್ದರೆ ಯಾರ ರಗಳೆಯೂ ಇಲ್ಲ. ಅಲ್ಪರ ಸಂಗ ಅಭಿಮಾನ ಭಂಗ!"

೧೭

ಒಂದು ತಿಂಗಳು ಕಳೆಯಿತು. ಅದೊಂದು ದಿನ ಸೇವಾಸದನದ ಬಾಗಿಲು ಇದ್ದಕ್ಕಿದ್ದಂತೆಯೇ ತೆರೆದುಕೊಂಡಿತು. 'ಡಾ. ಮಹಾದೇವ, ಬಿ.ಎಸ್‌ಸಿ, ಆರ್.ಎಮ್.ಪಿ.' ಎಂಬ ದೊಡ್ಡ ಫಲಕ ಬಾಗಿಲೆದುರು. ಜೊತೆಗೆ 'ನಿರಾಶೆ ಪಡದೆ ಭೇಟಿಯಾಗಿರಿ. ನಿಮ್ಮ ಸೇವೆಯೇ ನಮ್ಮ ಗುರಿ' ಇನ್ನೊಂದು ಫಲಕ!

ಡಾ. ಮಹಾದೇವರ ನಿರ್ಗಮನ ಹೇಗೆ ವಿಸ್ಮಯ ಹುಟ್ಟಿಸಿತ್ತೋ ಹಾಗೇ ಅವರ ಆಗಮನ ಇನ್ನೂ ವಿಸ್ಮಯಕಾರಿ. ಕಣ್ಮರೆಯಾದ ಫಲಕ ಗೋಚರಿಸಿದಾಗ ಅನೇಕರಿಗೆ ತಮ್ಮ ಆತ್ಮೀಯರನ್ನು ನೋಡಿದಷ್ಟು ಆನಂದ. ಡಾ. ಮಹಾದೇವ ಅದೇ ಮೊದಲಿನ ಠೀವಿಯಲ್ಲಿ ಸೇವಾಸದನವನ್ನು ತುಂಬಿದ್ದಾರೆ. "ಬನ್ನಿ, ಏನಾಗಬೇಕು?" ಕುಂದಿಲ್ಲದ ಮುಗುಳ್ನಗೆ. ಗೋವಿಂದನ ಉತ್ಸಾಹದ ಓಡಾಟ. ಹಳ್ಳಿಗರು ಬಂದು ಬಂದು ನೋಡಿದರು ಸೇವಾಸದನವನ್ನು. ಅದೋ ಅಲ್ಲಿ ತಪ್ಪಲೆಯಲ್ಲಿ ಕುದಿಯುತ್ತಿದೆ ಕಷಾಯ, ಈ ಕಡೆ ನಾರುಬೇರು ಗಿಡಮೂಲಿಕೆಗಳ ರಾಶಿ, ಇದೋ ಇಲ್ಲಿದೆ ಔಷಧಿಗಳ ಕಟ್ಟು!

'ಡಾ. ಮಹಾದೇವರಿಗೆ ಆಗದವರು ಪಿತೂರಿ ಮಾಡಿ ಸುಳ್ಳು ರಿಪೋರ್ಟ್ ಬರೆದಿದ್ದಾರೆ. ಅವರು ನಕಲಿ ವೈದ್ಯರಲ್ಲ' ಎಂದು ದಿಟವಾಯಿತು ಹೆಚ್ಚಿನವರಿಗೆ. ಕೆಲವು ವಿದ್ಯಾವಂತ ತರುಣರು, ಬಡ ಹೆಂಗಸರು, ಗಂಡಸರು, ಹರಿಜನರು ಎರಡು ದಿನಗಳ ನಂತರ 'ಡಾ. ಮಹಾದೇವರಿಗೆ ಜಯವಾಗಲಿ!' ಎಂಬ ಘೋಷಣೆ ಕೂಗುತ್ತ ಬೀದಿ ಬೀದಿ ಅಲೆದರು. ಮಹಾದೇವರ ಜನಪ್ರಿಯತೆಗೆ ದೀನದಲಿತರ ವಿಶ್ವಾಸವೇ ಸಾಕ್ಷಿ. ಸ್ಥಳೀಯ ಪಂಚಾಯ್ತಿ ಬೋರ್ಡಿನ ಅಧ್ಯಕ್ಷರನ್ನಾಗಿ ಅವರನ್ನು ಒಮ್ಮತದಿಂದ ಆರಿಸಿಕೊಂಡರು.

ಧನ್ವಂತರಿ ಚಿಕಿತ್ಸಾಲಯದೊಡನೆ ನೇರ ಸ್ಪರ್ಧೆಗಿಳಿದ ಸೇವಾಸದನ ಒಮ್ಮೆ ಬಾಗಿಲು ಮುಚ್ಚಿ ಮತ್ತೆ ತೆರೆದುಕೊಂಡಾಗ ಹಠಾತ್ತನೆ ಇನ್ನೂ ಹೆಚ್ಚಿನ ಜನಪ್ರಿಯತೆಯನ್ನು ದಕ್ಕಿಸಿಕೊಂಡಿತು. ಧನ್ವಂತರಿ ಚಿಕಿತ್ಸಾಲಯಕ್ಕೆ ಬರುವವರ ಸಂಖ್ಯೆ ಇಳಿಮುಖವಾಯಿತು.

ಅವಿನಾಶನಿಗೆ ದಿಗಿಲು, ವಿಸ್ಮಯ. ತನಗೆ ಪ್ರ್ಯಾಕ್ಟೀಸ್ ಕಡಿಮೆಯಾಯಿತೆಂದು ಬೇಸರವಿಲ್ಲ. ಅದು ಅದೃಷ್ಟದೊಡನೆ ಚಲಿಸುವ ನಾಣ್ಯ. ಆದರೆ ಮೇಲಧಿಕಾರಿಗಳು, ಇತರ ವೈದ್ಯರು ಡಾ. ಮಹಾದೇವರ ಎಲ್ಲಾ ಸರ್ಟಿಫಿಕೇಟ್ ಅನ್ನು ಪರಿಶೀಲಿಸಿದ್ದು ಸುಳ್ಳಾಯಿತೇ? ಖೋಟಾ ನಕಲಿ ಡಿಗ್ರಿ ಹೊಂದಿದ್ದಾನೆಂದು ರುಜುವಾತಾದದ್ದು ಸುಳ್ಳಾಯಿತೇ? ನಕಲಿ ವೈದ್ಯನಿಗೆ ದಂಡ ವಿಧಿಸಿ ಅವನು ಅನರ್ಹನೆಂದು ತೀರ್ಮಾನವಾಗುವುದನ್ನೇ ತಾನು ಕಾಯುತ್ತಿದ್ದರೆ, ಹಠಾತ್ತನೆ ತಲೆ ಎತ್ತಿದೆ ಸೇವಾಸದನ! ನಕಲಿ ವೈದ್ಯ ಮತ್ತೆ ಪ್ರಾರಂಭಿಸಿದ್ದಾನೆ ತನ್ನ ಪ್ರಯೋಗ. ನಿಜ, ಅವರ ಔಷಧಿಗೆ ಕಡಿಮೆ ಬೆಲೆ. ಬೆಣ್ಣೆಯಲ್ಲಿ ಕೂದಲನ್ನೆಳೆಯುವ ಈ ವ್ಯಕ್ತಿಗೆ ಮುಗ್ಧ ಹಳ್ಳಿಯ ಜನರು ಪ್ರಯೋಗ ಪಶುಗಳು!

ಈ ನಡುವೆ ಸುಂದರರಾಜ ಹಳ್ಳಿಯಲ್ಲಿ ಕಾಣದೆ ಬಹಳ ದಿನಗಳಾಗಿವೆ. ಸೇವಾಸದನ ತೆರೆದ ಮೇಲೆಯೂ ಅವನು ನಾಪತ್ತೆ. ಅವನಿಗಾಗಿ ಎಲ್ಲೆಲ್ಲೋ ಹುಡುಕಾಡುತ್ತಿದ್ದಾಗ ಮುಕುಂದ ನಗುತ್ತ, "ಅವನು ಬರ್ತಾನೆ ಡಾಕ್ಟರೇ, ನಿಮಗ್ಯಾಕೆ ಚಿಂತೆ? ಹೇಗೂ ಭರ್ತಿ ಹಣ ಸಿಕ್ಕಿದೆ" ಎಂದ. ಅವನ ಮಾತಿನ ಅರ್ಥ ತಿಳಿಯಲಿಲ್ಲ.

ಇತ್ತೀಚೆಗೆ ಮುಕುಂದನ ಹೊಟ್ಟೆನೋವು ಯಾವ ಅಪರೇಶನ್ ಇಲ್ಲದೆ ಅವಿನಾಶ ಕೊಟ್ಟ ಔಷಧಿ, ಚುಚ್ಚುಮದ್ದಿನಿಂದ ಸಂಪೂರ್ಣ ವಾಸಿಯಾಗಿದೆ. ಮುಕುಂದ ಎಲ್ಲರೊಡನೆ, "ಹೊಟ್ಟೆನೋವು ನನ್ನ ಜೀವ ತಿನ್ನುತ್ತಿತ್ತು. ಅದು ವಾಸಿಯಾದರೆ ವಿಗ್ರಹದೇವತೆಗೆ ಬೆಳ್ಳಿಮೂಗುತಿ ಮಾಡಿಸುತ್ತೇನೆ ಎಂದು ಹರಕೆ ಹೇಳಿಕೊಂಡಿದ್ದೆ. ಈಗ ಪೂರಾ ವಾಸಿ" ಎನ್ನುತ್ತಿದ್ದಾನೆ. ನಿಜವಾಗಿಯೂ ಅವನ ಕಾಹಿಲೆ ವಾಸಿಯಾದದ್ದು ಅವಿನಾಶನಿಂದ. ಹರಕೆ ಸಂದಾಯವಾದದ್ದು ವಿಗ್ರಹದೇವತೆಗೆ!

ಎಂಟು ದಿನಗಳ ನಂತರ ಪ್ರತ್ಯಕ್ಷನಾದ ಸುಂದರರಾಜ. ಆಗ ಅವನಲ್ಲಿ ಬದಲಾವಣೆಯಾದದ್ದು ಥಕ್ಕನೆ ಗಮನಕ್ಕೆ ಬಂದಿತು. ಸಾದಾ ಉಡುಪಿನ ಬದಲು ಬೆಲೆಬಾಳುವ ಪ್ಯಾಂಟು, ಅಂಗಿ, ಕಾಲಿಗೆ ಬೂಟ್ಸು, ಕೈಗಡಿಯಾರ ಹೊಸದು ಬಂದಿದೆ. ತನ್ನ ತಿರುಗಾಟಕ್ಕೆ ಹೊಸ ಸ್ಕೂಟರ್ ಖರೀದಿಸಿದ್ದಾನೆ. ಯುವಕ ಮಂಡಳಿಯ ಅಧ್ಯಕ್ಷನ ಘನತೆಗೆ ಇವೆಲ್ಲ ಅಗತ್ಯ. ನೆರೆಹಳ್ಳಿಗೆ ನಿಧಿ ಸಂಗ್ರಹಿಸಲು ಹೋಗಿದ್ದನಂತೆ. ಹೀಗಾಗಿ ಹಳ್ಳಿ ಸೇರಲು ತಡವಾಗಿದೆ.

ಅವನ ಆಗಮನದ ನಿರೀಕ್ಷೆಯಲ್ಲಿದ್ದ ಅವಿನಾಶ ಈಗಾಗಲೆ ಡಾ. ಮಹಾದೇವರ ವಿರುದ್ಧ ಬರೆದ ಇನ್ನೊಂದು ಅರ್ಜಿಯನ್ನು ಅವನ ಮುಂದಿರಿಸಿ ಸೇವಾಸದನದ ಬಾಗಿಲು ತೆರೆದದ್ದು, ದೀನ ದಲಿತರು ಅವರ ಜಯಕಾರ ಮಾಡುತ್ತ ಮೆರವಣಿಗೆ ನಡೆಸಿದ್ದು ಹೇಳುತ್ತ,

"ನಕಲಿವೈದ್ಯ ಯಾವ ಧೈರ್ಯದಲ್ಲಿ ಮತ್ತೆ ಪ್ರ್ಯಾಕ್ಟೀಸ್ ಪ್ರಾರಂಭಿಸಿದರು? ಈ ಅರ್ಜಿ ಕಳುಹಿಸಿಕೊಡಿ. ಇನ್ನೊಮ್ಮೆ ಅವರ ಹೂರಣ ಹೊರ ಬೀಳಲಿ" ಎಂದ.

"ಇರಲಿ ಬಿಡಿ. ಅವರ ಪಾಡಿಗೆ ರೋಗಿಗಳ ಚಿಕಿತ್ಸೆ ಮಾಡ್ತಾ ಇದ್ದರೆ ನಾವ್ಯಾಕೆ ಅಡ್ಡಕಾಲು ಹಾಕೋಣ? ಕಳೆದ ಬಾರಿ ಅವರನ್ನು ಬಂಧಿಸಿದಾಗ ಜನ ನಮ್ಮ ವಿರುದ್ಧ ಸಿಡಿದೆದ್ದಿದ್ದಾರೆ. ನಮಗೆ ಅವರು ಬೇಡ ನಿಜ, ಆದರೆ ಜನರಿಗೆ ಬೇಕು !"

"ಏನಂದಿರಿ?" ಮೇಜು ಗುದ್ದಿದ ಅವಿನಾಶ, "ಜನರಿಗೆ ನಿಜವಾದ ಯೋಗ್ಯತೆ ಉಳ್ಳವರು ಬೇಕು. ಈ ನಕಲಿಗಳಲ್ಲ. ಮಹಾದೇವರಿಗೆ ಮತ್ತೆ ಪ್ರ್ಯಾಕ್ಟೀಸ್ ಮಾಡಲು ಯಾರು ಅನುಮತಿ ಕೊಟ್ಟರು?"

ಸುಂದರರಾಜ ಮುಗುಳ್ನಗೆಯಲ್ಲಿ ಬೆರಳೆತ್ತಿದ, "ಹಣ ! ಹಣ ! ಅದೊಂದು ಇದ್ದರೆ ಬ್ರಹ್ಮಾಂಡ ಗೆಲ್ಲಬಹುದು, ಡಾಕ್ಟರೇ. ಯಾವ ವಿದ್ಯೆಯಿಲ್ಲದ ಒಬ್ಬ ವ್ಯಕ್ತಿ ಇಂದಿನ ದಿನಗಳಲ್ಲಿ ವೈದ್ಯನಾಗುವುದು ಸುಲಭ. ಸಿಕ್ಕಿಬಿದ್ದರೆ ತಪ್ಪಿಸಿಕೊಳ್ಳುವುದೂ ಸುಲಭ. ನೀವು ಬರೆದಿರಿಸಿದ ಅರ್ಜಿಯನ್ನು ಮತ್ತಗೆ ತೆಗೆದಿರಿಸಿ, ಯಾವ ಪ್ರಯೋಜನವೂ ಇಲ್ಲ."

ಈ ಮಾತುಗಳು ಸುಂದರರಾಜನದಲ್ಲ. ಏನೋ ಬದಲಾವಣೆ. ಮಹಾದೇವರ ವಿಷಯ ತಿಳಿದಿದ್ದರೂ ಅವರನ್ನು ಬೆಳೆಯಲು ಬಿಡಬೇಕು ಎನ್ನುತ್ತಿದ್ದಾನೆ. ಅವರ ಬೆಳವಣಿಗೆ ಎಂತಹ ಹಾನಿಕರ? ನಿಜ, ಹಣದ ಬೆಲೆಯಲ್ಲಿ ಗೆದ್ದ ದೊಡ್ಡಸ್ತಿಕೆ ! ಸುಂದರರಾಜ ವರದಿ ಒಪ್ಪಿಸುತ್ತಿದ್ದಾನೆ, ಮಹಾದೇವ ಹಣದ ಬಲದಲ್ಲಿ ಆರೋಗ್ಯಮಂತ್ರಿಗಳ, ವಿದ್ಯಾ ಇಲಾಖೆಯ ಅಧಿಕಾರಿಗಳ, ಪೋಲೀಸು ವರ್ಗಗಳ ಮನವೊಲಿಸಿ ಅವರು ತೃಪ್ತಿಯಾಗುವಂತೆ ಕೈ 'ಬಿಸಿ' ಮಾಡಿದ್ದಾರೆ. ಆಮೇಲೆ ಕೇಳಬೇಕೆ, ಅವರು ಹೇಳಿದ್ದೆಲ್ಲ ಮಂಜೂರು. ದೀನ ದಲಿತರ ಸೇವೆಯಲ್ಲಿ ಕಳೆದುದನ್ನು ಭರ್ತಿ ಮಾಡುವ ವಿಶ್ವಾಸವಿದೆ ಅವರಿಗೆ.

"ನಿಜ ಹೇಳ್ತೇನೆ, ಡಾಕ್ಟರೆ, ನನಗೆ ಇಂತಹ ಅನ್ಯಾಯ ಕಂಡರೆ ಕೆಂಡದಂತಹ ಸಿಟ್ಟು. ನಾನೊಬ್ಬ ತರಲೆ ಎಬ್ಬಿಸುವ ಪ್ರಾಣಿಯಲ್ಲವೇ? ಅವರಿಗೂ ಗೊತ್ತು ನನ್ನ ಗುಣ. ಅದಕ್ಕೆಂದು ನನ್ನನ್ನು ಕರೆದು ಬೇಕಾದಷ್ಟು ಬೆಣ್ಣೆ ಹಚ್ಚಿ...ಹಚ್ಚಿ...ಹೋಹೋ...ಹೋ...ನಾನೂ ಅವರಿಂದ ಚೆನ್ನಾಗಿ ಬೆಣ್ಣೆ ತಿಕ್ಕಿಸಿಕೊಂಡೊ...ಹ್ಹೀ...ಹ್ಹೀ..."

ಸುಂದರರಾಜನ ಮುಖದ ಮೇಲೆ ವಿಚಿತ್ರ ರೀತಿಯ ಸಂತೋಷ, ತೃಪ್ತಿಯ ನಗು. ಡಾ. ಮಹಾದೇವ ತಮ್ಮ ತಕ್ಕಡಿಯಲ್ಲಿ ಅವನನ್ನು ತೂಗಿಕೊಂಡಿದ್ದಾರೆ. ಪುಣ್ಯಾತ್ಮ, ತನ್ನ ಆದರ್ಶವನ್ನು ಬಲಿಕೊಟ್ಟು ನಾಲಿಗೆಯ ಹರಿತ ಕಡಿಮೆ ಮಾಡಿಕೊಂಡಿದ್ದಾನೆ. ಆದರ್ಶ ಯುವಕರ ಗುಣ ಹೀಗೆಯೋ ಏನೋ.

"ಯುವಕ ಮಂಡಳಿಯಿಂದ ಈ ಬಾರಿ ಟಿಕೆಟ್ ಇಟ್ಟು ಯಕ್ಷಗಾನ ಪ್ರದರ್ಶನ ಮಾಡಿಸಬೇಕು, ಡಾಕ್ಟರೇ. ಈಗಿನಿಂದ ತಯಾರಿ ಮಾಡಿದರೆ ಮಳೆಗಾಲ ಕಳೆಯುವುದರಲ್ಲಿ ಸಾಕಷ್ಟು ಹಣ ಸಂಗ್ರಹವಾದೀತು."

"ಯಾಕೆ?"

ಅವನು ಪುಸ್ತಕದ ಪಟ್ಟಿಯನ್ನು ಹೊರತೆಗೆದ. ಪಳ್ಳಿಯಿಂದ ಮತ್ತು ನೆರೆಪಳ್ಳಿಯಿಂದ ಸಂಗ್ರಹಿಸಿದ ಚಂದಾಹಣದ ಲೆಕ್ಕವಿತ್ತು ಅದರಲ್ಲಿ. "ವಿಗ್ರಹದೇವತೆಯ ಗುಡಿಗಾಗಿ ಹಣ ಸಂಗ್ರಹಿಸ್ತಾ ಇದ್ದೇನೆ. ಬೈರಾಗಿ ಹೇಳ್ತಿದ್ದ, ಕೆಲವು ಸಾವಿರ ರೂಪಾಯಿ ಕಡಿಮೆ ಆಗಿವೆಯಂತೆ."

ದಿಟ, ಮೊದಲಿನ ಸುಂದರರಾಜ ಇವನಲ್ಲ. ಗುಡಿ ನಿರ್ಮಾಣದ ಕಾರ್ಯದಲ್ಲಿ ಇವನಿಗೆ ಎಲ್ಲಿಂದ ಬಂದಿತು ಆಸಕ್ತಿ? ಇತ್ತೀಚೆಗೆ ಗುಡಿ ನಿರ್ಮಾಣದ ಕಾರ್ಯ ಭರದಿಂದ ನಡೆಯುತ್ತಿದ್ದು ಕೆಲಸ ಮುಕ್ತಾಯದ ಹಂತವನ್ನೂ ತಲುಪಿದೆ. ಕಲ್ಲಳ್ಳಿಯ ಯಾವ ಮೂಲೆಯಲ್ಲಿ ನಿಂತರೂ ಗುಡಿಯ ಕಲಶ ದರ್ಶನ. ಗುಡಿ ಸಂಪೂರ್ಣ ಕಲ್ಲಿನದು. ಹೆಬ್ಬಾಗಿಲ ಎರಡೂ ಕಡೆಗಳಲ್ಲಿ

ಕಲ್ಲಿನಿಂದ ಕೊರೆದ ಆನೆಗಳು. ವಿನೂತನ ಶೈಲಿಯ ವಿಶಾಲ ಅಂಗಣ-ಭಕ್ತಾದಿಗಳಿಗೆ ಕುಳಿತುಕೊಳ್ಳಲು. ಎರಡೂ ದಿಕ್ಕಿನಲ್ಲಿ ಕುಶಲ ಕಲೆಯ ವಿಶಿಷ್ಟ ನೋಟ. ಮೇಲೆ ಷಟ್ಕೋನಾಕೃತಿಯಲ್ಲಿ ಬಿಡಿಸಿದ ಮನಸೆಳೆಯುವ ಕಲ್ಲ ಹೆಬ್ಬಾಗಿಲ ಎದುರು ವಿಗ್ರಹದೇವತೆಗೆ ಕಲ್ಲಿನಲ್ಲಿ ಕೊರೆದ ಅಷ್ಟಪೀಠ.

ಬೆಟ್ಟವನ್ನೇರಲು ಮೆಟ್ಟಿಲುಗಳ ಕಾರ್ಯ ನಡೆದಿದೆ. ಮುಂದಿನ ವರ್ಷ ವಿದ್ಯುದ್ದೀಪ ಹಾಕುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಅನಂತರ ರಾತ್ರಿ ಬೆಟ್ಟ ಹತ್ತಿ ಇಳಿಯುವವರಿಗೆ ನಿಶ್ಚಿಂತೆ. ಮೆಟ್ಟಿಲು ಕಾರ್ಯ ಒಂದೆಡೆ ನಡೆಯುತ್ತಿದ್ದರೆ ಎಂದಿನ ಕಿರುಹಾದಿಯಲ್ಲಿ ಭಕ್ತಾದಿಗಳ ಸಾಲು. ಅಲ್ಲಿಗೆ ಕುತೂಹಲವಿಲ್ಲ. ಭಕ್ತಿ ಭಾವ! ಅನುಮಾನವಿಲ್ಲ, ಸಂಕಲ್ಪದ ಪರಮಾನಂದ!

ಈ ಮಧ್ಯೆ ಬೈರಾಗಿ ಕಲ್ಲಳ್ಳಿಯಲ್ಲಿ ಎಂಟು ಎಕರೆ ಭೂಮಿ ತೆಗೆದುಕೊಂಡು ತನ್ನ ಕಡೆಯವರಿಂದ ಬೇಸಾಯ ಮಾಡಿಸುತ್ತಿದ್ದಾನೆ. ಗುಡಿಕೆಲಸ ಮುಗಿದಾಕ್ಷಣ ವಾಸದ ಮನೆಯನ್ನು ಕಟ್ಟಿಕೊಳ್ಳುತ್ತಾನಂತೆ. ನಿರ್ಗತಿಕರಾಗಿ ಬಂದವರ ಸ್ಥಾನ ಭದ್ರತೆ ! ಖಾಯಂ ನೆಲೆ!!

ಅವಿನಾಶ ಅದೇ ಗುಂಗಿನಲ್ಲಿದ್ದಾಗ ಸುಂದರರಾಜನ ಧ್ವನಿ ಎಚ್ಚರಿಸಿತು. "ಒಮ್ಮೆ ಗುಡಿಯಲ್ಲಿ ವಿಗ್ರಹದೇವತೆ ಪ್ರತಿಷ್ಠೆಯಾದರೆ ಅದರ ಕಳೆಯೇ ಬೇರೆ. ಈಗಾಗಲೇ ಅಲ್ಲಿಗೆ ಬರುವ ಹರಕೆ, ಕುಂಕುಮಪೂಜೆ ನೋಡಿದರೆ ಅದರ ಮಹಿಮೆ ಅಸಾಧಾರಣ. ಅದೆ, ಮರೆತಿತ್ತು" ಚೀಲದಿಂದ ಅಂದಿನ ದಿನಪತ್ರಿಕೆ ತೆಗೆದು ಮೇಜಿನ ಮೇಲಿರಿಸಿದ. "ಗಂಡುದೇವಿ, ಜೊಂಬೆ ನೋಡಿ!–ಬಹಳ ಚೆನ್ನಾಗಿ ಬರೆದಿದ್ದೀರಿ. ಆದರೆ ಜನರು ಒಪ್ಪಿಕೊಳ್ಳುವುದು ಅಸಂಭವ."

ವೃತ್ತಪತ್ರಿಕೆಯ ಮಧ್ಯಪುಟದಲ್ಲಿ ಪ್ರಕಟವಾಗಿದೆ ಲೇಖನ. ಇದನ್ನು ರಾತ್ರಿ ಶಾಲೆಯಲ್ಲಿ ಓದಿದರೆ ಒಳಿತು. ಆದರೆ ಅಲ್ಲಿಗೆ ಈಗ ಬರುವವರ ಸಂಖ್ಯೆ ಕೇವಲ ಆರೆಂಟು. ಆಂಜನೇಯ ಗುಡಿಯಲ್ಲಿ ಜನ ಸೇರಿದಾಗ ಬಿತ್ತರಿಸಬೇಕು.

"ವಿಮರ್ಶೆಯ ದೃಷ್ಟಿಯಲ್ಲಿ ನಿಮ್ಮ ಲೇಖನ ಚೆನ್ನಾಗಿದೆ ಡಾಕ್ಟರೇ. ಆದರೆ ಅಗೋಚರಶಕ್ತಿಯ ವಿಷಯ ನಮ್ಮಂಥವರಿಗೆ ತಿಳಿಯುವುದು ಅಸಾಧ್ಯ. ಜನರ ನಂಬಿಕೆಯನ್ನು ನಾವು ಕಸಿದುಕೊಳ್ಳಬಾರದು."

ಸುಂದರರಾಜನ ಕಟುನುಡಿಗೆ ಬೆರಗಾದ ಅವಿನಾಶ. ನಾಲಿಗೆ ಸತ್ತವನು ನಿಜ. ಕಿಸೆ ತುಂಬಿದ ಹಣದ ಪ್ರಭಾವ. ಇವನೊಡನೆ ಇನ್ನು ವಾದ ಸಲ್ಲದು. ಸುಂದರರಾಜನೂ ಚರ್ಚೆಗೆ ಇಳಿಯಲಿಲ್ಲ. ಹೊರಡುವ ಮುನ್ನ ಸೂಕ್ಷ್ಮವಾಗಿ ಹೇಳಿದ :

"ವಿಗ್ರಹದೇವತೆಯ ಗುಡಿ ನಿರ್ಮಾಣಕ್ಕೆ ನಿಮ್ಮಿಂದ ಸಹಾಯ ಬರಲಿಲ್ಲವಂತೆ..."

"ನಾನು ಒಂದು ಪೈಸೆ ಕೊಡಲಾರೆ, ಅದು ದಿಟ."

"ಗುಂಪಿನಲ್ಲಿ ಗೋವಿಂದ ಅನ್ನಿ. ಪದ್ಮಲೆಗಾಗಿ ಸಾವಿರ ರೂಪಾಯಿ ಕೊಡುವ ಅಗತ್ಯವಿರಲಿಲ್ಲ."

"ಕರುಣೆ ಬೇರೆ, ಒತ್ತಾಯ ಬೇರೆ. ಗುಡಿ ನಿರ್ಮಾಣವನ್ನು ಖಂಡಿತ ವಿರೋಧಿಸುತ್ತೇನೆ. ಲೇಖನದಲ್ಲಿ ಬರೆದುದನ್ನು ಓದಿಲ್ಲವೇ ನೀವು? 'ಜೀವವಿಲ್ಲದ ತುಂಡಿಗೊಂದು ಜೀವ ಕೊಟ್ಟು ನಲಿದರು. ಬೊಂಬೆಗೊಂದು ಸೀರೆ ಉಡಿಸಿ ದೇವಿ ನೀನೆ ಅಂದರು!!' ಹಲವು ಹತ್ತು ಜನರು ನಮೋ ಎಂದಾಕ್ಷಣ ನಾವೂ ಹೇಳಬೇಕಾಗಿಲ್ಲ. ನಮ್ಮ ನಂಬಿಕೆಗಳನ್ನು ನೀವೂ ಕಸಿದುಕೊಳ್ಳಬಾರದು, ನಮಸ್ಕಾರ" ಎಂದು ಅವಿನಾಶ ಕೈಮುಗಿದ, ಮುಂದಿನ ಮಾತಿನ ಇಚ್ಛೆ ತೋರಿಸದೆ.

೧೮

ಅವಿನಾಶನ ಲೇಖನ ಓದುಗರ ಮೇಲೆ ವಿಶೇಷ ಪ್ರಭಾವ ಬೀರಲಿಲ್ಲ. 'ಬೆಟ್ಟದ ವಿಗ್ರಹ ಮಾಮೂಲಾದ ಕಂಚಿನ ತುಂಡು. ಅದರ ಮೂಲಕ ಜನರನ್ನು ಶೋಷಿಸುತ್ತಿದ್ದಾರೆ. ಸತ್ಯ ಏನೆಂದು ತಿಳಿಯಿರಿ. ಅಸತ್ಯ ಎಂದಿಗೂ ಸತ್ಯವಾಗಲಾರದು' ಎಂದು ಲೇಖನದಲ್ಲಿ ಸವಾಲು ಹಾಕಿದ್ದಾನೆ. 'ಸತ್ಯವಿದ್ದರೆ ನಿಮ್ಮಲ್ಲಿದೆ, ಅರಿತುಕೊಳ್ಳಿ. ಮಾನವೀಯತೆ, ಅನುಕಂಪ, ಕರುಣೆಯಿಂದ ದೀನದಲಿತರಿಗೆ ಸಹಾಯ ಮಾಡಿ. ನೊಂದ ಮಹಿಳೆಯರಿಗೆ ಸಹಾನುಭೂತಿಯ ನೆರವು ನೀಡಿ. ನೆರೆಯವರನ್ನು ಪ್ರೀತಿಸಿರಿ. ನಿಮ್ಮ ಅಂಧಶ್ರದ್ಧೆ, ಮೂಢನಂಬಿಕೆಯನ್ನು ತ್ಯಜಿಸಿರಿ' ಎಂದು ಕರೆ ಇತ್ತಿದ್ದಾನೆ.

ಲೇಖನ ಸಹಜವಾಗಿಯೇ ಅನೇಕರನ್ನು ರೊಚ್ಚಿಗೆಬ್ಬಿಸಿತು. ನಾಲ್ಕಾರು ದಿನಪತ್ರಿಕೆಯಲ್ಲಿ ಕಟುವಿಮರ್ಶೆಗಳೂ ಪ್ರಕಟವಾದವು. ಅನೇಕರು ಅವಿನಾಶನೊಡನೆ ಚರ್ಚಿಸಿದರು. ಅವಿನಾಶ ರಾತ್ರಿ ಶಾಲೆಯಲ್ಲಿ, ಆಂಜನೇಯನ ಗುಡಿಯ ಪೌಳಿಯಲ್ಲಿ ಇದನ್ನೇ ಬಿತ್ತರಿಸಿದ. ಹಾಲಳ್ಳಿದೇವಿಯ ಭಕ್ತರು ಕಲ್ಲಳ್ಳಿಯಲ್ಲಿ ಇದ್ದಾರಂತೆ. ಅವರ ದೃಷ್ಟಿಯಲ್ಲಿ ಇವನೊಬ್ಬ ಹುಚ್ಚ. ವಿಗ್ರಹ ದೇವತೆಯಲ್ಲಿ ನಂಬಿಕೆಯಿರಿಸಿದವರು ಗೊಣಗಿದರು, "ತನಗೆ ನಂಬಿಕೆ ಇಲ್ಲವಾದರೆ ತೆಪ್ಪಗಿರಲಿ. ಇವನೊಬ್ಬ ಆಧುನಿಕ ಪ್ರವಾದಿ!"

ಈ ನಡುವೆ ಸಾಂಬಶಿವರಿಂದ ಬಂದಿತು ಕಾಗದ, "ತಮ್ಮ ಭೇಟಿ ಯಾವ ಜನ್ಮ ಋಣಾನುಬಂಧದಿಂದ ಆಯಿತೋ, ನಾನರಿಯೆ. ನೀವು ತಿಳಿಸಿದ ಮಾನಸಿಕ ತಜ್ಞರಲ್ಲಿ ಕರೆದೊಯ್ದು ನನ್ನ ಮಗನಿಗೆ ಒಂದು ತಿಂಗಳು

ಅವರ ಚಿಕಿತ್ಸೆ ಮಾಡಿಸಿದೆ. ಪವಾಡದಂತೆ ಚೇತರಿಸಿಕೊಂಡಿದ್ದಾನೆ. ದೇಹಸ್ಥಿತಿ ಸುಧಾರಿಸಿದೆ. ಅಕ್ಕನ ನೆನಪು ಮಾಡುವುದಿಲ್ಲ. ನನ್ನ ಮನೆ ನಂದಾದೀಪವನ್ನು ಉಳಿಸಿದ ನಿಮಗೆ ಅನಂತ ನಮಸ್ಕಾರಗಳು."

ಅವಿನಾಶನ ಹೃದಯ ತುಂಬಿ ಬಂದು ಆ ಕಾಗದವನ್ನು ಎಲ್ಲರಿಗೂ ತೋರಿಸಿದ. ಪೇಪರಿನಲ್ಲಿಯೂ ಹಾಕಿಸಿದ. ಇನ್ನಾದರೂ ಜನ ಎಚ್ಚೆತ್ತುಕೊಳ್ಳಲಿ.

"ನಿಮ್ಮ ಸೇವೆ, ನಿಷ್ಠೆಗಳು ಏನೇ ಇರಲಿ, ಅದು ಪುರಾತನ ಸಂಸ್ಕೃತಿಯ ಪರಂಪರೆಯಿಂದ ನಡೆದುಬಂದ ಆಂಜನೇಯ ಗುಡಿಗೆ ಮೀಸಲಾಗಿರಲಿ. ಹೊಸ ವಂಚಕರ ಜಾಲಕ್ಕೆ ಬಲಿಬೀಳಬೇಡಿ. ವಿಗ್ರಹ ತನ್ನ ಮಹಿಮೆಯಿಂದ ಜನರ ಕಷ್ಟವನ್ನು ಪರಿಹಾರ ಮಾಡುತ್ತದೆ ಎನ್ನುವುದು ಸುಳ್ಳು. ಕಷ್ಟಪರಿಹಾರದ ಶಕ್ತಿ, ಸಾಮರ್ಥ್ಯ ನಿಮ್ಮಲ್ಲಿದೆ. ಅದನ್ನು ಉಪಯೋಗಿಸದಷ್ಟು ನೀವು ದುರ್ಬಲರಾಗಿದ್ದೀರಿ. ಕಣ್ಣಿದ್ದೂ ಕುರುಡರಾಗಿ ಬೆಳಕಿಗಾಗಿ ಅಲೆಯುತ್ತಿದ್ದೀರಿ. ಬನ್ನಿ, ಬೆಟ್ಟಕ್ಕೆ ಹೋಗೋಣ. ವಿಗ್ರಹವನ್ನು ಪರೀಕ್ಷಿಸಿ ಬರೋಣ."

ಅವನ ದೃಢ ಮಾತಿನಿಂದ ಚೋಮ, ತನಿಯ, ಒಕ್ಕಲಿಗರ ಧೂಮಣ್ಣ, ಬಾಬಪ್ಪ, ಸಂಕು ಇವರಿಗೆಲ್ಲ ಧೈರ್ಯ ಬಂದು ವಿಗ್ರಹ ಪರೀಕ್ಷಿಸಬೇಕೆಂಬ ಕೆಟ್ಟ ಕುತೂಹಲ ಉಂಟಾಯಿತು. ಆದರೆ ಅವರವರ ಹೆಂಡಂದಿರು ಚೆನ್ನಾಗಿ ಗದರಿಕೊಂಡರು.

"ದೇವರು ಕಣ್ಣು, ಕೈಕಾಲುಗಳನ್ನು ಕೊಟ್ಟಿದ್ದಾನೆಂದು ನಿಮಗೇನು ಅಹಂಕಾರವೇ? ತೆಪ್ಪಗೆ ಬಿದ್ದಿರಿ. ಬೇಕಾದರೆ ಡಾಕ್ಟರು ಒಬ್ಬರೇ ಹೋಗಿ ಪರೀಕ್ಷೆ ಮಾಡಿ ಬರಲಿ!"

ಅದೇಕೆ, ಜನಾರ್ದನರಾಯರು, ರಾಜಣ್ಣ, ಸೋಮಶೇಖರ ಶಾಸ್ತ್ರಿ ಮೊದಲಾದವರೂ ಅವಿನಾಶನ ಆ ವರ್ತನೆಯನ್ನು ಮೆಚ್ಚಿಕೊಳ್ಳಲಿಲ್ಲ. 'ಡಾಕ್ಟರಿಗೆ ಏನೋ ಕೇಡುಗಾಲ ಬಂದಿದೆ!' ಎಂದುಕೊಂಡರು ಗುಟ್ಟಾಗಿ.

ಇತ್ತ ಅಹಲ್ಯಳಿಂದಲೂ ಯಾವುದೇ ಪ್ರತಿಕ್ರಿಯೆ ಇಲ್ಲ ! ಜನರ ದೃಷ್ಟಿ ತೆರೆಯಿಸಲು ಲೇಖನ ಯೋಗ್ಯವಾಗಿದ್ದರೂ ಇದೀಗ ಇಡೀ ಹಳ್ಳಿ ಅವನಿಗೆ ವಿರುದ್ಧ ! ಹೊಸ ಸುಧಾರಣೆಯನ್ನು ಯಾರೂ ಒಪ್ಪುವುದಿಲ್ಲ, ಹಳೆಯದನ್ನು ಕೆವಕಿದರೆ ಕೋಪ ಸಹಜ. ತನ್ನ ಕಣ್ಣಿಗೆ ಆಟದ ಗೊಂಬೆಯಂತೆ ವಿಗ್ರಹವು ಕಂಡಿತೆಂದು ಹೇಳಿದಾಗ ಮಹಿಳಾ ಸಂಘದವರು ನಕ್ಕಿದ್ದರು. ಮುಂದುವರಿದ ಮಹಿಳೆಯರು ಹಿಂದುಳಿದವರಲ್ಲಿ ನಂಬಿಕೆ ಕುದುರಿಸುತ್ತಿದ್ದಾರೆ. ಸುನೀತಾ ಶೆಟ್ಟಿ ಪ್ರತಿಶುಕ್ರವಾರ ವಿಗ್ರಹದೇವತೆಗೆ ಕುಂಕುಮಾರ್ಚನೆ ಮಾಡಿಸಿದರೆ ಉಳಿದವರೂ ಅವಳದೇ ಹಾದಿಯನ್ನು ತುಳಿಯುತ್ತಿದ್ದಾರೆ. ಮುಂದಿನ ವರ್ಷ ಜೆಟ್ಟಿದಿಂದಲೇ ಗೌರೀಪೂಜೆಯ ಮೆರವಣಿಗೆ ನಡೆಸುವ ಸನ್ನಾಹ!

ಇತ್ತೀಚೆಗೆ ಜನಾರ್ದನರಾಯರು ಪ್ರತಿ ಶುಕ್ರವಾರ ಬೆಟ್ಟ ಏರಿ ದೇವತೆಗೆ ನಮಸ್ಕರಿಸಿ ಬರುತ್ತಿದ್ದಾರೆ. ಮೊನ್ನೆ ಅವರಲ್ಲಿಗೆ ಹೋದಾಗ ಹೊಸ ವಿಷಯ ಸಿಕ್ಕಿತ್ತು ಅಹಲ್ಯಳಿಗೆ. ತುಂಬು ನಗೆ ನಗುತ್ತ ಅಂದಿದ್ದರು.

"ನಮ್ಮ ರಾಜಣ್ಣ ಬಹಳ ಬದಲಾಗಿದ್ದಾನೆ ಗೊತ್ತೇ?"

"ಹಾಲಳ್ಳಿಗೆ ಹೋಗಿ ಬಂದ್ಮೇಲೆ ಎಲ್ಲಾ ಡೋಂಗಿ ಜನಗಳು ಎಂದು ಅರ್ಥವಾಗಿರಬೇಕು" ನಕ್ಕಳು ಅಹಲ್ಯ.

"ಹಾಲಳ್ಳಿಗೆ ಹೋಗಿ ಬಂದನಂತರ ಅವನು ಇನ್ನೂ ಹಲವು ಕಡೆ ಸುತ್ತಿದ್ದಾನೆ. ಕಾಲಿಗೆ ಬಳೆ, ಸೊಂಟಕ್ಕೆ ಉಡುದಾರ, ಕುತ್ತಿಗೆಗೆ ತಾಯಿತ, ಹಣೆಗೆ ಭಸ್ಮ, ರಕ್ಷೆ ಹೀಗೆ ಎಲ್ಲಾ ಅವರ ಮೈಮೇಲೆ. ಒಂದು ದಿನ ವಿಗ್ರಹದೇವತೆ ಕನಸಿನಲ್ಲಿ ಬಂದು 'ನನ್ನ ಸೇವೆಯನ್ನು ಪ್ರತಿ ಶುಕ್ರವಾರ ಮಾಡು' ಎಂದಳಂತೆ. ಈಗ ಪ್ರತಿ ವಾರ ರಾಜಣ್ಣ ಮತ್ತು ಸೀತಾ ಅಲ್ಲಿಗೆ ಹೋಗಿ ಬರ್ತಾರೆ."

"ಹಾಗೋ, ನಿಮ್ಮ ಮೇಲಿನ ಅನುಮಾನ ಹೋಗಿರಬೇಕು, ಸಂತೋಷ" ಮೆಚ್ಚಿಗೆ ಸೂಚಿಸಿದಳು ಅಹಲ್ಯ. ಆದರೆ ಮನ ಅಂದಿತ್ತು, 'ಇಲ್ಲ, ರಾಜಣ್ಣ ಬದಲಾಗಲಿಲ್ಲ. !'

ಅಬ್ಬ, ಅವರಿಗೆಲ್ಲ ಬಂದಿದೆ ನಂಬಿಕೆ. ತಾನು, ಅವಿನಾಶ ಇಬ್ಬರೇ ಬೇರೆ. ತಮಗಿನ್ನೂ ಅದು ಮಕ್ಕಳಾಟಿಕೆಯ ವಸ್ತು. ತಾವು ಆಗಾಗ ಬೆಟ್ಟ ಏರಿದರೂ ಮನಸ್ಸು ಇನ್ನೆಲ್ಲೋ. ನಭೋಮಂಡಲದಲ್ಲಿ ಒಂದಕ್ಕೊಂದು ಮುತ್ತಿಡುವ ಮೋಡಗಳ ಗುಂಪು, ಅವುಗಳ ಮಧ್ಯ ಸೀಳಿಬರುವ ಸಂಜೆಸೂರ್ಯನ ಹೊಂಗಿರಣದ ಬೆಳಕು, ಚಿಲಿಪಿಲಿ ಎನ್ನುತ್ತ ಹಾರುವ ಅಸಂಖ್ಯಾತ ಹಕ್ಕಿಗಳ ಸಾಲು, ಕೋಡುಗಲ್ಲಿನಾಚೆ ಬೆಳಕಿನ ಕಣ್ಣುಮುಚ್ಚಾಲೆ ಆಡುವ ಸುಂದರ ರಮಣೀಯ ನೋಟ, ಪ್ರಪಾತದಂಚಿನಲ್ಲಿ ಭೀಕರ ಮೌನ ಕತ್ತಲೆ, ಎಲ್ಲೋ ದೂರದಿಂದ ತೀರ ಹತ್ತಿರಕ್ಕೆ ಕೇಳಿ ಬರುವ ಕಿನ್ನರ ಲೋಕದ ವಾದ್ಯ ಸಂಗೀತವೋ ಎಂಬಂತೆ ಬೀಸುವ ಸುಳಿಗಾಳಿ, ಅಲೆಯ ಇಂಪಾದ ಶ್ರುತಿ... ಮನಸ್ಸು, ಹೃದಯ ಸಂತೋಷದಿಂದ ಬಿರಿಯುತ್ತದೆ. ತಮಗೆ ಈ ಪ್ರಕೃತಿಯ ಆಕರ್ಷಣೆಯೇ ಹೊರತು ಹೂ--ಕುಂಕುಮದ ರಾಶಿಯಲ್ಲಿ ಓಲಾಡುವ ಆಟದ ಗೊಂಬೆಯಲ್ಲ.

ಅವಿನಾಶನ ಲೇಖನ ಸತ್ಯಕ್ಕೆ ದೂರವಿಲ್ಲವಾದರೂ ಜನರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಹಿಂದೆ ವಿಗ್ರಹವನ್ನು ಖಂಡಿಸಿ, ಟೀಕಿಸಿದಾಗ ಕೇಡಿಗಳು ಹೆದರಿಸಿ ಹೋಗಿದ್ದಾರೆ. ಈ ಬಾರಿ ಲೇಖನದ ಬಿಸಿಬಿಸಿ ಪ್ರತಿಕ್ರಿಯೆ ನೋಡಿದರೆ ಏನೋ ಆಗಬಾರದ್ದು ಆಗುತ್ತದೆಯೆಂದು ಅವಳ ಜೀವನದಲ್ಲಿ ಮುಜುಗರ ಹಾಕಿತು. ಅವಿನಾಶ ಯಾಕೆ ಜನರನ್ನು ವಿರೋಧಿಸುತ್ತಿದ್ದಾನೆ?

"ತಮ್ಮ ಇಷ್ಟದಂತೆ ನಡೆಯುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ನಾವ್ಯಾರು ಅವರಿಗೆ ಹೇಳುವವರು? ಸುಮ್ಮನೆ ಕಂತ ಶೋಷಣೆ" ಮೊದಲ ಬಾರಿ ಗಂಡನ ಉತ್ಸಾಹಕ್ಕೆ ತಡೆಯೊಡ್ಡಿದಳು. "ನೂರಾರು ಜನರು ಒಪ್ಪಿಕೊಳ್ಳುವ ವಿಷಯದಲ್ಲಿ ಮತ್ತೆ ಚರ್ಚಿಸಬಾರದು. ಅವರಂತೆ ನಾವೂ ಒಪ್ಪಿಕೊಳ್ಳುವ ನಟನೆ ಮಾಡೋಣ. ನಿಮ್ಮ ಪಾಡಿಗೆ ನೀವು ಚಿಕಿತ್ಸಾಲಯ, ಆಸ್ಪತ್ರೆ ಕಟ್ಟಡದ ಕೆಲಸದತ್ತ ಗಮನಕೊಡಿ. ನಾವು ಬದುಕಲು ಅಷ್ಟು ಸಾಕು!"

"ಸಾಕೇ ಇಷ್ಟು?" ಅವಿನಾಶನ ಮನದಲ್ಲಿ ಎದ್ದಿತು ಪ್ರಶ್ನೆ.

ಒಂದು ರಾತ್ರಿ ಚಿಕಿತ್ಸಾಲಯದಿಂದ ಮರಳಿ ಬರುತ್ತಿದ್ದಂತೆ "ಜನಾರ್ದನ ರಾಯರಿಗೆ ಎದೆನೋವು. ಈಗಲೇ ಬರಬೇಕಂತೆ" ಎನ್ನುತ್ತ ಅವರ ಮನೆ ಕೆಲಸದವನೊಬ್ಬ ಹಾಜರಾದ. ಅವಸರದಲ್ಲಿ ಎರಡು ತುತ್ತು ಉಂಡ ಶಾಸ್ತ್ರ ಮಾಡಿ ಹೊರಡುತ್ತಿದ್ದಂತೆ ಅವನನ್ನು ಎಚ್ಚರಿಸಿದಳು ಅಹಲ್ಯ.

"ರಾತ್ರಿ ಹೊತ್ತು, ತುಂಬಾ ತಡಮಾಡದೆ ಬೇಗ ಬಂದುಬಿಡಿ."

"ಯಾಕೆ, ನಿನಗೆ ಹೆದರಿಕೆಯೇ?" ಕೇಳಿದ ಅವಳ ಕೆನ್ನೆ ಸವರಿ.

"ಹಾಗೇನಿಲ್ಲ, ಆದರೂ ರಾತ್ರಿ ನೀವು ದೂರ ಹೋಗದಿದ್ದರೆ ಒಳಿತು!" ಅವಿನಾಶ ಗಹಗಹಿಸಿ ನಗುತ್ತ ಹೊರಟು ಬಂದ ರಾಯರಲ್ಲಿಗೆ. ಅವರ ಎದೆನೋವು ಹೇಳಿಕೊಳ್ಳುವಷ್ಟು ಗಂಭೀರವಾಗಿರಲಿಲ್ಲ. ಆದರೂ ರಾತ್ರಿ ನೋವು ಹೆಚ್ಚಾದೀತೆಂದು ಹೆದರಿ ಮುಂಜಾಗ್ರತೆಗಾಗಿ ಕರೆಸಿದ್ದರು ಅವಿನಾಶನನ್ನು. ಅವನು ಪರೀಕ್ಷಿಸಿ ಚುಚ್ಚುಮದ್ದು ಕೊಡುತ್ತಿದ್ದಂತೆ ಒಳಗೆ ಕಾಲಿರಿಸಿದರು ರಾಜಣ್ಣ ಮತ್ತು ಸೀತಮ್ಮ. ಅಣ್ಣನ ಮೇಲೆ ಹಗೆ ಕಾರುವ ತಮ್ಮ ನಗುತ್ತ ಬರುತ್ತಿದ್ದಾನೆ.

"ನಿನಗೆ ಎದೆನೋವೆಂದು ಯಾರೋ ಹೇಳಿದರು. ಹೇಗಿದ್ದೀ ಈಗ?" ಸಹಜವಾಗಿ ಕೇಳುತ್ತ ಅಣ್ಣನ ಹಾಸಿಗೆ ಬದಿಯಲ್ಲಿ ಕುಳಿತ ತಮ್ಮ.

ಅವಿನಾಶನಿಗೂ ಜನಾರ್ದನರಾಯರಿಗೂ ತಮ್ಮ ಕಣ್ಣುಗಳನ್ನು ನಂಬಲಾಗಲೇ ಇಲ್ಲ. ರಾಯರು ಕುಳಿತವನನ್ನು ಮುಟ್ಟಿ ಮುಟ್ಟಿ ನೋಡಿದರು. ಹತ್ತಿರ ನಿಂತ ಸೀತಮ್ಮನನ್ನೂ ನೋಡಿದರು. ಅವಳ ಕೈಯಲ್ಲಿ ವಿಗ್ರಹ ದೇವತೆಗೆ ಮಾಡಿಸಿದ ಕುಂಕುಮಾರ್ಚನೆಯ ಪ್ರಸಾದವಿತ್ತು.

"ನೋಡಿ ಡಾಕ್ಟರೇ, ರಾಜಣ್ಣನಿಗೆ ನನ್ನ ಮೇಲೆ ಎಷ್ಟು ಪ್ರೀತಿ! ಎಲ್ಲಿ, ರಾಜಣ್ಣ, ನನ್ನ ಹಣೆಗೆ ನೀನೇ ಕುಂಕುಮ ಹಚ್ಚಿಬಿಡು. ಹಾಗೇ..." ರಾಜಣ್ಣನ ಕೈಹಿಡಿದು ಕಣ್ಣಿಗೊತ್ತಿಕೊಂಡರು. ಅವನ ಸ್ಪರ್ಶ ಪುಳಕಿಸಿತು ಅವರ ಮನವನ್ನು.

ರಾಯರ ಹೆಂಡತಿ ಚಾಪೆ ಹಾಸಿ ಉಪಚರಿಸಿದರು ತಂಗಿಯನ್ನು. ಬಿಸಿ ಹಾಲು, ಹಣ್ಣು ಬಂದಿತು.

"ರಾಜಣ್ಣ, ನೀನು ಬಯಸಿದ ಭೂಮಿಯನ್ನು ನಿನ್ನ ಹೆಸರಿಗೆ ಬರೆದು ಹಾಕ್ತೇನೆ. ನನ್ನನ್ನು ಹಾಗೆ–ಹೀಗೆ ಅಂತ ಯಾರ ಹತ್ತಿರವೂ ದೂರ ಬೇಡಪ್ಪಾ..." ರಾಯರು ಗದ್ಗದಿತರಾದರು.

ರಾಜಣ್ಣ ಅಣ್ಣನ ಕೈಮೇಲೆ ಕೈ ಇರಿಸಿದ. "ದೇವತಾ ವಿನಿಯೋಗದ ಭೂಮಿ ತಾನೇ? ಅದು ನಿನ್ನ ಹೆಸರಿನಲ್ಲೇ ಇರಲಿ. ನೀನು ಕುಟುಂಬದ ಯಜಮಾನ. ಇನ್ಮೇಲೆ ಪೂಜೆ ಪ್ರಸಾದಕ್ಕೆ ಇಲ್ಲಿಗೇ ಬರ್ತೇವೆ."

"ಮತ್ತೆ ಊರಲ್ಲೆಲ್ಲ ಅಣ್ಣ ನನಗೆ ಮಾಟ ಮಾಡಿದ್ದಾನೆ ಅಂತ ಹೇಳಿಕೊಂಡು ಓಡಾಡುತ್ತಿದ್ದೀಯ!"

ಮಗುವಿನಂತಹ ಮಾತು. ರಾಜಣ್ಣನ ಮುಖ ಕಪ್ಪಿಟ್ಟಿತು.

"ಈಗಲೂ ನಿನಗೆ ಅನುಮಾನವೇ? ಹೌದೇನೋ, ನಿನ್ನನ್ನು ಹಾಳು ಮಾಡಬೇಕೆಂದು ನಾನೆಂದಾದರೂ ಬಯಸಿದ್ದೇನೆಯೇ? ನನ್ನ ವೈರಿಗೂ ಹಾಗೆ ಮಾಡುವ ಕೀಳು ಮನಸ್ಸು ನನಗಿಲ್ಲ."

"ಹಳೆಯದನ್ನು ಮರೆತುಬಿಡು ಅಣ್ಣ. ಏನೋ ಕೆಟ್ಟ ಗಳಿಗೆ" ಮುಖ ತಗ್ಗಿಸಿದ ರಾಜಣ್ಣ.

ಅವಿನಾಶ ವಿಸ್ಮಿತನಾಗಿ ನೋಡಿದ ಅಣ್ಣತಮ್ಮಂದಿರನ್ನು. ಇವರ ಮಧ್ಯೆ ಮೊದಲಿನ ಭ್ರಾತೃಪ್ರೇಮ ಬೆಸೆಯಲು ಯಾರು ಕಾರಣರು? ಯಾರು ತಿದ್ದಿದವರು ರಾಜಣ್ಣನ ಮನಸ್ಸನ್ನು? ರಾಜಣ್ಣ ಹೇಳುತ್ತಿದ್ದಾನೆ, ವಿಗ್ರಹದೇವತೆ 'ನಿನ್ನ ಅಣ್ಣನ ಜೊತೆ ಸರಿಯಾಗಿರು' ಎಂದು ಅಪ್ಪಣೆ ಮಾಡಿದೆಯಂತೆ ! ವ್ಹಾಹ್, ಬುದ್ಧಿಯಿಲ್ಲದವ. ಅಣ್ಣನ ವಿರುದ್ಧ ನಿಂತು ತನ್ನೊಳಗೆ ನೊಂದ ಮನಸ್ಸು ಕೊನೆಗೆ ಸೋಲನ್ನೊಪ್ಪಿ ಅವನ ಪ್ರೀತಿಗೆ ಹಾರೈಸಿದೆ. ಈ ನೆಪದಲ್ಲಿ ಇಬ್ಬರೂ ಇನ್ನಾವುದೋ ಸೆಳೆತಕ್ಕೆ ಒಳಗಾಗಿದ್ದಾರೆ.

ಆ ರಾತ್ರಿ ರಾಜಣ್ಣ, ಸೀತಮ್ಮ ಅಲ್ಲೇ ಉಳಿದರು.

"ಡಾಕ್ಟರೇ, ನೀವೂ ನಮ್ಮ ಜೊತೆ ಊಟ ಮಾಡಿ" ಎಂದು ಅಣ್ಣ–ತಮ್ಮ ಕೇಳಿಕೊಂಡರು.

"ಅರ್ಧ ಊಟದಿಂದ ಎದ್ದು ಬಂದಿದ್ದೇನೆ. ಅಹಲ್ಯ ನನಗಾಗಿ ಕಾದಿರುತ್ತಾಳೆ. ನಾಳೆ ಬರ್ತೇನೆ" ಎಂದಂದು ಹೊರಟುಬಿಟ್ಟ. ರಾಜಣ್ಣ ಅಂಗಳದ ಅಂಚಿನ ತನಕ ಕಳುಹಿಸಲು ಬಂದ.

"ಇನ್ಮೇಲೆ ನಿನ್ನ ಅಣ್ಣನ ಎದೆನೋವು ಯಾವ ಚಿಕಿತ್ಸೆಯಿಲ್ಲದೆ ಗುಣವಾಗುತ್ತದೆ, ಬರ್ತೇನೆ" ಎಂದ ಅವಿನಾಶ ರಾಜಣ್ಣನ ಕೈಕುಲುಕಿ.

ಜನಾರ್ದನರಾಯರ ಮನೆಯಿಂದ ಕೇವಲ ಎರಡು ಮೈಲು ದೂರದ ದಾರಿ. ಎರಡು ನಿಮಿಷ ಸಾಕು ಮನೆ ತಲುಪಲು. ಚಿರಪರಿಚಿತ ದಾರಿಯಲ್ಲಿ ಕತ್ತಲೆಯಲ್ಲೇ ಕಣ್ಣುಮುಚ್ಚಿ ಅವಿನಾಶ ವಾಹನ ನಡೆಸಬಲ್ಲ. ಕಾಡಿನ ಕಿರುದಾರಿ

ಕಳೆದರೆ ಸ್ವಲ್ಪ ಅಗಲದ ರಸ್ತೆ, ಆಮೇಲೆ ಹಳ್ಳಿಯ ಮುಖ್ಯರಸ್ತೆ. ಕತ್ತಲೆಯಲ್ಲಿ ಬೈಕ್‌ನ ಬೆಳಕು ಮುಂದಿನ ದಾರಿ ತೋರಿಸುತ್ತಿತ್ತು. ನಿರ್ಜನ ರಸ್ತೆ, ಗಂಭೀರ ಮೌನದಲ್ಲಿ ನಿಂತಿದೆ ಕಾಡು. ಆಗಾಗ ಎಲ್ಲೋ ಬಿದಿರು ಮೆಳೆಯಿಂದ ಸಿಕ್‌ಸಿಕ್ ಶಬ್ದ ಕೇಳುತ್ತಿದೆ. ಬೈಕ್‌ನ ಗುಡು ಗುಡು ಅಬ್ಬರ ಅದರ ಹುಟ್ಟನ್ನೂ ಅಡಗಿಸಿರಬೇಕು.

ತನ್ನಲ್ಲೇ ಸಿಳ್ಳು ಹಾಕುತ್ತಾ ಅಂಕುಡೊಂಕು ದಾರಿಯಲ್ಲಿ ಬೈಕ್ ತಿರುಗಿ ಸುತ್ತ ಮುಂದುವರಿದಂತೆ ಫಕ್ಕನೆ ಎದುರಿನಲ್ಲಿ ದೊಡ್ಡದೊಂದು ಮರದ ದಿಮ್ಮಿ ರಸ್ತೆಗೆ ಅಡ್ಡವಾಗಿ ಬಿದ್ದದ್ದು ಗೋಚರಿಸಿತು. ಹೋಗುವಾಗ ದಿಮ್ಮಿ ಅಲ್ಲಿರಲಿಲ್ಲ. ಹತ್ತಿರದ ಯಾವುದೇ ಮರ ಉರುಳಿ ಬಿದ್ದದ್ದು ಖಂಡಿತ ಅಲ್ಲ. ಮರಗಳನ್ನು ಸಾಗಿಸುವ ಲಾರಿ ಆ ದಾರಿಯಲ್ಲಿ ಬರುವುದಿಲ್ಲ. ಯಾರೋ ಉದ್ದೇಶಪೂರ್ವಕವಾಗಿ ದಿಮ್ಮಿಯನ್ನು ಅಡ್ಡವಿರಿಸಿರಬೇಕು. ವಾಹನದ ಬೆಳಕನ್ನು ಸುತ್ತಲೂ ಹಾಯಿಸಿದ. ಯಾರೂ ಕಾಣಿಸಲಿಲ್ಲ. ಬೈಕ್‌ನ್ನು ದಿಮ್ಮಿಯ ಮೇಲೆ ಹಾರಿಸಿಕೊಂಡು ಹೋಗುವುದು ಸುಲಭವಾಗಿರಲಿಲ್ಲ. ಅನಿವಾರ್ಯ ವಾಗಿ ಬೈಕ್ ನಿಲ್ಲಿಸಿ ಅದರ ಬೆಳಕಿನಲ್ಲಿ ಸುತ್ತಲೂ ನೋಡಿದ. ದಿಮ್ಮಿಯ ಬದಿಯಲ್ಲಿ ಸ್ಥಳವಿದ್ದರೆ ಸಲೀಸಾಗಿ ಹೋಗಬಹುದು.

ಇದ್ದಕ್ಕಿದ್ದಂತೆ ಎಲೆಗಳ ಮರ್ ಮರ್ ಸದ್ದು. ಯಾರೋ ನಡೆದು ಬರುವ ಹೆಜ್ಜೆಯ ಶಬ್ದ. "ಯಾರ್‍ರೋ ಅಲ್ಲಿ?" ಜೋರಾಗಿ ಕೂಗಿದ. ಮತ್ತೊಂದು ನಿಮಿಷದಲ್ಲಿ ನಾಲ್ಕಾರು ಜನರು ಅವನತ್ತ ಬರುವುದು ಕಾಣಿಸಿತು. ಸುತ್ತಲೂ ಬೆಳಗಿದವು ಟಾರ್ಚಿನ ಬೆಳಕು. ಆ ಬೆಳಕಿನಲ್ಲಿ ಕೆಲವರ ಹೆಗಲ ಮೇಲೆ ದೊಣ್ಣೆಯಿರುವುದೂ ಗೋಚರಿಸಿತು. ಯಾಕೆ? ಏನು? ಎಂದು ಅವಿನಾಶ ಆಲೋಚಿಸುವ ಮೊದಲೇ "ಹಾಕ್ರೋ ಬೆನ್ನಿಗೆ" ಎಂದದ್ದು ಕೇಳಿಸಿತು. ನಾಲ್ಕಾರು ಕಂಠಗಳು ಒಂದಾಗಿ ಸ್ವರ ಏರಿಸಿದವು. ಅವನೂ ಸ್ವರ ಏರಿಸಬೇಕು ಎನ್ನುವಾಗ ಎಡಭುಜದ ಮೇಲೆ ಬಿದ್ದಿತು ದೊಣ್ಣೆ ಏಟು. ಮತ್ತೊಂದು ಹೊಟ್ಟೆ ಬದಿಗೆ. ಬೈಕ್‌ನ ಹ್ಯಾಂಡಲನ್ನು ಸಾವರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮುಂಗೈ ಮೇಲೆ ಇನ್ನೊಂದು ಹೊಡೆತಕ್ಕೆ ಕೈ ಸಡಿಲಗೊಂಡು ಬೈಕ್ ಧಡಾರನೆ ಆಚೆ ಭಾಗಕ್ಕೆ ಉರುಳಿತು. ಅವನು ಮುಂದಕ್ಕೆ ಮುಗ್ಗರಿಸಿದ.

"ಹೊಡೀರಿ, ಚೆನ್ನಾಗಿ ಚಚ್ಚಿರಿ!" ನಾಲ್ಕೈದು ಗಂಡುಸ್ವರಗಳು ಒರಲಿದವು. ಬೆನ್ನು, ಮುಖ, ತಲೆಗೆಲ್ಲಾ ಬಿದ್ದಿತು ದೊಣ್ಣೆ ಏಟು. ಅವನು ತಪ್ಪಿಸಿಕೊಳ್ಳುವ ವ್ಯರ್ಥ ಪ್ರಯತ್ನದಲ್ಲಿ ಸುತ್ತಲಿನವರನ್ನು ನೋಡಲಿಚ್ಛಿಸಿದ. ಮುಖಗಳು ಅಸ್ಪಷ್ಟ. ಅಪರಿಚಿತರಿರಬೇಕು. ತನ್ನ ಮೇಲೆ ಯಾಕೆ ಈ ದ್ವೇಷ? ಆದರೆ ಅದೋ ಆ ಒಂದು ಮುಖ... ಹಾಲಳ್ಳಿಯಲ್ಲಿ ನೋಡಿದ ನೆನಪು. ಹೌದು, ಹುಡುಗನ ಮೇಲೆ ಕಾಸುಬರೆ ಇಡುವಾಗ ಹಿಂದಿನಿಂದ ನಗುತ್ತ ಕುಣಿವ ಟೋಣಪರಲ್ಲಿ ಒಬ್ಬ! ಅರೆ, ಇವನು ಇಲ್ಲಿಗೆ ಹೇಗೆ ಬಂದ?

ಚಿಂತಿಸುವಷ್ಟು ಅವಕಾಶವಿರಲಿಲ್ಲ. ಎದ್ದು ಹೊಡೆದಾಡುವಷ್ಟು ಸಮಯವಿಲ್ಲ. ಏಟಿನ ಮೇಲೆ ಬಿದ್ದ ಏಟಿನಲ್ಲಿ ಅವನು ತತ್ತರಿಸಿದ. ಒಂದೊಂದು ದೊಣ್ಣೆ ಯೇಟು ಅವನ ನೆತ್ತರನ್ನು ಝಿಲ್ಲನೆ ಚಿಮ್ಮಿಸಿತು. ತಲೆಬುರುಡೆ ಒಡೆದುಹೋಗುವಂತೆ ಬಿದ್ದ ಏಟಿಗೆ ಅವನು ಅಲ್ಲೇ ಕುಸಿದ. ಕಣ್ಣಿನ ಮುಂದೆ ಕಪ್ಪು ಉಂಗುರಗಳು ಕಾಣಿಸಿಕೊಂಡವು.

"ಉಸಿರು ಹೋಗೋತನಕ ಅವನನ್ನು ಹೊಡೆದು ಇಲ್ಲಾ ಅನ್ನಿಸಿಬಿಡಿ. ವಾಹನವನ್ನು ಪುಡಿಪುಡಿ ಮಾಡಿ," ಇನ್ನಾವುದೋ ಗಂಭೀರ ಸ್ವರ ಗುಡುಗಿತು. ತನ್ನ ಕಥೆ ಇಲ್ಲಿಗೆ ಮುಗಿಯಿತು ಎಂದು ಸ್ಪಷ್ಟವಾಗುತ್ತಿದ್ದಂತೆ ತಲೆಯ ಮೇಲೆ ಬಿದ್ದ ಮತ್ತೊಂದು ಏಟಿನಿಂದ ಮುಖ ಅಡಿಯಾಗಿ ನೆಲ ಕಚ್ಚಿದ. ಮರುಗಳಿಗೆಯಲ್ಲಿ ಪ್ರಜ್ಞೆ ತಪ್ಪಿತು.

೧೯

ಅವಿನಾಶ ಹೊರಡುವ ಮೊದಲು 'ಬೇಗ ಬಂದುಬಿಡಿ' ಎಂದಿದ್ದಳು ಅಹಲ್ಯ. ಅವಳಿಗೆ ಹೆದರಿಕೆಯಿಲ್ಲ. ಆದರೆ ಕೆಲವು ದಿನಗಳಿಂದ ಯಾರೋ ತಮ್ಮ ಮೇಲೆ ಗಮನವಿರಿಸಿದ್ದಾರೆ ಎಂಬ ಸಂಶಯ ಬರುತ್ತದೆ. ರಾತ್ರಿ ಯಾರೇ ರೋಗಿಗಳಿಂದ ಕರೆ ಬಂದರೂ ಅವಿನಾಶ ತಪ್ಪಿಸಿದವನಲ್ಲ. ಈ ದಿನ ಜನಾರ್ದನರಾಯರು ಹೇಳಿ ಕಳುಹಿಸಿದಾಗ ಹೋಗಲೇಬೇಕಾದ್ದು ಅನಿವಾರ್ಯ. ಬೇಗ ಬರುತ್ತೇನೆ ಎಂದಿದ್ದ. ಕೇವಲ ಎರಡು ಮೈಲು ಹೋಗಿಬರಲು ಮೂರು ತಾಸು ಬೇಕೇ? ಆಗಲೇ ಮಧ್ಯರಾತ್ರಿ ಹನ್ನೊಂದು ಗಂಟೆ. ಜನಾರ್ದನರಾಯರಿಗೆ ಮೆಲುಸಿರು ಆಗಿರಬೇಕು, ಬರುವುದು ತಡವಾಗಿದೆ ಎಂದಳು.

ಮಲಗಿದರೆ ನಿದ್ರೆ ಬರಲಿಲ್ಲ. ಕಿಟಕಿಯ ಬದಿ ಕುಳಿತು ಹೊರಗೆ ನೋಡಿದರೆ ಒಂದೇ ಒಂದು ವಾಹನದ ಸದ್ದಿಲ್ಲ, ಜನರ ಸದ್ದಿಲ್ಲ. ಎದೆ ಡವಡವಗುಟ್ಟಿತು. ಅವಿನಾಶ ಅಲ್ಲಿಂದ ಬೇರೆಲ್ಲಿಗೋ ಹೋಗಿರಬೇಕು.

ಅಷ್ಟರಲ್ಲಿ ಬಾಗಿಲು ಬಡಿದ ಶಬ್ದ. ಅವಿನಾಶ ಬಂದನೆಂದು ಒಂದೇ ನೆಗೆತಕ್ಕೆ ಹಾರಿ ಜಗಲಿಕೋಣೆ ಮತ್ತು ಹೊರಭಾಗದ ದೀಪದ ಗುಂಡಿಯನ್ನು ಒತ್ತಿದಳು. ಏಕಕಾಲಕ್ಕೆ ಬೆಳಗಿತು ದೀಪ. ನೋಡುತ್ತಾಳೆ, ಬಂದವನು ಅವಿನಾಶನಲ್ಲ! ಕಿಟಕಿಯಾಚೆ ನಿಂತಿದ್ದಾರೆ ಬೇರೆ ನಾಲ್ವರು.

"ಬಾಗಿಲು ತೆಗೆಯಿರಿ" ನಯವಾಗಿ ಅಂದ ಒಬ್ಬ.

"ಡಾಕ್ಟರು ಮನೇಲಿಲ್ಲ" ಮುಚ್ಚಿದ ಬಾಗಿಲಿನ ಹೊರಗೆ ನಿಂತವರು ಯಾರೆಂದು ತಿಳಿಯಲಿಲ್ಲ.

"ಓ... ಮನೇಲಿಲ್ಲವೇ...? ಅವರನ್ನು ಅಗತ್ಯವಾಗಿ ಕಾಣಬೇಕಿತ್ತು."

"ಇಲ್ಲೇ ಹತ್ತಿರ ಹೋಗಿದ್ದಾರೆ. ಬರಬಹುದು ಈಗ."

"ಅವರು ಬರೋತನಕ ಕಾದಿರ್ತೇವೆ. ಬಾಗಿಲು ತೆಗೀತೀರಾ?"

ಅಹಲ್ಯ ಅನುಮಾನದಿಂದ ನೋಡಿದಳು ಅಪರಿಚಿತರನ್ನು. ಮಧ್ಯರಾತ್ರಿಯಲ್ಲಿ ಹೇಗೆ ಒಳಗೆ ಬಿಡಲಿ? ಮನೆಯಲ್ಲಿ ನೀನು ತಾನೇ ಎನ್ನುವವರಿಲ್ಲ. ವಿವೇಕ ಜಾಗೃತವಾಯಿತು.

"ಅವರು ಬಂದ್ಮೇಲೆ ಬಾಗಿಲು ತೆರೀತೇನೆ, ಕ್ಷಮಿಸಿ."

ಹೊರಗೆ ಗುಸುಗುಸು ಮಾತು. "ಡಾಕ್ಟರರ ಮನೆಯಲ್ಲವೇ? ನಮ್ಮಲ್ಲಿ ಒಬ್ಬನಿಗೆ ನಿಲ್ಲಲು ತ್ರಾಣವಿಲ್ಲ."

"ಜಗಲಿ ಕಟ್ಟೆಯಿದೆ, ಅಲ್ಲೇ ಕುಳ್ಳಿರಲು ತಿಳಿಸಿ."

ಅವಳ ಮಾತು ಮುಗಿಯುವ ಮುನ್ನ ಬಾಗಿಲನ್ನು ಡಬಡಬನೆ ಬಡಿಯಲಾರಂಭಿಸಿದರು ಹೊರಗಿನವರು. "ತೆಗೀರಿ ಬಾಗಿಲಾ!" ಒಬ್ಬನ ಸ್ವರ ಏರಿತು. ಒಂದೆರಡು ದೊಣ್ಣೆಗಳು ಕಾಣಿಸಿದವು. ನಾಲ್ವರು ಸೇರಿ ಬಾಗಿಲನ್ನು ಗುದ್ದತೊಡಗಿದರು.

"ಯಾಕೆ ಗಲಾಟೆ ಮಾಡ್ತಿದ್ದೀರಿ? ಅವರು ಬರುವ ಹೊತ್ತಾಯ್ತು."

ಆದರೆ ಬಂದವರು ಬಾಗಿಲನ್ನು ಮುರಿಯುವ ಕೆಲಸಕ್ಕೆ ಸಜ್ಜಾದರು. ಹಳೆಕಾಲದ ಮರದ ಬಾಗಿಲು. ಹತ್ತು ಜನ ನೂಕಿದರೂ ಮುರಿಯದು. ಅವಿನಾಶನಿಲ್ಲದ ಸಮಯದಲ್ಲಿ ಮನೆ ಲೂಟಿಗೆ ಬಂದಿದ್ದಾರೆಂದು ತಿಳಿದು ಹೋಯಿತು. ಸಣ್ಣಗೆ ನಡುಗಿದಳು. ಸಹಾಯಕ್ಕೆ ಕರೆಯೋಣವೆಂದರೆ ಮನೆ ಸುತ್ತಲೂ ಒಬ್ಬರೂ ಇಲ್ಲ. ಕೂಗಿದರೂ ಯಾರಿಗೂ ಕೇಳಿಸದು. ಅವಳು ಫಕ್ಕನೆ ಒಳ ಮತ್ತು ಹೊರಗಿನ ದೀಪಗಳನ್ನು ಆರಿಸಿಬಿಟ್ಟಳು. ಮರುಗಳಿಗೆಯಲ್ಲಿ ಟಾರ್ಚಿನ ಬೆಳಕು ಗೋಚರಿಸಿದವು.

"ಹೇಗಾದರೂ ಬಾಗಿಲು ಮುರಿದು ಒಳಹೋಗೋಣ" ಎಂದ ಒಬ್ಬ.

"ಯಾರಾದರೂ ಇತ್ತ ಬಂದಾರು, ಬ್ಯಾಡ ಬಿಡು" ಎಂದ ಮತ್ತೊಬ್ಬ. ದೊಣ್ಣೆಗಳು ಟಕಟಕಾ ಬಡಿದವು ಕಿಟಕಿಯ ಸರಳುಗಳ ಮೇಲೆ. ಅಹಲ್ಯ ಉಸಿರು ಬಿಗಿಹಿಡಿದಳು. ನಿಜವಾಗಿಯೂ ಅವರು ಬಾಗಿಲು ಮುರಿದು ಒಳಗೆ ಬಂದಾರೆ? ಓ!... ಅವಿನಾಶ ಈಗಲೂ ಬರಬಾರದೇ...? .

"ನಡೀರೋ, ಇಲ್ಲ್ಯಾತಕ್ಕೆ ನಮ್ಮ ಗದ್ದಲ? ನಾವು ಬಾಗಲಾ ಮುರಿದು ಒಳಗೆ ಹೋಗೋದರೊಳಗೆ ಯಾರಾದರೂ ನಮ್ಮನ್ನು ಕಂಡಾರು. ಹೇಂಗಾದರೂ ಅವನನ್ನು ಹೊಡೆದು ಜಜ್ಜಿ ಗತಿ ಕಾಣಿಸಿದೆವಲ್ಲ! ನಮಗೆ ಸಾಕು. ಕಂಟಕ ತೊಲಗಿತು, ನಡೀರಿ..."

ಸ್ವಲ್ಪ ಹೊತ್ತಿಗೆಲ್ಲ ಹೊರಗೆ ಸದ್ದಡಗಿತು. ಅಹಲ್ಯ ನಿಂತಲ್ಲೇ ಮರಗಟ್ಟಿ ಹೋದಳು. 'ಅವನನ್ನು ಹೊಡೆದು ಜಜ್ಜಿ ಗತಿ ಕಾಣಿಸಿದೆವಲ್ಲ!' ಎಂಬ ಮಾತುಗಳು ಕಾದ ಸೀಸದಂತಾಯಿತು ಕಿವಿಗಳಿಗೆ. ಎಲ್ಲಿಯೋ ಅವಿನಾಶನಿಗೆ ಅಪಾಯ ಒದಗಿದೆ. ಅವನನ್ನು ಹೊಡೆದುಹಾಕಿದ ಕೇಡಿಗಳು ಇತ್ತ ಬಂದಿದ್ದಾರೆ. ಅವರ ಕೈಗಳಲ್ಲಿ ದೊಣ್ಣೆಗಳು! ಅಹಲ್ಯ ಮುಂದಿನದನ್ನು ಆಲೋಚಿಸದೆ ತರಗೆಲೆಯಂತೆ ಕಂಪಿಸಿದಳು. ನಿಜವಾಗಿಯೂ ಈ ಕದೀಮರು ಅವಿನಾಶನನ್ನು ಗತಿಕಾಣಿಸಿದರೇ? ಎಲ್ಲಿಗೆ ಹೋಗಲಿ? ಯಾರನ್ನು ಕೇಳಲಿ? ತಡೆಯಲಾರದೆ ಕಣ್ಣೀರು ಉಕ್ಕಿ ಬಂದಿತು. ನಿರ್ಜನ ಕಾಡಿನಲ್ಲಿ ಅವಳನ್ನು ಕರೆಯುತ್ತಿದ್ದಾನೆ ಅವಿನಾಶ.

ನಿಮಿಷ ಯುಗವಾಯಿತು. ಒಳಕೋಣೆಯ ಕಿಟಕಿಯಿಂದ ದಿಟ್ಟಿಸಿದಳು ಹೊರಗೆ. ಇನ್ನೇನು ಈಗ ಬರುತ್ತದೆ ಅವನ ವಾಹನ, ತನಗೆಲ್ಲೋ ಕೆಟ್ಟ ಭ್ರಮೆಯಾಗಿದೆ ಎಂದು ಕಿವಿಯಾನಿಸಿದರೆ ಮೌನ ಹೆದರಿಸಿತು ಅವಳನ್ನು. 'ಅವನನ್ನು ಗತಿಕಾಣಿಸಿದೆವಲ್ಲ!' ಯಾಕೆ ಹಾಗೆ ಹೇಳಿದರು? ಇಲ್ಲ, ತಾನೆಂದಿಗೂ ಅವಿನಾಶನನ್ನು ಕಳೆದುಕೊಳ್ಳಬಾರದು. ಜನಾರ್ದನರಾಯರಲ್ಲಿಗೆ ಹೋಗಲೇ? ಆದರೆ ಆ ಕದೀಮರು ಹೊರಗೆ ಅವಿತಿರಬಹುದು.

ಯೋಚಿಸುತ್ತ ಹೋದಂತೆ ಅವಿನಾಶನ ಪ್ರಾಣಾಪಾಯದ ಕಲ್ಪನೆಯಲ್ಲಿ ಅವಳ ಬುದ್ಧಿ ಶೂನ್ಯವಾಗುತ್ತಾ ಬಂದಿತು. ಮನಸ್ಸನ್ನು ದೃಢಮಾಡಿಕೊಂಡಷ್ಟೂ ಕುಸಿಯುತ್ತ ದುರ್ಬಲಗೊಂಡಿತು. ದೇಹ–ಮನಸ್ಸು ಎರಡೂ ಸ್ತಿಮಿತವನ್ನು ಕಳೆದುಕೊಂಡವು. ಈಗೇನು ಮಾಡಲಿ?

ಅರೆ... ಅದೇನು? ಬೆಟ್ಟದ ಶಿಖರದ ಮೇಲೆ ಮಿಣುಕು ಹುಳದಂತೆ ಬೆಳಕು! ಅಹಲ್ಯ ದಿಟ್ಟಿಸಿದಳು ಆ ಬೆಳಕನ್ನು. ಕವಿದ ಕತ್ತಲೆಯಲ್ಲಿ ಶಾಂತ ಸ್ನಿಗ್ಧ ಬೆಳಕು ಮಾತ್ರ ಕಾಣಿಸುತ್ತದೆ. ಕೊರೆದ ಬಂಡೆಯಲ್ಲಿ ಕಂಚಿನ ವಿಗ್ರಹ, ಅದರೆದುರು ಹೂ–ಕುಂಕುಮದ ರಾಶಿ. ಓ... ತನ್ನ ಪಾಲಿಗೆ ಹೂ–ಕುಂಕುಮದ ಭಾಗ್ಯ ಇಲ್ಲದೇ ಹೋಯಿತೇ?

ಇದ್ದಕ್ಕಿದ್ದಂತೆ ಅವಳ ಹೃದಯ, ಮನಸ್ಸು, ಬುದ್ಧಿ ಎಲ್ಲವೂ ವಿಗ್ರಹದೇವತೆಯ ಮೇಲೆ ಕೇಂದ್ರೀಕೃತವಾಯಿತು. ನಡುಗುತ್ತಿರುವ ಮನದಲ್ಲಿ ಧೈರ್ಯದ ಅಲೆ ಏಳಲಿಲ್ಲ, ದೃಢನಿರ್ಧಾರ ಮೂಡಲಿಲ್ಲ. ಅಗೋಚರವೂ ಅತೀತವೂ ಆದ ಇನ್ನಾವುದೋ ಪ್ರಭಾವ ತನ್ನೊಳಗೆ ಉದಯಿಸಿದಂತೆ ಅವಳ ಮನದ ಸಂಕಲ್ಪವನ್ನು ಅಲ್ಲಾಡಿಸಿಬಿಟ್ಟಿತು. ಅವಿನಾಶನಿಗೆ ಏನೂ ಆಗದಿರಲಿ ಎಂಬ ಹಾರೈಕೆಯ ಎದೆಗುದಿಯಲ್ಲಿ ಬೆಂದಿತು ಹೃದಯ. ತಾನು ತಾನಾಗಿಯೇ ಜೋಡಿಸಿಕೊಂಡವು ಕೈಗಳು.

"ಅವರು ಸುಖವಾಗಿ ಹಿಂದಿರುಗಿದರೆ ನಿನಗೆ ಹೂವಿನ ಪೂಜೆ ಕೊಡುತ್ತೇನೆ. ನನ್ನ ಈ ಸಣ್ಣ ಕೋರಿಕೆ ನೆರವೇರಿಸಿಕೊಡು!"

ಹೊತ್ತು ನಿಧಾನವಾಗಿ ಸರಿಯಿತು. ಜೋಡಿಸಿದ ಕೈಗಳು ಬಿಚ್ಚಿಕೊಳ್ಳಲಿಲ್ಲ. ಮುಚ್ಚಿದ ಕಂಗಳು ತೆರೆಯಲಿಲ್ಲ. ಮನಸ್ಸು ಪೂರ್ತಿ ಬೆಟ್ಟದ ಮೇಲೆ! ಎಷ್ಟೋ ಹೊತ್ತಿನ ನಂತರ ಹೊರಗೆ ಕೇಳಿಸಿತು ಎತ್ತಿನ ಗಾಡಿಯ ಶಬ್ದ. ಯಾರೋ ಕರೆಯುವ ಧ್ವನಿ. ಅಹಲ್ಯ ಧಡಕ್ಕನೆ ಎದ್ದು ಹೊರಜಗುಲಿಗೆ ಬಂದು ದೀಪ ಬೆಳಗಿಸಿದಳು. ಮನೆ ಅಂಗಳದಲ್ಲಿ ಬಂದು ನಿಂತಿದೆ ಜೋಡೆತ್ತಿನ ಗಾಡಿ. ಗಾಡಿಯವನು ಎತ್ತುಗಳನ್ನು ಕಟ್ಟಿದ ಮೇಲೆ ಹಿಂಭಾಗದಿಂದ ಸೋಮಶೇಖರ ಶಾಸ್ತ್ರಿಗಳು ಇಳಿಯುವುದು ಕಾಣಿಸಿತು. ಅರೆ! ಇವರು ಈ ರಾತ್ರಿಯಲ್ಲಿ? ಅವಳು ಕೂಡಲೆ ಬಾಗಿಲು ತೆರೆದು ಅಂಗಳಕ್ಕೆ ಓಡಿಬಂದಳು.

ಮರುಕ್ಷಣದಲ್ಲಿ ಎಲ್ಲವೂ ತಿಳಿದುಹೋಯಿತು. ಯಾವ ಅನಿಷ್ಟದ ಕಲ್ಪನೆ ಅವಳಿಗೆ ಬಂದಿತ್ತೋ ಅದು ಘಟಿಸಿಹೋಗಿತ್ತು. ಅವಿನಾಶನ ರಕ್ತಸಿಕ್ತ ಶರೀರವನ್ನು ಶಾಸ್ತ್ರಿಗಳು, ಗಾಡಿಯವನೂ ಹೊತ್ತು ತಂದು ಒಳಜಗಲಿಯಲ್ಲಿ ಮಲಗಿಸಿದರು.

"ಒಂದು ಗಳಿಗೆಯಲ್ಲಿ ಓಡಿ ಹೋಗಿ ಡಾ. ಮಹಾದೇವರನ್ನು ಕರೆದುಕೊಂಡು ಬಾ" ಶಾಸ್ತ್ರಿಗಳು ಅವಸರಪಡಿಸಿದರು ಗಾಡಿಯವನನ್ನು. ಅವನು ಒಂದೇ ಓಟಕ್ಕೆ ಓಡಿದ ಡಾ. ಮಹಾದೇವರನ್ನು ಕರೆತರಲು. ಅಹಲ್ಯ ಬಾಯಿಗೆ ಕೈಹಚ್ಚಿ ಬಿಕ್ಕಳಿಸಿದಳು. ಶಾಸ್ತ್ರಿಗಳು ತಾವೇ ಸಮಾಧಾನ ಹೇಳಿ, ಧೈರ್ಯ ನೀಡಿ, ಬಿಸಿ ನೀರು ತರುವಂತೆ ತಿಳಿಸಿ, ಅವಿನಾಶನ ಆರೈಕೆಯತ್ತ ಗಮನವಿತ್ತರು. ಪ್ರಜ್ಞೆ ತಪ್ಪಿದ್ದರೂ ಉಸಿರಾಟ ನಿಂತಿರಲಿಲ್ಲ.

"ಗಾಡಿಯವನು ಅವನ ಪಾಡಿಗೆ ಬರ್‍ತಾ ಇದ್ದನಂತೆ ದಾರಿಯಲ್ಲಿ ಅದೇ ರಾಜಣ್ಣನ ಮನೆ ಆಚೆ ಕಾಡುದಾರಿ ಇದೆಯಲ್ಲ, ಅಲ್ಲಿ. ಬೈಕ್ ಒಂದು ಕಡೆ, ಇವರು ಇನ್ನೊಂದು ಕಡೆ ಬಿದ್ದಿದ್ದರಂತೆ. ಸೀದಾ ನನ್ನಲ್ಲಿಗೆ ಬಂದು ಸುದ್ದಿ ತಿಳಿಸುವಷ್ಟು ಉಪಕಾರ ಮಾಡಿದ್ದಾನೆ. ಛೀ ಛೀ, ಯಾರೋ ಕದೀಮರ ಕೆಲಸ. ಬೈಕ್ ನಜ್ಜುಗುಜ್ಜಾಗಿದೆ!" ಅವಿನಾಶನ ಮೈಮೇಲಿನ ಬಟ್ಟೆ ತೆಗೆಯುತ್ತ ಹೇಳಿದರು, "ಏನೋ ಗಾಡಿಯವನು ಆ ದಾರಿಯಲ್ಲಿ ಬಂದ, ಒಳ್ಳೆಯದಾಯಿತು. ಬೆಳಗ್ಗೆ ತನಕ ಹೀಗೆ ಬಿದ್ದಿದ್ದರೆ ಕತೆ ಬೇರೆ ಆಗ್ತಿತ್ತು. ಅಂತೂ ದೇವರು ದೊಡ್ಡವನು!"

ಅಹಲ್ಯಳ ಕಣ್ಣ ಮುಂದೆ ಹೆಪ್ಪುಗಟ್ಟಿದ ರಕ್ತದ ಬದಲು ಹೂವಿನ ರಾಶಿ ಕಾಣಿಸಿತು. 'ಹೇಗಾದರೂ ಅವರನ್ನು ಬದುಕಿಸು' ಮನ ಬೇಡಿತು ನೂರು ಬಾರಿ.

ಸ್ವಲ್ಪ ಹೊತ್ತಿನಲ್ಲಿ ಆಗಮಿಸಿದರು ಡಾ. ಮಹಾದೇವ. ಆಪತ್ಕಾಲಕ್ಕೆ ಇರುವ ಏಕೈಕ ವೈದ್ಯ ಅವರೊಬ್ಬರೇ. ಅವಿನಾಶನೊಡನೆ ಹೊಂದಿಕೆಯಿರದಿದ್ದರೂ ಕಷ್ಟಕಾಲದಲ್ಲಿ ನೆರವು ನೀಡುವ ಅವರು ಹಳೆಯದನ್ನು ಕೆದಕದೆ ಧಾವಿಸಿ ಬಂದಿದ್ದಾರೆ. ತಮಗೆ ತಿಳಿದ ರೀತಿಯಲ್ಲಿ ಚಿಕಿತ್ಸೆ, ಉಪಚಾರ

ಮಾಡುವ ಭರವಸೆ ಅವರಿಗಿದೆ. ಆತ್ಮವಿಶ್ವಾಸದಲ್ಲಿ ಪಳಗಿದ ಅವರ ತನು-ಮನ ಅವಿನಾಶನ ಸೇವೆಯಲ್ಲಿ ನಿರತವಾಯಿತು. ಅವಿನಾಶನಿಗೆ ಪ್ರಜ್ಞೆ ಮರಳುವಾಗ ಬೆಳಗಿನ ಕೋಳಿ ಕೂಗಿತ್ತು.

೨೦

ಮುಂದೆ ಹದಿನೈದು ದಿನಗಳಲ್ಲಿ ಅವಿನಾಶ ಸುಮಾರಾಗಿ ಚೇತರಿಸಿಕೊಂಡ. ಸಂಪೂರ್ಣ ವಾಸಿಯಾಗಿ ಓಡಾಡಲು ಇನ್ನು ಒಂದು ತಿಂಗಳಾದರೂ ಬೇಕು. ತಲೆ, ಹಣೆ, ಕೈಕಾಲುಗಳಲ್ಲಿ ಬ್ಯಾಂಡೇಜ್ ಹಾಗೇ ಇದೆ. ಡಾ. ಮಹಾದೇವ ಪ್ರತಿದಿನ ಬಂದು ಬ್ಯಾಂಡೇಜ್ ಬಿಚ್ಚಿ ಗಾಯಗಳಿಗೆ ಔಷಧಿ ಹಾಕಿಹೋಗುತ್ತಿದ್ದಾರೆ. ಅವರ ನಗು ತುಂಬಿದ ಆತ್ಮೀಯ ಸ್ನೇಹದಲ್ಲಿ ಬಿಗು ತೋರಿಸಲು ಏಕೋ ಅವಿನಾಶನಿಂದ ಸಾಧ್ಯವಾಗಿಲ್ಲ.

ಸೊಸೆಯ ಪತ್ರದಿಂದ ಮಗನ ದುರಂತವನ್ನು ಓದಿದ ಶ್ರೀಕಂಠಯ್ಯ ಓಡಿ ಬಂದರು ಕಲ್ಲಳ್ಳಿಗೆ. ಇನ್ನು ತಮ್ಮ ಮಗನಿಗೆ ಈ ಹಳ್ಳಿಯ ಸಹವಾಸ ಸಾಕು ಎಂದೆನಿಸದಿರಲಿಲ್ಲ.

"ಇಲ್ಲಿ ಅರ್ಧವಾದ ಆಸ್ಪತ್ರೆಯ ಕಟ್ಟಡ, ಈ ಭೂಮಿಯನ್ನು ಮಾರಿ ಚಿಕ್ಕಮಗಳೂರಿಗೆ ಬಾ. ಅಲ್ಲಿಯೇ ಪ್ರ್ಯಾಕ್ಟೀಸ್ ಮಾಡಬಹುದು. ನಿನ್ನ ಅಮ್ಮ ಕಾಯ್ತಾ ಇದ್ದಾಳೆ ನಿನಗಾಗಿ" ಎಂದರು ಕಳಕಳಿಯಲ್ಲಿ.

"ಇವೆಲ್ಲ ನನಗೆ ಮಾಮೂಲು, ಅಪ್ಪ" ಗಾಯದ ನೋವಿನಲ್ಲಿಯೂ ನಕ್ಕ ಅವಿನಾಶ, "ಸಣ್ಣ ವಿಷಯಕ್ಕೆ ಹಳ್ಳಿ ಬಿಟ್ಟು ಓಡಬೇಕೆ?"

"ನಿಜ ಮಾವಯ್ಯ, ನಾವು ಕಲ್ಲಳ್ಳಿಯಲ್ಲೇ ಇರುವವರು." ಅಹಲ್ಯಳ ಕಣ್ಣುಗಳು ಹೊಳೆದವು. ಅವಿನಾಶ ಬದುಕಿ ಬಂದದ್ದು ಅವಳಿಗೇ ವಿಸ್ಮಯ ತಂದಿದೆ. ಕೇಡಿಗಳು ಅವನನ್ನು ಹೊಡೆದ ರೀತಿ ನೋಡಿದರೆ ಅಹಲ್ಯಳ ಪುಣ್ಯದಿಂದಲೇ ಅವಳಿಗೆ ಇನ್ನೂ ಅವನೊಡನೆ ಸಂಸಾರ ನಡೆಸುವ ಯೋಗವಿತ್ತು ಎಂಬುದು ದಿಟ. ಮನಸ್ಸು ಬೇರೇನೋ ಯೋಚಿಸುತ್ತ ರಾತ್ರಿ ಹಗಲು ಬೆಟ್ಟದತ್ತ ನೋಡೋಣ ಎಂದೆನಿಸಿದೆ.

ಇದರೊಂದಿಗೆ ಬಹಳ ಸಮಯದನಂತರ ಅವಳಿಗೇ ವಿಸ್ಮಯವಾದಂತೆ ಹೆಣ್ತನದ ಲವಲವಿಕೆಯಲ್ಲಿ ಚಿಗುರೊಡೆಯುವ ಲಕ್ಷಣ ಕಾಣಿಸಿದೆ! ಅವಿನಾಶ ಗಾಯದ ನೋವಿನಲ್ಲಿಯೂ ಮಗುವಿನಂತೆ ಸಂತೋಷಿಸಿ "ಖಂಡಿತ ಆಗುತ್ತದೆ ಎನ್ನಲಿಲ್ಲವೇ? ನನ್ನ ಮಾತಿನಲ್ಲಿ ನಿನಗೆ ಭರವಸೆಯಿರಲಿಲ್ಲ. ಈಗಲಾದರೂ ಒಪ್ಪಿಕೋ" ಎನ್ನುತ್ತ ಅವಳ ಕೆನ್ನೆ ಹಿಂಡಿ ತಾನೂ ನಕ್ಕ. ಅವಳನ್ನೂ ನಗಿಸಿದ. ಮನೆಯೆಲ್ಲ ಕುಣಿಯಿತು ಸಂಭ್ರಮದಲ್ಲಿ. ಶ್ರೀಕಂಠಯ್ಯನವರಿಗೆ ಇದು

ನಿರೀಕ್ಷಿತವಾದ ಸಂತೋಷದ ಸುದ್ದಿ. ಅಂತೂ ಮಗನ ಕ್ಷೇಮ, ಸೊಸೆಯ ಹೊಸ ವಿಶೇಷದೊಂದಿಗೆ ತೃಪ್ತಿಯಿಂದ ಹೊರಟುಹೋದರು ಚಿಕ್ಕಮಗಳೂರಿಗೆ.

ಆದರೆ ಅಹಲ್ಯಳಿಗೆ ಇನ್ನೂ ಭೀತಿ, ಸಂಶಯ. ಸೀತಮ್ಮ ಮೊದಲೇ ಅಂದಿದ್ದರು: "ಮಗು ಹುಟ್ಟಿದರೆ ತೊಟ್ಟಿಲು ಸೇವೆ ಮಾಡಿಸುತ್ತೇನೆಂದು ವಿಗ್ರಹದೇವತೆಗೆ ಕೇಳಿಕೊಳ್ಳಿ. ಖಂಡಿತ ನಿಮ್ಮ ಇಷ್ಟಾರ್ಥ ಪೂರೈಸುತ್ತದೆ."

ಅಹಲ್ಯ ನಿರ್ಲಕ್ಷ್ಯದಲ್ಲಿ ತಳ್ಳಿ ಹಾಕಿದ ಈ ಮಾತು ಅವಳಿಗರಿಯದಂತೆ ಅವಳಲ್ಲೇ ಆವಿರ್ಭಾವಗೊಂಡು, ಅನುದಿನವೂ ಕಾಣುವ ಕಲ್ಲುಬೆಟ್ಟದ ಆಕರ್ಷಣೆಯಲ್ಲಿ ಬೆರೆತು, ಕಿವಿಗೆ ಕೇಳಿಸುವ ಮೂಢನಂಬಿಕೆಯ ಕಟ್ಟು ಕಥೆಗಳೊಡನೆ ಸಂಗಮವಾಗಿ, ಬದಲಾಗದ ಹಳೆ ನಂಬಿಕೆಯ ತಿರುವಿನಲ್ಲಿ ತಂದು ನಿಲ್ಲಿಸಿದಾಗ 'ತೊಟ್ಟಿಲುಸೇವೆ ಕೊಡುತ್ತೇನೆ' ಎಂಬ ಸಂಕಲ್ಪದ ಅನುಗ್ರಹ ಅವಳ ಊಹೆಗೆ ಮೀರಿದ್ದು!

ಆನಂತರ ನಡೆದದ್ದೇನು?... ಅವಿನಾಶನ ಮೇಲೆ ದುಷ್ಟರ ಆಕ್ರಮಣ! ಮರಣದ ಬಾಗಿಲಿನವರೆಗೂ ಹೋದವನು ಪವಾಡದಂತೆ ಹಿಂದೆ ಬಂದಿದ್ದಾನೆ. ಆ ಕಂಚಿನ ವಿಗ್ರಹವನ್ನು ಮಕ್ಕಳಾಡಿಕೆಯ ಗೊಂಬೆಯೆಂದು ತಮಾಷೆ ಮಾಡುತ್ತಿದ್ದ ತಾನು 'ಅವಿನಾಶ ಕ್ಷೇಮವಾಗಿ ಹಿಂದಿರುಗಿ ಬಂದರೆ ಹೂವಿನ ಪೂಜೆ ಕೊಡುತ್ತೇನೆ' ಎಂದು ಅದನ್ನೇ ಕೇಳಿಕೊಳ್ಳಲಿಲ್ಲವೇ? ತಾನು ಯಾಕೆ ಬದಲಾದೆ? ಹೇಗೆ ಬದಲಾದೆ?

ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ಅಂದು ಶುಕ್ರವಾರ, ಅವಿನಾಶ ಕೇಡಿಗರ ದುರಾಕ್ರಮಣಕ್ಕೆ ಒಳಗಾಗಿ ಸರಿಯಾಗಿ ಒಂದು ತಿಂಗಳಾಗಿತ್ತು. ಮಳೆಗಾಲದ ಪ್ರಾರಂಭದ ದಿನಗಳು. ಎಡಬಿಡದೆ ಸುರಿವ ಮಳೆ, ಗುಡುಗು ಮಿಂಚುಗಳ ಅಬ್ಬರ. ಸಾಯಂಕಾಲ ಬೆಟ್ಟವೇರಿ ವಿಗ್ರಹದೇವತೆಗೆ ಹೂವಿನ ಪೂಜೆ ಕೊಟ್ಟು ಬರಬೇಕೆಂದು ನಿಶ್ಚಯಿಸಿದ್ದಳು ಅಹಲ್ಯ. ಆದರೆ ಅವಿನಾಶನಿಗೆ ತಿಳಿಸುವುದು ಹೇಗೆ?

"ಇವತ್ತು ಬಿಸಿಲಿನ ಲಕ್ಷಣವಿದೆ. ಸಾಯಂಕಾಲ ಬೆಟ್ಟಕ್ಕೆ ಹೋಗಿಬರೋಣವೇ?" ಮಧ್ಯಾಹ್ನ ಊಟದ ನಂತರ ಅಳುಕುತ್ತ ಕೇಳಿದಳು ಅವನನ್ನು.

ಗಾಯದ ಪಟ್ಟಿಯನ್ನು ಸರಿಪಡಿಸಿಕೊಳ್ಳುತ್ತಿದ್ದ ಅವಿನಾಶ ತಲೆ ಎತ್ತಿ ನೋಡಿದ. ಬಿಸಿಲು ಈಗ ಕಾಣಿಸಿದರೂ ಇನ್ನೊಂದು ಗಳಿಗೆಯಲ್ಲಿ ಮಳೆ ಹನಿಯಬಹುದು. ಮಗುವಿನ ತಾಯಿಯಾಗಲಿರುವ ಅಹಲ್ಯಳಿಗೆ ಹನಿಯುವ ಮಳೆಯಲ್ಲಿ ಬೆಟ್ಟವೇರುವ ಆಸೆ. ತಾನೂ ಈಗ ನಡೆಯುವಷ್ಟು ಚೇತರಿಸಿಕೊಂಡಿದ್ದೇನೆ. ಆದರೆ ಆ ಗಾಯಗಳಿಗೆ ನೀರು ಸೇರಿದರೆ ಆಮೇಲೆ ಇನ್ನೂ ಕಷ್ಟ.

"ನಿಮಗಾಗಿ ಹೂವಿನ ಪೂಜೆ ಹೇಳಿಕೊಂಡಿದ್ದೇನೆ. ಇಲ್ಲ ಅನ್ನಬೇಡಿ."

"ನನಗಾಗಿ ಹೂವಿನ ಪೂಜೆಯೇ? ಯಾಕೆ?" ತಬ್ಬಿಬ್ಬಾದ ಅವಿನಾಶ, ಅವಳು ಹೂವಿನ ಪೂಜೆ ಹೇಳಿಕೊಂಡ ಸಂದರ್ಭವನ್ನು ಕೇಳಿದಾಗ ಬೆರಗಾಗಿ ಹೋದ. ಅಸಮಾಧಾನದ ಕೋಪದಲ್ಲಿ ಹುಬ್ಬುಗಳು ಮೇಲೇರಿದವು. ಇದೇನು ಅಹಲ್ಯ ಹೀಗೆ ಮಾಡಿದಳು? ಇದೇ ಕಿಟಕಿಯ ಬದಿಯಲ್ಲಿ ತಾವಿಬ್ಬರೂ ಜೊತೆಯಾಗಿ ನಿಂತು ಬೆಟ್ಟವನ್ನು ನೋಡುತ್ತ ತಮಾಷೆಯಲ್ಲಿ ನಗುತ್ತಿದ್ದ ಹಿಂದಿನ ದಿನಗಳು ನೆನಪಾದವು. ಅವಳ ನಗು, ತಮಾಷೆಯಲ್ಲಿ ಅವನ ಛಾಯೆಯಿರಲಿಲ್ಲ. ಸ್ವಂತಿಕೆಯ ಮೆರುಗಿತ್ತು. ಯಾವ ನಂಬಿಕೆಗೂ ಜೋತು ಬೀಳದ ದೃಢ ಮನಸ್ಥೈರ್ಯವಿತ್ತು. ಆದರೆ ಈಗ ತನಗಾಗಿ ಬೆಟ್ಟವೇರುವ ಸಂಕಲ್ಪ ಮಾಡಿದ್ದಾಳೆ. ಅವಳನ್ನು ತಡೆಯಲೇ? ಆದರೆ ತಾನು ಯಾರು?

"ಎಲ್ಲರೂ ತುಳಿಯುವ ದಾರಿಯಲ್ಲಿ ನೀನೂ ಕಣ್ಣು ಮುಚ್ಚಿಕೊಂಡು ಹೆಜ್ಜೆಯಿರಿಸಿದ್ದೀಯಾ. ನಾನೇನು ಹೇಳಲಿ? ನಿನಗಿಷ್ಟವಿದ್ದರೆ ಹೋಗು. ಆದರೆ ನಾನು ನಿನ್ನ ಜೊತೆ ಬರುವವನಲ್ಲ."

ಅಹಲ್ಯ ಮರುನುಡಿಯಲಿಲ್ಲ. ಅವನ ಅಚಲ ನಿರ್ಧಾರವನ್ನು ಬದಲು ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ಅವಳಿಗೂ ತಿಳಿದಿದೆ. ಆದರೆ ಇದೀಗ ಅವಳ ನಿರ್ಧಾರವೂ ಬದಲಾಯಿಸದಷ್ಟು ಅಚಲವಾಗಿದೆ! ಅವಳಿಗೆ ಮೊದಲು ಕೊಡಬೇಕಾದ್ದು ಹೂವಿನ ಪೂಜೆ–ಅವಿನಾಶ ಸಾವಿನ ದವಡೆಯಿಂದ ಪಾರಾಗಿ ಬಂದುದಕ್ಕೆ. ಮಗು ಹುಟ್ಟಿದ ನಂತರ ತೊಟ್ಟಿಲುಸೇವೆ, ಅದು ತಮ್ಮಿಬ್ಬರ ಇಷ್ಟಾರ್ಥಕ್ಕೆ!

ಅವಳು ಅದೇ ಗುಂಗಿನಲ್ಲಿ ಸಾಯಂಕಾಲ ಒಬ್ಬಳೇ ಕಲ್ಲುಬೆಟ್ಟಕ್ಕೆ ಹೊರಟುಹೋದಳು ಅವಿನಾಶನಿಗೆ ತಾನೆಲ್ಲೋ ಸೋಲುತ್ತಿದ್ದೇನೆ ಎಂದೆನಿಸಿ ಭಾರವಾಯಿತು ಮನಸ್ಸು. ಕಿಟಕಿಯ ಬದಿಯಲ್ಲಿ ನಿಂತು ಯಾವುದೇ ಭಾವನೆ, ಸಂವೇದನೆ, ಹೊಸತನ ಇಲ್ಲದವನಂತೆ ಅಹಲ್ಯ ನಿಧಾನವಾಗಿ ಬೆಟ್ಟ ಏರುವುದನ್ನು ನೋಡುತ್ತ ನೋಡುತ್ತ ಮೌನ ತಳೆದ.

'ಬದಲಾದವರು ಯಾರು, ಬದಲಾಗದವರು ಯಾರು?' ಎಂಬ ಪ್ರಶ್ನೆ ಅವಿನಾಶನಲ್ಲಿ ಪ್ರಶ್ನೆಯಾಗಿಯೇ ಉಳಿಯಿತು.

*

ಸಮಾಜದ ರೀತಿ, ನೀತಿ, ನಡವಳಿಕೆಗಳು; ನಂಬಿಕೆ, ಶ್ರದ್ಧೆಗಳು ಕಾಲಕಾಲಕ್ಕೆ ಬದಲಾವಣೆ-ಯಾಗುತ್ತಾ ಹೋದಂತೆ, ಹೊಸ ಸುಧಾರಣೆಯ ಅಲೆ ಬೀಸಿ ಹಳೆಯದು ಕೊಚ್ಚಿ ಹೋಗುತ್ತದೆ. ಮತ್ತು ನೂತನ ಸಮಾಜ ನಿರ್ಮಾಣವಾಗುತ್ತದೆ ಎಂದು ಮೇಲ್ನೋಟಕ್ಕೆ ಅನಿಸಿದರೂ, ಸತ್ಯಸಂಗತಿ ಮೊದಲಿಗಿಂತ ಭಿನ್ನವಾಗಿರದೆ ಅದು ಹೊಸ ರೂಪ ತಳೆದು ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನ ಪಡೆಯುವುದನ್ನು ನಾವು ನೋಡುತ್ತೇವೆ. ಮುಗ್ಧ ಜನರ ದೌರ್ಬಲ್ಯಗಳೊಂದಿಗೆ ಆಟವಾಡುತ್ತ ಅವರನ್ನು ಮೋಸ, ವಂಚನೆಗಳಿಂದಶೋಷಿಸುವ ವಿವಿಧ ವರ್ಗಗಳ ಜನರ ಮುಖವಾಡದ ಹಿಂದೆ ಇರುವುದು ಕೇವಲ ಶೋಷಣೆ ಒಂದೇ. ಸಮಾಜದ ಹುಳುಕುಗಳನ್ನು ಬಯಲಿಗೆಳೆದು, ಮೂಢನಂಬಿಕೆಗಳನ್ನು ಹಳಿದು, ಸೋಷಕರನ್ನು ಖಂಡಿಸುವ ಪ್ರವೃತ್ತಿ ಇರುವ ಜನರು ಅಪರೂಪ. ಬದಲಾವಣೆ ಬೇಕೆನ್ನುವುದು ಮನುಷ್ಯಸ್ವಭಾವವದರೂ, ಎಲ್ಲಿಯವರೆಗೆ ನಾವು ವೈಜ್ಞಾನಿಕ ದೃಷ್ಟಿ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಬದಲಾವಣೆ ಅಸಾಧ್ಯ. ಈ ಹಿನ್ನೆಲೆಯಲ್ಲಿ ರಚಿಚಿದ ಕಾದಂಬರಿ 'ಬದಲಾಗದವರು.'

–ಎ. ಪಿ. ಮಾಲತಿ

ಹೇಮಂತ ಸಾಹಿತ್ಯ
ರಾಜಾಜಿನಗರ, ಬೆಂಗಳೂರು–10